THE BOOK WAS DRENCHED

UNIVERSAL LIBRARY
OU_198271
UNIVERSAL LIBRARY

ಮಿಂಚಿನಬಳ್ಳಿಯ ೩ನೆಯ ವರುಷದ ೩ನೆಯ ಕುಡಿ



# ದೀಪಮಾಲೆ

೨

ಬರೆದವರು :

ಸಿದ್ದವ್ವನಹಳ್ಳಿ ಕೃಷ್ಣಶರ್ಮರು.

ಚಾಲುಕ್ಯ ವಿಕ್ರಮ ವರುಷ, ೮೬೫
ಕಾರ್ತಿಕ ಶು. ೧

೧೯೪೦
( ಆಕ್ಟೋಬರ )

ಸಾದಾ ಪ್ರತಿ ೧ ರೂ. — ವಾಚನಾಲಯದ ಪ್ರತಿ ೧-೪-೦

ಮುದ್ರಕರು:
ಕೆ. ಜಿ. ರಾಯದುರ್ಗ
ಮೋಹನ ಮುದ್ರಣ ಮಂದಿರ
ಬ್ಯಾಂಕು ಬೀದಿ
ಧಾರವಾಡ

CHECKED 1955
Checked 1963

ಮಿಂಚಿನಬಳ್ಳಿಯ ಸಂ. ೨೧ ಪತ್ರಿಕೆ

# ರಾಷ್ಟ್ರೀಯ ಗೀತೆಗಳು.

ಸಾಹಿತ್ಯ ಪರಿಷತ್ತಿನ ಸಮಯಕ್ಕೆ ಡಿಸೆಂಬರದಲ್ಲಿ
ಪ್ರಕಟವಾಗುವದು

ಪ್ರಕಾಶಕರು:
ಬಿ. ಜಿ. ಅವಧಾನಿ
ಮಿಂಚಿನ ಬಳ್ಳಿಯ ಚಾವಡಿ
ದೇಸಾಯಿ ಬೀದಿ
ಧಾರವಾಡ

ಈ ಪುಸ್ತಕದ ಒಡೆತನವೆಲ್ಲ ಮಿಂಚಿನಬಳ್ಳಿಗೆ ಸೇರಿದೆ.

— ಓಂ —

# ಒಂದೆರಡು ಮಾತುಗಳು.

•

ದೀಪಮಾಲೆಯಲ್ಲಿ ಗಾಂಧೀ ಭಕ್ತರ ದಿವ್ಯಜೀವನಗಳಿದ್ದು, ಗಾಂಧೀ ಜಯಂತಿಗೆ ಪ್ರಕಟವಾಗಬೇಕೆಂದು ಪ್ರಕಾಶಕರ ಇಚ್ಛೆ. ಆದರೆ, ದೀಪಮಾಲೆಯು ದೀಪಾವಳಿಯಲ್ಲಿಯೇ ಪ್ರಕಟವಾಗುವದು ಸಹಜಧರ್ಮ ಎಂದು ಬರಹಗಾರರ ಬಯಕೆ, ಅವರ ಇಚ್ಛೆಯಂತೆಯೇ **ದೀಪಮಾಲೆಯು** ವಾಚಕರ ಕೈ ಈಗ ಸೇರುತ್ತಲಿದೆ.

ವ್ಯಕ್ತಿಚಿತ್ರಗಳನ್ನು ಚಿತ್ರಿಸುವದರಲ್ಲಿ **ಹರಟೆಯ ಮಲ್ಲರ** ಲೆಕ್ಕಣಿಕೆಯು ಒಳ್ಳೇ ಸನ್ನಾಹದಿದೆ ಎಂಬುದನ್ನು ಕನ್ನಡಿಗರಿಗೆ ಪರಿಚಯಮಾಡಿಕೊಡುವ ಕಾರಣವಿಲ್ಲ. ಗಾಂಧೀಜಿಯವರ ದಿವ್ಯಜೀವನವು ಹರಟೆಯ ಮಲ್ಲರ ಜೀವನದಲ್ಲಿ ಕ್ರಾಂತಿಯನ್ನುಂಟುಮಾಡಿದೆ. ಅವರಿಗೆ ಒಂದು ಬಗೆಯ ದೃಷ್ಟಿಯನ್ನು ಕೊಟ್ಟಿದೆ ಎಂಬುದನ್ನು ಈ ಪುಸ್ತಕದಲ್ಲಿ ನಾವು ಚನ್ನಾಗಿ ಕಾಣಬಹುದು.

ಹರಟೆಯ ಮಲ್ಲರು ನಮ್ಮ ಬಿನ್ನಹಕ್ಕೆ ಮನ್ನಣೆಕೊಟ್ಟು ಪುಸ್ತಕವನ್ನು ಬರೆದು ಕೊಟ್ಟದ್ದಕ್ಕಾಗಿ, ಅದರಂತೆ ಪೂಜ್ಯರಾದ ದಿವಾಕರರು ಮುನ್ನುಡಿ ಬರೆದುದಕ್ಕಾಗಿಯೂ ಮಿಂಚಿನ ಬಳ್ಳಿಯು ಅವರಿಗೆ ಋಣಿಯಾಗಿದೆ.

ದೀಪಮಾಲೆಯು ಕನ್ನಡಿಗರಲ್ಲಿ ಹೊಸ ಬೆಳಕನ್ನುಂಟುಮಾಡುವದೆಂದು ನಂಬಿದ್ದೇವೆ.

ಕಾ. ಶು. ೧.
೧೮೬೫

ತಮ್ಮ
ಬುರ್ಲಿ ಬಿಂದು ಮಾಧವ

# ಬಿನ್ನಹ

ಈ ಬಗೆಯ ವ್ಯಕ್ತಿಪರಿಚಯದ ರೇಖಾಚಿತ್ರಗಳು ನಮ್ಮಲ್ಲಿ ಇನ್ನೂ ಬೆಳೆದಿಲ್ಲ. ಸಾಹಿತಿಗಳೂ ವಿಮರ್ಶಕರೂ ಈ ಬೆಳೆಯುತ್ತಿರುವ ಸಾಹಿತ್ಯಕ್ಕೆ ಸರಿಯಾದ ಲಕ್ಷಣ-ರೂಪಗಳನ್ನೂ ಏರ್ಪಾಡು ಮಾಡಬೇಕು.

ಈ ಪುಸ್ತಕದಲ್ಲಿ ಗಾಂಧೀಯುಗದ ನಾಯಕಮಣಿಗಳಲ್ಲಿ ಕೆಲವರನ್ನು ಬರೆಹಗಾರನು ಗುರುತಿಸಿಕೊಂಡ ರೀತಿಯಲ್ಲಿ ತೋರಿಸಲಾಗಿದೆ. ಹಿಂದುಸ್ಥಾನದಲ್ಲಿ ಇದು ಒಂದು ಸಂಧಿಕಾಲ. ಅನೇಕ ಜನ ಮುಂದೆ ಬಂದಿದಾರೆ. ಬೇರೆ ಬೇರೆ ಕ್ಷೇತ್ರಗಳಲ್ಲಿ ನಿಂತು ಕೆಲಸ ಮಾಡುತ್ತಿದಾರೆ. ಇದರಲ್ಲಿ ಬರೆಯದೆ ಉಳಿದವರು ಅನೇಕರು ಇದಾರೆ. ಪಂಡಿತ ಜವಾಹರ ಲಾಲ, ಸರಹದ್ದಿನ ಗಾಂಧಿ, ಸುಭಾಷಚಂದ್ರರಂಥ ಹಿರಿಯರ ಚಿತ್ರಗಳು ವಿಜಯಲಕ್ಷ್ಮಿ, ಕಮಲಾದೇವಿ, ಜಯಪ್ರಕಾಶ ನಾರಾಯಣರಂಥ ತರುಣರವು ಇಂಥ ಸಂಗ್ರಹದಲ್ಲಿ ಬರಬೇಕಾದವು. ಮತ್ತೊಮ್ಮೆ ಯಾವಾಗಲಾದರೂ ಅವನ್ನೂ ಬರೆಯುವ ಆಸೆಯಿದೆ.

ಇದರಲ್ಲಿ ಒಂದು 'ವಿಶ್ವಕರ್ಣಾಟಕ'ದಲ್ಲಿ, ಒಂದು 'ಜಯಕರ್ನಾಟಕ'ದಲ್ಲಿ, ಐದು 'ಜಯಂತಿ'ಯಲ್ಲೂ ಮೊದಲೇ ಪ್ರಕಟವಾಗಿದ್ದವು. ಅವನ್ನೇ ಮತ್ತೆ ಕೊಂಚ ಹೆಚ್ಚುಕಡಮೆ ಮಾಡಿ ಬಳಸಲಾಗಿದೆ. ಎರಡು 'ವರ್ಧಾಯಾತ್ರೆ'ಯಿಂದ ಅದೇ ರೀತಿ ಆರಿಸಿಕೊಂಡವು. ಉಳಿದವು ಹೊಸವು.

ಬರೆದವನು ಒಂದೂರಿನಲ್ಲಿ, ಸಂಪಾದಕರು ಪ್ರವಾಸದಲ್ಲಿ, ಅಚ್ಚಿನ ಕೆಲಸ ಮೂರನೆಯ ಕಡೆ — ಹೀಗಾಗಿ ಪುಸ್ತಕದಲ್ಲಿ ಅಚ್ಚಿನ ಕೆಲ ತಪ್ಪು ಆಗಿವೆ. ಅರ್ಥ ತಪ್ಪಾಗುವಂಥ ತಪ್ಪುಗಳಿಲ್ಲ.

ಶ್ರೀ. ಬುರ್ಲಿಯವರು ಈ ಪುಸ್ತಕಕ್ಕೆ ಎಲ್ಲ ರೀತಿಯಲ್ಲಿಯೂ ಕಾರಣರು. ಅವರ ಸೂಚನೆಯೇ ಈ ಪರಿಚಯಗಳನ್ನು ಬರೆಯಲು ಕಾರಣ. ಅವರೇ ಇದಕ್ಕೆ ಪ್ರಕಾಶಕರಾಗಿ ತಮ್ಮ ಮಿಂಚಿನಬಳ್ಳಿಯಲ್ಲಿ ಎಡೆಕೊಟ್ಟರು.

—ಕೃಷ್ಣ ಶರ್ಮಾ.

೧೯೩೨ನೇ ೧೪ನೇ ಮೇ ದಿನದ

ಇರುಳು ೧೨ ಘಂಟೆಗೆ ದಾವಣಗೇರಿಯಲ್ಲಿ

ಮೂ ಡಿ ದ ಗೆ ಳೆ ತ ನ ದ

ಸ ವಿ ನೆ ನ ಪಿ ಗಾ ಗಿ

**ಗೆಳೆಯ ಬೇಂದ್ರೆ ದತ್ತನಿಗೆ**

★

# ಪರಿವಿಡಿ


| | | |
|---|---|---|
| | ಮುನ್ನುಡಿ | ೭–೧೧ |
| ೧. | ಸರೋಜಿನಿ. | ೧–೧೨ |
| ೨. | ಠಕ್ಕರಬಾಪಾ. | ೧೩–೨೧ |
| ೩. | ಆಚಾರ್ಯ ವಿನೋಬಾ. | ೨೧–೩೦ |
| ೪. | ಚಾರು ರಾಜಾರಾವ. | ೩೧–೩೭ |
| ೫. | ಮೌಲಾನಾ ಅಬುಲ್ ಕಲಾಮ್ ಆಜಾದ. | ೩೮–೫೨ |
| ೬. | ಜಮುನಾಲಾಲ ಬಜಾಜ. | ೫೩–೫೯ |
| ೭. | ಜಯರಾಮದಾಸ ದೌಲತರಾಮ. | ೬೦–೬೬ |
| ೮. | ರಾಜೇಂದ್ರಪ್ರಸಾದ. | ೬೭–೭೮ |
| ೯. | ಶರಚ್ಚಂದ್ರಬೋಸ. | ೭೯–೮೫ |
| ೧೦. | ಪಟ್ಟಾಭಿ ಸೀತಾರಾಮಯ್ಯ. | ೮೬–೯೬ |
| ೧೧. | ಸರ್–ರಾಧಾಕೃಷ್ಣನ್. | ೯೭–೧೦೭ |
| ೧೨. | ಕಿಶೋರಿಲಾಲ ಮಶ್ರುವಾಲಾ. | ೧೦೮–೧೧೪ |
| ೧೩. | ಸರದಾರ ವಲ್ಲಭಭಾಯಿ. | ೧೧೫–೧೨೮ |
| ೧೪. | ಆಚಾರ್ಯ ಕೃಪಲಾನಿ. | ೧೨೯–೧೩೧ |
| ೧೫. | ಅಮಾತ್ಯ ರಾಜಗೋಪಾಲಾಚಾರ್ಯ. | ೧೩೨–೧೪೪ |

# ಮುನ್ನುಡಿ

●

ಲೇಖಕರು ಇಲ್ಲವೆ ಪ್ರಕಾಶಕರು ತಮ್ಮ ಪುಸ್ತಕಗಳಿಗೆ ಮುನ್ನುಡಿ ಬರೆಯುವುದು ಸಹಜ, ಅವಶ್ಯ. ಹಿರಿಯರು, ಆಪ್ತಬಂಧುಗಳು, ಮಿತ್ರರು, ಇಲ್ಲವೆ ಯಾವದೊಂದು ಕಾರಣದಿಂದ ಮುಂದೆ ಬಂದವರು ಇವರಿಂದ ಮುನ್ನುಡಿ ಬರಿಸುವುದೇಕೆ? ಈ ವಿಚಾರವು ಬಹುಕಾಲದಿಂದ ನನ್ನ ತಲೆಯಲ್ಲಿ ಸುತ್ತುತ್ತಿದೆ. ಅಂಥ ಮುನ್ನುಡಿ ಅವಶ್ಯವೆ? ಅವಶ್ಯ ವಿದ್ದರೆ ಪ್ರಯೋಜನವೇನು? ಈ ಪ್ರಶ್ನೆಗೆ, ಅವಶ್ಯವಿಲ್ಲ ಆದರೆ ಪ್ರಯೋಜನವಿದೆ, ಎಂಬುದೆ ಉತ್ತರ.

ಮುನ್ನುಡಿ ಲೇಖಕನು ಆಯಾ ಪುಸ್ತಕದ ಕರ್ತನಿಗೆ ಯಾವಾಗಲು ಅನುಕೂಲನಿರುವನು. ಅನುಕೂಲನಿಲ್ಲದಿದ್ದರೂ ಅನನುಕೂಲನಿರಲಾರನು. ಪ್ರತಿಕೂಲನಿದ್ದವನನ್ನು ಅನುಕೂಲ ಮಾಡಿಕೊಳ್ಳುವುದಿದ್ದರೆ ಅವನಿಗೆ ಮುನ್ನುಡಿ ಬರೆಯಲೊಪ್ಪಿಸುವುದೊಂದು ಯುಕ್ತಿ. ಅವನು ಅನುಕೂಲನಾಗಿಯೇ ಬಿಡುವನು! ಒಬ್ಬ ತಾಯಿ ತನ್ನ ಹಸುಗೂಸನ್ನು ನಮ್ಮ ಮುಂದೆ ತಂದೊಡ್ಡಿ ಹರಕೆ ಕೇಳಿದರೆ ಅದನ್ನು ನಾವು ಹರಿಸಿಯೆ ತೀರಬೇಕಲ್ಲವೆ!

ನನಗೆ ಹೊಳೆದಂತೆ ಮುನ್ನುಡಿಯ ಪ್ರಯೋಜನವು ಮೂರುಬಗೆಯಾದುದು. ಜನ್ಮಕಾಲಕ್ಕೆಯೆ ಪುಸ್ತಕವನ್ನು ಒಬ್ಬ ಹಿರಿಯರಿಂದ ಇಲ್ಲವೆ ಆಪ್ತ ಬಂಧುಗಳಿಂದ, ಇಲ್ಲವೆ ಮಿತ್ರರಿಂದ ಹರಿಸುವುದು; ಯಾವ ಒಬ್ಬ ಗುಣಗ್ರಾಹಕರಿಂದ ಅದರ ಗುಣವರ್ಣನೆಯನ್ನು ಪ್ರಥಮಾರಂಭದಲ್ಲಿಯೆ ಮಾಡಿಸುವದು; ಇಂಥವರು ಮುನ್ನುಡಿ ಬರೆದಿದ್ದಾರೆ ಎಂದು ಮುನ್ನುಡಿಕಾರರ ಹೆಸರಿನ ಉಪಯೋಗ ಮಾಡಿಕೊಂಡು ಪುಸ್ತಕದ ಪ್ರಶಸ್ತಿಯನ್ನು ಬೆಳಿಸುವದು.

ಮುನ್ನುಡಿ ಎಂದರೆ ವಿಮರ್ಶೆಯಲ್ಲ, ಪುಸ್ತಕದ ಗುಣಾವಗುಣಗಳ ಚರ್ಚೆಯಲ್ಲ, ಆಯಾ ಪುಸ್ತಕದ ಯಥಾರ್ಥ ವರ್ಣನೆಯಲ್ಲ. ತನ್ನ

ಪ್ರಥಮ ಪರಿಚಯವನ್ನು ಇನ್ನೊಬ್ಬರಿಂದ ಮಾಡಿಸುವ ರೀತಿಯಿದು. ಈ ಪದ್ಧತಿ ನಮ್ಮಲ್ಲಿಗೆ ಪಾಶ್ಚಾತ್ಯರಿಂದಲೆ ಬಂದಿರಲಿಕ್ಕೆ ಸಾಕು. ಮುನ್ನುಡಿಯು ಪ್ರಥಮ ಪರಿಚಯದ ಕೆಲಸವನ್ನು ಮಾತ್ರ ಮಾಡಬಲ್ಲದು. ಮುಂದೆ ಪುಸ್ತಕದ ಮೂಲ ಗುಣಾವಗುಣಗಳ ಮೇಲೆಯೆ ಅದರ ಕೀರ್ತಿ ಅಪಕೀರ್ತಿಗಳು ಅವಲಂಬಿಸಿರುವವು.

ಪ್ರಥಮ ಪರಿಚಯ ಮಾಡಿಕೊಡುವವರು, ಎಂದಿಗೂ ಆಯಾ ಪುಸ್ತಕವನ್ನು ಹೀಯಾಳಿಸರು ಅಥವಾ ಅಪಹಾಸ್ಯ ಮಾಡರು. ಕನ್ನೆಯನ್ನು ತೋರಿಸುವ ಕಾಲಕ್ಕೆ ಇದು ಕುರುಡಿದೆ, ಕುಂಟಿದೆ, ಕಪ್ಪಿದೆ, ಮಾಡಿಕೊಳ್ಳುವದಿದ್ದರೆ ಮಾಡಿಕೊಳ್ಳಿ ಎಂದು ಯಾರಾದರೂ ಹೇಳಿದ್ದುಂಟೇ? ಇಲ್ಲ, ಸಾವಿರ ಸುಳ್ಳು ಹೇಳಿ ಒಂದು ಕಲ್ಯಾಣ ಕಟ್ಟಬೇಕೆಂಬ ನಾಣ್ನುಡಿಪ್ರಚಾರಕ್ಕೆ ಬಂದಿರುವ ರಹಸ್ಯವೇನು? ಹೆಣ್ಣು ತೋರಿಸುವವರು, ಲಗ್ನ ಕೂಡಿಸುವವರು ಎಂದೂ ನಿಜ ನುಡಿಯುವದಿಲ್ಲ ಎಂದರ್ಥವಲ್ಲವೆ?

ಮುನ್ನುಡಿಕಾರರೂ ಅನೇ ಮಾಲೆಯಲ್ಲಿಯ ಮಣಿಗಳು. ನಮ್ಮ ಕನ್ನಡನಾಡಿನಲ್ಲಿಯಂತೂ ಓದುವ ಅಭಿರುಚಿ ತೀರ ಕಡಿಮೆ. ಹಿರಿದಾಗಿ ಹರೆ ತುಂಬಿಸೂಸಿದರೂ ಅವಾಂತರ ಕಾರಣಗಳ ಮೂಲಕ, ನಾನು ಲಗ್ನವನೊಲ್ಲೆ, ಎಂದು ಹೇಳುತ್ತ ಊರತುಂಬ ಹರಿದಾಡುವ ಸುಶಿಕ್ಷಿತ ವರಗಳಂತೆ ನಮ್ಮ ಕನ್ನಡ ಓದುಗರ ಸ್ಥಿತಿ. ಲಗ್ನ ಮಾಡಿಕೊಳ್ಳುವ ನಿಶ್ಚಯ ಮಾಡಿದ ಮೇಲೆ ಹೆಣ್ಣು ನೋಡುವ ಮಾತು. ಆ ನಿಶ್ಚಯವೇ ಇಲ್ಲ, ಅಂದ ಬಳಿಕ ಹೆಣ್ಣು ನೋಡುವುದೇಕೆ? ಕನ್ನಡ ಪುಸ್ತಕಗಳನ್ನು ಓದಬೇಕು ಎಂಬ ನಿಶ್ಚಯ ಮಾಡಿಲ್ಲ, ಅಂದ ಬಳಿಕ ನಿಮ್ಮ ಕನ್ನಡದಲ್ಲಿ ಯಾವ ಪುಸ್ತಕಗಳು ಇವೆ, ಲೇಖಕರು ಯಾರು, ಇದರ ಗೋಜಿಗೆ ಹೋಗುವುದೇಕೆ ಎಂದು ಕನ್ನಡ ವಾಚಕರು ಅನ್ನುವಂತೆ ತೋರುವುದು. ಆದರೆ, 'ನಿಮಗೆ ಹರೆ ಬಂದಿದೆ, ಹೆಣ್ಣು ನೋಡಿ, ಲಗ್ನಮಾಡಿಕೊಳ್ಳುವ ಹವಣು ಹುಟ್ಟುವದು. ಹೆಣ್ಣನ್ನು ನೋಡದೆ ಇರುವ ಹಟ ಹಿಡಿಯಬೇಡಿ, ಒಮ್ಮೆ ನೋಡಿಯಾದರೂ ನೋಡಿ', ಎಂದು ಮುನ್ನುಡಿಕಾರರು ಹೇಳಿದರೆ ತಪ್ಪಲ್ಲ!

ಈ ಪುಸ್ತಕದ ನಿಜವಾದ ಗುಣಾವಗುಣಗಳು ತಿಳಿಯಬೇಕಾದರೆ ಈ ಮುನ್ನುಡಿ ಓದದೆ ನೀವು ಈ ಪುಸ್ತಕವನ್ನು ಓದಬೇಕೆಂದು ನಾನು ಮೊದಲು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ನಾನೇ ಮುನ್ನುಡಿ ಕಾರನಿರುವುದರಿಂದ ನನ್ನ ಮುನ್ನುಡಿಯನ್ನು ನೀವು ಓದಬೇಡಿರೆಂದು ಹೇಳುವದು ಸ್ವಲ್ಪ ಅಸ್ವಾಭಾವಿಕ ಎಂದು ನಿಮಗೆ ತೋರಬಹುದು. ಅಸ್ವಾಭಾವಿಕವಿದ್ದರೂ ಇದು ನನ್ನ ನಿಸ್ಪೃಹತೆಯನ್ನು ವ್ಯಕ್ತಗೊಳಿಸುವುದಲ್ಲದೆ ಈ ಪುಸ್ತಕದ ನಿಜವಾದ ಪ್ರತ್ಯಕ್ಷ ಪರಿಚಯವು ನಿಮಗೆ ಆಗಬೇಕು ಎಂಬ ನನ್ನ ಹಂಬಲ ಇದರಲ್ಲಿ ಒಡೆದು ಕಾಣುವದು. ಮೇಲಾಗಿ ನನ್ನ ಮುನ್ನುಡಿ ಓದದೆ ನೀವು ಈ ಪುಸ್ತಕ ಓದಿದರೆ ಮುಂದೆ ಈ ಪುಸ್ತಕ ನಿಮ್ಮ ಮನಸಿಗೆ ಬಾರದೆ ಹೋದರೆ ನನ್ನ ಮೇಲೆ ಯಾವ ದೋಷಾರೋಪವೂ ಬರುವ ಕಾರಣವಿಲ್ಲ. ಈ ಸ್ವಾರ್ಥವೂ ಒಂದು ಇದರಲ್ಲಿ ಹುದುಗಿಕೊಂಡಿದೆ. ಪುರೋಹಿತರು, ಮನೆಯವರು ಹೇಳಿದ್ದರಿಂದ ಈ ಹೆಣ್ಣು ಅಥವಾ ಗಂಡು ಮಾಡಿಕೊಂಡು ಈ ದುರವಸ್ಥೆಗೆ ನಾನು ಇಳಿದೆನು ಎಂದು ಪರರ ಮೇಲೆ ತಮ್ಮ ವಿವಾಹಿತ ಜೀವನದ ದೋಷಗಳನ್ನು ಹೊರಿಸುವವರು ಅನೇಕರಿರುವರು. ಈ ಬಗೆಯ ಆಸ್ಪದವನ್ನು ಕನ್ನಡ ಓದುಗರಿಗೆ ಕೊಡುವದು ನನ್ನ ಮನಸಿನಲ್ಲಿಲ್ಲ. ಆದುದರಿಂದ ಮೊದಲೇ ಅವರಿಗೆ ನಾನು ಹೇಳಿಕೊಳ್ಳುತಿರುವೆನು — ಈ ಮುನ್ನುಡಿ ಓದದೆ ಪುಸ್ತಕ ಓದಿರಿ ಎಂದು, ಅಂದರೆ ಇಂಥವರು ಹೇಳಿದರೆಂದು ಈ ಪುಸ್ತಕ ಓದಿದೆ, ಎಂಬ ಶಬ್ದ ಬೇಡ. ಸ್ವ-ಇಚ್ಛೆಯಿಂದ ಈ ಪುಸ್ತಕವನ್ನು ಓದಿರಿ. ಯಾರ ಹೇಳಿಕೆ, ಗುಣವರ್ಣನೆ, ಶಿಫಾರಸು ಮುಂತಾದವುಗಳಿಲ್ಲದೆ ರುಚಿಗೊಂಡು ಓದುವಷ್ಟು ಈ ಪುಸ್ತಕ ಚನ್ನಾಗಿದೆ ಎಂದು ನಾನು ಹೇಳಬಲ್ಲೆ. ಹೀಗಿರುವುದರಿಂದ ಲೇಖಕರು ಹಾಗೂ ಪ್ರಕಾಶಕರು ನನಗೆ ಮುನ್ನುಡಿ ಬರೆಯಲು ಹೇಳಿದ್ದು ವ್ಯರ್ಥ ಎಂದು ನನ್ನ ಅಭಿಪ್ರಾಯ. ಸ್ವಭಾವಸುಂದರ ಪದಾರ್ಥಕ್ಕೆ ಮತ್ತೆ ಶಿಫಾರಸು ಬೇಕೇ? ಜನಮನವು ಅತ್ತ ಸಹಜವಾಗಿಯೆ ಹರಿಯುವದು.

ಕೃಷ್ಣಶರ್ಮರು ಕನ್ನಡ ವಾಗ್ದೇವಿಯ ಮಂದಿರದಲ್ಲಿ ದೀಪಾವಳಿಯ ಈ ಸುಮುಹೂರ್ತದಲ್ಲಿ ಹಚ್ಚಿದ ಈ 'ದೀಪಮಾಲೆ'ಗೆ ಆ ಹೆಸರು

ಅನ್ವರ್ಥಕವೋ ಎಂದು ಕೇಳಬೇಕೆಂದೆನಿಸುವುದು. ಇದು ಮಿಂಚಿನ ಮಾಲೆ. ಒಂದೊಂದು ಮಿಂಚಿನ ಹೊಳೆತದಲ್ಲಿ ಒಂದೊಂದು ದಿವ್ಯಮೂರ್ತಿಯು ಕಿಂಚಿದ್ದರ್ಶನವಾಗಿ ಅದು ಮನದ ಮರೆಯಲ್ಲಿ ಮಾಯವಾಗುವದು. ಮುಂದೆ ಮತ್ತೊಂದು ಮಿಂಚಿನ ಹೊಳೆತ, ಇನ್ನೊಂದು ಮೂರ್ತಿಯ ದರ್ಶನ ಮತ್ತೆ ಅಂಧಕಾರ, ಹೀಗೆ ಇಲ್ಲಿ ಕೃಷ್ಣಶರ್ಮರು ತಮ್ಮ ಲೆಕ್ಕಣಿಕೆಯ ಒಂದೊಂದು ಎಳೆತದಿಂದ ಒಂದೊಂದು ಮೂರ್ತಿಯನ್ನು ಸೃಜಿಸಿರುವರು. ಇವು ಶಬ್ದಚಿತ್ರಗಳೆನ್ನಬಹುದು. ಸ್ವಭಾವಚಿತ್ರ ಗಳೆನ್ನಬಹುದು. ಇವರ ಶೈಲಿಯು ಪ್ರತಿಭಾಯುಕ್ತವಾದುದು ಎಂದು ನಾನು ಬೇರೆ ಹೇಳಬೇಕಾಗಿಲ್ಲ. ಕನ್ನಡಿಗರಿಗೆ ಇವರು ಪೂರ್ವ ಪರಿಚಿತ ಲೇಖಕರು. ಮೊನ್ನೆ ಮೊನ್ನೆ 'ಪರ್ಣಯಾತ್ರೆ'ಯನ್ನು ಒರೆದು ಇವರು ಗಾಂಧೀಜಿಯವರ ದಿವ್ಯ ಭವ್ಯ ಜೀವನದ ರಮ್ಯಚಿತ್ರವನ್ನು ಮನಸು ಹಿಡಿಯುವಂತೆ ರೇಖಿಸಿದ್ದಾರೆ. ಈ ದೀಪಮಾಲೆಯಲ್ಲಿ ಅವರು ಗಾಂಧೀಜಿಯವರ ಪ್ರಭಾವಳಿಯಲ್ಲಿಯ ಜನರ ಮೇಲೆ ಪ್ರಕಾಶ ಕೆಡವಿ ಅವರ ಗುಟ್ಟುಗಳನ್ನು ನಮ್ಮೆದುರು ಬಿಚ್ಚಿಟ್ಟಿದ್ದಾರೆ. ಈ ಜೀವನಮಾಲೆಯ ಲ್ಲಿಯ ಶರಚ್ಚಂದ್ರರು ಪ್ರಭಾವಳಿಯ ತೀರ ಹೊರಗಿನವರು ಎನ್ನಬಹುದು. ಅದು ಕೂಡ ಕೆಲವೊಂದು ಆಕಸ್ಮಿಕ ಕಾರಣಗಳ ಮೂಲಕ ಪ್ರಭಾವಳಿ ಬಿಟ್ಟು ಹೊರಗೆ ಹೋದವರು ಅವರು. ಸರ್ವಪಳ್ಳಿ ರಾಧಾಕೃಷ್ಣನ್ನರು ಇನ್ನೂ ಆವರ ಪ್ರಭಾವಳಿಯಲ್ಲಿ ಸೇರದೆ ಹೋಗಿದ್ದರೂ ಆ ಸೂರ್ಯನನ್ನೆ ಮಧ್ಯಬಿಂದುವನ್ನಾಗಿಟ್ಟುಗೊಂಡು ಅವರು ಸಾಗಿರುವದು ಸ್ಪಷ್ಟವಿದೆ. ಕೃಷ್ಣಶರ್ಮರು ಬರೆದ ಈ ಕಿರಿಚರಿತ್ರಗಳನ್ನು ಓದುವಾಗ, ಇಷ್ಟಕ್ಕೆ ಏಕೆ ಬಿಟ್ಟರು, ಎಂದೆನಿಸುವದು. ಅಷ್ಟೊಂದು ಮೋಹಕಶಕ್ತಿ ಇದೆ ಇವರ ಶೈಲಿಯಲ್ಲಿ. ಇವರ ಈ ಲೇಖಗಳನ್ನು ಓದುವಾಗ ಎ. ಜಿ. ಗಾರ್ಡಿನರ, ಎಮಿಲ್ ಲಡ್‌ವಿಗ್, ಇಲ್ಲವೆ ಗುಂಥರ್ ಇವರ ನೆನಪಾಗುತ್ತಿದೆ. ನಿಸರ್ಗ ನಿರ್ಝರದಂತೆ ಇವರ ಶೈಲಿ ಒಮ್ಮೊಮ್ಮೆ ಸ್ಫಟಿಕ ಶಿಲೆಯಲ್ಲಿ ಖಳ ಖಳ ಹರಿಯುವಂತೆ, ಇನ್ನೊಮ್ಮೆ ಕೊಳ್ಳದಲ್ಲಿ ಗಂಭೀರವಾಗಿ ಸಾಗಿರುವಂತೆ, ಮತ್ತೊಮ್ಮೆ ಬಂಡೆಯಿಂದ ಬಂಡೆಗೆ ಹಾರುತಿರುವಂತೆ ಕಂಗೊಳಿಸುವದು. ಅದರಲ್ಲಿ ಯಾವಾಗಲೂ ಒಂದು ಕುಣಿತವಿದೆ, ಒಂದು ಹಗುರು ಇದೆ, ಒಂದು ಚಲ್ಲಾಟವಿದೆ.

ಮನೋಜ್ಞವಾದ ಶೈಲಿ ಎಂಬ ಒಂದೇ ಗುಣದಿಂದ ಕೃಷ್ಣಶರ್ಮರು ಒಳ್ಳೆ ಲೇಖಕರಾಗಿಲ್ಲ. ಅವರು ಆರಿಸುವ ವಸ್ತು, ಅದನ್ನು ನೋಡಿ ತಿರುಳನ್ನು ತಿಳಿದುಕೊಂಡು ನಾಲ್ಕೇ ಶಬ್ದಗಳಲ್ಲಿ ಅದನ್ನು ಚಿತ್ರಿಸುವ ಅವರ ಚಮತ್ಕಾರ ಹಿರಿದಾದುದು. ಅವರು ಬಾಹ್ಯವನ್ನು ಯಾವ ಸಹಜತೆಯಿಂದ ಬಣ್ಣಿಸುವರೊ ಅದೇ ರೀತಿ ತಮ್ಮ ಪಾತ್ರಗಳ ಅಂತರಂಗವನ್ನು ಅವರು ವರ್ಣಿಸಬಲ್ಲರು. ಅವರು ಇಲ್ಲಿ ವಿವಿಧ ಜನಗಳನ್ನು ವರ್ಣಿಸಿದ ಕುಶಲತೆಯನ್ನು ಕಂಡರೆ ಬೇರೆ ಬೇರೆ ಚಿತ್ರಗಳನ್ನು ರೇಖಿಸುವಾಗ ಬೇರೆ ಬೇರೆ ರೀತಿಗಳನ್ನು ಅನುಸರಿಸಿದಂತೆ ಭಾಸವಾಗುವದು. ಆದರೆ ಎಲ್ಲವು-ಗಳಲ್ಲಿಯೂ ಅದೇ ಆಳವಾದ ದೃಷ್ಟಿ, ಅದೇ ರೇಖನ ಚಾತುರ್ಯ, ಅದೇ ಶಬ್ದಸೃಷ್ಟಿಯ ಚಮತ್ಕಾರ ಇವು ಕಂಡುಬರುವವು. ಕನ್ನಡದಲ್ಲಿ ಇದೇ ಬಗೆಯ ಶಿಲ್ಪ ಅವರಿಂದ ಇನ್ನೂ ಹೆಚ್ಚು ಆಗಲಿ, ಅದರಿಂದ ಅನೇಕರು ಸ್ಫೂರ್ತಿಗೊಳ್ಳಲಿ ಎಂದು ಹಾರೈಸಿ ಪುನಃ ಒಮ್ಮೆ ಈ ಮುನ್ನುಡಿ ಓದದೆ ಪುಸ್ತಕ ಓದಿರಿ ಎಂದು ಹೇಳಿ ಈ ಮುನ್ನುಡಿಯನ್ನು ಮುಗಿಸುವೆನು.

ಕಾ. ಶು. ೧, ೮೬೫ — ದಿವಾಕರ ರಂಗನಾಥ.

## ಮಿಂಚಿನ ಬಳ್ಳಿಯ ಸಹಾಯಕರು

ಶ್ರೀ. ರಂಗರಾವ ದೇಸಾಯಿ, ( ಕಾಡಪ್ಪೂರ )   ೧೦—೦—೦

### ಹಿತಚಿಂತಕರು

ಶ್ರೀ. ಎಸ್. ಕೆ. ದೀಕ್ಷಿತ   ೫—೦—೦
,, ಶಂ. ಬಾ. ಜೋಶಿ   ೫—೦—೦
,, ಎಂ. ಗೋವರ್ಧನರಾವ   ೫—೦—೦
,, ಎಲ್. ಆರ್. ಸುಂಕಣಿ   ೫—೦—೦
,, ಶ್ರೀ. ರಾ. ಪೋತದಾರ   ೫—೦—೦

## ಮಿಂಚಿನಬಳ್ಳಿಯಲ್ಲಿ ಪ್ರಕಟವಾದ ಗ್ರಂಥಗಳು

೧. ಕರ್ನಾಟಕ ದರ್ಶನ ೧-೦-೦
೨. ಕೆಮಾಲಪಾಶಾ ೧-೦-೦
೩. ಮಿಂಚಿದ ಮಹಿಳೆಯರು ೧-೦-೦
೪. ಸಾಮ್ಯವಾದ ೧-೦-೦
೫. ಜಪಾನ ೧ನೇ ಭಾಗ ೧-೦-೦
೬. ,, ೨ ,, ೧-೦-೦
೭. ಸ್ವಾ. ಹೆಜ್ಜೆಗಳು ೧-೪-೦
೮. ಕನ್ನಡ ಸಾಹಿತ್ಯ ವಾಹಿನಿ ೧-೦-೦
೯. ಭಾರತದ ರಾಜಕೀಯ ಸಮಸ್ಯೆ ೧-೦-೦
೧೦. ಮದುವೆ ೧-೦-೦
೧೧. ದೀಪಮಾಲೆ ೧-೦-೦

ಬಳ್ಳಿಗೆ ಚಂದಾದಾರರಾಗಿರಿ.

ವಾರ್ಷಿಕ ಚಂದಾ ೩-೮-೦ ಮಾತ್ರ.

ವ್ಹಿ. ಪಿ. ವೆಚ್ಚ ಬೇರೆ.

ಮಿಂಚಿನ ಬಳ್ಳಿಯ ಚಾವಡಿ, ಧಾರವಾಡ.

# ಸರೋಜಿನಿದೇವಿ

•

'ನಾನು ಬ್ರಾಹ್ಮಣಿ; ಭಿಕ್ಷಾಂ ದೇಹಿ ಎಂದು ಬಂದಿದೇನೆ. ನಾನು ಬೇಡುತ್ತಿರುವುದು ಹಿಡಿ ಅನ್ನವಲ್ಲ; ದೇಶಸೇವೆಗಾಗಿ ಸಮರ್ಪಿತವಾದ ನಿಮ್ಮ ಜೀವನಗಳನ್ನು.'

ನಾಗಪುರ ವಿಶ್ವವಿದ್ಯಾಲಯದ ಪ್ರಶಸ್ತಿ ಪ್ರದಾನೋತ್ಸವದಲ್ಲಿ ಪ್ರಧಾನಭಾಷಣವನ್ನು ನಿಶ್ಶಬ್ದವಾಗಿ ಕೇಳಿದವರು ರಸಸ್ರೋತಸ್ಸಿನೊಂದರಲ್ಲಿ ಈಸಾಡಿದರು. ಮೇಲಿನ ಪಲ್ಲವಿ ಅವರ ಕಿವಿಯಲ್ಲಿ ಝೇಂಕರಿಸಿತು. ಸರೋಜಿನಿದೇವಿಯದು ಈ ವರ್ಷ ಪ್ರಧಾನಭಾಷಣ.

ಸರೋಜಿನಿದೇವಿ ಭಾರತ ಕಾವ್ಯಾಂಬರದ ಬೆಳುದಿಂಗಳು; ಹಿಂದುಸ್ತಾನದ ಕವಿಚೂತವನಕೋಕಿಲೆ. ಆಕೆಯ ವಾಣಿ ವೇಣುಗಾನ, ಭಾಷಣ ರಸಗಂಗೆ. ಆಕೆಯ ಜೀವನ ನಿರಂತರ ಸೌಂದರ್ಯೋಪಾಸನೆ.

ಇನ್ನೂ ಹದಿಮೂರು ವರುಷದ ಹುಡುಗಿಯಾಗಿರುವಾಗಲೇ ಸರೋಜಿನಿ ಕಾವ್ಯಪ್ರಪಂಚದಲ್ಲಿ ಕಾಲಿಟ್ಟಳು. ಆಗಲೇ ಆಕೆಯ ಕಾವ್ಯಾಂಕುರ. ಅಂದಿನಿಂದ ಆ ಲೋಕದಲ್ಲಿ ಸಾಮ್ರಾಜ್ಞಿಯಂತೆ ವಿಹರಿಸುತ್ತಿದಾಳೆ. ಆಕೆ ಆಡಿದ ಯಾವ ಮಾತೂ ಮಾಡಿದ ಯಾವ ಕೆಲಸವೂ ಕಾವ್ಯಮಯವಾಗದೆ ಇಲ್ಲ. ಆಕೆಯ ರಸವತ್ತಾದ ಉದ್ವೇಗಪೂರ್ಣವಾದ ಭಾಷಣಗಳನ್ನು . ಕೇಳಿದವರದೇ ಪುಣ್ಯ. ಎಂಥ ಶುಷ್ಕೋಪಚಾರದ ಸಾಮಾನ್ಯ ಭಾಷಣವೂ ಕೂಡ ರೂಪುಗೊಂಡು ನಿಲ್ಲುತ್ತದೆ ಕೇಳುವವರ ಇದಿರಿನಲ್ಲಿ. ಅದೊಂದು ಕಿನ್ನರೀಗಾನ, ಅಪ್ಸರಾವಿಲಾಸ. ಸರೋಜಿನಿ ಒಮ್ಮೆ ಜಾಯಿಂಟ ಸೆಲೆಕ್ಟ ಕಮಿಟಿಯ ಮುಂದೆ ಸಾಕ್ಷ್ಯ ನುಡಿದಳು ರಾಜಕೀಯ ಸಮಸ್ಯೆಗಳ ವಿಷಯದಲ್ಲಿ. ಆ ಸಮಿತಿಯ ಅಧ್ಯಕ್ಷ ಆಕೆಯ ಸಾಕ್ಷ್ಯದ ಬಗ್ಗೆ ಹೀಗೆ ಬರೆದ: 'ನಮ್ಮ ನೀರಸವಾದ ಗದ್ಯಮಯವಾದ ಸಾಹಿತ್ಯಕ್ಕೆ ಅದು ರಸಮಯವಾದ ಕಾವ್ಯದ ಬಣ್ಣವನ್ನು ಕೊಟ್ಟಿತು.'

ಸರೋಜಿನಿಯ ಕವಿತೆ ಇಂಗ್ಲೀಷಿನಲ್ಲಿದೆ. ಇಂಗ್ಲೀಷಿನಲ್ಲಿ ಕವಿತೆ ಮಾಡಿ ಹೆಸರು ಗಳಿಸಿದ ಆಂಗ್ಲೇತರರು—ಆದರಲ್ಲೂ ಭಾರತೀಯರು—ಬಹಳ ಕಡಮೆ. ಆಕೆಯ **'ಸ್ವರ್ಣದೇಹಳಿ'**, **'ಭಗ್ನ ಪಕ್ಷಗಳು'** (Golden Threshold, Broken Wings) ಇಂಗ್ಲೀಷಿನ ಜನವನ್ನು ತಲೆದೂಗಿಸಿದವು. ಇಂಗ್ಲೀಷರ ಸಹಜಮಧುರವಾದ ಇಂಗ್ಲೀಷಿಗಿಂತ ಸವಿ ಸರೋಜಿನಿಯ ಕವನ. ಪರಕೀಯರ ಕವಿತಾ ಸಂಗ್ರಹಗಳನ್ನು ಪ್ರಕಟಿಸುವುದು ಇಂಗ್ಲೀಷು ಪ್ರಕಟನಾಲಯಗಳಿಗೆ ರೂಢಿಯಿಲ್ಲ. ಅವು ಈ ಗೌರವಕ್ಕೆ ತಕ್ಕವಲ್ಲವೆಂದು ಅವರ ಅಭಿಪ್ರಾಯ. ಸರೋಜಿನಿಯ ಕವನಗಳು ಈ ರೂಢಿಗೆ ಅಪವಾದವಾದವು. ಇಂದಿಗೂ ಇಂಗ್ಲೆಂಡಿನಲ್ಲಿ ಕವನ ಸಂಗ್ರಹಗಳನ್ನು ಪ್ರಕಟಿಸಿದ ಆಂಗ್ಲೇತರರು ಬಹಳ ಕಡಮೆ, ಒಬ್ಬರೋ, ಇಬ್ಬರೋ. ಇಷ್ಟೇ ಅಲ್ಲ; ಆಕೆಯ 'ಸ್ವರ್ಣದೇಹಳಿ'ಗೆ ಸುಪ್ರಸಿದ್ಧ ವಿಮರ್ಶಕ ಚಕ್ರವರ್ತಿಯಾದ ಆರ್ಥರ್ ಸೈಮನ್ಸ್ ಪೀಠಿಕೆಯನ್ನು ಬರೆದಿದಾನೆ. 'ಈಕೆಯ ಚೆಲುವಿನ ಹಸಿವೇ, ಸೌಂದರ್ಯೋಪಾಸನೆಯೇ ಆಕೆಯನ್ನು ಕಾವ್ಯಪಥಕ್ಕೆ ಎಳೆದಿವೆ. ಸೂರ್ಯಕಾಂತಿಯ ಹೂ ಸೂರ್ಯನ

ಕಡೆ ತಿರುಗುವಂತೆ ಈಕೆಯ ಕಣ್ಣು ಸೌಂದರ್ಯದ ಕಡೆಗೆ ಹರಿದೋಡು ತ್ತದೆ.' ಎಂದು ಆತ ಆ ಪೀಠಿಕೆಯಲ್ಲಿ ಹೇಳಿದಾನೆ.

ಈ ಸೌಂದರ್ಯೋಪಾಸನೆಯೇ, ಚೆಲುವು-ನಲವುಗಳ ಪೂಜೆಯೇ ಸರೋಜಿನಿದೇವಿಯ ಜೀವನ ರಹಸ್ಯ, ಗೆಲವಿನ ಗುಟ್ಟು. ಅದೇ ಆಕೆಯ ಜೀವನ ಸಂಗೀತದ ಶ್ರುತಿ.

ಆಕೆಯ ಜೀವನದ ಎಲ್ಲ ರಂಗಗಳಲ್ಲೂ ಈ ಶ್ರುತಿ ಸ್ಪಷ್ಟವಾಗಿಯೋ ನೇಪಥ್ಯದಲ್ಲೋ ಕೇಳಬರುತ್ತದೆ. ಸ್ವದೇಶೀ—ಖಾದೀತತ್ವ ಆಕೆಗೆ ಒಪ್ಪಿಗೆ ಯಿದ್ದರೂ ಒರಟು ಗೋಣಿತಟ್ಟು ಆಕೆಗೆ ಸಹಿಸದು. ಆಕೆ ಕೈನೂಲನ್ನೇ ಉಪಯೋಗಿಸಿಯಾಳು; ಆದರೆ ರೇಸಿಮೆಯನ್ನೇ ಉಟ್ಟಾಳು. ಹೈದರಾ-ಬಾದಿನಲ್ಲಿ ಆಕೆಯ ಮನೆಯಿದ್ದರೂ ಹಿಂದುಸ್ತಾನದ ಮೊದಲ ಪಟ್ಟಣವಾದ ಮುಂಬಯಿಯಲ್ಲಿ ಆಕೆಯ ವಾಸ; ಮುಂಬಯಿಯಲ್ಲೂ ತಾಜಮಹಾಲು ಹೋಟೆಲಿನಲ್ಲಿ. ಮುಂಬಯಿಯ ತಾಜಮಹಾಲೆಂದರೆ ಇಂದ್ರಭವನ! ಸತ್ಯಾಗ್ರಹ ಚಳುವಳಿಯಲ್ಲಿ ಆಕೆ ಜೈಲಿಗೂ ಹೋಗಿದ್ದಳು. ಆಗ ಆ ಜೈಲಿನ ಅಂಗಳದಲ್ಲೇ ಸೂರ್ಯಕಾಂತಿ ಹೂಗಳನ್ನು ಪಾತಿಮಾಡಿ ನೀರು ಹಾಕಿ ಬೆಳೆಸುತ್ತಿದ್ದಳಂತೆ. ಆ ಬೀಳುನೆಲ ಮೋರೆ ಸಿಡಿಸಿಕೊಂಡು ನಿಂತಿರು ವುದು ಆಕೆಗೆ ಸಹಿಸಲಿಲ್ಲ. ಹೂವನ್ನಾದರೂ ಬೆಳೆದು ಅಲ್ಲಿ ಆನಂದ ನಗೆ ಗಳನ್ನು ಹರಿಯಿಸಬೇಕು. ಸರೋಜಿನಿಯ ಮನೆಯ ಹೆಸರೂ ಮುದ್ದಾ ಗಿದೆ; 'ಸ್ವರ್ಣದೇಹಳಿ'. ಮನೆಯಲ್ಲಿ ಕಮನೀಯವಾದ ಚಿಕ್ಕ ಕೈತೋಟ ವಿದೆ. ಹೌಳಿಯನ್ನು ದಾಟಿ ಒಳಗೆ ಹೋದರೆ ವನಶ್ರೀಯೇ ಆಡುತಿರುವ ಳೆಂದು ಅನಿಸುತ್ತದೆ. ಲತಾಕುಂಜವನ್ನು ದಾಟಿದರೆ ಒಳಗೆ ದಿವಾನಖಾನೆ ಯಲ್ಲಿ ವಿವಿಧ ವರ್ಣಸಮ್ಮೇಳನದ ಸೊಬಗು. ನೆಲಕ್ಕೆ ಶ್ರೇಷ್ಠವಾದ ಪರ್ಶಿ ಯನ್ ಜಂಖಾನೆಗಳು; ಅದರ ಮೇಲೆ ಬೇರೆ ಬೇರೆ ಪ್ರಾಣಿಗಳ ನಯವಾದ ಚರ್ಮಗಳು; ನಡುವೆ ವಿವಿಧಾಕೃತಿಗಳ ಸುಖಾಸನಗಳು. ಇದಿರಿಗೆ ಪದ್ಮಾಸನಸ್ಥಿತನಾದ ಪ್ರಶಾಂತವದನದ ಬುದ್ಧದೇವನ ದಿವ್ಯಮೂರ್ತಿ.

ಸೌಂದರ್ಯವೇ ಸತ್ಯ, ಸತ್ಯವೇ ಸೌಂದರ್ಯ ಎಂಬ ಎರಡು ಪಂಥ ಗಳಿವೆ. ಹರಿ-ಹರರ ಆಧಿಕ್ಯದ ಹೊಡೆದಾಟದಂತೆ ಈ ವಾದ. ಈ ವಿವಾದ

ದಲ್ಲಿ ಹುರುಳಿಲ್ಲವೆಂದು ತೋರುವದಕ್ಕೇ ಕನ್ನಡ ಜನ ಹರಿಹರನನ್ನು ಸೃಷ್ಟಿಸಿದಾರೆ. ಹಾಗೆಯೇ ಸತ್ಯಸೌಂದರ್ಯಗಳ ಮಾತು. ಎರಡೂ ಬೇರೆ ಬೇರೆ ಅರ್ಥದ ಒಂದೇ ವಿಚಾರ. ಆದರೆ ಅಭಿರುಚಿಗೆ ತಕ್ಕಂತೆ ಜನ ಬೇರೆ ಬೇರೆ ಪಂಥಗಳಿಂದ ಅಲ್ಲಿಗೇ ಬರುತ್ತಾರೆ. ರುಚಿಪ್ರಧಾನರಾದ ಜನಕ್ಕೆ ಮೊದಲನೆಯ ಪಂಥ ಮೆಚ್ಚು; ತತ್ವಪ್ರಧಾನರಾದವರಿಗೆ ಎರಡನೆಯದು ಸರಿ. ಸರೋಜಿನಿದೇವಿ ಮೊದಲನೆಯ ಗುಂಪಿನವಳು. ಸುಂದರವಲ್ಲದುದು ಮಧುರವಲ್ಲದುದು ಸತ್ಯವಲ್ಲವೆಂದು ಆಕೆಯ ಹಟ.

ಈ ಸೌಂದರ್ಯ-ಪಿಪಾಸೆಯೇ ಆಕೆಯನ್ನು ಕಾವ್ಯಲೋಕದಿಂದ ಬಯಲಿಗೆಳೆದು ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ಕೆಲಸಮಾಡಲು ತೊಡಗಿಸಿತು. ಆಕೆಯ ಮನಸ್ಸಿಗೆ ರಾಜಕಾರಣದ ಕೀಟಲೆಯು ಒಗ್ಗುವ ದಿಲ್ಲ. ಆದರೆ ಆಕೆಯ ಕವಿಹೃದಯಕ್ಕೆ ತನ್ನ ದೇಶ, ಜನ ಪರಾಧೀನ ರಾಗಿರುವದು ಸಹಿಸುವದಿಲ್ಲ. ತನ್ನ ದೇಶ, ಜನ ಸ್ವತಂತ್ರರಾಗಿ ವಿಶ್ವ-ಕಲ್ಯಾಣೋತ್ಸವದಲ್ಲಿ ಮೊದಲಿಗರಾಗಿ ನಿಲ್ಲಬೇಕೆಂಬ ಆಕೆಯ ಆಸೆ ಪಾರ-ತಂತ್ರ್ಯವೆಂಬ ವಿಕಾರವನ್ನು ಅಳಿಯಿಸಲು ಹುರಿದುಂಬಿಸುತ್ತಿದೆ. ಅಹಿಂಸೆಯ ತತ್ವ ಆಧ್ಯಾತ್ಮಿಕತೆಗಳಲ್ಲಿ ಆಕೆಗೆ ಅಷ್ಟಾಗಿ ನಂಬಿಕೆಯಿಲ್ಲ. ಹಿಂಸೆಯ ಕರಾಳತೆ ಭೀಭತ್ಸಗಳನ್ನು ನೋಡಿ ಬೇಸತ್ತು ಅಹಿಂಸೆಯ ಸೌಂದರ್ಯಕ್ಕೆ ಶರಣುಹೋಗಿದಾಳೆ. ತತ್ವಜೀವನದ ಕಠಿನಮಾರ್ಗ ಆಕೆಗೆ ವ್ಯರ್ಥವೆನಿಸುತ್ತದೆ. ಆದರೆ ಮಾನವಜಾತಿಯ ಸ್ವಾರ್ಥಮಯ ರಾಕ್ಷಸೀ ವಿಲಾಸಕ್ಕೆ ಅಂಜಿ ತತ್ವಜೀವನದಲ್ಲಿ ಅರ್ಥ ಹುಡುಕುತ್ತಾಳೆ.

ಸರೋಜಿನಿಯ ಮನೆಯಲ್ಲಿ ಪತ್ರವ್ಯವಹಾರಕ್ಕಾಗಿ ಅಂದವಾದ ಕೈ ತಯಾರಿಯ ಕರಡುಕಾಗದ ಲಕೋಟಿಗಳನ್ನು ಉಪಯೋಗಿಸುತ್ತಾರೆ. ಹಿಂದುಸ್ತಾನದ ಆರ್ಥಿಕ ಪುನರುಜ್ಜೀವನದ ಪರಮೋಪಾಯವಾದ ಖಾದಿಯ ಮೇಲೆ ಆಕೆಯ ಒಲವು ಬಹಳ; ಗಾಂಧೀಜಿಗೇನು ಕಡಮೆಯಿಲ್ಲ ಅದರಲ್ಲಿ. ಆದರೆ ಆಕೆಯ ನೋಟ ಆರ್ಥಿಕವಲ್ಲ; ಗೃಹಪರಿಶ್ರಮದಿಂದ ಹಳ್ಳಿಯ ಕೈಗಾರಿಕೆಯಿಂದ ಹಿಂದುಸ್ತಾನದ ಬೊಕ್ಕಸ ತುಂಬೀತೆಂಬ ಯೋಚನೆ ಆಕೆಯದಲ್ಲ. ಅದರಿಂದ ಭಾರತದ ಕಲಾಕೌಶಲ್ಯದ ಪುನರುಜ್ಜೀವನವಾಗುತ್ತದೆ; ಅದರಲ್ಲಿ ರಾಟಿಯ ಶ್ರಾವ್ಯಗಾನ ಕೇಳಿಸು

ತ್ತದೆ. ಗಾಂಧೀ ಜವಾಹರಲಾಲರಿಗಿದ್ದಷ್ಟೇ ಶ್ರದ್ಧೆಯಿದೆ ಹಿಂದೂ ಮುಸ್ಲಿಮ ಸೌಭ್ರಾತೃತ್ವದಲ್ಲಿ ಸರೋಜಿನಿಗೆ. ಅದು ಜವಾಹರಲಾಲರ ರಾಜಕೀಯ ಆದರ್ಶವೂ ಅಲ್ಲ; ಗಾಂಧೀಜಿಯ ನೀತಿಧರ್ಮದ ವಿಶ್ವಾಸವೂ ಅಲ್ಲ. ಸ್ತ್ರೀಸಹಜವಾದ ಸಮರಸಜೀವನದ ಹಂಬಲದಿಂದ ಹುಟ್ಟಿದ ನಂಬಿಗೆ ಅದು.

ಮೊಳಕೆಯಲ್ಲೇ ಗುಣ ತಿಳಿಯುತ್ತದೆ. ಎಳೆತನದಿಂದಲೂ ಸರೋಜಿನಿ ಬಹು ಚುರುಕು. ೧೨ ವರ್ಷಕ್ಕೇ ಆಕೆ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾದಳು. ಮುಂದೆ ವಿಲಾಯತಿಯಲ್ಲಿ ಓದಿದಳು. ವಿಲಾಯತಿಯಲ್ಲಿ ತನ್ನ ಕವಿತೆಯಿಂದ ಜನರನ್ನು ಮುಗ್ಧಗೊಳಿಸಿ Nightingale of the East (ಪ್ರಾಚೀ ಕೋಕಿಲ) ಎನಿಸಿಕೊಂಡಳು. ಗಾಂಧೀಜಿ ರವೀಂದ್ರ ಜವಾಹರಲಾಲರಿಗಿದ್ದಷ್ಟೇ ಜಗದ್ವಿಖ್ಯಾತಿಯಿದೆ ಆಕೆಗೆ. ಅಮೆರಿಕಾ ಆಫ್ರಿಕಾ ಯುರೋಪುಖಂಡಗಳಲ್ಲಿ ಭಾರತದ ಸಂದೇಶವನ್ನು ತನ್ನದೇ ಆದ ರೀತಿಯಲ್ಲಿ ಬೀರಿದಾಳೆ. ದಕ್ಷಿಣ ಆಫ್ರಿಕದಲ್ಲಿ ಹಿಂದೀಯರ ಸ್ಥಿತಿ ಬಹಳ ಶೋಚನೀಯವಾಗಿತ್ತು. ಬಿಳಿಯ ಯುರೋಪಿಯನ್ನರಿಗೆ ಕಪ್ಪುಬಣ್ಣದ ಹಿಂದೀಜನರನ್ನು ಅಲ್ಲಿ ನಿರ್ನಾಮ ಮಾಡುವ ಹಂಬಲ. ಸರೋಜಿನಿ ಆಫ್ರಿಕಾಕ್ಕೆ ಭಾರತದ ರಾಯಭಾರಿಯಂತೆ ಹೋಗಿ ನಮ್ಮವರಿಗೆ ಬೆಂಬಲ ಕೊಟ್ಟು ಧೈರ್ಯ ವಿಶ್ವಾಸಗಳನ್ನು ತುಂಬಿದಳು.

ವಿಲಾಯತಿಯಿಂದ ಬಂದೊಡನೆ ಹಿಂದುಸ್ಥಾನದಲ್ಲಿ ಆಕೆಯ ಮನಸ್ಸನ್ನು ಕರಗಿಸಿದುದು ಭಾರತ ಸ್ತ್ರೀಯರ ದೈನ್ಯಾವಸ್ಥೆ. ಹೆಂಗಸೆಂದರೆ ಹಣ ಸೊತ್ತು; ಗಂಡಸಿನ ಸುಖಭೋಗದ ಸಾಮಗ್ರಿ-ಸಾಧನೆ. ಅವಳಿಗೆ ಸ್ವಲ್ಪ ಸ್ವಾತಂತ್ರ್ಯ ಕೊಟ್ಟರೆ ಸಾಕು ಪ್ರಳಯವೇ ಆದೀತು. ನಾರಿ ಮಾರಿ; ಎಲ್ಲ ಅನರ್ಥಕ್ಕೂ ಕಾಂಚನದಂತೆ ಕಾಮಿನಿಯೂ ಮೂಲ. ವಿಚಾರದಲ್ಲೂ ಆಚಾರದಲ್ಲೂ ಹಿಂದೂ ಜನರಲ್ಲಿ ಈ ಭಾವನೆ ಬಲವಾಗಿ ಬೇರೂರಿತ್ತು. ನಮ್ಮ ಸಂಸ್ಕೃತಿಯಲ್ಲಿ ಮೊದಲಿಂದಲೂ ಇದು ಇತ್ತೋ ಇಲ್ಲವೋ, ಪರಾಧೀನರಾಗಿ ಶಕ್ತಿಹೀನರಾದ ಮೇಲೆ ಈ ಮಾತು ನಮ್ಮ ಬದುಕಿನ ಹಾಸುಹೊಕ್ಕಾಗಿದೆ. ನಮ್ಮ ಸಂಸ್ಕೃತಿಗೆ ಜೀವನಕ್ಕೆ ವಿಕಾಸಕ್ಕೆ ಹಿಡಿದ ಈ ಗೆದ್ದಲು ಆಕೆಯ ಚೆಲುವಿನ ನೋಟಕ್ಕೆ ಪೂರ್ಣಜೀವನದ

ಕಲ್ಪನೆಗೆ ಸರಿತೋರಲಿಲ್ಲ. ಕೂಡಲೆ ಸ್ತ್ರೀಜನೋದ್ಧರಣ ಕಾರ್ಯಕ್ಕೆ ತೊಡಗಿದಳು. ಅಂದಿನಿಂದ ಆಕೆಯ ಭಾಷಣಗಳಿಗೆ ಹಿಂದೀ ಹೆಂಗಸರ ಹಕ್ಕು ಬಾಧ್ಯತೆಗಳು, ಅವರ ಆದರ್ಶಪ್ರೇಮಗಳು, ಅವರ ತ್ಯಾಗ ಸೇವೆಗಳು ಪಲ್ಲವಿಯಾದವು. ಭಾರತ ಮಹಿಳೆಯರ ಸ್ವಾತಂತ್ರ್ಯಸಾಧನೆಗಾಗಿ ದೊರೆತ ಯಾವ ಸಂದರ್ಭವನ್ನೂ ಆಕೆ ವ್ಯರ್ಥವಾಗಿ ಬಿಡಲಿಲ್ಲ. ಯಾರ ಮನಸ್ಸನ್ನೂ ನೋಯಿಸದೆ ಇಲ್ಲದ ಬಡಾಯಿ ಕೊಚ್ಚದೆ ವಾದವಿವಾದಗಳ ಜಗಳದ ಜಗಲಿಯನ್ನು ಹತ್ತದೆ ಗದ್ದಲವಿಲ್ಲದೆ ಗುಲ್ಲು ಇಲ್ಲದೆ ಶಾಂತವಾಗಿಯೆ ಹಿಂದುಸ್ತಾನದಲ್ಲಿ ಈ ಚಳುವಳಿ ನಡೆದಿದೆ. ನಾರೀಜನ ಪಕ್ಷಪಾತಿಗಳೆಂದು ಬಡಾಯಿ ಹೇಳಿಕೊಳ್ಳುವ ಇತರ ದೇಶಗಳಲ್ಲಿ ಈ ಚಳುವಳಿ ಕುಸ್ತಿಯ ಕಣದ ವರೆಗೂ ಬಂತು. ಮುಂದೆ ನಿಂತು ಪ್ರಯತ್ನಮಾಡಿ ಕಾದಾಡಿದ ಧೀರೆಯರು ಕೆಲವರು ಸೆರೆಮನೆಯನ್ನೂ ಕಂಡರು. ಬಹಳ ದಿನದ ವರೆಗೆ ಸಮಾಜದ ಜೀವನದಲ್ಲಿ ಅಸಮಾಧಾನ ಕಲಹಗಳು ನೆಲೆಸಿದ್ದವು.

ಹಿಂದುಸ್ತಾನದಲ್ಲಿ ಸದ್ದಿಲ್ಲದೆಯೇ ಕಣ್ಣುಮುಚ್ಚಿ ಕಣ್ಣುತೆರೆಯುವದರೊಳಗಾಗಿ ಈ ಕ್ರಾಂತಿ ನಡೆದುಹೋಗಿದೆ. 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ವಾಕ್ಯ ಪಾತಾಳದಲ್ಲಿ ಮುಳುಗಿ ಹೋಗಿದೆ. ಸ್ವಾತಂತ್ರ್ಯದ ಸುಂದರ ಧ್ಯೇಯದ ಉಪಾಸನೆಯಲ್ಲಿ ನಾರಿ ಲಕ್ಷ್ಮಿಯಾಗಿದಾಳೆ. ಗಂಡು ಹೆಣ್ಣು ವಾಗರ್ಥಗಳಂತೆ ಅನ್ಯೋನ್ಯ ಆಶ್ರಯಿಗಳು. ಯಾರಿಗೆ ಯಾರೂ ಹೆಚ್ಚಲ್ಲ ಎಂಬ ಭಾವನೆ ಬಂದಿದೆ. ಸಂಘಜೀವನದಲ್ಲಿ ರಾಜಕೀಯ ರಂಗದಲ್ಲಿ, ಶಿಕ್ಷಣದಲ್ಲಿ ಕುಟುಂಬದಲ್ಲಿ ಸಾಮರಸ್ಯ ಬೆಳೆದಿದೆ. ಗಂಡೂ ಹೆಣ್ಣೂ ಸರಿಸಮನಾಗಿ ಎಲ್ಲ ಕ್ಷೇತ್ರಗಳಲ್ಲೂ ಕೆಲಸಮಾಡುತ್ತಿದಾರೆ. ಶಾಸನಸಭೆಗಳಲ್ಲಿ ಹೆಂಗಸರಿಗೆ ಯೋಗ್ಯಸ್ಥಳವಿದೆ. ಅಷ್ಟೇ ಅಲ್ಲ. ಜಗತ್ತಿಗೇ ಉದಾಹರಣೆಯಾಗಿ ಶ್ರೀಮತಿ ವಿಜಯಲಕ್ಷ್ಮಿ ಮಂತ್ರಿಯಾಗಿದಾಳೆ.

ಈ ಕ್ರಾಂತಿ ಪುನರುಜ್ಜೀವನಗಳಿಗೆ ಗಾಂಧೀಜಿಯ ಪ್ರಭಾವ ಅವರ ಸತ್ಯಾಗ್ರಹ ಚಳುವಳಿಗಳು ಬಹುಮಟ್ಟಿಗೆ ಕಾರಣವಾಗಿದ್ದರೂ ಸರೋಜಿನಿಯ ಕೃಷಿಗೆ ಆ ಕೀರ್ತಿ ಸಲ್ಲಬೇಕು. ೧೯೩೦ ರಲ್ಲಿ ಸತ್ಯಾಗ್ರಹ ಸಮರ

ದಲ್ಲಿ ಹಿಂದುಸ್ಥಾನದ ಹೆಂಗಸರು ವಹಿಸಿದ ಭಾಗ, ಹೊತ್ತ ಹೊಣೆ, ಮಾಡಿದ ತ್ಯಾಗ ಜಗತ್ತಿನ ಇತಿಹಾಸದಲ್ಲೇ ಸಾಟಿಯಿಲ್ಲದುದು. ಅಂಥ ಚಿತ್ರ ಎಲ್ಲೂ ಯಾರೂ ಕಂಡಿದ್ದಿಲ್ಲ. ಸರೋಜಿನಿ ಕೈಯಲ್ಲಿ ಕುಂಚ ಹಿಡಿದು ತಾನೇ ಆ ಚಿತ್ರ ಲೇಖನಕ್ಕೆ ತೊಡಗದಿದ್ದರೆ ಬಣ್ಣ ಹೇಗಿರುತ್ತಿತ್ತೋ! ಸರೋಜಿನಿ ಸ್ವಯಂ ಉಪ್ಪಿನ ಸತ್ಯಾಗ್ರಹದಲ್ಲಿ ಧುಮುಕಿದಳು. ಹೆಸರಾದ ಧರಸನದ ಮುತ್ತಿಗೆಗೆ ಆಕೆಯೇ ಮುಂದಾಳು. ಆಗ ಆಕೆ ತೋರಿದ ಧೈರ್ಯ ಸಾಹಸ ತ್ಯಾಗಗಳು ಮರೆಯಲಾರದವು.

ಆಗ ಮಾತ್ರವಲ್ಲ, ಎಲ್ಲ ಸಮಯಗಳಲ್ಲೂ ಸರೋಜಿನಿಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಧಾನಪಾತ್ರ ಇದ್ದೇ ಇತ್ತು. ಜೈಲಿನ ರುಚಿಯನ್ನೂ ನೋಡಿದಾಳೆ. ೧೯೧೯ ರಲ್ಲಿ ರೌಲೆಟ್ ಶಾಸನವನ್ನೂ ವಿರೋಧಿಸಿ ಗಾಂಧಿಜೀ ಮೊದಲನೆ ಬಾರಿ ವಿಸ್ತೃತಪ್ರಮಾಣದಿಂದ ಸತ್ಯಾಗ್ರಹ ಪ್ರಾರಂಭಮಾಡಿದಾಗಲೇ ಸರೋಜಿನಿದೇವಿ ಅದರಲ್ಲಿ ಪಾಲುಗೊಂಡಳು. ಅನಧಿಕೃತವಾದ ಪತ್ರಿಕೆಗಳನ್ನು ಮುಂಬಯಿಯಲ್ಲಿ ರಾಜಾರೋಷವಾಗಿ ಬೀದಿಗಳಲ್ಲಿ ಹಂಚಿದಳು.

ಸರೋಜಿನಿ ಮೊದಲಿಂದಲೂ ದೇಶಸೇವೆಯಲ್ಲಿ ನುರಿತಜೀವ. ಗಾಂಧೀಜೀ ಭಾರತಕ್ಕೆ ಬಂದ ಮೇಲೆ ದೇಶಸೇವೆ ರಾಜಕಾರಣಗಳು ನಮಗೆ ಮನೆ ಮಾತಾಗಿವೆ. ಅದಕ್ಕೆ ಮೊದಲು ಸ್ವಾತಂತ್ರ್ಯಕ್ಕಾಗಿ ನಡೆದ ಚಳುವಳಿಯಲ್ಲಿ ಕಾದಾಡಿದ ವೀರರು ಲೆಕ್ಕಕ್ಕೆ ಕೆಲವರೇ ಇದ್ದರೂ ತೂಕದಲ್ಲಿ ಬಹಳ ಹೆಚ್ಚು. ದಾದಾಭಾಯಿ, ಗೋಖಲೆ, ತಿಲಕ, ಅನಿಬಿಸೆಂಟ್, ಮುಂತಾದವರೆಲ್ಲ ಮಹಾಪ್ರಾಣಗಳು. ಅವರು ಬಿತ್ತಿದ ಪೈರನ್ನೇ ಇಂದು ನಾವು ನೀರೆರೆದು ಬೆಳೆಸುತ್ತಿದೇವೆ. ಆಗ ಮುಂಬಯಿ ಹೊಸ ಶಕ್ತಿಯ ಕೇಂದ್ರವಾಗಿತ್ತು. ಫಿರೋಜ್‌ಷಾ ಮೆಹತಾ, ಗೋಖಲೆ ಆ ಪ್ರಾಂತದಲ್ಲಿ ಸ್ವಾತಂತ್ರ್ಯ ಭೇರಿಯನ್ನು ಬಾರಿಸಿದರು. ಸರೋಜಿನಿ ಹೆಸರಿಗೆ ಹೈದರಾಬಾದಿನ ವಾಸಿಯಾದರೂ ಮುಂಬಯಿಯಲ್ಲೇ ಹೆಚ್ಚಾಗಿ ಇರುತ್ತಿದ್ದುದು. ಈ ನಾಯಕರ ಪ್ರಭಾವ ಆಕೆಯ ಮೇಲೆ ಬೀಳದಿರಲಿಲ್ಲ. ಅವರ ದೇಶಭಕ್ತಿಯನ್ನು ಆಕೆ ತನ್ನದು ಮಾಡಿಕೊಂಡಳು. ಇತ್ತ ಮದರಾಸಿನಲ್ಲಿ ಅನಿಬೆಸೆಂಟಿನ ಹೋಂ ರೂಲು ಚಳುವಳಿ ಜೋರಾಗಿತ್ತು

ಅದಕ್ಕಾಗಿ ಸರಕಾರದ ಕೃಪೆಗೂ ಆಕೆ ಪಾತ್ರಳಾಗಿ ಸೆರೆಯಲ್ಲಿರಬೇಕಾಗಿತ್ತು. ಅದೂ ಸರೋಜಿನಿಯ ಮನಸ್ಸನ್ನು ಎಳೆಯಿತು. ಕಾಂಗ್ರೆಸ್ಸಿನ ಜಗಲಿಯನ್ನೂ ಗಾಂಧೀಜಿಗೆ ಮೊದಲೇ ಆಕೆ ಹತ್ತಿದ್ದಳು. ಆಕೆಯ ಭಾಷಣಗಳು ಆಗಲೇ ಜನರ ಮನಸ್ಸನ್ನೂ ಸೆಳೆದಿದ್ದವು. ಆ ವೀರ ವಾಣಿಯ ಮಹಾಪೂರ ಹರಿಯದ ಸಭೆಯಿರಲಿಲ್ಲ; ಆ ರುದ್ರ ವೀಣೆ ನುಡಿಯದ ವೇದಿಕೆಯಿರಲಿಲ್ಲ. ಸರೋಜಿನಿಯ ಹೆಸರು ದೇಶದಲ್ಲೆಲ್ಲ ತುಂಬಿ ಹೋಗಿತ್ತು. ಗಾಂಧೀಜೀ ದಕ್ಷಿಣ ಆಫ್ರಿಕದಿಂದ ಹಿಂದುಸ್ತಾನಕ್ಕೆ ತಿರುಗಿ ಬಂದಾಗ ಆ ದಿವ್ಯಶಕ್ತಿಯನ್ನು ಗುರುತಿಸಿಕೊಂಡವರು ಕೆಲವರು ಮಾತ್ರ. ಆ ಸಣ್ಣ ಗುಂಪಿನಲ್ಲಿ ಸರೋಜಿನಿಯ ಹೆಸರು ಮುಖ್ಯವಾದುದು. ಸತ್ಯಾಗ್ರಹ ವ್ರತವನ್ನು ೧೯೧೯ ರಲ್ಲಿ ಮುಂಬಯಿಯಲ್ಲಿ ಮೊದಲು ಮಾಡಿದಾಗ ಆ ವ್ರತವನ್ನು ಕೊಟ್ಟ ಹತ್ತು ಹನ್ನೆರಡು ಮಂದಿಯಲ್ಲಿ ಆಕೆ ಒಬ್ಬಳು. ಸತ್ಯಾಗ್ರಹವನ್ನು ಸ್ವೀಕರಿಸಿದ ವಿದೂಷೀಮಣಿಯರಲ್ಲಿ ಆಕೆಯೇ ಮೊದಲಿಗಳು.

ಗಾಂಧೀಜಿಯ ಮೇಲೆ ಆಕೆಯದು ಅಪಾರಭಕ್ತಿ, ಅಸೀಮ ವಿಶ್ವಾಸ. ಆ ವೀರವನಿತೆಗೆ ಸ್ವಾತಂತ್ರ್ಯಸಾಧನಾ ಕ್ಷೇತ್ರವು ಸ್ವಾಭಾವಿಕವಾಗಿಯೇ ವಶವಾದರೂ ಆಕೆಯ ಕಾವ್ಯಹೃದಯಕ್ಕೆ ಆತ್ಮರಹಿತವಾಗಿ ಗೊಡ್ಡು ಆರ್ಥಿಕ ತತ್ವ, ನೀತಿ ಇಲ್ಲದ ಶುಷ್ಕರಾಜಕಾರಣ ಸಮಾಧಾನ ಕೊಡಲಿಲ್ಲ. ಸತ್ಯಾಗ್ರಹದ ಪವಾಡವನ್ನು ಮೆರೆಯಿಸಿ ಸ್ವದೇಶಕ್ಕೆ ಹಿಂದಿರುಗಿದ ಗಾಂಧೀಜಿಯ ತತ್ವ ಜೀವನಗಳು ಆಕೆಯನ್ನು ಬಲವಾಗಿ ಸೆಳೆದವು. ಆಕೆಯ ಶಕ್ತಿಗೊಂದು ಹದ ಸಿಕ್ಕಂತಾಯಿತು, ಧ್ಯಾನಕ್ಕೊಂದ ಮೂರ್ತಿ ದೊರೆತಂತಾಯಿತು. ಗಾಂಧೀಜಿಯನ್ನು ಗುರುವಾಗಿ ಸ್ವೀಕರಿಸಿದಳು. ಅಂದಿನಿಂದ ಹಿಂದುಸ್ತಾನದ ಮೂಲೆ ಮೂಲೆಗಳಲ್ಲೂ ಗಾಂಧಿಗೀತವನ್ನು ಹಾಡುತ್ತಿದ್ದಾಳೆ. ನೂರು ರಾಗಗಳಲ್ಲಿ ನೂರು ಛಂದಗಳ ಆ ಹಾಡು ದನಿಗೊಂಡಿದೆ. ಸಾವಿರ ಮನಸ್ಸಿನಲ್ಲಿ ಸ್ವಾಚಾರ್ಯ ಪ್ರೇಮವನ್ನು ಆಕೆ ಹರಿಸಿದಾಳೆ. ಹಿಂದುಸ್ತಾನದ ಹೊರಗೂ ಆ ಸಂದೇಶವನ ಬೀರಿದಾಳೆ.

ಮೊನ್ನೆ ಗಾಂಧೀಜಿಯ ೭೭ನೆ ವರ್ಧಂತಿಯ ದಿನ ಆಕೆ ಆಡಿದ ಮಾತು ಸೊಬಗಿನ ತೆನೆಯಂತಿದೆ. “ ಈ ಮೂರು ಮಾವಿನಕಾಯುದ್ದದ ಮನುಷ್ಯ, ಒಂದು ಸಲ ಪ್ರೀತಿಯ ಭರದಲ್ಲಿ ಲಘುವಾಗಿ ನಾನೇ ‘ಸಿಳ್ಳಿಯ ಕೇತ’ ಎಂದು ಕರೆದಿದ್ದಾತ, ವಾಸ್ತವವಾಗಿ ಕೋಟ್ಯಂತರ ಜನರ ಪಡೆಗೆ ಒಂದು ಸಮ್ಮೋಹನಾಸ್ತ್ರನಾಗಿದ್ದಾನೆ. ಭಾರತದ ಪ್ರಜಾಕೋಟಿಗೆ ಈ ದಿನ ಆತನು ಭಾಗ್ಯವಿಧಾತನೆಂದರೆ ಅಕ್ಷರಶಃ ಸತ್ಯವಾದ ಮಾತದು. ಅಷ್ಟೇ ಅಲ್ಲ; ಭಾರತದ ಗಡಿಗಳಿಂದಾಚೆಯೂ ಕೋಟಿ ಕೋಟಿ ಮನುಷ್ಯ ಜೀವಿಗಳಿಗೆ ಜೀವನದಲ್ಲಿ ಹೊಸ ಸ್ಫೂರ್ತಿ ಕೊಡುವಾತನೀತ.

“ ಏನಿದೆ ಈತನಲ್ಲಿ ಗುಟ್ಟು? ಒಲು ಸರಳ ಆತನ ಗುಟ್ಟು. ಪ್ರೇಮವೇ ಅದು.

“ ಗಾಂಧೀಜೀ ! ಆತನೇ ಈಗ ಒಂದು ದೊಡ್ಡ ಪ್ರಶ್ನೆ. ರಾಜಕೀಯದ ಗಾಂಧಿ, ಆಡಳಿತಗಾರ ಗಾಂಧಿ, ಬೀದಿಯ ಜನರ ಗಾಂಧಿ, ವಿಶ್ವಮೂರ್ತಿ ಗಾಂಧಿ, ಪುರಾಣಪುರುಷ ಗಾಂಧಿ, ಅಚ್ಚರಿಯಮುದ್ದೆ ಗಾಂಧಿ, ಪ್ರಳಯರುದ್ರ ಗಾಂಧೀ, ಪುಣ್ಯಶೀಲ ಗಾಂಧಿ, ಪಾಪಿಷ್ಠ ಗಾಂಧಿ ಇವೆಷ್ಟು ಗಾಂಧಿಗಳು ? ಇವೆಲ್ಲ ಗಾಂಧಿಗಳಿಂದ ಜಗತ್ತು ಏನಾಗಬೇಕು ಎಂದು ಕೂಡ ಎಳ್ಳಷ್ಟು ಬಿಡದೆ ಆತನ ಕೈಲೇ ಚರ್ಚೆಮಾಡಿ ಆತನ ಹೂರಣವನ್ನೆಲ್ಲ ಹೊರಕ್ಕೆ ತೆಗೆದಿದ್ದೇನೆ.

“ ಅಷ್ಟಾಗಿ ಹೊರಬಿದ್ದುದೆಂದರೆ ಆ ಮಹಾರಾಯನ ವಿಶ್ವಪ್ರೇಮವೆಂಬ ಅಗಾಧವಾದ ಗುಟ್ಟು. ”

‘ ನಾರಿ ಮುನಿದರೆ ಮಾರಿ ’ ಎಂದು ಹಿರಿಯರು ಆಡುವದುಂಟು. ಜಲಿಯನವಾಲಾ ಪ್ರಕರಣ, ರೌಲಟ್ ಶಾಸನ ಮೊದಲಾದವು ಹಿಂದುಸ್ಥಾನದ ಹೃದಯದಿಂದ ರಕ್ತವನ್ನೇ ಹಿಂಡಿದವು. ಅಹಿಂಸೆ ಶಾಂತಿಗಳ ಪುತ್ಥಳಿಯಾದ ಗಾಂಧೀಜಿಯೇ ಬಿಸಿಯಾದರು. ಸರೋಜಿನಿಗೆ ಮುನಿಸು ಬರುವದೇನು ಆಶ್ಚರ್ಯ. ಆಗ ಹಿಂದೀ ಹೆಂಗಸರ ಪ್ರತಿನಿಧಿಯಾಗಿ ಆಕೆ ಇಂಗ್ಲೆಂಡಿಗೆ ಹೋಗಿದ್ದಳು. ಮೂಡಲ ಕೋಗಿಲೆಯೆಂದು ಹೊಗಳಿದ್ದ ಇಂಗ್ಲಿಷು ಜನ ಆಕೆಯ ಸಿಡಿಲದನಿಯನ್ನು ಕೇಳಿದರು. ಝೇಂಕಾರದ

ತುಂಬಿಯನ್ನು ಕಂಡಿದ್ದ ಜನ ಟಂಕಾರದ ನಾರಿಯನ್ನು ನೋಡಿದರು. ಹಿಂದುಸ್ತಾನದ ಹೆಂಗಸರು ಪಂಜಾಬಿನ ರಾಕ್ಷಸ ಪ್ರಕರಣದಲ್ಲಿ ಎಂಥ ಅವಮಾನಕ್ಕೆ ಗುರಿಯಾದರೆಂಬದನ್ನು, ಸರಕಾರವು ಹೇಗೆ ಆ ಅತ್ಯಾಚಾರ ಪೈಶಾಚ ಕೃತ್ಯಗಳನ್ನು ಪ್ರೋತ್ಸಾಹಿಸಿತೆಂಬದನ್ನು, ಆ ಅಸಹ್ಯ ಅವರ್ಣ ನೀಯ ಸಂಗತಿಗಳನ್ನೆಲ್ಲ ಸ್ಪಷ್ಟವಾಗಿ ನಿಸ್ಸಂಕೋಚವಾಗಿ ವಿಶದವಾಗಿ ಇಂಗ್ಲೀಷ ಜನರ ಮೋರೆಗೇ ಹೇಳಿ ಅವರ ನಾಗರಿಕತೆಯನ್ನು ಮನುಷ್ಯತ್ವ ವನ್ನು ಹಳಿದಳು. ಜನರಲ್ಲಿ ಅಲ್ಲಕಲ್ಲೋಲವಾಯಿತು. ಇಂಗ್ಲಿಷು ಜನತೆ ಈ ಭೀಭತ್ಸವನ್ನು ಸಹಿಸಲಿಲ್ಲ. ಇಂಗ್ಲೆಂಡು ಸರಕಾರಕ್ಕೆ ಕೈ ಕೈ ಹಿಸುಕಿ ಕೊಳ್ಳುವ ಹಾಗಾಯಿತು. ಭಾರತ ಸರಕಾರದ ಕಾರ್ಯದರ್ಶಿ ಮಾಂಟೆಗ್ಯೂ ಸರೋಜಿನಿಯ ಸಂಗಡ ಸೀ ಮಾತಿನ ಪತ್ರವ್ಯವಹಾರ ಮಾಡಿ ಆ ಬೆಂಕಿ ಯನ್ನು ಆರಿಸುವ ಪ್ರಯತ್ನ ಮಾಡಬೇಕಾಯಿತು. ಇದೆಲ್ಲ ಓಬೀರಾಯನ ಕಾಲದಲ್ಲಿ, ೨೦ ವರ್ಷದ ಹಿಂದೆ.

ಮಲಬಾರಿನಲ್ಲಿ ಮಾಪಿಳ್ಳೆಗಳ ವ್ಯವಹಾರದಲ್ಲೂ ಅಷ್ಟೇ. ಸರಕಾರದ ಸಿಪಾಯಿಗಳು ಬಡ ಮಾಪಿಳ್ಳೆಗಳನ್ನು ಚಿತ್ರ ಹಿಂಸೆಗೆ ಗುರಿಮಾಡಿದರು. ರೈಲು ಡಬ್ಬಿಗಳಲ್ಲಿ ದನಗಳನ್ನು ಕೂಡಿದಂತೆ ಜನರನ್ನು ತುರುಕಿದರು. ಸರೋಜಿನಿಯ ಮೇಘನಾದ ಮತ್ತೆ ಕೇಳಿಸಿತು. ಹಿಂದೀ ಸರಕಾರಕ್ಕೆ ಪೂರಾ ಸಿಟ್ಟುಬಂತು. ಆಕೆ ಸರಕಾರದ ಮೇಲೆ ಹೊರಿಸಿದ ತಪ್ಪನ್ನೆಲ್ಲ ತಿರುಗಿ ತೆಗೆದುಕೊಳ್ಳಲು ಒತ್ತಾಯಪಡಿಸಿದರು. ಆದರೆ ಸರೋಜಿನಿಯ ಕಲಿತನಕ್ಕೆ ಕೆಚ್ಚಿಗೆ ಅದು ಹೇಗೆ ಸಾಧ್ಯವಾಗಬೇಕು. ಸ್ವಲ್ಪವೂ ದಾಕ್ಷಿಣ್ಯ ವಿಲ್ಲದೆ ಆ ಸೂಚನೆಯನ್ನು ಧಿಕ್ಕರಿಸಿದಳು. ಕೆಲವು ದಿನಗಳ ಮೇಲೆ ಸತ್ಯ ಬಯಲಿಗೆ ಬಂತು. ಕಾಂಗ್ರೆಸ್ಸು ಎಲ್ಲ ಸಂಗತಿಗಳನ್ನೂ ಹೊರಗೆ ಇಟ್ಟಿತು. ಸರೋಜಿನಿಯ ಕೀರ್ತಿ ನಾಡಿನಲ್ಲಿ ಕುಣಿದಾಡಿ ಹೋಯಿತು.

ಇಂಥ ಧೀರ ಜೀವಿಗಲ್ಲದೆ ಮತ್ತಾರಿಗೆ ಮನ್ನಣೆ ಸಲ್ಲಬೇಕು? ಹಿಂದುಸ್ತಾನದ ಜನಜೀವನದಲ್ಲಿ ಇಂದು ರಾಷ್ಟ್ರಪತಿಯ ಗೌರವವೇ ಕಟ್ಟಕಡೆಯ ಮರ್ಯಾದೆ. ಜನರು ಸಲ್ಲಿಸಬಹುದಾದ ಮಾನ ಅದಕ್ಕಿಂತ ಹೆಚ್ಚಿನದು ಯಾವುದೂ ಇಲ್ಲ. ಲಕ್ನೋ ಕಾಂಗ್ರೆಸ್ಸಿಗೆ ಬಂದು ಮನಸಿ ನಿಂದ ಭಾರತವು ಸರೋಜಿನಿಯನ್ನು ಅಧ್ಯಕ್ಷಪದಕ್ಕೆ ಆರಿಸಿತು. ಅದಕ್ಕೆ

ಮೊದಲಾಗಲಿ ನಂತರವಾಗಲಿ ಆನಿಬಿಸೆಂಟ್ ವಿನಾ ಯಾವ ಹೆಂಗಸೂ ಆ ಪದವಿಯನ್ನು ಪಡೆದಿಲ್ಲ. ಇಷ್ಟರಲ್ಲೇ ಪಡೆಯುವ ಲಕ್ಷಣಗಳೂ ಇಲ್ಲ.

ಸರೋಜಿನಿಯ ರಾಜಕೀಯ ಜೀವನವೆಲ್ಲ ಬರಿ ಸಿಡಿಲುಗುಡುಗಿನ ಸವಾರಿಯಾಗಿಲ್ಲ. ಸ್ತ್ರೀ ಸಹಜವಾದ ಕವಿಗುಣವಾದ ಸಾಮೋಪಾಯವೇ ಆಕೆಯ ಮುಖ್ಯ ಸಾಧನ. ಕಾಂಗ್ರೆಸ್ಸಿನಲ್ಲಿ ಹೆಣ್ಣುಗಂಡಿನ ಸಮಾನತೆ ರೀತಿಯಲ್ಲಿ ಬಂದುದು ಆಕೆಯ ಮಧುರ ಪರಿಶ್ರಮದಿಂದ. ಹಿಂದುಸ್ಥಾನದ ಹೆಂಗಸರಿಗೆ ಇಂದು ಮತಕೊಡುವ ಹಕ್ಕು ಬಂದಿದೆ. ೧೯೧೯ರಲ್ಲಿ ಮಾಂಟ್‌ಫರ್ಡ್ ಸುಧಾರಣೆಗಳು ಬಂದಾಗ ಈ ಅಧಿಕಾರ ದೊರೆಯಿತು. ಆಗ ಸರೋಜಿನಿಯೇ ಭಾರತ ಮಹಿಳೆಯರ ಶಿಷ್ಟಮಂಡಲದ ಮುಂದಾಳಾಗಿ ಇಂಗ್ಲೆಂಡಿಗೆ ಹೋಗಿದ್ದಳು. ಆ ಮತಲಾಭದ ಕೀರ್ತಿ ಆಕೆಗೆ ಸಲ್ಲಬೇಕು. ಹಿಂದೀ ಹೆಂಗಸರಲ್ಲಿ ಇಂದು ನಾವು ನೋಡುವ ಪ್ರಗತಿಗೆ ಅಂದೇ ತಳಹದಿ ಬಿತ್ತು. ಮತ್ತೊಮ್ಮೆ ತನ್ನ ಅಕ್ಕತಂಗಿಯರ ಪ್ರತಿನಿಧಿಯಾಗಿ ಇಂಗ್ಲೆಂಡಿಗೆ ಹೋಗುವ ಪ್ರಸಂಗ ಬಂದಿತ್ತು. ಹಿಂದುಸ್ಥಾನದ ಜಾತಕವನ್ನು ಚರ್ಚಿಸಲೋಸುಗ ರೌಂಡ್‌ಟೇಬಲ್ ಕಾನ್‌ಫರೆನ್ಸ್ ನಡೆದಾಗ ಸರೋಜಿನಿಯೂ ಅದರಲ್ಲಿ ಪಾಲ್ಗೊಂಡಳು. ಆನಿಬಿಸೆಂಟರ ಹೋಂರೂಲು ಲೀಗಿನ ಶಿಷ್ಟ ಮಂಡಳದಲ್ಲೂ ಆಕೆ ಇಂಗ್ಲೆಂಡು ಕಂಡಳು. ಹಿಂದುಸ್ಥಾನದ ರಾಜಕೀಯ ರೂಪಕದ ಎಲ್ಲ ಅಂಕಗಳಲ್ಲೂ ಆಕೆ ಪ್ರೇಕ್ಷಕ ಮನೋಜ್ಞಳಾಗಿ ಇದ್ದೇ ಇದ್ದಾಳೆ; ಆಕೆಯ ಸ್ಥಾನ ಆಕೆಯದೇ ಆಗಿ ಸದಾ ಕಾಯಲ್ಪಟ್ಟಿದೆ.

ಸರೋಜಿನಿಯ ಹುಟ್ಟೇ ವಿಲಕ್ಷಣವಾದುದು. ಆಕೆಯ ತಮ್ಮಂದಿರು ತಂಗಿಯರು ಎಲ್ಲಾ ಒಂದೊಂದು ಹಾದಿಯಲ್ಲಿ ವಿಲಕ್ಷಣ ಪ್ರತಿಭೆಯಿಂದ ಸಾಗಿದಾರೆ. ಹಿರಿಯವ ವೀರೇಂದ್ರನಾಥ ಹಿಂದುಸ್ಥಾನದಿಂದ ಗಡಿಪಾರಾಗಿ ಜರ್ಮನಿ ರಸಿಯಾಗಳಲ್ಲಿ ಸಾಮ್ಯವಾದದ ಕ್ರಾಂತಿಯ ಬೆಳಕನ್ನು ಬೆಳಗುತಿದ್ದರೆ ಕಿರಿಯವ ಹರೀಂದ್ರನಾಥ ಅರವಿಂದ ಯೋಗಿಗಳ ಪಾದ ಹಿಡಿದು ಕಲಾಪ್ರಪಂಚದ ಚಕ್ರವರ್ತಿಯಾಗಿ ವಿಹರಿಸುತ್ತಿದಾನೆ. ತಂಗಿಯರಲ್ಲಿ ಒಬ್ಬಾಕೆ ಸಾಹಿತಿ; ಇನ್ನೊಬ್ಬಾಕೆ ಕಮ್ಯೂನಿಸ್ಟ್. ಸರೋಜಿನಿಯ ತಂದೆ ಅಘೋರನಾಥ ಚಟ್ಟೋಪಾಧ್ಯಾಯ ಮೈಸೂರಲ್ಲಿ ಕೆಲ

ಕಾಲ ಪ್ರೊಫೆಸರರಾಗಿದ್ದು ನಂತರ ಹೈದರಾಬಾದು ಸೇರಿ ಅಲ್ಲೇ ನೆಲೆಸಿದರು. ಕರ್ನಾಟಕಕ್ಕೆ ಆ ಪುಣ್ಯವಿರಲಿಲ್ಲ. ಆತನ ಯೋಗಜೀವನದ ಹಣ್ಣು ಸರೋಜಿನಿ.

ಸರೋಜಿನಿಯ ಕವಿ ಹೃದಯಕ್ಕೆ ಎರಡರಲ್ಲಿ ಅಚಲಶ್ರದ್ಧೆ. ಒಂದು ಗಾಂಧೀಜಿಯ ಜೀವನ, ಇನ್ನೊಂದು ಮಾನವಕೋಟಿಯ ಏಕತಾನ. ಭೇದಭಾವವು ವಿರಸ, ಅಪಶ್ರುತಿ. ಸಮರಸ ಜೀವನದ ಏಕತಾನವೇ ಮಾನವ ಜೀವನದ ಪೂರ್ಣ ಸೌಂದರ್ಯ. ಆಕೆಗೆ ಈ ನಂಬಿಗೆ ಬರಿ ಆಚಾರವಲ್ಲ; ವೀಣೆಗೆ ತಂತಿಯಿದ್ದಂತೆ ಜೀವಾಳ. ಗಾಂಧೀಜಿಯ ಬಾಳಿನಲ್ಲಿ ಆಕೆ ಈ ಸಮರಸಜೀವನದ ಶ್ರುತಿಯನ್ನು ಕೇಳುತ್ತಿದಾಳೆ. ಅದೇ ಆಕೆಯ ಶ್ರದ್ಧೆಗೆ ಕಾರಣ.

ಮೂರು ವರ್ಷದ ಹಿಂದೆ ಕಲಕತ್ತೆಯಲ್ಲಿ ಸರ್ವಧರ್ಮ ಸಮ್ಮೇಳನ ನಡೆಯಿತು. ಭಗವಾನ ರಾಮಕೃಷ್ಣ ಪರಮಹಂಸರ ಶತಮಾನೋತ್ಸವದ ಸಂದರ್ಭದಲ್ಲಿ. ಆಗ ಸರ್ವಧರ್ಮ ಸಮ್ಮತವಾದ ಪ್ರಾರ್ಥನೆಯೊಂದನ್ನು ಇಂಪಾಗಿ ಸವಿಯಾಗಿ ಸರೋಜಿನಿ ಹಾಡಿದಳು. ಆ ಸುಂದರ ಪ್ರಾರ್ಥನೆ ಎಲ್ಲ ಕಾಲ ಬಾಳುವಂಥದು; ಜಗತ್ತಿನ ಕಿವಿಯಲ್ಲಿ ಸದಾ ದನಿಸುತಿರಬೇಕಾದುದು.



# ಠಕ್ಕರ್ ಬಾಪಾ

ಠಕ್ಕರ್‌ಬಾಪಾಗೆ ೭೦ ವರ್ಷವೆಂದು ಹೇಳಿದರೆ ಎಷ್ಟೋ ಜನ ನಂಬಲಿಕ್ಕಿಲ್ಲ; ಅವರನ್ನು ನೋಡಿದವರು ಯಾರೂ ಈ ಮಾತು ನಂಬುವದೇ ಇಲ್ಲ. ಅವರೊಡನೆ ಹಗಲಿರುಳು ಕೆಲಸಮಾಡುವ ಜನರಿಗೂ ಕೂಡ ಅವರ ವಯಸ್ಸು ಇಷ್ಟಿರಬಹುದೆಂಬ ಅನುಮಾನವೇ ಬಂದಿರಲಿಲ್ಲ. ಬಾಪಾಗೆ ಅಂಥ ಮೈಕಟ್ಟಿದೆ; ಅಂಥ ಮುಖಮುದ್ರೆಯಿದೆ. ತಮ್ಮ ವಯಸ್ಸನ್ನು ಮರೆತು ಮರೆಯಿಸಲು ಎಲ್ಲರಿಗೂ ಸಾಧ್ಯವಿಲ್ಲ. ಕೆಲವರು ತಮ್ಮ ಮನಸ್ಸನ್ನು ಪಳಗಿಸಿಕೊಳ್ಳಬಲ್ಲರು; ಆದರೆ ಮೈಯನ್ನೂ ಹಾಗೇ ಕಾಪಾಡಿಕೊಳ್ಳಲು ಕೊಂಚಮಟ್ಟಿಗೆ ಪ್ರಕೃತಿಯ ಸಹಾಯವೂ ಬೇಕು. ಮೈಯಿಂದ ಅಜರರಾದ ಭಾಗ್ಯಶಾಲಿಗಳೂ ಉಂಟು, ಮನಸಿನಿಂದ ನಿರ್ಜರರಾದ ಪುಣ್ಯಜೀವಿಗಳೂ ಉಂಟು. ಇವೆರಡನ್ನೂ ಪಡೆದ ಜೀವಿಗಳು ಬಹಳ ಕಡಮೆ. ಠಕ್ಕರ್ ಬಾಪಾ ಅಂಥವರಲ್ಲಿ ಒಬ್ಬರು. ಅವರ ತಿಳಿಗೊಳದಂಥ ಮುಖ, ಅದರಲ್ಲಿ ಆತ್ಮಸೂರ್ಯನ ಪ್ರತಿಬಿಂಬದಂತೆ ಹೊಳೆವ ಕಣ್ಣು, ಅಲೆಗಳ ಹೊಯ್ದಾಟವಿಲ್ಲದೆ ಶಾಂತವಾದ ಕಡಲಿನ ಉಸಿರಿನಂಥ ಅವರ ಮಾತು ಎಂದಿಗೂ ಮರೆಯುವಂತಿಲ್ಲ.

ಬಾಪಾರ ಈ ನಿರ್ಜರತೆಯ ಗುಟ್ಟು ಅವರ ಕರ್ಮಜೀವನದಲ್ಲಿದೆ. ಅವರಿಗೆ ಕೆಲಸಮಾಡುವುದೆಂದರೆ ಅದೊಂದು ಬಗೆಯ ಹುಚ್ಚು. ಹುಮ್ಮಸ್ಸು ಈ ವಯಸ್ಸಿನಲ್ಲೂ ತಮ್ಮ ಬಟ್ಟೆಬರೆಗಳನ್ನು ತಾವೇ ಮಡಿಮಾಡಿಕೊಳ್ಳುವದರಲ್ಲಿ ಬೇಸರವಿಲ್ಲ. ಸಂಬಳಕ್ಕಾಗಿ ದುಡಿಯುವವರಿಗೂ ಒಂದು ಬಿಡುವಿನ ದಿನವುಂಟು. ಗಿರಣಿಯ ಕೂಲಿಕಾರರಿಗೂ ದಿನಕ್ಕೆ ಇಷ್ಟೇ ಗಂಟೆ ದುಡಿತವೆಂಬ ನಿಯಮವಿದೆ. ಸೇವೆಯೇ ಜೀವನವೆಂದು

ತಿಳಿದಿರುವ ಬಾಪಾರಂಥ ಜನರಿಗೆ ಎರಡೂ ಇಲ್ಲ. ವರ್ಧಾದಿಂದ ಸೇಗಾಂವಿಗೆ ಗಾಂಧೀಜಿಯನ್ನು ನೋಡಲಿಕ್ಕೆ ಹೋಗಬೇಕಾದಾಗ ಟಾಂಗಾ ಸಿಕ್ಕರೆ ಸರಿ; ಇಲ್ಲದಿದ್ದರೆ ಕಾಲುಗಾಡಿ ಇದ್ದೇ ಇದೆಯಲ್ಲ. ಗಾಂಧೀಜೀ ಒಮ್ಮೆ ಹೇಳಿದರಂತೆ 'ಬಾಪಾ, ಕೆಲವು ದಿನದತನಕ ನೀವು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಬಾರದೆ?' ಒಡನೆಯೆ ಬಾಪಾ ಕೇಳಿದರು: 'ಬಾಪು ಇನ್ನೂ ಎಷ್ಟು ಕೆಲಸ ಹಾಗೇ ಬಿದ್ದಿದೆ, ನಾನು ಹೇಗೆ ವಿಶ್ರಾಂತಿ ತೆಗೆದುಕೊಳ್ಳಲಿ? ಆ ಕೆಲಸ ಮಾಡುತ್ತ ಹೋಗುವುದರಲ್ಲೇ ನನಗೆ ವಿಶ್ರಾಂತಿಯ ಸುಖ ಸಿಗುತ್ತದೆ.' ತಮ್ಮ ಕೆಲಸದಲ್ಲಿ ಅಷ್ಟು ಆನಂದ, ಉತ್ಸಾಹ, ಅವರಿಗೆ! ದುಡಿತವನ್ನು ಈ ಬೆಳಕಿನಲ್ಲಿ ಕಂಡವರು ಕೋಟಿಗೊಬ್ಬರಾದರೂ ಇದಾರೆಯೋ ಇಲ್ಲವೋ?

ಬರೀ ಹುಚ್ಚು ಹುಚ್ಚು ದುಡಿತವಲ್ಲ ಬಾಪಾರದು. ಅದರಲ್ಲೂ ಒಂದು ಅರ್ಥವಿದೆ; ರೀತಿಯಿದೆ. ಯಾವ ಯಾವ ಕೆಲಸವನ್ನು ಯಾವಾಗ ಮಾಡಬೇಕೆಂಬುದರ ಕ್ರಮವಿದೆ. ಇಂದಿನ ಕೆಲಸ ಇಂದೇ ಮುಗಿಸಿಬಿಡುವ ಸಂಕಲ್ಪವಿದೆ. ಯಾವುದನ್ನೂ ನಾಳೆಗೆ ತಳ್ಳುವಹಾಗಿಲ್ಲ. ಲೆಕ್ಕದಲ್ಲಿ ಬಾಪಾ ಬಹಳ ಜಾಗರೂಕರು. ಸಂಸ್ಥೆಗಳ ಹಣದ ವಿಷಯದಲ್ಲಿ ಅವರ ಕಣ್ಣು ಬಹಳ ಮೊನೆಯಾದುದು. ತಮ್ಮ ದಿನಚರಿಯನ್ನು ಬರೆಯುವದಂತೂ ಅವರಿಗೊಂದು ಹಟವೇ ಆಗಿ ಹೋಗಿದೆ. ಕೋಮಟಿ ದಿನವೂ ತನ್ನ ಲೆಕ್ಕಗಳನ್ನು ಮುಗಿಸುವಂತೆ ಇವರು ತಮ್ಮ ದಿನದ ಕಿರ್ದಿ ಬರೆಯದೇ ಆ ದಿನವನ್ನು ಮುಗಿಸುವ ಹಾಗಿಲ್ಲ. ತಮ್ಮ ಕಾಲವನ್ನು ಸ್ವಲ್ಪವೂ ಪೋಲು ಮಾಡದೆ ಕರ್ಮನಿರತರಾಗಲು ತಾವು ಮಾಡಿದ ಪ್ರಯತ್ನಗಳು, ಜನರ ಸೇವೆಯಲ್ಲಿ ತಮಗೊದಗಿದ ಸುಖದುಃಖ, ತಮ್ಮ ಮನಸ್ಸನ್ನು ಕಾಡಿದ ಆಂದೋಳನ, ಹಿಗ್ಗಿಸಿದ ಸಮಾಧಾನ ಎಲ್ಲವನ್ನೂ ಅದರಲ್ಲಿ ಇದ್ದುದನ್ನು ಇದ್ದಂತೆ ರಮ್ಯವಾಗಿ ವರ್ಣಿಸಿಕೊಂಡಿದಾರೆ. ಮುಂದೆ ಬರಲಿರುವ ಕಾರ್ಯಕರ್ತರಿಗೆ ಉಪಯೋಗವಾಗುವ ಅನೇಕ ವಿಷಯಗಳ ಸಂಗ್ರಹವಿದೆ ಅದರಲ್ಲಿ. ಬಾಪಾರ ಜೀವನ ಉತ್ತಮ ತರದ ಗಡಿಯಾರದಂತೆ; ಹೊತ್ತಿಗೆ ಸರಿಯಾಗಿ ಗಂಟೆ ಹೊಡೆಯಲೇಬೇಕು.

ಬಾರಿಸಿದ ಗಂಟೆಗಳ ಲೆಕ್ಕವೂ ಸರಿಯಾಗಿರಬೇಕು. ಅವರ ನಿತ್ಯಜೀವನ ದಲ್ಲಿ ಈ ರೀತಿ, ಈ ಕ್ರಮ ಗಳಿಗೆಗಳಿಗೆಗೆ ಕಾಣುತ್ತದೆ.

ಈ ನಿಯಮಬದ್ಧಜೀವನ, ಕೆಲಸದಲ್ಲಿ ಇವರಿಗಿರುವ ಆನಂದಗಳೇ ಅವರ ಎಪ್ಪತ್ತು ವರ್ಷಗಳ ಹರೆಯದ ಗುಟ್ಟು; ಅವರ ಆದರ್ಶಜೀವನದ ಅಡಿಗಲ್ಲು.

ಬಾಪಾರ ಜೀವನವು ಮೊದಲಿಂದಲೂ ರಚನಾತ್ಮಕವಾದ ಹಾದಿ ಯಲ್ಲೇ ನಡೆದಿದೆ. ಹರಿಜನರಿಗಾಗಿ ಶಾಲೆಗಳು, ಭಂಗಿಗಳಿಗಾಗಿ ಸಹಕಾರ ಸಂಘಗಳು-ಮೇಳಾಗಳು ಅವರ ಮೊದಮೊದಲಿನ ಕಾರ್ಯಕ್ರಮ. ಗುಜ ರಾತಿನ ತಾಲೂಕು ತಾಲೂಕಿಗೂ ಈ ಸಂಸ್ಥೆಗಳನ್ನು ಹರಡಿದರು. ನೆರೆಯ ಹಾವಳಿ, ಬರಗಾಲಗಳ ಪಿಡುಗು ಬಂದಾಗ–ಹಿಂದುಸ್ತಾನದ ಯಾವ ಮೂಲೆಯಲ್ಲೇ ಆಗಲಿ—ಬಾಪಾ ಪ್ರಥಮಸೇವಕರು. ಉರಿಯಾ, ಸಿಂಧ ಪ್ರಾಂತಗಳಲ್ಲಿ ಅವರು ಇಂಥ ಪ್ರಸಂಗಗಳಲ್ಲಿ ಮಾಡಿದ ಸೇವೆ ಆ ಪ್ರಾಂತ ಗಳವರು ಮರೆಯುವಂತೆಯೇ ಇಲ್ಲ.

ಬಾಪಾರ ಕರ್ಮನಿರತತೆಯ ಬಗ್ಗೆ ಅನೇಕ ಕತೆಗಳಿವೆ. ಅವರಿಗೆ ಕೆಲಸವೇ ದೇವರು. ವಿಠ್ಠಲಭಾಯಿ ಪಟೇಲರು ಮುಂಬಯಿ ಶಾಸನ ಸಭೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಒತ್ತಾಯ ಮಾಡುವ ಶಾಸನವನ್ನು ತಂದಾಗ ಅದಕ್ಕೆ ಬೇಕಾದ ವಿಷಯ ಸಂಗ್ರಹಮಾಡುವದು ಬಾಪಾರ ಪಾಲಿಗೆ ಬಂತು. ಹಳ್ಳಿಹಳ್ಳಿ ತಿರುಗಿ ಅದನ್ನೆಲ್ಲ ಅಣಿಮಾಡಿ ದರು. ಒಂದು ರಾತ್ರಿ ಯಾವುದೋ ಒಂದು ಹಳ್ಳಿಗೆ ಹೋದರಂತೆ. ಅಲ್ಲಿನ ಸಾಲೆಯ ಮಾಸ್ತರರನ್ನು ಆ ನಡುರಾತ್ರಿಯಲ್ಲಿ ಎಬ್ಬಿಸಿ ಸಾಲೆಯ ಬಾಗಿಲು ತೆಗಿಸಿ ತಮಗೆ ಬೇಕಾದ ಲೆಕ್ಕ ಅಂಕೆಗಳನ್ನೆಲ್ಲ ಬರೆದುಕೊಂಡರು. ಆ ಕೆಲಸವಾದ ಮೇಲೆ ಅಲ್ಲೇ ಚೂರು ರೊಟ್ಟಿತಿಂದು ಮತ್ತೆ ಆ ರಾತ್ರಿ ಯಲ್ಲೇ ಮುಂದಿನ ಊರಿಗೆ ಗಾಡಿ ಕಟ್ಟಿಸಿದರು. ಆ ಮಾಸ್ತರನಿಗೆ ಈ ನಟ್ಟಿರುಳಿನ ವ್ಯವಹಾರ, ಈ ಗಡಿಬಿಡಿ, ಊಟ ನಿದ್ದೆ ಕೂಡಾ ಬೇಡದ ಈ ಉತ್ಸಾಹ ಎಲ್ಲವೂ ತುಂಬಾ ಹೊಸದು. ಕನಸಿನಂತೆ ಎಲ್ಲಾ ಆಗಿ ಹೋಯಿತು.

ಸಂಸ್ಥಾನಗಳ ಚಳುವಳಿಗೂ ಬಾಪಾರ ಸಂಬಂಧ ಬಂತು. ಬಾಪಾ ಸ್ವತಃ ಸಂಸ್ಥಾನೀ ಪ್ರಜೆ; ಭಾವನಗರದವರು. ಅಖಿಲ ಭಾರತ ಸಂಸ್ಥಾನ ಪ್ರಜಾ ಪರಿಷತ್ತು ಮೊದಲಾದಾಗ ಬಾಪಾರ ಕೈವಾಡ ಅದರಲ್ಲಿ ತುಂಬಾ ಇತ್ತು. ಅದಕ್ಕೆ ಕೆಲವು ದಿನ ಕಾರ್ಯದರ್ಶಿಯಾಗಿದ್ದರು. ಅನೇಕ ಸಂಸ್ಥಾನಗಳ ಪರಿಷತ್ತುಗಳಿಗೆ ಮೇಲಿಂದ ಮೇಲೆ ಅಧ್ಯಕ್ಷರಾಗಿ ಸಂಸ್ಥಾನದ ಜನರಿಗೆ ಹಾದಿ ತೋರಿದರು. ಪಾಟಿಯಾಲಾ ದೊರೆಯ ದುರ್ವರ್ತನೆಗಳ ಬಗ್ಗೆ ಅ. ಭಾ. ಸಂ. ಪರಿಷತ್ತು ವಿಚಾರಣಾ ಸಮಿತಿಯನ್ನು ನೇಮಿಸಿದಾಗ ಅದರಲ್ಲಿ ಅವರೂ ಒಬ್ಬ ಸದಸ್ಯರು.

೧೯೩೦ರಲ್ಲಿ ಬಾಪಾರಂಥ ಅಜಾತಶತ್ರುವಿಗೂ ಸೆರೆ ತಪ್ಪಲಿಲ್ಲ. ದೇಶಸೇವಕರನ್ನು ನೆಮ್ಮದಿಯಾಗಿ ಇರಗೊಟ್ಟರೆ ವಿಲಿಂಗಡನ್ ರಾಜ್ಯ ನೀತಿಗೆ ಕಲಂಕವಲ್ಲವೆ! ಸೆರೆ ಅಂಗಡಿ ಪಿಕೆಟಿಂಗ್ ಮಾಡಿದರೆಂದು ಬಾಪಾರಿಗೆ ಆರು ತಿಂಗಳ ಆತಿಥ್ಯ ನೀಡಿದರು ಸರಕಾರದವರು.

ಬಾಪಾ ತಮ್ಮ ಸಂಗಡಿಗರೊಡನೆ ಮಾತಾಡಿದಾಗ ಅವರ ಯೋಗಕ್ಷೇಮ ವಿಚಾರಿಸಿದಾಗ, ದುಃಖ ದುಗುಡಗಳನ್ನು ಕೇಳಿ ತಿಳಿದುಕೊಳ್ಳುವಾಗ ತೀರ ಸಮೀಪದ ಆಪ್ತರಂತೆ, ಹಿರಿಯಣ್ಣನಂತೆ ಆಗಿಬಿಡುತ್ತಾರೆ. ಹಿತವಚನವನ್ನು ಹೇಳುವುದರಲ್ಲಿ, ನಮ್ಮ ತಪ್ಪು ತಡೆಗಳನ್ನು ತೋರಿಸುವುದರಲ್ಲಿ ಹುರುಪು, ಹುಮ್ಮಸ್ಸು ಕೊಡುವುದರಲ್ಲಿ ಅವರ ಪದ್ಧತಿ ತಂದೆಯ ವಾತ್ಸಲ್ಯವಲ್ಲ; ಅಣ್ಣನ ಪ್ರೀತಿ. ಆ ಪ್ರೀತಿ ಎಂಥ ತುಂಬುಹೃದಯದ್ದು ಎಂಬುದು ಅನುಭವಿಸಿ ತಿಳಿಯಬೇಕಾದ ಮಾತು. ಹರಿಜನ ಸೇವಕ ಸಂಘದಲ್ಲಿ ಕೆಲಸಗಾರನಾಗಿ ಸೇರಿದರಾಯಿತು, ಬಾಪಾ ಕುಟುಂಬಕ್ಕೆ ದತ್ತಕ ಹೋದಂತೆ. ಅವನ ಇಡೀ ಯೋಗಕ್ಷೇಮವನ್ನೇ ಬಾಪಾ ಹೊತ್ತುಕೊಳ್ಳುತ್ತಾರೆ. ಇಂದು ಹಿಂದುಸ್ತಾನದ ಹರಿಜನಸೇವಕ ಸಂಘದ ಕೆಲಸಗಾರರಲ್ಲಿ ಕಂಡುಬರುವ ಸೌಹಾರ್ದಭಾವಕ್ಕೆ ಬಾಪಾ ಅಡಿಗಲ್ಲು.

ಶ್ರೀ. ವೈದ್ಯನಾಥ ಅಯ್ಯರ್ ಮಧುರೆಯ ಮಹಾಜೀವ. ತಮಿಳುನಾಡಿನಲ್ಲಿ ಈ ವರ್ಷ ದಳ್ಳುರಿಯಂತೆ ಎಲ್ಲೆಡೆಯಲ್ಲೂ ಹರಡಿದ ದೇವಾಲಯ ಪ್ರವೇಶದ ಚಳುವಳಿಯ ಕೀರ್ತಿ ಅವರದು. ಅವರು ತಮಿಳುನಾಡಿನ ಹರಿಜನ ಸೇವಕ ಸಂಘದ ಅಧ್ಯಕ್ಷರಾಗಿರದಿದ್ದರೆ ಈ ಪವಾಡವು ಸಾಧ್ಯ

ವಾಗುತ್ತಿರಲಿಲ್ಲ. ತಮ್ಮ ಅಧ್ಯಕ್ಷಪದವಿಯನ್ನು ಬಿಡಬೇಕೆಂದು ಅವರು ಬಹಳ ಪ್ರಯತ್ನಮಾಡಿದರು. ಮೂರು ಸಲ ರಾಜೀನಾಮೆ ಕೊಟ್ಟರು. ಅವರ ಹಟ ಬಾಪಾರ ಅಭಿಮಾನದ ಮುಂದೆ ಸಾಗಲಿಲ್ಲ. ಪ್ರತಿಸಲವೂ ಹನಿಗಣ್ಣಿನಿಂದ ಅಯ್ಯರ್ ತಮ್ಮ ಕಾಗದ ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದರು.

ಇನ್ನೊಂದು ಪ್ರಾಂತದಲ್ಲಿ ಅಧ್ಯಕ್ಷರಾಗಿದ್ದವರು ತಮಗೆ ಬಿಡುವಿಲ್ಲವೆಂದು ಆ ಪದವಿಗೆ ರಾಜೀನಾಮೆ ಕೊಟ್ಟರು. ಬಾಪಾ ಒಪ್ಪಲಿಲ್ಲ. 'ಇದ್ದಷ್ಟು ಬಿಡುವೇ ಸಾಕು, ಬಿಡುವು ಅಲ್ಲ ಮುಖ್ಯ, ಕೆಲಸಕ್ಕೆ, ಅಭಿಮಾನವಿದ್ದವರೇ ಬೇಕು.'

ಠಕ್ಕರ್ ಬಾಪಾರ ಹರಿಜನ ಸೇವೆ ಈಗಂತೂ ಹಿಂದುಸ್ತಾನದ ಮೂಲೆ ಮೂಲೆಗೂ ವ್ಯಾಪಿಸಿದೆ. ಅವರ ಮೂಕ ಸೇವೆಯ ಪರಿಚಯ ಎಲ್ಲರಿಗೂ ಆಗಿದೆ. ಅವರ ನಿಷ್ಕಾಮ ಸೇವೆಯ ತಪಸ್ಸಿನ ಪುಣ್ಯ ಇಡೀ ಹಿಂದುಸ್ತಾನಕ್ಕೇ ಹಂಚಲ್ಪಡುತ್ತಿದೆ. ಗಾಂಧೀಜಿಯ ಸೂತ್ರಧಾರಿತ್ವದ ಫಲ ಅದು. ಇಲ್ಲದಿದ್ದರೆ ಬಾಪಾ ತಮ್ಮ ಪಾಡಿಗೆ ತಾವು ಗುಜರಾತಿನ ಹರಿಜನರ-ಆದಿಜನರ ಸೇವೆಯಲ್ಲಿ ಮಗ್ನರಾಗಿರುತ್ತಿದ್ದರು. ಗುಜರಾತಿನ ಹರಿಜನರಿಗೆ ಅವರು ಒಂದು ಬಗೆಯ ಗುರುಗಳೇ ಆಗಿಬಿಟ್ಟಿದ್ದರು. ಗಾಂಧೀಜಿಯ ಮಹೋಪವಾಸದ ಫಲವಾಗಿ ಹರಿಜನ ಸೇವಕಸಂಘವು ಮೊದಲಾದಾಗ ಅದರ ಎಲ್ಲ ಹೊಣೆಯನ್ನೂ ಹೊರಲು, ಗಾಂಧೀಜೀ ಠಕ್ಕರ್ ಬಾಪಾರನ್ನು ಅವರ ಸಣ್ಣಲೋಕದಿಂದ ಒಯಲಿಗೆಳೆದರು. ಈಗ ಅದರ ವಿಷಯದಲ್ಲಿ ಅವರು ನಿಶ್ಚಿಂತರಾಗಿದಾರೆ.

ಹಿಂದುಸ್ತಾನಕ್ಕೆ ಬಾಪಾರ ಪರಿಚಯ ಅವರ ಹರಿಜನ ಕಾರ್ಯದಲ್ಲಿ ಆಗಿದ್ದರೂ ಅವರ ಆದಿಜನರ ಸೇವೆಯ ಗುರುತಾಗಿಲ್ಲ. ಹರಿಜನರ ನಡುವೆ ಬಿದ್ದ ಅವರ ದೃಷ್ಟಿ ಕಾಡುನಿವಾಸಿಗಳ ಕಡೆ ಹರಿದುದು ಸಹಜವಾಗಿದೆ. ನಮ್ಮ ದೇಶದ ಕಾಡುಜನರೆಂದರೆ ದೇವರಿಗೂ ಬೇಡಾದ ಮೂಕ ಜೀವಿಗಳು. ಹರಿಜನರಂತೆ ಊರು ವಸತಿಗಳಲ್ಲಿರುವ ಭಾಗ್ಯವೂ ಅವರಿಗಿಲ್ಲ. ಬೆಟ್ಟಗುಡ್ಡಗಳಲ್ಲಿ ಹಿಂಡುಹಿಂಡಾಗಿ ಬದುಕಿಕೊಂಡು ಉದುರಿಹೋಗುತ್ತಾರೆ ಕಾಡುಹೂಗಳಂತೆ. ಮಧ್ಯಹಿಂದುಸ್ತಾನದ ಭಿಲ್ಲರು ಈ ಪಂಗ

ಡಕ್ಕೆ ಸೇರಿದ ಜನ. ಇತಿಹಾಸದಲ್ಲಿ ಅವರ ರಾಜರಾಣಿಯರ ಮಾತು ಬಂದಿದೆಯಾದರೂ ಈಗ ಅವರ ರಾಜ್ಯ ಅಡವಿಮಿಂಕಗಳ ಮೇಲೆಯೇ. ಇಂಥ ಜನರಲ್ಲಿ ಹೋಗಿ ತಮ್ಮ ಜೀವನ ಸೌರಭವನ್ನು ಅವರಿಗೆ ನೀಡಿ ಅವರನ್ನು ಮನುಷ್ಯರನ್ನಾಗಿ ಮಾಡುವ ದೀಕ್ಷೆ ಹೊತ್ತಿದ್ದಾರೆ ಬಾಪಾ. ಅವರ ಭಿಲ್ಲ ಸೇವಾಮಂಡಲವು ಈಗ ಚೆನ್ನಾಗಿ ಕೆಲಸ ಮಾಡತೊಡಗಿದೆ. ಈಗ ಬಾಪಾ ಆಸಾಮುದಲ್ಲಿನ ಕಾಡುಜನರ ಯೋಗಕ್ಷೇಮ ವಹಿಸಿ ಕೊಳ್ಳಲು ದುಡಿಯುತ್ತಿದ್ದಾರೆ.

'ಮಾಡುವದೇನು ಗುಡಿಸಲಿನ ಗೋಡೆಗಳ ನಡುವೆ ಮರ್ಯಾದೆ ಮುಚ್ಚಿಕೊ' ಎಂಬ ಅರ್ಥದ ಗಾದೆಯೊಂದು ಕಾಠೆಯುವಾಡದ ಜನರಲ್ಲಿ ರೂಢಿಯಿದೆ. ಆ ಗಾದೆ ದಿಕ್ಕಿಲ್ಲದ ಭಿಲ್ಲ ಜನರಿಗಾಗಿಯೇ ಹುಟ್ಟಿದುದು. ಮೊದಲೇ ಹೊಟ್ಟೆಗಿಲ್ಲದೆ ಹೇಗೋ ಕಾಲಸೂಕುವ ಜನ. ಬರಗಾಲ ಬಂದ ರಂತೂ ಭಿಲ್ಲರ ಪಾಡು ಹೇಳತೀರದು. ನಾಲ್ಕು ಕಾಸು ಕಡ ಹುಟ್ಟು ವದೂ ನಿಂತು ಹೋಗುತ್ತದೆ. ಹಿಟ್ಟೇ ಕಾಣದವನು ಬಟ್ಟೆ ಎಲ್ಲಿಂದ ತಂದಾನು? ಚಿಕ್ಕ ಚಿಂದಿಗಳಿಂದ ಮೈಯನ್ನೂ ಪೂರಾ ಮುಚ್ಚಿಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ ಭಿಲ್ಲರ ಹೆಣ್ಣುಮಕ್ಕಳು ಹೊರಗೆ ಬಾರದೆ ಒಳಗೇ ಅವಿತುಕೊಂಡುಬಿಡುತ್ತಾರೆ. ತಮ್ಮ ಮಾನ ಕಾಯ್ದುಕೊಳ್ಳಲು ಬೇರೇನೂ ಉಪಾಯವಿಲ್ಲ ಅವರಿಗೆ.

೧೯೨೧ ರಲ್ಲಿ ಭಿಲ್ಲರ ನಾಡಾದ ಪಂಚಮಹಾಲ ಪ್ರಾಂತದಲ್ಲಿ ಸಿಡಿಲು ಬರ ಬಂತು. ಜನ ನೊಣಗಳಂತೆ ಸಾಯಹತ್ತಿದರು. ಭಿಲ್ಲರ ಗೋಳು ಬೊಂಬಾಯಿಗೆ ಮುಟ್ಟಿತು. ಅಮೃತಲಾಲ ಠಕ್ಕರರಿಗೆ ಆ ಕರೆ ತಡೆಯ ಲಾಗಲಿಲ್ಲ. ಪಂಚಮಹಲಿಗೆ ಹರಿದೋಡಿದರು. ಅಲ್ಲಿ ಭಿಲ್ಲ ಜನರ ನಡುವೆ ಸುತ್ತಾಡಿ ಅವರ ಸಂಕಟವನ್ನು ಕಣ್ಣಾರೆ ನೋಡಿದರು. ಒಂದು ಕಡೆ ಒಂದು ಭಿಲ್ಲರ ಗುಡಿಸಲಿಗೆ ಹೋದರು. ಆ ಗುಡಿಸಲಿನ ಯಜಮಾನಿ ಯನ್ನು ಕರೆದರು. ಅವರ ಕಷ್ಟ ಸುಖವನ್ನು ತಿಳಿದುಕೊಳ್ಳುವ ಹಂಬಲ ಇವರಿಗೆ. ಆದರೆ ಆ ಹೆಣ್ಣುಮಗಳು ಹೊರಗೇ ಬರಲಿಲ್ಲ. ಆಕೆಗೆ ಹೊರಗೆ ನಿಂತವರು ತಮ್ಮ ಪಾಲಿನ ಆಪದ್ಬಂಧುವೆಂಬದು ಗೊತ್ತಿಲ್ಲವೆಂದಲ್ಲ. ಠಕ್ಕ ರರಿಗೆ ಈ ವಿಚಿತ್ರ ವರ್ತನೆ ಅರ್ಥವಾಗಲಿಲ್ಲ. ಹತ್ತಿರ ಇದ್ದವರು ಯಾರೋ

ಹೇಳಿದರು. ' ಆ ಹೆಣ್ಣು ಮಗಳಿಗೆ ಉಡಲು ಒಂದು ಚಿಂದಿಯೂ ಇರಲಿಕ್ಕಿಲ್ಲ. ಹೊರಗೆ ಬಂದಾಳು ಹೇಗೆ? ' ಅಮೃತಲಾಲರಿಗೆ ತಾವಿದ್ದುದು ಭೂಮಿಯೋ ಪಾತಾಳವೋ ತಿಳಿಯದಂತಾಯಿತು. ತಮ್ಮ ಕೈ ಚೀಲದೊಳಗಿನ ಪಂಜೆಗಳೆರಡನ್ನು ಗುಡಿಸಲೊಳಕ್ಕೆ ಒಗೆದರು.

ಆ ಗಳಿಗೆಯಲ್ಲೇ ಅವರ ಪವಿತ್ರ ಜೀವನದ ಮಹಾಸಂಕಲ್ಪ ರೂಪುಗೊಂಡಿತು. ಭಿಲ್ಲ ಸೇವಾ ಮಂಡಲದ ಕೆಲಸದಲ್ಲಿ ಕೈಹಾಕಿದರು.

ನಾಲ್ಕಾರು ವರ್ಷಗಳಲ್ಲೇ ಭಿಲ್ಲರಲ್ಲಿ ಜಾಗೃತಿ ಕಂಡುಬಂತು. ಅಲ್ಲಲ್ಲಿ ಆಶ್ರಮಗಳು ಮೊದಲಾದವು. ಔಷಧಾಲಯ ಕೆಲಸಮಾಡತೊಡಗಿದವು. ಭಿಲ್ಲರನ್ನು ಗಾಣವಾಡಿ ಹಿಂಡಿ ಹಿಂಡಿ ಮಾಡುತ್ತಿದ್ದ ಕುಡುಕತನ ಮರೆಯಾಗಹತ್ತಿತು. ಅವರಲ್ಲಿ ಸಭೆ ಸಮ್ಮೇಳನಗಳಾಗತೊಡಗಿದವು. ಮಾನವ ಜಾತಿಯ ಅಂಚಿಗೆ ಅವರೂ ಬಂದು ಸೇರಹತ್ತಿದರು.

ಬಾಪಾ ಈ ಅಡವಿಜನರ ಪಾಲಿನ ಭಾಗ್ಯದೇವತೆಯಾದರು. ಅವರು ಎಳೆದ ದಾರಿಯಲ್ಲಿ ಈಗ ನಡೆಯುತ್ತಿರುವ ವೇರ್ರಿಯರ್ ಇಲ್ವಿನ್ ಬಾಪಾರನ್ನು ದೇವತೆಯೆಂದು ಕರೆದುದು ಉತ್ಪ್ರೇಕ್ಷೆಯಲ್ಲ. ಕಣ್ಣಿದ್ದವರಿಗೆ ಅನುಭವವಾಗುವ ನಿಜವಾದ ಮಾತು.

ಅನೇಕ ಜನರಿಗೆ ಬಾಪಾ ಬಾಳಿನ ಹಾದಿಯನ್ನು ತೋರಿದಾರೆ. ತಮ್ಮ ಉದಾಹರಣೆಯಿಂದ, ತಮ್ಮ ಹಿತವಚನಗಳಿಂದ ಅನೇಕರಿಗೆ ಸೇವಾ ದೀಕ್ಷೆ ಕೊಟ್ಟಿದಾರೆ. ಈಗ ಮುಂದಾಳುಗಳಾಗಿ ದೇಶಸೇವಕರಾಗಿರುವ ಎಷ್ಟೋ ಜನಕ್ಕೆ ಅವರು ಸ್ಫೂರ್ತಿ ಕೊಟ್ಟಿದಾರೆ. ಅವರು ಹಚ್ಚಿದ ದೀಪಗಳು ಇಂದಿಗೂ ನಿಚ್ಚಳವಾಗಿ ಬೆಳಗುತ್ತಿವೆ.

ಬಾಪಾರ ಈ ಕರ್ಮಜೀವನದ ಬಂಗಾರಕ್ಕೆ ಅವರ ಅನಾಸಕ್ತಿಯು ಪರಿಮಳ ಕೊಡುತ್ತಿದೆ. ಪ್ರತಿಫಲಾಪೇಕ್ಷೆಯಿಲ್ಲದ ಬರೀ ಗೊಡ್ಡು ನಿಷ್ಕಾಮವೂ ಅಲ್ಲ ಅವರದು. ಅವರ ಅನಾಸಕ್ತಿ ಸಾಧಿಸಿ ಹದಮಾಡಿಕೊಂಡ ಒಂದು ಯೋಗವಲ್ಲ. ಸಹಜವಾಗಿಯೆ ಅರಳಿ ಕಂಪು ಬೀರುವ ಹೂವಿನಂತೆ ಅವರು.

ಅಮೃತಲಾಲ್ ಠಕ್ಕರ್ ಮೊದಲು ಬೊಂಬಾಯಲ್ಲಿ ರೋಡ್ ಇಂಜನಿಯರರಾಗಿ ಬೇಕಾದಷ್ಟು ಗಳಿಸುತ್ತಿದ್ದರು. ಅವರ ಜೀವನದ

ಶ್ರುತಿಗೆ ಆ ಕೆಲಸ ಒಗ್ಗಲಿಲ್ಲ. ಅದನ್ನು ಬಿಟ್ಟು ಪುಣೆಯ Servants of India ಸಂಘವನ್ನು ಸೇರಿದರು. ಅದು ಬಹಳ ದಿನಗಳ ಹಿಂದೆ, ಮೂವತ್ತು ವರ್ಷವಾದರೂ ಆಗಿರಬೇಕು. ಅಂದಿನಿಂದ ಅವರ ತಪಸ್ಸು ಒಂದೇ ಸಮನಾಗಿ ನಡೆದಿದೆ.

ದೇವರು ಬಾಪಾರನ್ನು ಈಗಿನ ಪರಿವ್ರಾಜಕ ಜೀವನಕ್ಕಾಗಿಯೆ ಮೊದಲಿನಿಂದಲೂ ಆರಿಸಿದಂತಿದೆ. ಬಾಪಾಗೆ ಕುಟುಂಬದ ಹೊರೆ ಬಹಳ ದಿನ ಇರಲಿಲ್ಲ. ಒಂದೇ ಒಂದು ಮಗುವನ್ನು ಹಡೆದು ಇವರ ಹೆಂಡತಿ ಕಣ್ಣುಮುಚ್ಚಿದಳು. ಆ ಮಗುವೂ ಬಹಳ ದಿನ ಉಳಿಯಲಿಲ್ಲ. ತಂದೆಯ ಬಲವಂತಕ್ಕಾಗಿ ಎರಡನೆಯ ಸಲ ಮದುವೆಯಾದರು. ಇವರ ಕೊರಲಿಗೆ ಸಾಂಸಾರಿಕಬಂಧನ ಹಾಕುವದು ದೇವರ ಲೆಕ್ಕದಲ್ಲಿರಲಿಲ್ಲ. ಆಕೆಯೂ ಬೇಗನೆ ತೀರಿಕೊಂಡರು. ಅಂದಿನಿಂದ ಬಾಪಾ ವಿಧುರರಾಗಿಯೇ ಇದಾರೆ; ತನ್ನವರೆಂಬವರು ಯಾರೂ ಇಲ್ಲದೆ ಇದಾರೆ. ಅದರಿಂದ ಅವರಿಗೆ ಯಾವ ಕೊರತೆಯೂ ಇಲ್ಲ. ನಾಡಿನ ದೀನದಲಿತರನ್ನೆಲ್ಲ ತನ್ನವರಾಗಿ ಮಾಡಿಕೊಂಡಿದಾರೆ. ಅವರದೇ ಒಂದು ಕುಟುಂಬವನ್ನು ಕಟ್ಟಿಕೊಂಡಿದಾರೆ.

ಇಂದು ಅವರಿಗೆ ೭೦ ವರ್ಷಗಳಾಗಲಿದೆ. ಈ ೩೦–೪೦ ವರ್ಷಗಳ ಸೇವೆಯ ತರುವಾಯ ಹಿಂದುಸ್ಥಾನವು ಅವರ ಜಯಂತಿಯನ್ನು ಮಾಡುತ್ತಿದೆ. ಬಾಪಾರನ್ನು ಗುರುತಿಸಿಕೊಳ್ಳಲು ಎಷ್ಟು ತಡಮಾಡಿತೋ ಅಷ್ಟೇ ಬೇಗನೆ ಹಿಂದುಸ್ಥಾನ ಅವರನ್ನು ಮರೆಯಲಿಕ್ಕಿಲ್ಲವೆಂದು ನಂಬೋಣವೇ? ಬಾಪಾರ ಜೀವನದ ಆದರ್ಶಗಳನ್ನು ನಮ್ಮ ಬಾಳಿನೊಳಕ್ಕೆ ಹೆಣೆದುಕೊಂಡು ಅವರನ್ನು ಅಜರರಿದ್ದಂತೆ ಅಮರರನ್ನೂ ಮಾಡಬಲ್ಲೆವೇನು ನಾವು?

# ಆಚಾರ್ಯ ವಿನೋಬಾ

•

ಗಾಂಧೀಜೀ ಸಾಬರಮತಿ ಆಶ್ರಮವನ್ನು ಮೊದಲು ಮಾಡಿದಾಗ ಅವರಿಗೆ ಒಂದು ದಿನ ಒಂದು ಕಾಗದ ಬಂತು. ಯಾರೋ ಆಶ್ರಮವನ್ನು ಸೇರಲು ಅಭಿಲಾಷೆಪಟ್ಟು ಗಾಂಧೀಜಿಯ ಅಪ್ಪಣೆ ಕೇಳಿದ್ದರು. ಉತ್ತರ ಬರೆಯೋಣವೆಂದು ಅವರು ಕಾಗದವನ್ನು ತೆಗೆದಿಟ್ಟರು.

ಮಾರನೆಯ ದಿನ ದರ್ಶನಕ್ಕೆಂದು ಒಬ್ಬ ಮಹಾರಾಷ್ಟ್ರದ ತರುಣ ಬಂದರು. ಮೈ ಸೀರಲು, ಗಾಳಿಗೆ ಹಾರಿಹೋಗುವ ಹಾಗಿತ್ತು. ಮೂಳೆ ಗಳೆಲ್ಲ ಕಾಣುತ್ತಿದ್ದುವು. ತಾವು ಆಶ್ರಮಕ್ಕೆ ಸೇರಲು ಬಯಸಿದು ದಾಗಿಯೂ ಹಾಗೆಯೇ ಕಾಗದ ಬರೆದುದಾಗಿಯೂ ಹೇಳಿದರು. ಉತ್ತರ-ಕ್ಕಾಗಿ ಕಾಯುವುದು ಮನಸ್ಸಿಗೆ ಭಾರವಾಗಿ ತಾವೇ ಬಂದುಬಿಟ್ಟರು.

ಗಾಂಧೀಜೀ ತರುಣನ ಈ ಆತುರ-ಉತ್ಸಾಹಗಳಿಗೆ ಮುಗುಳುನಗೆ ಸೂಸಿ, ಅವರ ಅಪೇಕ್ಷೆಗೆ 'ಅಸ್ತು' ಎಂದರು.

ಆಶ್ರಮದಲ್ಲಿ ದಿನಚರಿಯ ಜೀವನ ಬಹಳ ಕಠಿನವಾದುದು. ಇಷ್ಟ ಬಾರದ ಕೆಲಸ ನಾಲ್ಕಾದರೆ ಕಷ್ಟವಾದ ದುಡಿತ ಹತ್ತು. ಶರೀರಶ್ರಮ ಬಹಳ. ಈ ಬಡಕಲು ಯುವಕನಿಗೆ ಬಾವಿಯಿಂದ ನೀರು ಸೇದುವುದು ಮೊದಲಾದ ರಟ್ಟೆ ಹರಿಯುವ ಕೆಲಸ ಬಂತು. ಆತ ಸ್ವಲ್ಪವೂ ಗೊಣಗದೆ, ತುಟಿ ಪಿಟಕ್ಕೆನ್ನದೆ ಸಂತೋಷವಾಗಿ ಆ ಕೆಲಸ ಮಾಡುತ್ತಿದ್ದರು. ಇದು ಒಂದು ದಿನ ಗಾಂಧೀಜಿಯ ಕಣ್ಣಿಗೆ ಬಿತ್ತು. 'ಈ ಕೆಲಸ ಕಷ್ಟವಲ್ಲವೆ? ನೀನು ಮೊದಲೇ ಕೈಲಾಗದವನ ಹಾಗಿದ್ದೀಯೆ. ಜೊತೆಗೆ ಆರೋಗ್ಯವೂ ಕೆಟ್ಟಹಾಗಿದೆ' ಗಾಂಧೀಜೀ ಕೇಳಿದರು. ಆತ ಬದಲು ಹೇಳಿದ: 'ಮೈ

ಬಡಕಲಾಗಿದ್ದರೇನು ಆತ್ಮದ ಬಲವಿಲ್ಲವೆ?' ಗಾಂಧೀಜೀ ಆ ತರುಣನನ್ನು ಆಪಾದಮಸ್ತಕವೂ ದಿಟ್ಟಿಸಿ ನೋಡಿದರು. ಮೊದಲೇ ಆತನ ಆಧ್ಯಾತ್ಮ ಪಿಪಾಸೆ-ಉತ್ಕಂಠತೆಗಳಿಗೆ ಮನಸೋತಿದ್ದರು. ಈಗಂತೂ ಆ ಅಭಿಮಾನ ದುಪ್ಪಟ್ಟು ಮೂರುಪಟ್ಟಾಯಿತು.

ಆ ತರುಣ ಆಚಾರ್ಯ ವಿನೋಬಾ; ಗಾಂಧೀಜೀಯ ಶಿಷ್ಯಕೋಟಿಯಲ್ಲಿ ಅಣಿಮುತ್ತು.

ಈ ಹಸಿವು, ಆಧ್ಯಾತ್ಮದ ಈ ಒಲವು ವಿನೋಬಾಜಿಯ ಜೀವನದಲ್ಲಿ ಮೊದಲಿನಿಂದಲೂ ಇತ್ತು. ಇಲ್ಲದಿದ್ದರೆ ಇನ್ನೂ ಕಾಲೇಜಿನಲ್ಲಿ ಓದುತ್ತ ಇರುವಾಗಲೆ, ಮನೆಮಾರು ಬಿಟ್ಟು ಕಾಶಿಗೆ ಓಡಿಹೋಗುವುದು ಎಲ್ಲರಿಗೂ ರುಚಿಸೀತೆ? ವಿನೋಬಾ ಇಂಟರ್ ಪರೀಕ್ಷೆಗಾಗಿ ಬೊಂಬಾಯಿಗೆ ಬರ ಬೇಕಾಗಿತ್ತು. ಅವರಿದ್ದುದು ಬರೋಡಾದಲ್ಲಿ. ಕಿತ್ತ ಕಾಲು ಬೊಂಬಾಯಿಗೆ ತಿರುಗಿಸದೆ ಕಾಶಿಗೆ ಓಡಿಹೋದರು. ವಿದ್ಯಾಭ್ಯಾಸಕ್ಕೆ ಇತಿಶ್ರೀ ಆಯಿತು.

ಇವರ ಕಣ್ಣಿಗೆ ಬೈರಾಗಿಕಳೆ ಚಿಕ್ಕಂದಿನಲ್ಲಿಯೆ ಬಂದಿತ್ತು. ಇವರ ತಂದೆ ಸ್ವಲ್ಪಮಟ್ಟಿಗೆ ಸ್ವತಂತ್ರವೃತ್ತಿಯುಳ್ಳವರು. ಇವರ ತಾಯಿಯು ತಂದೆಯ ಸ್ವಭಾವ ವಿರಕ್ತರದು. ವಿನೋಬಾಗೆ ಎಳೆಯತನದಲ್ಲೇ ಏಕಾಂತ ವಾಸದ ಒಲವು ಬಹಳ. ಓದಿನಲ್ಲಿ ಯಾರಿಗೇನು ಕಡಮೆಯಲ್ಲದಿದ್ದರೂ, ಎಲ್ಲಾದರೂ ಮೂಲೆಯಲ್ಲಿ ಸೇರಿ ಏನೋ ಆಲೋಚನೆಮಾಡಿಕೊಳ್ಳುತ್ತ ಕಾಲಕಳೆಯುತ್ತಿದ್ದರು. ಸಾಹಿತ್ಯದ ಮೇಲೆ ಪ್ರೀತಿಯಿದ್ದರೂ ಗಣಿತದ ಮೇಲೆ ಇವರ ಹಿಡಿತ ಬಹಳ. ಗಣಿತದಲ್ಲಿ ಇವರಿಗೆ ಯಾವಾಗಲೂ ಪ್ರಥಮ ಸ್ಥಾನ. ಧಾರ್ಮಿಕವಿಚಾರದಲ್ಲಿ ಇವರಿಗೆ ತುಂಬಾ ಶ್ರದ್ಧೆ. ಆದಕ್ಕಾಗಿ ಇವರಿಗೆ ಸಂಸ್ಕೃತದ ರುಚಿ ಬಲವಾಗಿತ್ತು.

ಮಹಾರಾಷ್ಟ್ರದ ಗಾಳಿಯಲ್ಲಿ ೩೦-೪೦ ವರ್ಷಗಳ ಕೆಳಗೆ ಧರ್ಮ, ಸಂಸ್ಕೃತಿ, ಬ್ರಹ್ಮಚರ್ಯೆ, ದೇಶಸೇವೆಗಳ ಮಾತು ಕೇದಗಿಯ ಕಂಪಿನಂತೆ ಇಡುಗಿ ಹೋಗಿತ್ತು. ಸಮರ್ಥ ರಾಮದಾಸ ಸ್ವಾಮಿಯ ಚಿತ್ರವು ಜನರ ಕಣ್ಣೆದಿರು ಸಜೀವವಾಗಿ ಸಶಕ್ತವಾಗಿ ನಿಂತಿತ್ತು. '**ಮಹಾರಾಜ**' '**ಬುವಾ**'ಗಳೂ ಅಲ್ಲಲ್ಲಿ ಎದ್ದಿದ್ದರು. ರಾಜಕೀಯ ರಂಗದಲ್ಲೂ ಧಾರ್ಮಿಕ

ರಂಗು ಚೆಲ್ಲಿತ್ತು. ಗೋಖಲೆ '**ದೇಶಸೇವೆಯೇ ಈಶಸೇವೆ**' ಎಂದರು. ತಿಲಕರಂತೂ ಗೀತೆಯ ಅಭಿಮಾನಿಗಳು; ಗಣಪತಿಯ ಹಬ್ಬವನ್ನು ನಾಡ ಹಬ್ಬವನ್ನಾಗಿ ಮಾಡಿದ ಚತುರರು. ವಿನೋಬಾರ ಕಣ್ಣುಮುಂದೆ ರಾಮದಾಸ ಸ್ವಾಮಿಯ ಶ್ರೇಷ್ಠ ಆದರ್ಶವು ಕಟ್ಟಿದಂತಿತ್ತು. ಅವರ ಹಾಗೆ ಬ್ರಹ್ಮಚಾರಿಗಳಾಗಬೇಕೆಂದೂ ಸಂಯಮೀಂದ್ರರಾಗಿ ದೇಶಸೇವೆ ಮಾಡ ಬೇಕೆಂದೂ ಆಶೆ ಬಾಲ್ಯದಲ್ಲಿಯೇ ಮೊಳೆಯಿತು. ಈ ಹಂಬಲವೇ ಅವರನ್ನು ಓದು ಬಿಡಿಸಿ ಬೊಂಬಾಯಿಯ ಬದಲು ಕಾಶಿಗೆ ಸೆಳೆದದ್ದು. ಆದರೆ ಅಲ್ಲಿ ಬೈರಾಗಿಯಾಗಿ 'ಭಾಂಗ-ಚಿಲಂ'ಗಳ ಭಕ್ತರಾಗಿ ಬಾಳುವುದು ಇವರಿಗೆ ಅಸಹ್ಯವಾಯಿತು. ಸನಾತನಿ ಸಂನ್ಯಾಸಿಯಂತೆ 'ವೇದವಾದರತ'ರಾಗಿ ಜಡ ಕರ್ಮಠರಾಗುವುದೂ ಸರಿತೋರಲಿಲ್ಲ. ರಾಮದಾಸರ ಸ್ಫೂರ್ತಿ ಆ ದಾರಿಯದಲ್ಲ.

ಇದಲ್ಲದೆ ಹಿಂದುಸ್ತಾನದಲ್ಲಿ ಹೊಸದೊಂದು ತೆರೆಯೆದ್ದಿತ್ತು ಆಗ. ವಂಗಭಂಗದ ಚಳುವಳಿಯು ವಿಶಾಲವಾದ ಈ ದೇಶವನ್ನು ಕಲಕಿ ಜನರ ಮನಸ್ಸನ್ನು ರಾಷ್ಟ್ರೀಯತೆ ದೇಶಪ್ರೇಮಗಳ ಕರ್ಮಯೋಗದ ಹಾದಿಯ ಕಡೆಗೆ ಸೆಳೆದಿತ್ತು. ಸ್ವರಾಜ್ಯದ ಆಶೆಯಲ್ಲಿ ಹಿಂಸಾಮಯವಾದ ಕ್ರಾಂತಿಯ ವಿಚಾರಗಳೂ ಬೆರೆತು ಬರುತ್ತಿದ್ದುವು. ಲೋಕಮಾನ್ಯರ ಅದ್ಭುತತ್ಯಾಗ, ದೈವಭಕ್ತಿಯ ತಳಹದಿಯ ಮೇಲೆ ಬೆಳೆದ ಆ ಧೈರ್ಯಗಳೂ ಇವರ ಮನಸ್ಸನ್ನು ಮುತ್ತಿದ್ದುವು. ವಿನೋಬಾ ಕಾಶಿಯಲ್ಲಿ ನಿಲ್ಲಲಿಲ್ಲ; ನಿವೃತ್ತಿಯ ನಿಷ್ಕರ್ಮಮಾರ್ಗವನ್ನು ಹಿಡಿಯಲಿಲ್ಲ. ಕಾಶೀಯಾತ್ರೆಯಾದ ಮೇಲೆಯೇ ಇವರು ಸಾಬರಮತಿಗೆ ಹೋದುದು.

ವಿನೋಬಾ ಭಾವೆ—ಅದು ಅವರ ಪೂರ್ಣಹೆಸರು—ಬೊಂಬಾಯಿ ಬಳಿ, ಕೊಲಾಬಾ ಜಿಲ್ಲೆಯ **ಗಾಗೋದೆ** ಹಳ್ಳಿಯಲ್ಲಿ ಹುಟ್ಟಿದರು. ಇವರ ತಂದೆಗೆ ಬಡೋದಾದ ಕಲಾಭವನದಲ್ಲಿ ಕೆಲಸವಿತ್ತು. ಇವರ ವಿದ್ಯಾಭ್ಯಾಸ ಅಲ್ಲೇ ಆಯಿತು. ಮೊದಮೊದಲು ಮನೆಯಲ್ಲಿ ಕಲಿತದ್ದೇ ಬಹಳ. ಇವರ ತಂದೆಗೆ ಕಲೆ-ಉದ್ಯೋಗಗಳ ಮೇಲೆ ಪ್ರೀತಿ. ಮಗ ಸ್ವತಂತ್ರವಾಗಿ ಗೌರವದಿಂದ ಬಾಳಲೆಂದು ಇವರಿಗೆ ಚಿತ್ರಕಲೆಯನ್ನು ಚೆನ್ನಾಗಿ ಕಲಿಸಿದರು. ಇವರ ಧ್ಯಾನಾಸಕ್ತ ಹೃದಯಕ್ಕೆ ಅದೂ ನೀರೆರೆದಿರಬೇಕು.

ಗಾಂಧೀಜಿಯ ಜೀವನಸೌರಭಕ್ಕೆ ಮನಸೋತ ತುಂಬಿಗಳಲ್ಲಿ ವಿನೋಬಾ ಸಹಜವಾಗಿಯೇ ಶ್ರೇಷ್ಠರು. ಮೊದಲೇ ಮುಮುಕ್ಷು ಜೀವಿ. ಸಾಬರಮತಿ ಆಶ್ರಮವನ್ನು ಸೇರಿದ ನಾಲ್ಕೈದು ವರ್ಷಗಳಲ್ಲಿಯೆ ಸ್ವತಂತ್ರ ವ್ಯಕ್ತಿತ್ವವನ್ನು ಗಳಿಸಿದರು. ಇವರ ತಾಪಸಜೀವನ-ಸುಮುಖಪಾಂಡಿತ್ಯ ಗಳು ಗಾಂಧೀಜಿಯನ್ನು ಮೆಚ್ಚಿಸಿದುವು. ಅಷ್ಟುಹೊತ್ತಿಗೆ ಸೇಠ ಜಮನಾ ಲಾಲ ಬಜಾಜರು ಸಾಬರಮತಿಯ ಮಾದರಿಯ ಆಶ್ರಮವೊಂದನ್ನು ವರ್ಧಾದಲ್ಲಿ ಪ್ರಾರಂಭಿಸಲು ನಿಶ್ಚಯಿಸಿದರು. ಸ್ವತಂತ್ರ ಆಶ್ರಮದ ಜವಾಬ್ ದಾರಿ ಯಾರು ಹೊರಬೇಕು? ಆ ಪ್ರಶ್ನೆ ಸುಲಭವಾಗಿ ಹರಿಯಲಿಲ್ಲ. ಕೊನೆಗೆ ಗಾಂಧೀಜಿ ಅದನ್ನು ಬಿಡಿಸಿದರು. ವರ್ಧಾ ಆಶ್ರಮಕ್ಕೆ ವಿನೋ ಬಾಜಿಯನ್ನು ಹಿರಿಯರನ್ನಾಗಿ ಮಾಡಿ ಕಳಿಸಿಕೊಟ್ಟರು. ಅಂದಿನಿಂದ ವಿನೋಬಾ ವರ್ಧಾದಲ್ಲೇ ಇದಾರೆ.

ವರ್ಧಾದಲ್ಲಿ ಸತ್ಯಾಗ್ರಹಾಶ್ರಮ ಮೊದಲಾದಾಗ ಮಗನಲಾಲ ಗಾಂಧಿ, ರಮಣಿಕಲಾಲಭಾಯಿ ಇವರ ಜೊತೆಗೆ ಇದ್ದರು. ಮಗನಲಾಲರು ಖಾದಿಯ ಪಂಚಪ್ರಾಣವಾಗಿದ್ದರು ಪ್ರಾರಂಭದಲ್ಲಿ. ಅವರ ಸಾಂಗತ್ಯದಲ್ಲಿ ವಿನೋಬಾಗೆ ಖಾದಿಯ ಸೆಳೆತ ಪೂರಾ ಆಗಿಹೋಯಿತು. ದರಿದ್ರನಾರಾ ಯಣನ ಆರಾಧಕರಾಗಿ ಖಾದೀಶಾಸ್ತ್ರವನ್ನು ಅಭ್ಯಾಸಮಾಡಿದರು. ಅದರ ವಿಷಯವಾಗಿ ಮಗನಲಾಲರೊಡಗೂಡಿ ಒಂದು ಪುಸ್ತಕವನ್ನು ಬರೆದರು. ಈಗಲೂ ಸದಾ ಖಾದಿಯನ್ನು ಕುರಿತು ವಿಚಾರಮಾಡುತ್ತಿರುತ್ತಾರೆ. ಮೊನ್ನೆ ಮೊನ್ನೆ ಇವರಿಗೆ ಬೇನೆಯಾಗಿದ್ದಾಗ, ಹಾಸಿಗೆಯಲ್ಲಿ ಮಲಗಿ, ಹಿಂಜುವ ಬಿಲ್ಲಿನ ಸಹಾಯವಿಲ್ಲದೆ ಕೈಯಿಂದಲೇ ಅರಳೆ ಹಿಂಜುವ ಪದ್ಧತಿ ಯೊಂದನ್ನು ಮೊದಲು ಮಾಡಿದರು. ವರ್ಧಾದಲ್ಲಿ ವರ್ಷವರ್ಷವೂ ವಿನೋಬಾಜೀ ನಡೆಯಿಸುವ ಖಾದೀ ಜಾತ್ರೆ ಒಂದು ವೈಶಿಷ್ಟ್ಯವೇ ಆಗಿದೆ. ನಿಜವಾದ ಗ್ರಾಮಜೀವನವೇ ಸಂಸ್ಕೃತಿಯ ಲಕ್ಷಣವೆಂದು ಗಾಂಧೀಜಿಯಂತೆ ಇವರೂ ಪೂರ್ಣವಾಗಿ ನಂಬಿದ್ದಾರೆ. ಗ್ರಾಮಜೀವನ ದಲ್ಲಿ ಸರಳತೆ ಸತ್ಯಗಳು ತಾನೇ ತಾನಾಗಿ ತುಂಬಲು ಖಾದೀ-ಗ್ರಾಮೋ ದ್ಯೋಗಗಳೇ ಹಾದಿಯೆಂದು ಇವರ ಸಿದ್ಧಾಂತ. ಆ ಸಿದ್ಧಾಂತವನ್ನು ವಿನೋಬಾ ಆಚರಣೆಗೆ ತಂದಷ್ಟು ಗಾಂಧೀಜಿಗೂ ಆಗಿಲ್ಲ.

ಸತ್ಯಾಗ್ರಹಾಶ್ರಮ ವರ್ಧಾಕ್ಕೆ ೧-೧½ ಮೈಲು ದೂರದಲ್ಲಿರುವ **ನಾಲವಾಡಿ** ಎಂಬ ಹಳ್ಳಿಯಲ್ಲಿದೆ. ಅದರಲ್ಲಿ ಹರಿಜನರೇ ಬಹಳ. ಅವರಿಗಾಗಿಯೆ ಆಶ್ರಮ ಇಲ್ಲಿ ಕಟ್ಟಲ್ಪಟ್ಟಿರಬಹುದು. ಈ ಆಶ್ರಮ ಮಧ್ಯ ಪ್ರಾಂತದ ತರುಣರ ಸಾಧನಾಕ್ಷೇತ್ರವಾಗಿತ್ತು. ಮಹಾರಾಷ್ಟ್ರದ ತರುಣರನೇಕರು ವಿನೋಬಾಜಿಯ ಸುತ್ತಲೂ ಬಂದು ಸೇರಿದರು. ಅವರಲ್ಲನೇಕರಿಗೆ ಇಂದಿಗೂ ಇವರು ಅಂತರಂಗದ ಗೆಳೆಯ, ಗುರು ಆಗಿದ್ದಾರೆ.

ವಿನೋಬಾ ಬರಿಯೆ ಅಧ್ಯಾತ್ಮಲೋಕದ ಮರುಳಲ್ಲ. ಅವರ ಆಶ್ರಮ ಜೀವನದಲ್ಲಿ ಹತ್ತಿಯನ್ನು ಹಿಂಜುವುದು, ನೂಲುವುದು, ನೇಯುವುದು, ಬೇಸಾಯ ಮುಖ್ಯ ಶಿಕ್ಷಣವಾಗಿತ್ತು. ಗಾಂಧೀಜಿಯ ರಾಷ್ಟ್ರೀಯ ಶಿಕ್ಷಣದ ಪ್ರಯೋಗ ಇಲ್ಲಿ ದೀರ್ಘಕಾಲ ನಡೆಯಿತು. ಇಂಥ ಅನೇಕ ಪ್ರಯೋಗಗಳ ಫಲ ಇಂದಿನ ವರ್ಧಾಯೋಜನೆ. ಆಶ್ರಮವಾಸಿಗಳು ತಮ್ಮ ಅಡಿಗೆ ತಾವೇ ಮಾಡಿಕೊಳ್ಳುತ್ತಿದ್ದರು. ಆಹಾರ ಅತಿ ಸಾದಾ ಮತ್ತು ಸಾತ್ತ್ವಿಕ. ತಾವು ನೂತು ನೇದ ಬಟ್ಟೆಯಿಂದಲೇ ತಮ್ಮ ಉಡುಗೆ. ಸ್ವಾವಲಂಬನ ತತ್ತ್ವವು ಗಾಂಧೀಜಿಯ ಗ್ರಾಮಸಂಸ್ಕೃತಿಯ ಮುಖ್ಯ ಸೂತ್ರವಷ್ಟೆ. ಆಶ್ರಮದಲ್ಲಿ ಅಪರಿಗ್ರಹತತ್ತ್ವವನ್ನೂ ವಿನೋಬಾ ಕಡ್ಡಾಯವಾಗಿ ಕಲಿಸಿಬಿಡುತ್ತಿದ್ದರು ದಿನವೂ ತಾಸೆರಡು ತಾಸು ಆಶ್ರಮವಾಸಿಗಳಿಗಾಗಿ ವಿನೋಬಾಜಿಯ ಪ್ರವಚನವಾಗುತ್ತಿತ್ತು. ಅದಕ್ಕೆ ಆಧಾರ ಅವರ ಅನುಭವ; ಯಾವ ಗ್ರಂಥಸಮುದಾಯವೂ ಅಲ್ಲ.

ಈಗ ಆಶ್ರಮ ಚೆದರಿದಂತಾಗಿದೆ. ಇವರ ಅನುಯಾಯಿಗಳು ಗ್ರಾಮಸೇವಾ ಮಂಡಲವೊಂದನ್ನು ಮಾಡಿಕೊಂಡಿದ್ದಾರೆ. ಅದರ ಸದಸ್ಯರಿಗೆ 'ಜೀವನ ವೇತನ'—ಕೇವಲ ಹೊಟ್ಟೆ ಬಟ್ಟೆಗಾಗುವಷ್ಟು—ಕೊಡುತ್ತಾರೆ. ಹಳ್ಳಿಗಳಲ್ಲಿ ಪುನರುಜ್ಜೀವನದ ಸಂಸ್ಕೃತಿಯ ಪ್ರಚಾರ, ಉದ್ಯೋಗಪ್ರಿಯತೆ, ಖಾದೀ ಪ್ರಚಾರ ಇವರ ಕೆಲಸ; ಮುಖ್ಯವಾಗಿ ಗ್ರಾಮಪುನರ್ನಿರ್ಮಾಣ.

ಗಾಂಧೀಜೀ ವರ್ಧಾ ಸೇರಿದ ಮೇಲೆ, ನಾಲವಾಡಿ ಖಾದೀಕೇಂದ್ರವಾಗಿ ಬಿಟ್ಟಿದೆ. ೪೦-೫೦ ಮಗ್ಗಗಳದೊಂದು ಕಾರಖಾನೆಯಾಗಿದೆ.

ಮಹಾರಾಷ್ಟ್ರ ಚರಕಾಸಂಘಕ್ಕೆ ಮುಖ್ಯ ಕೇಂದ್ರವಾಗಿದೆ. ವಿನೋಬಾ ಈಗ ಅಲ್ಲಿರುವುದೂ ಇಲ್ಲ. ಕೆಲವು ದಿನಗಳ ಹಿಂದೆ ಬಹಳ ಬೇನೆ ಬಿದ್ದು, ಹತ್ತಿರದಲ್ಲಿರುವ ಪೌನಾರ್ ಎಂಬ ಹಳ್ಳಿಗೆ ಆರೋಗ್ಯವರ್ಧನಕ್ಕಾಗಿ ಹೋದರು. ಅಲ್ಲೇ ಇದ್ದಾರೆ ಇನ್ನೂ.

ನೋಡುವುದಕ್ಕೆ ವಿನೋಬಾ ಆಕರ್ಷಕವಾದ ವ್ಯಕ್ತಿಯಲ್ಲ. ಮೈ ಮೇಲೆ ಬಟ್ಟೆ ಬಹಳ ಇಲ್ಲ. ಉಡುವುದು ಒಂದು ಖಾದೀ ತುಂಡು ಪಂಚೆ. ಮೇಲೊಂದು ಉತ್ತರೀಯ. ಚಳಿಗಾಲದಲ್ಲಿ ಒಂದು ಕಂಬಳಿ. ಮೈಕಟ್ಟು ತೀರ ಒಣಕಲು. ಮೊದಲೇ ಸೀರ ಸಪ್ಪಾದಿ; ಮೇಲೆ ತಪೋಃ ಜೀವನದ ನಿಷ್ಟುರ ಸಂಯಮ. ಹಲ್ಲಿನ ಸಾಲು ಸ್ವಲ್ಪ ಮುಂದೆ ಬಂದಿದೆ. ಬಣ್ಣ ಸ್ವಲ್ಪ ಕಪ್ಪು. ಆದರೆ ಕಣ್ಣುಮಾತ್ರ ನಂದಾದೀಪದಂತೆ ನಿಚ್ಚಳ ವಾಗಿ ಸ್ಥಿರವಾಗಿ ಹೊಳೆಯುತ್ತವೆ. ಒಳಗೆ ತುಂಬಿಹೋದ ಶಾಂತಿಯ ಬೆಳಕು ಕಣ್ಣಲ್ಲಿ ಕೋಡಿಹರಿಯುತ್ತಿದೆ. ಎಳೆಯತನದಲ್ಲಿದ್ದ ವೈರಾಗಿಯ ಭಾವಪರವಶತೆಯ ಕಳೆ ಸಾಧನೆ-ಅಭ್ಯಾಸಗಳಿಂದ ಸ್ವಚ್ಛವಾಗಿ, ಶುದ್ಧ ವಾಗಿ, ಜಗಜ್ಜ್ಯೋತ್ಯಜ್ಞಾನಯೋಗಿಯ ಪ್ರಭೆಯಾಗಿದೆ. ಆ ಕಣ್ಣಲ್ಲೇ ಅವರ ಜೀವವಿದೆ.

ವಿನೋಬಾ ಗೊಡ್ಡು ವೇದಾಂತಿಯಲ್ಲ. ಅವರ ಬುದ್ಧಿ ವ್ಯವಹಾರ ದಲ್ಲಿ ಅತಿ ಸೂಕ್ಷ್ಮವಾಗಿ ಓಡುತ್ತದೆ. ಅವರ ವೇದಾಂತದಲ್ಲೂ ಗಣಿತ ಶಾಸ್ತ್ರದ ರೀತಿ ಕಾಣಬರುತ್ತದೆ. ವ್ಯವಹಾರಕ್ಕೆ ಎಲ್ಲವನ್ನೂ ಸಮ ನ್ವಯಮಾಡುತ್ತ ಹೋಗುತ್ತಾರೆ. ಸಾಹಿತ್ಯದಲ್ಲಿ ಮೊದಲಿಂದಲೂ ಪ್ರೀತಿಯಿದೆ. 'ಮಧುಕರ' ಎಂಬ ಹೆಸರಿನಿಂದ ಮರಾಟಿಯಲ್ಲಿ ಲೇಖನ ವ್ಯವಸಾಯವನ್ನೂ ನಡೆಯಿಸಿದ್ದರು. ಅವರ ಶೈಲಿ ಮನೋಹರವಾದು ದೆಂದು ಮರಾಟಿಯ ಗೆಳೆಯರು ಹೇಳಿದುದನ್ನು ಬಲ್ಲೆ.

ಬ್ರಹ್ಮಚರ್ಯವಾದರೂ ಅಷ್ಟೇ; ಜೀವನದ ಆನಂದದಲ್ಲಿ ಅವರಿಗಿ ರುವ ಶ್ರದ್ಧೆ-ಆಸಕ್ತಿಗಳನ್ನು ಕಡಮೆ ಮಾಡಿಲ್ಲ. ಬ್ರಹ್ಮಚರ್ಯವೆಂದರೆ ಒಳಗಿರುವ ಬೆಂಕಿಗೆ ನೀರು ಹಾಕಿ ಬೂದಿಮಾಡುವುದಲ್ಲ. ಅಂತರ್ಜ್ಯೋತಿ ಯನ್ನು ಅಖಂಡವಾಗಿ ದೇದೀಪ್ಯಮಾನವಾಗಿ ಬೆಳಗಿಸುವುದು. ಇಂದ್ರಿಯ

ಗಳನ್ನು ಸುಟ್ಟುಕೊಂಡು ಹೆಳವಾಗಿ ಜೀವನದ ಆನಂದವನ್ನು ಕಳೆದು ಕೊಳ್ಳುವುದು ಸಂಯಮವಲ್ಲ. ದೇಹವು ಒಂದು ರಥ, ಇಂದ್ರಿಯಗಳು ಕುದುರೆಗಳು. ಅವನ್ನು ಪಳಗಿಸಿಕೊಳ್ಳಬೇಕು. ವಿವೇಕಕ್ಕೆ ವಿಧೇಯ ವಾಗಿರುವಂತೆ ಅವನ್ನು ತಿದ್ದಬೇಕು. ಹಾಗಿಲ್ಲದುದು ನಿಸ್ಸಾರವಾದ ಬಂಜೆತನ.

ವಿನೋಬಾ ಹಿರಿಯ ಪಂಡಿತರು. ಸಂಸ್ಕೃತವನ್ನು ಚೆನ್ನಾಗಿ ಅಭ್ಯಾಸಮಾಡಿದಾರೆ. ಇವರಷ್ಟು ಆಳವಾಗಿ ಅಭ್ಯಾಸ ಮಾಡಿದವರು ವಿರಳ. ವೇದಪುರಾಣಾದಿಗಳು ಇವರಿಗೆ ಅಂಗೈ ನೆಲ್ಲಿಕಾಯಿ. ಪ್ರಪಂಚದಲ್ಲಿ ಪಾಂಡಿತ್ಯವೇನು ಅಲಭ್ಯವಲ್ಲ. ಕೆಲವರಿಗಾದರೂ ಅಗಾಧ ಪಾಂಡಿತ್ಯ ಬಂದೀತು. ಆದರೆ ಪಾಂಡಿತ್ಯವನ್ನು ಜೀರ್ಣಿಸಿಕೊಂಡು ಜೀವನ ಪಥದಲ್ಲಿ ಅದನ್ನು ಊರುಗೋಲಾಗಿ ಮಾಡಿಕೊಂಡವರು ಮಾತ್ರ ಬಹಳ ಇಲ್ಲ. ವಿನೋಬಾ ತಮ್ಮ ಪಾಂಡಿತ್ಯದಿಂದ ಬಾಳಿನಲ್ಲಿ ಹಾದಿ ಹುಡುಕುತ್ತಾರೆ. ಇದ್ದ ದಾರಿಗಳನ್ನೂ ಮುಚ್ಚಲು ಹೋಗುವುದಿಲ್ಲ. ಪಾಂಡಿತ್ಯವನ್ನು ಜೀವನದಲ್ಲಿ ಹೀಗೆ ಹಿತವಾಗಿ ಬೆರಸಿಕೊಂಡು ಹೋಗುವುದು ಸಾಧ್ಯ ಎಂಬ ಮಾತು ಶ್ರೀವಾಸಿಷ್ಠಗಣಪತಿ ಮುನಿಗಳನ್ನು ನೋಡಿದಾಗ ಎನಿ ಸಿತ್ತು. ವಿನೋಬಾಜಿಯನ್ನು ನೋಡಿ ಇದೇ ಪಾಂಡಿತ್ಯದ ಗುರಿ ಎಂಬುದು ತಿಳಿಯಿತು. ಈ ಗುಣವೇ ಇವರನ್ನು ಆ ಉತ್ತಮ ಜಾತಿಯ ಶಿಕ್ಷಕರನ್ನಾಗಿ ಮಾಡಿದೆ. ಇವರೊಡನೆ ಒಂದು ತಾಸು ಕಳೆದರೆ ಅದೇ ಶಿಕ್ಷಣ. ಇವರ ಸಹವಾಸವೇ ವಿದ್ಯಾಭ್ಯಾಸ.

ವಿದ್ಯಾಭ್ಯಾಸದ ವಿಷಯದಲ್ಲಿ ಇವರಿಗೆ ತುಂಬಾ ಅನುಭವವಿದೆ. ರಾಷ್ಟ್ರೀಯ ಶಿಕ್ಷಣ, ಅಥವಾ ಹಿಂದುಸ್ತಾನದ ಸಂಸ್ಕೃತಿಗೆ ಸರಿ-ಹೋಗುವ ವಿದ್ಯಾಭ್ಯಾಸದ ಹೊಳವನ್ನು ವಿನೋಬಾಜೀ ತಮ್ಮ ಲೇಖನ ಪ್ರವಚನಗಳಲ್ಲಿ ತೋರಿಸಿದ ಹಾಗೆ ಮತ್ತೊಬ್ಬರು ಮಾಡಿಲ್ಲ. ತನ್ನ ವಿದ್ಯೆ ಯನ್ನೇ ಸಾಂಗಗೊಳಿಸದೆ ಬಿಟ್ಟ ಈ ಬೈರಾಗಿ ವಿದ್ಯೆಯ ಮಾತಿನಲ್ಲಿ ಕೈ ಹಾಕುವದು ಪದವೀಧರರಾದ ನಮ್ಮ ವಿದ್ಯಾವಂತರಿಗೆ ಸಹಿಸಬಾರದ ಅಧಿಕ ಪ್ರಸಂಗವಾಗಿ ಕಂಡೀತು. ಅಡ್ಡಕಸಬಿ ಬಾಯಿಹಾಕಿದರೆ ಕಸಬು

ದಾರ ಸುಮ್ಮನಿದ್ದಾನೆಯೇ ? ಓದಿದರೆ ತಾನೆ ಈ ಹೊಟ್ಟೆಯುರಿ ಹೋಗು ತ್ತದೆಯೇ ? ಆದರೆ ಹಿಂದುಸ್ತಾನದ ಹಣೆಯುಬರೆಹವನ್ನೇ ತಲೆಕೆಳಗೆ ಮಾಡಲು ಹೊರಟಿರುವ ವರ್ಧಾವಿದ್ಯಾವಿಧಾನದ ಯೋಜಕರಲ್ಲಿ ವಿನೋಬಾ ಒಬ್ಬರು. ಅವರು ಒಬ್ಬರೇ ಆ ಸಮಿತಿಯಲ್ಲಿ ಪದವೀಧರರಲ್ಲ ದವರು. ಗಾಂಧೀಯುಗ ನಿಜವಾಗಿಯೂ ವಿಚಿತ್ರವಾದುದು. ಕನಸಿ ನಲ್ಲೂ ಆಗಲಾರದೆಂದು ತಿಳಿದಿದ್ದ ಮಾತು ಎಷ್ಟೋ ಕಣ್ಣಮುಂದೆ ಪ್ರತ್ಯಕ್ಷವಾಗಿ ನಡೆದಿದೆ.

ಸರಳತೆಯ ಮಾತು ಬಂದಿತಲ್ಲ; ವಿನೋಬಾಜಿಗೆ ಸರಳತೆಯ ಹುಚ್ಚು ಹಿಡಿದಿದೆ. ಸರಳತೆಯನ್ನು ಒಮ್ಮೊಮ್ಮೆ ಗೌರೀಶಂಕರದ ತುದಿಗೂ ಏರಿಸಿ, ಅಲ್ಪಜೀವಿಗಳಿಗೆ ನಿಲುಕಲಾರದಂತೆ ಮಾಡುತ್ತಾರೆ. ಅವರ ಸರಳತೆಯು ತೊರೆ ಹರಿವುದು ಅಸ್ವಾಮ್ಯದ ತಲೆಮೂಡಿನಿಂದ. ಆದರೆ ಆ ಅಸ್ವಾಮ್ಯ-ಅಸಂಗ್ರಹಗಳಿಗೂ ಸತ್ಯವೇ ಮೂಲವಾದುದರಿಂದ, ಈ ಸರಳತೆಯಲ್ಲಿ ಭಾಂದಸತನವಿಲ್ಲ; ಸೌಂದರ್ಯವಿರದಿದ್ದರೂ ಕಾಠಿನ್ಯವಿಲ್ಲ.

ಇದಕ್ಕೆ ಅವರ 'ಮುಟ್ಟಿದರೆ ಮುನಿ 'ಯ ಸ್ವಭಾವವೇ ಕಾರಣ. ಜನರ ನಡುವೆ ಅವರಿಗೆ ಸಹಿಸಲಾರದ ಸಂಕೋಚ. ಅವರದು ಆತ್ಮ-ಸ್ತಂಭನವಿದ್ಯೆ, ಬಾಲ್ಯದಿಂದಲೂ ಅವರಿಗೆ ಏಕಾಂತಪ್ರೀತಿ. ಜನಸಂದಣಿ, ಪಟ್ಟಣದ ಗಲಿಬಿಲಿ ಅವರಿಗೆ ತಡೆಯಲಾಸಲ್ಲ. ಹೆಸರು, ಮರ್ಯಾದೆ ಅವರಿಗೆ ಹೇಸಿಗೆ ಇಂಥ ಪ್ರಸಂಗ ಬಂದಾಗ ಅವರು ಹರಿದೋಡುತ್ತಾರೆ. ಫೈಜಪುರ ಕಾಂಗ್ರೆಸ್ ನಡೆದಾಗ ವಿನೋಬಾ ಸ್ವಾಗತಸಮಿತಿಯ ಜೀವಾಳವಾಗಿದ್ದರು. ಹಳ್ಳಿಹಳ್ಳಿಗೂ ಮನೆಮನೆಗೂ ಹೋಗಿ ಭಿಕ್ಷೆ ಬೇಡಿದರು. ಮಹಾರಾಷ್ಟ್ರದ ಜನಸಾಮಾನ್ಯರಲ್ಲಿ ಸುಂಟರಗಾಳಿಯನ್ನೇ ಹರಿಬಿಟ್ಟರು. ಕಾಂಗ್ರೆಸ್ ನಗರ ನಿರ್ಮಾಣವನ್ನೂ ಸ್ವಯಂ ನಿಂತು ನೋಡಿದರು. ಇಷ್ಟಾದರೂ ಕಾಂಗ್ರೆಸ್ ನಡೆದಾಗ ಅವರ ಸೊಲ್ಲೇ ಇಲ್ಲ. ಅವರ ದರ್ಶನವೂ ಅಸಾಧ್ಯವಾಯಿತು. ತಮ್ಮ ಗುಡಿಸಲಲ್ಲಿ ಸೇರಿ-ಕೊಂಡು ಯಾರನ್ನೂ ನೋಡದಂತೆ ಮಾಡಿದರು; ಬಯಲಿಗೇ ಬರಲಿಲ್ಲ.

ಗಾಂಧೀಜಿಗಿದ್ದಂತೆ ವಿನೋಬಾಗೂ ಗೀತೆಯ ಬಗ್ಗೆ ಬಹು ಅಕ್ಕರೆ. ಈ ಇಪ್ಪತ್ತು ವರ್ಷದಲ್ಲಿ ಒಂದು ದಿನವಾದರೂ ಗೀತಾಪಾರಾಯಣ

ವನ್ನೋ ಚಿಂತನವನ್ನೋ ಅವರು ಮಾಡದೆ ಇಲ್ಲ. ಗೀತೆಯನ್ನು 'ಗೀತಾಯಿ'—ಗೀತಾತಾಯಿ ಎಂದು ಕರೆದಿದಾರೆ. ಸುಲಭವಾದ ಸವಿಯಾದ ಮರಾಟಿಯಲ್ಲಿ ಅವರು ಗೀತೆಯನ್ನು ಅನುವಾದಿಸಿದಾರೆ. ಅನುವಾದದ ಛಂದಸ್ಸು ಮೂಲದ ಅನುಷ್ಟುಪೇ. ಆ ಛಂದೋಗತಿಯಲ್ಲಿ ಒಂದು ಚೆಂದವಿದೆ. ವಿನೋಬಾಗೆ ಮಾತ್ರವೇ ಏಕೆ, ಗೀತೆ ಸಾವಿರಾರು ಜನಕ್ಕೆ ನಿಜವಾದ ತಾಯಿ. ಗೀತೆಯಲ್ಲಿ ಅಹಿಂಸೆ ಅನಾಸಕ್ತಿಯೋಗಗಳನ್ನೂ ಇವರು ಕಂಡಿದಾರೆ.* ಅನೇಕಸಲ ಗಾಂಧೀಜಿಯ ವೇದಾಂತ ವಿಚಾರಗಳಲ್ಲಿ ಅವರದು ಯಾವುದು, ವಿನೋಬಾಜಿಯದು ಯಾವುದು, ಎಂದು ತಿಳಿದುಕೊಳ್ಳುವುದೇ ಕಷ್ಟ.

ಅನೇಕ ವಿಷಯಗಳಲ್ಲಿ ಗಾಂಧೀಜಿ ತಮ್ಮ ಸಂಗಡಿಗರ ಶಕ್ತಿಯ ಮೇಲೆ ಕಾಲೂರಿ ನಿಲ್ಲುತ್ತಾರೆ. ಇಂಥ ಪ್ರಸಂಗ ವಿನೋಬಾಜಿಗೆ ಪದೇ ಬರುತ್ತವೆ. ಸತ್ಯವನ್ನು ಅಂತರ್ದೃಷ್ಟಿಯ ಸ್ಫೂರ್ತಿಯಿಂದ ಕಂಡುಕೊಳ್ಳುವ ದಾರ್ಶನಿಕ ಗುಂಪೇ ಹಾಗೆ. ಅವರಿಗೆ ಪ್ರತ್ಯಕ್ಷವಾಗಿ ಕಂಡು ಬಂದ, ಅನುಭವವಾದ ಸತ್ಯಕ್ಕೆ ಉಳಿದವರು ಅರ್ಥ ಹೇಳಬೇಕು; ಆ ಸೂತ್ರಕ್ಕೆ ತರ್ಕವನ್ನು ಜೋಡಿಸಬೇಕು. ಗಾಂಧೀಜೀ ದಾರ್ಶನಿಕರು. ಅವರಿಗೆ ಹೊಳೆದ ಅನೇಕ ಸತ್ಯಗಳನ್ನು ತರ್ಕದಿಂದ ಸಿದ್ಧ ಮಾಡುವುದು ವಿನೋಬಾಜಿಯ ಪಾಲಿಗೆ ಬಂದಿದೆ. ಖಾದಿ ಹಳೆಯ ಒಡ್ಡರ ಬಂಡಿಯಿದ್ದ ಹಾಗೆ. ಗಾಳಿಗಾಲಿಂದ ಓಡುತ್ತಿರುವ ಈಗಿನ ಕಾಲದಲ್ಲಿ ನಮ್ಮ ಜನರನ್ನು ಇಂಥ ವ್ಯರ್ಥ ಉದ್ಯೋಗಕ್ಕೆ ಹಚ್ಚಿದರೆ ನಾಡಿಗೆ ನಷ್ಟವಲ್ಲವೆ ಎಂದು ಜವಾಹರಲಾಲರು ಗಾಂಧೀಜಿಯನ್ನು ಕೇಳಿದರು. ಅವರು ವಿನೋಬಾಜಿಯ ಕಡೆ ನೋಡಿದರು. ಇಡೀ ಹಿಂದುಸ್ತಾನವೇ ಖಾದಿ ತೊಟ್ಟರೆ ಎಷ್ಟು ಜನ ಆ ಉದ್ಯೋಗದಲ್ಲಿ ತೊಡಗಿಯಾರು, ಹಾಗೆ ತೊಡಗುವ ಜನ ಯಾರು? ಅವರಿಗೆ ನಾವು ಬೇರೆ ಕೆಲಸ ಕೊಡಲು ಬಂದೀತೇ—ಮುಂತಾದ ಮಾತಿನ ಬಗ್ಗೆ ಅಂಕಗಣಿತದ ಲಾಭ ನಷ್ಟದ ಲೆಕ್ಕದ ಉತ್ತರ ಬಂದಂತೆ ಬಂತು ಜವಾಹರಲಾಲರಿಗೆ ಉತ್ತರ.

---

* "ವರ್ಧಾಯಾತ್ರೆ"ಯಲ್ಲಿ ಸಂಯಮಿ ಶ್ರೇಷ್ಠ ಎಂಬ ಭಾಗವನ್ನು ಓದಬೇಕು.

ಗಾಂಧೀವಾದಗಳಲ್ಲಿ ವಿನೋಬಾಗೆ ತುಂಬಾ ಮರ್ಯಾದೆ. ಗಾಂಧೀಜಿಯ ತರುವಾಯ ವಿನೋಬಾ ಬರುತ್ತಾರೆ ಅವರ ಪಟ್ಟಿಯಲ್ಲಿ. ಸ್ವಯಂ ಗಾಂಧೀಜೀ ವಿನೋಬಾಜಿಯನ್ನು ಎಷ್ಟೋ ಮಾತಿನಲ್ಲಿ ತಮಗಿಂತ ಮೇಲೆಂದು ತಿಳಿಯುತ್ತಾರೆ. ಹಾಗೆ ಅವರಿಗೆ ಹೇಳಿಯೂ ಹೇಳುತ್ತಾರೆ.

ಆಚಾರ್ಯ ರಾಧಾಕೃಷ್ಣನ್ ಗಾಂಧೀಜಿಯನ್ನು ನೋಡಲು ಬಂದಿದ್ದರು. ಮಾತುಕತೆ ಮುಗಿದು ಅವರು ಹಿಂದಿರುಗುವಾಗ ಗಾಂಧೀಜೀ ಹೇಳಿದರು; 'ಇಲ್ಲೇ ಪೌನಾರಿನಲ್ಲಿದಾರೆ ವಿನೋಬಾ. ತಾವು ಅಗತ್ಯವಾಗಿ ಹೋಗಿ ಅವರನ್ನು ನೋಡಬೇಕು. ಅದು ದೊಡ್ಡ ಜೀವ.' ಗಾಂಧೀಜಿಯ ಎಲ್ಲ ಕಾರ್ಯಗಳಿಗೂ ವಿನೋಬಾಜಿಯ ಬೆಂಬಲವಿದೆ; ಅವರ ತಪಶ್ಶಕ್ತಿ ಇವರ ಕೆಲಸಕ್ಕಾಗಿಯೇ ದತ್ತವಾಗಿದೆ. ಆ ನಿಷ್ಕಾಮದಲ್ಲಿ ಆ ಏಕಾಂತಜೀವನದಲ್ಲಿ ಹಿಂದಿನಕಾಲದ ಋಷಿಗಳ ಎಲ್ಲ ಸರಲಗಾಂಭೀರ್ಯವೂ ಇದೆ.



# ಬಾರು ರಾಜಾರಾವ್

•

‘ Rajarao, it seems you have topped the polls ’—ಏನು ರಾಜಾರಾವ್, ಚುನಾವಣೆಯಲ್ಲಿ ನೀನು ಎಲ್ಲರಿಗಿಂತ ಮೇಲೆ ಬಂದೆಯಂತೆ !—ಎಂದು ಒಮ್ಮೆ ಸರಸವಾದ ಮಾತಿನಲ್ಲಿ, ೧೯೩೭ರ ಕಾಂಗ್ರೆಸ್-ಚುನಾವಣೆಗಳ ಕಾಲದಲ್ಲಿ ಆಂಧ್ರ ನಾಯಕರ ಗುಂಪಿನಲ್ಲಿದ್ದ ಸಾಮಾನ್ಯ ವ್ಯಕ್ತಿಯೊಬ್ಬರನ್ನು ಮುಗುಳುನಗೆ ನಗುತ್ತ ಗಾಂಧೀಜಿ ಅಭಿನಂದಿಸಿದರು. ಆ ಕಾಲದಲ್ಲೇ ಹಿಂದುಸ್ಥಾನದ ಕಣ್ಣಿಗೆ ಬಾರು ರಾಜಾರಾವು ಬಿದ್ದುದು. ಆಂಧ್ರರಾದರೂ ಅಷ್ಟೆ; ಆಗಲೇ ಅವರನ್ನು ಗುರುತಿಸಿಕೊಂಡುದು

ಪ್ರತ್ಯಕ್ಷವೇ ಪ್ರಮಾಣವೆಂಬ ಚಾರ್ವಾಕ ಸಿದ್ಧಾಂತವು ವೇದಾಂತದಲ್ಲಿ ಅಲ್ಲಗಳೆಯಲ್ಪಟ್ಟಿದ್ದರೂ, ವ್ಯವಹಾರದಲ್ಲಿ ಮಾತ್ರ ಅದರದೇ ಏಕಚತ್ರಾಧಿಪತ್ಯ. ಜನರಿಗೆ ಎಲ್ಲಕ್ಕಿಂತ ಕಣ್ಣೇ ಪ್ರಧಾನವಾದ ಇಂದ್ರಿಯ ಗುಣಕ್ಕಿಂತ ರೂಪಕ್ಕೇ ಬೆಲೆ ಕೊಡುವ ಬುದ್ಧಿಗೆ ಇದೇ ಮೂಲ. ಅದರಲ್ಲೂ ಪರಸ್ಪರ ಗುಣಗ್ರಹಣದ ಸಂದರ್ಭವಾದರೆ ಸರಿ, ಆನೆಯ ಕಣ್ಣೇ ನಮ್ಮದು. ಆ ಮಾತಿಗೆ ಬಂದರೆ, ನಮ್ಮ ಕಣ್ಣು ಕಿರಿದಿದ್ದಷ್ಟೇ ಬುದ್ಧಿಯೂ ಮುದಡು. ನಾಟಕರಂಗದಲ್ಲಿ ನಿಂತು ಗೆಜ್ಜೆಗಾಲಿನಿಂದ ಕುಣಿವ ನಟಿಯನ್ನು ನಾವು ತಿಳಿದುಕೊಂಡಂತೆ ಸೂತ್ರಧಾರನನ್ನು ಅರಿತುಕೊಳ್ಳುತ್ತೇವೆಯೆ ? ಪವಾಡ ಮೆರೆಯಿಸುವ ತನಕ ಯಾವ ಭಕ್ತನನ್ನು ನಾವು ಒಪ್ಪಿದ್ದೇವೆ ?

ಬಾರು ರಾಜಾರಾವು ಈ ಸೂತ್ರಕ್ಕೆ ಸರಿಯಾದ ಸಾಕ್ಷಿ. ೧೯೧೮ರಿಂದ ೧೯೩೪ರ ವರೆಗೆ ಅವಿಚ್ಛಿನ್ನವಾಗಿ ಅವರು ಕಾಂಗ್ರೆಸ್ಸಿಗೆ ಸಹಾಯಕ

ಕಾರ್ಯದರ್ಶಿಯಾಗಿಯೋ ಕಾರ್ಯದರ್ಶಿಯಾಗಿಯೋ, ಅಂತು ಕಾಂಗ್ರೆಸ್ಸಿನ ಮುಖ್ಯಕಾರ್ಯಾಲಯದ ಸೂತ್ರಗಳನ್ನು ತಮ್ಮ ಕೈಯಲ್ಲಿ ಹಿಡಿದಿದ್ದರು. ಅಷ್ಟು ದೀರ್ಘಕಾಲ ಅದನ್ನು ತಮ್ಮದೇ ಗುತ್ತಿಗೆ ಮಾಡಿರುವುದು ಸಣ್ಣಮಾತಲ್ಲ, ಹಗುರಾದ ಕೆಲಸವಲ್ಲ. ಅದರಲ್ಲೂ ಆ ಹದಿನಾರು ವರ್ಷದ ಕಾಂಗ್ರೆಸ್ಸಿನ ಇತಿಹಾಸ ಸಾಧಾರಣವಾದುದಲ್ಲ. ಅದೊಂದು ಹಿಂದು ಮುಂದು ಇಲ್ಲದ ಕೋಲಾಹಲದ ರಣಕೇಳಿ. ಅತಿರಥ ಮಹಾರಥರು ಕಾಂಗ್ರೆಸ್ಸು ರಥವನ್ನೇರಿ ತಮತಮಗೆ ತೋರಿದತ್ತ ನಡೆಯಿಸಿದರು. ಇವರೆಲ್ಲರ ಉತ್ಸಾಹ ಉದ್ರೇಕಗಳ ಗದ್ದಲದಲ್ಲಿ, ರಥವನ್ನು ಮುರಿಯದೆ ಮಗ್ಗಾಗದೆ ಕಾಪಾಡುತ್ತ ಅವರವರಿಗೆ ನೆರವಾಗುವ ಸಾರಥ್ಯ ಬಲು ಬಿಗುವಿನ ಕೆಲಸವೇ ಸರಿ. ರಾಜಾರಾಯರು ಆ ಮಹಾ ಸಾಹಸ ಮಾಡಿ ಗೆದ್ದ ಧೀರರು. ಆ ಶ್ರದ್ಧೆ, ಆ ಸ್ಥೈರ್ಯಕ್ಕೆ ಭಾರತೀಯರೆಲ್ಲರೂ—ಮುಖ್ಯವಾಗಿ ಕಾಂಗ್ರೆಸ್ಸು ಪ್ರೇಮಿಗಳೆಲ್ಲ—ಮುಟ್ಟಿಸಬೇಕಾದ ಸಾಲ ತೀರಲಾರದಂಥದು; ಅಮರವಾದುದು.

ಆ ಹದಿನಾರು ವರ್ಷದಲ್ಲಿ ಅವರಿಗೆ ಪರಿಚಯವಾಗದ ನಾಯಕರಿಲ್ಲ. ಅವರು ಕಾಣದ ವಿಶೇಷಪ್ರಸಂಗವಿಲ್ಲ. ಪಂಡಿತ ಮದನಮೋಹನ ಮಾಳವೀಯರ ಪವಿತ್ರ ವರ್ತನೆ, ಮೋತೀಲಾಲರ ಅಖಂಡ ವೈಭವ, ಚಿತ್ತರಂಜನದಾಸರತ್ಯಾಗಜೀವನ,ಜವಹರಲಾಲರ ಧೀರೋದಾತ್ತತೆ,ವಲ್ಲಭಭಾಯಿಯ ಚತುರೋಪಾಯ ಸಮರ್ಥತೆ,—ಎಲ್ಲಕ್ಕಿಂತ ಹೆಚ್ಚಾಗಿ ಗಾಂಧೀಜಿಯ ಪ್ರಶಾಂತ ರಮಣೀಯ ಜೀವನ—ಎಲ್ಲದರ ಅನುಭವವೂ ಅವರಿಗೆ ಆಯಿತು. ಎಲ್ಲರ ಅಭಿಮಾನ ಆದರಗಳೂ ದೊರೆತಿದ್ದುವು. ಮೋತೀಲಾಲರಿಗಂತೂ ರಾಜಾರಾವು ಮನೆಯ ಮಂದಿ. ಅಷ್ಟು ಅಭಿಮಾನ. RajaRao is the power behind the throne '—ಈ ಸಿಂಹಾಸನದ ಆಧಾರಶಕ್ತಿ ರಾಜಾರಾವೇ—ಎನ್ನುತ್ತಿದ್ದರಂತೆ ಅವರು.

ಹೀಗಿದ್ದರೂ ರಾಜಾರಾವು ಚುನಾವಣೆಗೆ ನಿಂತರೆ ಸ್ಪರ್ಧೆ ತಪ್ಪಲಿಲ್ಲ. ಇತರ ದೇಶಗಳಲ್ಲಿ ಇಂಥ ತ್ಯಾಗಕ್ಕೆ ಆ ರೀತಿಯ ಗೌರವ ಮುಡಿಪಾಗಿ ಸಲ್ಲುತ್ತಿತ್ತು. ನಮ್ಮದು ಏನೆಂದರೂ ಭಾರತದೇಶ, ಧರ್ಮಭೂಮಿ.

ರಾಜಾರಾವನ್ನು ಶಾಸನ ಸಭೆಗೆ ಹುರಿಯಾಳಾಗಿ ನಿಲ್ಲಬೇಕೆಂದು ಕಾಂಗ್ರೆಸ್ ನಾಯಕರು ಕೇಳಲಿಲ್ಲ. ರಾಜಮಹೇಂದ್ರದ ಮುಂದಾಳುಗಳು ಕೆಲವು ಜನ ಹಾಗೆ ಮಾಡಿರೆಂದು ಪಟೇಲರಿಗೆ ಬಿನ್ನಹ ಕಳಿಸಬೇಕಾಯಿತು. ಚುನಾವಣೆಯಲ್ಲಿ ಪ್ರತಿಸ್ಪರ್ಧಿಗಳು, ಇವರ ೧೬ ವರ್ಷದ ಸೇವೆಯನ್ನೇ ಒಂದು ಕೊರತೆಯಾಗಿ ಕಾಣಿಸುವಂತೆ ಅರ್ಥಮಾಡಿದರು. 'ಬಹಳ ಕಾಲದಿಂದ ಅವರು ತಮ್ಮ ಪ್ರಾಂತದಲ್ಲಿರಲಿಲ್ಲ. ಅವರಿಗೆ ತೆಲುಗೇ ಸರಿಯಾಗಿ ಬಾರದು' ಎಂದರು. ಒಲ್ಲದ ಗಂಡನಿಗೆ ಮೊಸರಿನಲ್ಲಿ ಕೂಡಾ ಕಲ್ಲೇ. 'ಇವರನ್ನು ನಿಲ್ಲಿಸಿದುದೇನೋ ಆಯಿತು; ಆದರೆ ಮತ ಬಿದ್ದಾವೋ ಇಲ್ಲೋ; ಇವರನ್ನು ಯಾರೂ ಅರಿಯರಲ್ಲ' ಎಂಬ ಹೆದರಿಕೆ ಕಾಂಗ್ರೆಸ್ಸು ಕಾರ್ಯಕರ್ತರಿಗೂ ಇಲ್ಲದಿರಲಿಲ್ಲ.

ಅದು ನಿಜ. ಚುನಾವಣೆಗಳಿಗೆ ಮೊದಲು ಒಂದೆರಡು ಪ್ರಸಂಗ ನಡೆಯದೆ ಇದ್ದಿದ್ದರೆ ಆ ಹೆದರಿಕೆ ಹಣ್ಣೇ ಆಗಬಹುದಾಗಿತ್ತೋ ಏನೋ! ರಾಜಮಹೇಂದ್ರಕ್ಕೆ ಆ ನಡುವೆ ಜವಾಹರಲಾಲರು ಬಂದರು. ಅವರು ಬಂದಾಗ ವಿಶಾಲವಾಗಿರಲೆಂದು ಕಾಂಗ್ರೆಸು ಸಮಿತಿಯವರು ಅಲ್ಲಿಯ ಕಾಗದದ ಕಾರಖಾನೆಯ ಯಜಮಾನನಾದೊಬ್ಬ ಜಮೀನುದಾರನ ಮನೆಯಲ್ಲಿ ಬಿಡಾರಕ್ಕೆ ಏರ್ಪಾಡು ಮಾಡಿದರು. ರೈಲಿನಿಂದ ಇಳಿದವರೇ ಜವಾಹರರು ಬಿಡಾರ ಸುದ್ದಿ ವಿಚಾರಿಸಿದರು. ಇದು ಕೇಳಿ 'ರಾಜಾರಾವು ಈ ಊರಲ್ಲೇ ಅಲ್ಲವೆ ಇರುವುದು?' ಎಂದು ಕೇಳಿದರಂತೆ. ಹೌದೆಂದು ಯಾರೋ ಹೇಳಿದರು. 'ಹಾಗಾದರೆ ಅಲ್ಲೇಕೆ ಇಳಿಯುವ ಏರ್ಪಾಟು ಮಾಡಲಿಲ್ಲ?' ಎಂದು ಮತ್ತೆ ಕೇಳಿದರು. 'ಅವರ ಮನೆಯಲ್ಲಿ ಸ್ಥಳ ಬಹಳ ಸಂಕೋಚ. ತಮಗೆ ಅಸೌಕರ್ಯವಾದೀತೇನೋ ಎಂದು ಹೀಗೆ ಮಾಡಿದೆ' ಎಂದು ಏರ್ಪಾಟು ಮಾಡಿದ್ದವರು ಹೇಳಿದರು. ಕೂಡಲೆ ಜವಾಹರರು ತೀವ್ರತೆಯಿಂದ 'ಇದ್ದಷ್ಟೇ ಸ್ಥಳ ಸಾಕು ನನಗೆ. ರಾಜಾ-ರಾವೇ ತನ್ನ ಮನೆಯಲ್ಲಿ ಸ್ಥಳವಿಲ್ಲೆಂದರೆ ನೋಡೋಣ. ಇಲ್ಲದಿದ್ದರೆ ನಾನು ಅಲ್ಲೇ ಇಳಿಯುತ್ತೇನೆ' —ಎಂದರಂತೆ. ರಾಜಾರಾವು ಈ ಅಭ್ಯಾಗತನನ್ನು ಬೇಡವೆಂದಾರೆ! ಇಬ್ಬರೂ ಒಂದು ಓರಗೆಯವರು.

ಬಹಳ ಕಾಲ ಒಟ್ಟಿಗೆ ಕೆಲಸಮಾಡಿದವರು. ಒಂದೇ ಕುಟುಂಬದವರಂತೆ ಇದ್ದವರು.

ಕೆಲವು ದಿನದ ಮೇಲೆ ಸರೋಜಿನಿ ಅಲ್ಲಿಗೆ ಬಂದಳು. ಊರಲ್ಲಿ ಸಭೆ ಸೇರಿತು. ರಾಜಾರಾವು ಊರಲ್ಲಿರಲಿಲ್ಲ. ಓಟಿನ ಬೇಟೆಗೆ ಬಿಜಗೈದಿದ್ದರು. ಆ ಸಭೆಯಲ್ಲಿ ಸರೋಜಿನಿ ಅವರನ್ನು ಹೊಗಳಿದುದು ಉತ್ಪ್ರೇಕ್ಷೆಯೇನೋ ಎಂಬ ಹಾಗಿತ್ತು.

ಕಡೆಗೆ ರಾಜಾರಾವು ಗೆದ್ದರು; ಎಲ್ಲರಿಗಿಂತ ಮೊದಲನೆಯವರಾಗಿ ಗೆದ್ದರು.

'ರಾಜಕಾರಣವು ಮಧ್ಯಮ ಜಾತಿಯ ಸಾಧನೆ'—Politics is second best—ಎಂದು ರಾಧಾಕೃಷ್ಣನ್ ಒಮ್ಮೆ ಹೇಳಿದರು. 'ರಾಜಕೀಯದಲ್ಲಿ ಧರ್ಮ-ನೀತಿಗಳ ಗೊಂದಲವೇಕೆ?' ಎಂದು ಶ್ರೀನಿವಾಸಯ್ಯಂಗಾರ್ಯರೂ ಸುಭಾಷಬಾಬುವೂ ಹೇಳುತ್ತಲೇ ಇದಾರೆ. ಕರಟಕ-ದಮನಕರಾಗದೆ ರಾಜ್ಯಾಂಗ ನಿರ್ವಹಣ ಸಾಧ್ಯವಿಲ್ಲವೆಂಬ ಸಂಪ್ರದಾಯವೂ ನಮ್ಮಲ್ಲಿದೆ. ಈ ಎಳೆಗಳನ್ನು ಜೋಡಿಸಿ ಬಾಳನ್ನು ನೇಯುವುದಾದರೆ ರಾಜಾರಾವು ಗಾಂಧೀಜಿಗಿಂತಲೂ ಗೂಢಪ್ರಶ್ನೆಯೇ ಸರಿ.

ಕರಟಕಶಾಸ್ತ್ರಿಯ ಬ್ರಹ್ಮಾಸ್ತ್ರವಾದ 'ನುಡಿಜಾಣತನ' ಇವರಲ್ಲಿ ಇರಲಿಲ್ಲ. 'ನಡೆ ಬೇರೆ ನುಡಿ ಬೇರೆ ಮನವ ಶಿವನೇ ಬಲ್ಲ' ಎಂಬ ಹಾದಿ ಇವರದಲ್ಲ. ರಾಮಬಾಣಕ್ಕಿದ್ದಂತೆ ಇವರಿಗೆ ತ್ರಿಕರಣ ಲಕ್ಷ್ಯಶುದ್ಧಿ. 'ಸಿಕ್ಕರೆ ಮುಡಿ ಸಿಗದಿರೆ ಅಡಿ' ಎಂಬ ನಡೆಜಾಣರೂ ಅಲ್ಲ. ಸದಾ ಸ್ವತಂತ್ರವೃತ್ತಿ. ಒಬ್ಬರಿಗೆ ಅಡಿಯಾಳಾಗಿ ಬಾಳುವುದು ಅವರ ಸ್ವಭಾವದಲ್ಲೇ ಇರಲಿಲ್ಲ. ಮಾತಿನಲ್ಲಿ ವಿಲಕ್ಷಣ ರಾಜಸ. ಹಿರಿಯರಾಗಲಿ ಕಿರಿಯರಾಗಲಿ ಮಾತನಾಡಿದರೆ ಅಧಿಕಾರವಾಣಿಯೇ. ನುಡಿಯಲ್ಲಿ ನಿರ್ದಾಕ್ಷಿಣ್ಯ. ಪ್ರಿಯವಿರಲಿ ಅಪ್ರಿಯವಿರಲಿ ತಮ್ಮ ಅಭಿಪ್ರಾಯವನ್ನು ಅವರವರ ಮೇರೆಗೇ ಗಂಟೆಬಾರಿಸಿದಂತೆ ಅನ್ನುವುದೇ. ಜವಾಹರರಂಥವರು 'ರಾಜಾರಾವು ಇಷ್ಟು ನಿಷ್ಕಪಟನಾದರೆ ನಡೆಯುವುದಿಲ್ಲವಯ್ಯ' ಎಂದು ಇವರಿಗೆ ಬುದ್ಧಿಹೇಳುತ್ತಿದ್ದರಂತೆ.

ಒಮ್ಮೆ ರಾಜಾರಾವು ಕಲಕತ್ತೆಗೆ ಹೋಗಿದ್ದರು. ಅಲ್ಲಿ ಚಿತ್ತರಂಜನ ದಾಸರ ಮನೆಯಲ್ಲೇ ಇವರ ಬಿಡಾರ. ಆ ಮಾತು ಈ ಮಾತು ಆಡುತ್ತ ಕಲಕತ್ತೆಯ ರಾಮಕೃಷ್ಣಮಠದ ಬಗ್ಗೆ, ಪರಮಹಂಸರ ಶಿಷ್ಯರ ಬಗ್ಗೆ ಇವರು ಪ್ರಸ್ತಾಪಮಾಡಿದರು. ದಾಸರು ಬಿಡುವಾದರೆ ತಾವೂ ಮಠ ವನ್ನು ನೋಡಬೇಕೆಂದು ಬಯಸಿದರಂತೆ. 'ಇಷ್ಟು ದಿನದಿಂದ ಇದೇ ಊರಿನಲ್ಲಿದ್ದು ಈ ಮಠದ ಬಗ್ಗೆ ನೀವು ಕೇಳಲೇ ಇಲ್ಲವೇ; ಆಶ್ಚರ್ಯ!' ಎಂದರಂತೆ ಇವರು. ರಾಜಾರಾವಲ್ಲದೆ ಬೇರೆಯವರಾಗಿದ್ದರೆ ಹೀಗೆ ಅನ್ನುತ್ತಿದ್ದರೆ? ಆದರೆ ರಾವಿನ ಚರಿತ್ರೆ ಅಕಳಂಕವಾದುದು. ಅದೇ ಅವರ ಸರ್ವಸ್ವ.

ರಾಮಕೃಷ್ಣ ಪರಮಹಂಸರ ಮಾತು ಬಂತು. ರಾಜಾರಾವಿಗೆ ಪರಮಹಂಸರಲ್ಲಿ ಅನನ್ಯಭಕ್ತಿ. ಇವರ ಕಾಲೇಜು ಓದು ಕಲಕತ್ತೆಯಲ್ಲಿ ಆಯಿತು. ಆಗ ಇವರಿಗೆ ರಾಮಕೃಷ್ಣ ಮಠದ ಸನ್ಯಾಸಿಗಳ ಸಾಂಗತ್ಯ ದೊರೆಯಿತು. ಆಗ ಇನ್ನೂ ಪರಮಹಂಸರ ಹೆಂಡತಿ ಶಾರದಾಮಣಿದೇವಿ ಬದುಕಿದ್ದಳು. ಪರಮಹಂಸರ ಶಿಷ್ಯರಲ್ಲಿ ವಿವೇಕಾನಂದರ ನಂತರ ಹೇಳ ಬಹುದಾದ ಸ್ವಾಮಿ ಬ್ರಹ್ಮಾನಂದರು (ರಾಖಾಲ) ಮಠಕ್ಕೆ ಹಿರಿಯರು. ಇವರಿಬ್ಬರನ್ನೂ ರಾಜಾರಾವು ಚೆನ್ನಾಗಿ ಬಲ್ಲರು. ಉಳಿದ ಶಿಷ್ಯರೂ ಇವ ರನ್ನು ಅಕ್ಕರೆಯಿಂದ ಕಾಣುತ್ತಿದ್ದರು. ರಾಮಕೃಷ್ಣ ಪರಮಹಂಸರೆಂದರೆ ರಾವಿಗೆ ಭಗವದವತಾರವೆಂದೇ ನಂಬುಗೆ. ಕಾಂಗ್ರೆಸ್ ಕೆಲಸದಲ್ಲಿ ಸ್ವಲ್ಪ ಬಿಡುವು ದೊರೆತರೆ ಸಾಕು, ಇವರು ಮಠಕ್ಕೆ ಓಡಿಹೋಗುತ್ತಿದ್ದರು.

ಆ ನಂಬಿಗೆಯೇ ಅವರ ಬಾಳಿನ ಭಂಡಾರ. ಅದೇ ಅವರ ತಾರಕ ಮಂತ್ರ.

'ಪರಿಸ್ಥಿತಿ ಅನುಕೂಲವಾಗಿಲ್ಲವಲ್ಲ' ಎಂದು ಅವರ ಗೆಳೆಯರು ಪೇಚಾಡಿದರೆ 'ಏಕೆ ಅಂಜಬೇಕು? ಎಲ್ಲಕ್ಕೂ ಠಾಕೂರು ಇದ್ದಾನೆ' ಎಂದು ಧೈರ್ಯವಾಗಿ ಹೇಳುತ್ತಿದ್ದರಂತೆ. ರಾಮಕೃಷ್ಣರನ್ನು ಬಂಗಾಲದಲ್ಲಿ ಠಾಕೂರ್ ಎಂದು ಕರೆಯುತ್ತಾರೆ. ಠಾಕೂರ್ ಎಂದರೆ ದೇವರು. ಆ ನಂಬಿಗೆಯಿಲ್ಲದೆ ಬಾಳಿನಲ್ಲಿ ರಾಜಾರಾವು ತೋರಿಸಿದ ಧೈರ್ಯ ತೋರುವುದು

ಸಾಧ್ಯವಿಲ್ಲ. ಇವರ ಕುಟುಂಬ ದೊಡ್ಡದು. ಮನೆತುಂಬ ಮಕ್ಕಳು. ನಲವತ್ತಾರನೆಯ ವಯಸ್ಸಿನಲ್ಲಿ ಕಾಂಗ್ರೆಸ್ ಕಾರ್ಯದರ್ಶಿಯ ಉದ್ಯೋಗ ಬಿಟ್ಟರು. ಬಿಟ್ಟಾಗ ಏನಿದೆ? ಒಂದು ಕಾಸೂ ಇಲ್ಲ. ಚುನಾವಣೆಗೆ ನಿಲ್ಲಬೇಕಾಯಿತಲ್ಲ; ದುರ್ಭಿಕ್ಷ್ಯದಲ್ಲಿ ಅಧಿಕಮಾಸ. ಯಾರೂ ಒಂದು ಕವಡೆ ಕೊಡಲಿಲ್ಲ. ಸಾಲಮಾಡಬೇಕಾಯಿತು. ಹೀಗಿದ್ದರೂ ಅವರು ಎಂದೂ ಮೋರೆ ಗಂಟಿಕ್ಕಲಿಲ್ಲ. ಅದರಲ್ಲಿ ಸುಕ್ಕು ಕಾಣುತ್ತಿರಲಿಲ್ಲ. ಮುಂದೇನು ಎಂಬ ತಾಕಲಾಟವಿಲ್ಲ. ಯಾವಾಗಲೂ ಮುಗುಳು ಸೂಸುತ್ತ ಮಾತ-ನಾಡುತ್ತಿದ್ದರು. ಸದಾ ವಿನೋದವಾಗಿ ಏನಾದರೊಂದು ಮಾತು ಆಡುವರೇ ಹೊರತು, ಕೊರಗು-ಕಷ್ಟದ ಮಾತಿಲ್ಲ. ನಿರುತ್ಸಾಹವೆಂಬುದೇ ಅವರಿಗೆ ಗೊತ್ತಿರಲಿಲ್ಲ.

ಬರೀ ಒಣನಂಬಿಗೆಯ ಬಾಳಲ್ಲ ಅವರದು. ನಿರಂತರವೂ ಅವರ ಆಧ್ಯಾತ್ಮ ಸಾಧನೆ ನಡೆದಿತ್ತು. ಅವರಿಗೆ ಕೆಲವು ವಿಲಕ್ಷಣ ಅನುಭವಗಳೂ ಆಗಿದ್ದುವೆಂದು ತಿಳಿದಿದೆ. ಅಲಹಾಬಾದಿನಲ್ಲಿದ್ದಾಗ ಒಮ್ಮೆ ಇವರಿಗೆ ಆಮಶೌಚಕ್ಕೆ ಇಟ್ಟುಕೊಂಡಿತು. ಒಂದೊಂದು ಸಲ ಬರೀ ರಕ್ತವೇ ಬರುತ್ತಿತ್ತು. ಎಲ್ಲರೂ ಇವರ ಆಸೆ ಬಿಟ್ಟರು. ತಾವೇ ಸ್ವತಃ ಆಸೆಬಿಟ್ಟುಕೊಂಡರಂತೆ. ಆಗ, ರಾತ್ರಿ ಪರಮಹಂಸರ ದಿವ್ಯದರ್ಶನ ಇವರ ಭಾವದೃಷ್ಟಿಗೆ ಆಗಿ, ಪರಮಹಂಸರು ಇವರಿಗೆ ಅಭಯಕೊಟ್ಟರಂತೆ. ಮರುದಿನವೇ ಗುಣಮುಖವಾಯಿತಂತೆ. ಇಂಥವು ಹಲವಾರು ಅನುಭವಗಳು.

ಭಾವಸಮಾಧಿ, ದಿವ್ಯದರ್ಶಗಳನ್ನೂ ಇಂಥ ಅನುಭವಗಳನ್ನೂ ನಂಬುವವರುಂಟು, ನಂಬಿದವರೂ ಉಂಟು. ನಂಬಲಿ ಬಿಡಲಿ, ಈ ಅನುಭಾವಿಜೀವದ ಪವಿತ್ರತೆಯನ್ನೂ ಆಧ್ಯಾತ್ಮ ಪಿಪಾಸೆಯನ್ನೂ ಅರಿತು ಕೊಳ್ಳಲಾರದವರುಂಟೇ? ವಿಶ್ವದ ಸತ್ಯಶೋಧನೆಯ ಹಾದಿಯಲ್ಲಿ ಇಂಥ ಜೀವಿಗಳು ಬೆಳಗಿಸಿದ ಆತ್ಮಜ್ಯೋತಿಗಳು ಮಾನವಕೋಟಿಗಾಗಿ ಹಚ್ಚಿ ಹಣತೆಗಳೆಂದು ತಿಳಿಯದವರುಂಟೆ?

ರಾಜಾರಾವು ಬಹಳ ಅನುಭವಶಾಲಿ. ಕಾಂಗ್ರೆಸ್ಸಿನ ಮುಂದಿ ಕಾರ್ಯರಂಗದಲ್ಲಿ ಅವರಿಂದ ಬಹಳ ಕೆಲಸವಾಗಬೇಕು. ನಾಡಿಗೆ ನಾಡೆ

ಹೀಗೆ ಬಯಸಿ ಕೂತಿತ್ತು. ಆದರೆ ನಾಡಿನ ಕೋರಿಕೆ ಈಡೇರಲಿಲ್ಲ. ಶಾಸನ ಸಭೆಗೆ ಆರಿಸಿಬಂದ ವರ್ಷದೊಳಗಾಗಿಯೇ ರಾಜಾರಾವು ಅಮರರಾದರು. ಅವರು ಕೀರ್ತಿಕಾಯರಾಗುವ ಮೊದಲು—೮-೧೦ ದಿನಗಳು ಮುಂಚೆ—ಅವರಿಗೆ ಭಾವಸಮಾಧಿಯೊಂದಾಗಿ, ಅದರಲ್ಲಿ ಒಂದು ಉರಿಯುತ್ತಿದ್ದ ಚಿತೆಯೂ ಅದರ ಪಕ್ಕದಲ್ಲೇ ಕೊಳಲೂದುತ್ತ ನಿಂತ ಕೊಳಲಕೃಷ್ಣನೂ ಕಂಡರಂತೆ.

# ಮೌಲಾನಾ ಅಬುಲ್ ಕಲಾಮ್ ಆಜಾದ್

●

'ತಮ್ಮೀಂ ಗಿರ್‌ಗಯಿ, ತಜ್‌ವೀಜ್ ಮಂಜೂರ್'

ತ್ರಿಪುರಿಯ ಕಾಂಗ್ರೆಸಿನಲ್ಲಿ ವೇದಿಕೆಯಿಂದ ಬಾರಿಬಾರಿಗೆ ಈ ಮಾತು ಕೇಳಿಬರುತ್ತಿದ್ದುವು. ದಕ್ಷಿಣದೇಶದ ದ್ರಾವಿಡರಿಗಂತೂ ಅದರ ಅರ್ಥವೇ ಆಗುತ್ತಿರಲಿಲ್ಲ. ಉತ್ತರದವರಲ್ಲೂ ಉರ್ದು ಸಂಪರ್ಕವಿಲ್ಲದ ಶುದ್ಧ ಹಿಂದೀ ಜನಕ್ಕೂ ಅಷ್ಟೇ. 'ಸವರಣೆ ಬಿದ್ದುಹೋಯಿತು. ಗೊತ್ತುವಳಿ ತೀರ್ಮಾನವಾಯಿತು' ಎಂದು ಅದರ ಅರ್ಥ. ತ್ರಿಪುರಿಯಲ್ಲಿ 'ತಮ್ಮೀಂ'ಗಳ ಸಮಾರಾಧನೆಯೇ ನಡೆದಿತ್ತು. ಕಾಂಗ್ರೆಸ್ಸು ಮುಗಿಯುವುದರೊಳಗಾಗಿ ಪ್ರತಿನಿಧಿಗಳಿಗೆ ಆ ಮಾತು ಬಾಯಿಪಾಠ. ಈ ಉತ್ಸಾಹ-ವಿನೋದಗಳಲ್ಲಿ ಗೊತ್ತುವಳಿಗಳ ಅದೃಷ್ಟ ಶ್ರವಣವು ಒಮ್ಮೆಯಾದರೂ ಇಂಗ್ಲೀಷಿನಲ್ಲಿ ಆಗಲಿಲ್ಲವೆಂಬ ಮಾತು ಜನರ ಗಮನಕ್ಕೆ ಬರಲಿಲ್ಲ.

ತ್ರಿಪುರಿಯಲ್ಲಿ ಮೌಲಾನಾ ಆಜಾದರೇ ಅಧ್ಯಕ್ಷರ ಕೆಲಸವನ್ನು ನಡೆಸಿದರು. ಮಾಜಿ ಅಧ್ಯಕ್ಷರ ಪರಂಪರೆಯಲ್ಲಿ ಅಲ್ಲಿದ್ದವರಲ್ಲಿ ಅವರೇ ಮೊದಲಿನವರು. ಆದ್ದರಿಂದ ಅವರಿಗೆ ಆ ಕೆಲಸ ಬಂತು. ತೀರ್ಮಾನಗಳನ್ನು ಸವರಣೆಗಳನ್ನು ಪ್ರತಿನಿಧಿಗಳ ಮತಕ್ಕೆ ಗುರಿಮಾಡಿ ಫಲವನ್ನು ಹೇಳುವ ಕೆಲಸ ಅವರದಾಗಿತ್ತು. ಅವರಿಗೆ ಇಂಗ್ಲೀಷು ಸರಿಯಾಗಿ ಬಾರದೆಂಬ ವಿಷಯ ಎಲ್ಲರಿಗೆ ತಿಳಿದದ್ದು ಆಗಲೇ.

ಆದರೂ ಆಜಾದರು ಇಂದು ರಾಷ್ಟ್ರಪತಿಯಾಗಿದ್ದಾರೆ. ಮೆಕಾಲೆ ಸಾಹೇಬನ ಗುಲಾಮಗಿರಿವಿದ್ಯೆಗೆ ಹಿಂದುಸ್ಥಾನವು ತೋರಿಸುವ ಗೌರವಕ್ಕೆ ಗುರುತು ಇದು. ಇಂಗ್ಲೀಷು ಈಗಿನ ಯುಗದ ದೇವಭಾಷೆ ಎಂಬ ನಮ್ಮ ಜನಕ್ಕೆ ಉತ್ತರವೂ ಹೌದು.

ಹಿಂದೂ ಮುಸ್ಲಿಮರು ಒಂದು ಜನವಲ್ಲ. ಇಬ್ಬರೂ ಬೇರೆ ಬೇರೆ ಸೃಷ್ಟಿ. ಮೂಡಲ ಪಡುವಲ ಭೇದ ಅದು. ಅಳಿಸಲಾರದ ಭೇದ ಕಳೆಯಲಾರದ ಭಿನ್ನತೆ–ಎಂದು ಜಿನ್ನಾ ಇಂದು ವಾದಿಸುತ್ತಿದ್ದಾರೆ. ಈ ವಾದ ಇಂದಿನದಲ್ಲ. ಅಲಿಘರ್ ಚಳವಳಿ ಈ ವಾದದ ಆಕಾರ. ಈ ವಾದ ಭ್ರಾಂತಿ ಜನ್ಯವೆಂದೂ ಆತ್ಮವಿಘಾತಕವೆಂದೂ ಆಜಾದರು ಮೊದಲಿನಿಂದ ವಾದಿಸುತ್ತಿದ್ದಾರೆ. ನಾಡಿನಲ್ಲಿ ಆ ದೃಷ್ಟಿ ಅವರ ಕೃಷಿಯಿಂದ ಹರಡುತ್ತಿದೆ. ಅವರ ಜೀವನ ಈ ದೃಷ್ಟಿಪ್ರಸಾರಕ್ಕೆ ಐಕ್ಯಸಾಧನೆಗೆ ಮೀಸಲಾಗಿದೆ. ಇಷ್ಟು ದಿನ ಒಳಗೊಳಗೇ ಹರಿಯುತ್ತಿದ್ದ ಈ ವಿಷಭಾವನೆ–ಜಿನ್ನಾ ಸಾಹೇಬರ ಪುಣ್ಯದಿಂದ ಬಯಲಿಗೆ ಬಂದಿದೆ. ಬೇತಾಳನಂತೆ ಕುಣಿಯುತ್ತಿದೆ. ಇಂಥ ಸಂದರ್ಭದಲ್ಲಿ ನಾವೆಲ್ಲ ಒಂದು ಒಂದೆ ಮೂಗಿನ ಎರಡು ಹೊಳ್ಳೆ ಎಂದು ಮೂವತ್ತು ವರ್ಷದಿಂದ ಡಾಣಾ ಡಂಗುರವಾಗಿ ಸಾರುತ್ತಿರುವ ಆಜಾದರು ರಾಷ್ಟ್ರಪತಿಯಾದುದು ಆ ವಾದದ ಭರತವಾಕ್ಯವೇ ಸರಿ. ಜನ ಆಜಾದರನ್ನು ಅದಕ್ಕಾಗಿ ಆರಿಸಿಲ್ಲ ಆ ಪದವಿಗೆ. ಅವರಿಗೆ ಅದು ಸದಾ ತೆರವೇ ಇತ್ತು. ಆಜಾದರೆ ಆ ಕಾರ್ಯವಿಧಿಗಾಗಿ ಮುಂದೆ ಬಂದು ಪೌರೋಹಿತ್ಯವನ್ನು ಹೂಡಿದ್ದಾರೆ.

ಆಜಾದರು ರಾಷ್ಟ್ರಪತಿಯಾದುದು ಇದೇ ಮೊದಲ ಸಲವಲ್ಲ ೧೭ ವರ್ಷದ ಕೆಳಗೆಯೇ ಅವರಿಗೆ ಆ ಗೌರವ ಸಂದಿತ್ತು. ಆಗಲೂ ಇಂಥದೇ ಸಂದರ್ಭ. ಕಾಂಗ್ರೆಸ್ಸಿಗೆ ನಾಡಿಗೆ ಈಗಿದ್ದಂತೆ ವಿಷಮುಪರೀಕ್ಷೆ. ಈಗ ಪರಯೂಧ ಕಲಹ ಬಾಯಿ ತೆರೆದ ಹುಲಿಯಂತೆ ಇದರಿಗೆ ಕೂತಿದೆ. ಹುಲಿಯ ಬಣ್ಣಕ್ಕೆ ಹೆದರದಿದ್ದರೂ ಉಗುರಿನ ಗಾಯದ ಪರಿಚಯ ನಾಡಿನಲ್ಲಿ. 'ನಾವು ನೂರಲ್ಲ, ನೂರಾಐದು ಜನ' ಎಂಬ ಭಾವನೆ ಹರಡೀತು. ೧೯೨೩ರಲ್ಲಿ ಕಾಂಗ್ರೆಸ್ಸು ಸ್ವಯೂಧಕಲಹದ ಯಾದವೀ ಆಟದಲ್ಲಿ ಮುಳುಗಿ ಹೋಗಿದ್ದಿತು. ಈಗ ಸಿಂಹದ ಮರಿ ಇದಿರಾಟವಾಡುತ್ತಿದ್ದರೆ ಆಗ ಬಂಗಾಲದ ಸಿಂಹವೇ ಕೆರಳಿನಿಂತಿತು.

೧೯೨೨ರಲ್ಲಿ ಗಯಾ ಕ್ಷೇತ್ರದಲ್ಲಿ ಕಾಂಗ್ರೆಸ್ಸು. ಕಾಂಗ್ರೆಸ್ಸಿನಲ್ಲಿ ಇಬ್ಭಾಗವಾಗಿತ್ತು. ಗಾಂಧೀ ಪಕ್ಷವೊಂದಾದರೆ ಸ್ವರಾಜ್ಯ ಪಕ್ಷವೊಂದು. ಬಂಗಾಲದ ಸಿಂಹ ಚಿತ್ತರಂಜನದಾಸರು, ತಮ್ಮ ಸ್ವರಾಜ್ಯ

ಪಕ್ಷದ ಶಾಸನಸಭಾ ಪ್ರವೇಶದ ತತ್ತ್ವವನ್ನು ಪ್ರತಿಪಾದಿಸಿ, ಕಾಂಗ್ರೆಸ್ಸನ್ನೊಪ್ಪಿಸಲು ಬಹಳ ಹೋರಾಡಿದರು. ಅಮಾತ್ಯ ರಾಜಗೋಪಾಲಾಚಾರ್ಯರ ಇದಿರು ಅವರ ಬಾಣ ನೆಡಲಿಲ್ಲ. ಆದರೆ ಮನಸ್ಸುಗಳು ಮಾತ್ರ ಗಾಯಗೊಂಡುವು. ಕಾಂಗ್ರೆಸ್ಸಿನ ಗತಿ ಕುಂದಿತು. ಆಗ ಗಾಂಧೀಜೀ ಸೆರೆಮನೆಯಲ್ಲಿದ್ದರು. ಅತ್ತೊಂದು ಇತ್ತೊಂದು ಎಳೆಯುವ ಕುದುರೆಗಳು ಈ ಕಾಂಗ್ರೆಸ್ಸಿನ ಸಾರಥ್ಯವನ್ನು ಯಾರು ಮಾಡಬಲ್ಲರು? ನಮ್ಮಲ್ಲಿ ಸಂಧಾನಚತುರರು ಯಾರು? ಎಲ್ಲರ ತಲೆಯಲ್ಲೂ ಇದೇ ವಿಚಾರ; ಎಲ್ಲರ ಬಾಯಲ್ಲೂ ಇದೇ ಪ್ರಶ್ನೆ.

ಮರುವರ್ಷ ದೇಹಲಿಯಲ್ಲಿ ಕಾಂಗ್ರೆಸ್ಸಿನ ವಿಶೇಷಾಧಿವೇಶನ ನೆರೆದಾಗ ಜನ ಆ ಸಾರಥಿಯನ್ನು ಕಂಡುಕೊಂಡಿತು. ದೆಹಲಿಯಲ್ಲಿ ೧೯೨೩ರಲ್ಲಿ ನಡೆದುದು ಕ್ರಾಂಗ್ರೆಸ್ಸಲ್ಲ; ನಿಜವಾಗಿ ಅದೊಂದು ಸಂಧಾನಸಭೆ. ಆ ಸಂದರ್ಭದಲ್ಲಿ ಎಲ್ಲರ ಕಣ್ಣಲ್ಲೂ ಬೆಳಗಿದ ಮೂರ್ತಿ ಮೌಲಾನಾ ಆಜಾದರದು. ಆಗ ಹಿಂದುಸ್ಥಾನದ ಜನ—ನಾವು—ಇನ್ನೂ ರಾಷ್ಟ್ರವಾಗಿರಲಿಲ್ಲ. ಗಾಂಧೀಜಿಯ ತಪಸ್ಸು ಇನ್ನು ಮೊಳಕೆಯಲ್ಲಿತ್ತು. ಅಂತೇ ಮೌಲಾನಾ ಅಂದು ಬರೀ ಅಧ್ಯಕ್ಷರಾಗಿದ್ದರು. ಇಂದು ನಾವು ರಾಷ್ಟ್ರವಾಗಿದೇವೆ. ಕಾಂಗ್ರೆಸ್ಸಿನ ಅಧ್ಯಕ್ಷರಿಂದ ರಾಷ್ಟ್ರಪತಿ. ೧೭ ವರುಷಗಳ ಕೆಳಗೆ ಆಜಾದರು ಆ ಪೀಠವನ್ನು ಏರಿ ತಮ್ಮ ಸೌಜನ್ಯ ಸಾಮರಸ್ಯಗಳನ್ನು ಹರಿಸದೆ ಇದ್ದಿದ್ದರೆ ಕಾಂಗ್ರೆಸ್ಸಿನ ಇತಿಹಾಸ ಹೇಗೆ ಇರುತ್ತಿತ್ತೋ!

ಮೌಲಾನಾ ಹುಟ್ಟಿದಾಗ ಶಾಂತಿದೇವತೆ ನಡುನೆತ್ತಿಯಮೇಲೆ ಹೊಳೆಯುತ್ತಿದ್ದಿರಬೇಕು. ಅವರ ಬಾಳಿನಲ್ಲಿ ಶಾಂತಿ—ಸಾಮರಸ್ಯಗಳೇ ಪ್ರಧಾನ ಲಕ್ಷಣಗಳು. ಕಾಂಗ್ರೆಸ್ಸಿಗೆ ಗಾಂಧೀಜೀ ರಾಮನಾದರೆ ಮೌಲಾನಾ ವಿಭೀಷಣ. ವಿಭೀಷಣ ಪಟ್ಟಾಭಿಷೇಕವು ರಾಮರಾಜ್ಯದ ಸಂಕಲ್ಪದ ಮೊದಲಹೆಜ್ಜೆ.

ಮೌಲಾನಾರ ಸ್ವಭಾವವೇ ಹಾಗೆ; ಅತಿ ಸರಳ. ಅವರ ಮಾತಿನಲ್ಲಿ ತರ್ಕದ ಚಾಕಚಕ್ಯವಿಲ್ಲ; ಶ್ರದ್ಧೆಯ ಗಾಂಭೀರ್ಯವಿದೆ. ಚರ್ಚೆಯಲ್ಲಿ

ಪೂರ್ವಪಕ್ಷದ ಉದ್ವೇಗವಿಲ್ಲ; ಧರ್ಮಾಧಿಕಾರಿಯಂತೆ ಶಾಸ್ತ್ರೀಯ ದೃಷ್ಟಿಯನ್ನು ತೋರುತ್ತಾರೆ. ಕಾಂಗ್ರೆಸ್ಸಿನಲ್ಲಿ ಬಿಸಿಬಿಸಿಯಾದ ಚರ್ಚೆ ನಡೆಯುತ್ತಿರುವಾಗ ವೇದಿಕೆಯ ಮೇಲೆ ಸಣ್ಣಗಾಗಿ ಟೀಕೆ-ಟೂಕೆಗಳು ನಡೆದಿರುತ್ತವೆ. ಆಜಾದರು ಲಕ್ಷ್ಯಗೊಟ್ಟು ಚರ್ಚೆಯನ್ನು ಕೇಳುತ್ತ ಆ ವಿಮರ್ಶೆಯನ್ನನುಸರಿಸುತ್ತಾರೆ. ಒಮ್ಮೊಮ್ಮೆ ಅವರ ಮೋರೆ ಕೆಂಪೇರಿ -ಮೊದಲೇ ಕೆಂಪಾದುದು-ಕೆನ್ನೈದಿಲೆಯಂತೆ ಅರಳುತ್ತದೆ. ಇಷ್ಟೆಲ್ಲ ನಡೆದರೂ ಅವರು ಉದ್ರೇಕದ ಪಾಲಾಗುವುದಿಲ್ಲ. ಅದು ಬರೀ ಉತ್ಸಾಹ ಮಾತ್ರ. 'ಕಾಶಿ ಬೊಂಬಾಯಿ' ಪಟಗಳನ್ನು ಒಂದು ಬಿಲ್ಲೆಕೊಟ್ಟು, ಕನ್ನಡಿಯೊಳಗಿಂದ ನೋಡುವ ಮಗುವಿನಂತೆ ಅವರ ಮನಸ್ಸು. ಸದಾ ಪ್ರಸನ್ನ; ಸರ್ವದಾ ಪ್ರಶಾಂತ.

ಆಜಾದರ ಈ ಪ್ರಸನ್ನ ಹೃದಯಕ್ಕೆ ಸಂಕೋಚ-ಸ್ವಾರ್ಥಗಳು ಸೇರುವುದಿಲ್ಲ. ಚಿಲ್ಲರೆ ಅಭಿಮಾನಗಳು, ಕೀಳಾದ ಮತಾವೇಶ ಅವರ ಸ್ಥೈರ್ಯವನ್ನು ಅಲುಗಾಡಿಸಲಾರವು. ಹಿಂದುಸ್ತಾನದಲ್ಲಿ ಈಚೆಗೆ ಕೆಲವು ಕಾಲದಿಂದ ಹಿಂದು-ಮುಸ್ಲಿಮ ಕಲಹ ಭಾರತ ಯುದ್ಧದಂತೆ ಕ್ರಮ ವಾಗಿ ಬೆಳೆದುಹೋಗಿದೆ. ಹಿಂದುಸ್ತಾನದ ರಾಷ್ಟ್ರೀಯತೆ-ಸಂಸ್ಕೃತಿ ಗಳ ಬೊಡ್ಡೆಗೆ ಕೊಡಲಿಯ ಪೆಟ್ಟು ಬೀಳಹತ್ತಿವೆ. ಜನರಲ್ಲಿ ಪರಸ್ಪರವಾಗಿ ಸಂಶಯ ಅವಿಶ್ವಾಸಗಳು ತುಂಬಿಹೋಗಿವೆ. ಗಾಂಧೀಜಿಯಂಥ ಮಹಾ ತ್ಮನೇ ಹಿಂದೂ-ಮುಸ್ಲಿಮ ಸೌಹಾರ್ದದ ಮಾತು ಬಂದಾಗ ನಡುಗು ತ್ತಾನೆ. ಆದರೆ ಆಜಾದರು ಮಾತ್ರ ಅಚಲಶ್ರದ್ಧೆಯಿಂದ ಅಸೀಮ ಧೈರ್ಯ ದಿಂದ ಆ ಪ್ರಯತ್ನದಲ್ಲಿ ತೊಡಗಿಕೊಂಡಿದ್ದಾರೆ; ನಮ್ಮ ಗೋಕುಲಾಷ್ಟ ಮಿಯಲ್ಲಿ ಈ ಇಮಾಮ ಸಾಹೇಬರಿಗಾಗಿ ಒಂದು ಮಣೆ ನಿರ್ಮಿತವಾಗಿದೆ.

ಹಿಂದುಸ್ತಾನದ ರಾಜಕೀಯರಂಗದಲ್ಲಿ ಈಗ ನಡೆದಿರುವ ಕಾಮನ ಹಬ್ಬದ ದಹನಸಮಾರಂಭದಲ್ಲಿ ತಮ್ಮ ಮನಸಿನ ಶಾಂತಿಯನ್ನು ಕಳೆದು ಕೊಳ್ಳದಿರಲು ಯಾರಿಗೇ ಆದರೂ ಸ್ವಲ್ಪ ಹೆಚ್ಚಿನ ಸಾಮರ್ಥ್ಯಬೇಕು. ಧರ್ಮದ ಕಡಿದಾದ ಹಾದಿಯಲ್ಲಿ ನಡೆಯದೆ ನಿಗ್ರಹದ ಕಡಿವಾಣವನ್ನು ತೊಡದೆ, ಎಲ್ಲವೂ ಭಗವದಧೀನವೆಂದು ನಂಬದೆ ಆ ಸಾಮರ್ಥ್ಯ ದೊರೆ ಯದು. ಆಜಾದರು ಮುಸ್ಲೀಮರಲ್ಲಿ ಹೆಸರಾದ ಧರ್ಮಶಾಸ್ತ್ರವೇತ್ತರು.

ಅವರ ಹಾಗೆ ಇಸ್ಲಾಮು ಧರ್ಮದ ಕಾಲಾನುಸಾರವಾಗಿ ಅನ್ವಯಮಾಡಿ ಸಮಕಾಲದ ಪ್ರಶ್ನೆಗಳನ್ನು ಬಿಡಿಸಬಲ್ಲ ಮೌಲಾನಾ ಹಿಂದುಸ್ತಾನದಲ್ಲಿ ಮತ್ತೊಬ್ಬರಿಲ್ಲ. ಇಸ್ಲಾಮಿ ಧರ್ಮದ ಮೂಲಸ್ಥಳದಲ್ಲೇ ಅವರಿಗೆ ಧರ್ಮದೀಕ್ಷೆಯಾಗಿದೆ. ಅವರು ಹುಟ್ಟಿದುದೇ ಮಹಮ್ಮದೀಯರ ಮಹಾಕ್ಷೇತ್ರದಲ್ಲಿ, ಮಕ್ಕಾದಲ್ಲಿ. ಆ ಪವಿತ್ರ ಸನ್ನಿವೇಶದಲ್ಲೇ ಅವರು ಪೈಗಂಬರನ ನಿಜಹೃದಯವನ್ನೂ ಇಸ್ಲಾಮಿ ಧರ್ಮದ ನಾಡಿಯನ್ನೂ ಕಂಡುಕೊಂಡರು. ಮುಂದೆ ಈಜಿಪ್ಟ ದೇಶದಲ್ಲಿ ಅವರ ಧಾರ್ಮಿಕ ವಿದ್ಯಾನಿಲಯದಲ್ಲಿ ಅವರ ಶಿಕ್ಷಣ ನಡೆಯಿತು. ಇಸ್ಲಾಮಿ ತತ್ತ್ವ ಶಾಸ್ತ್ರ-ನ್ಯಾಯಶಾಸ್ತ್ರಗಳಲ್ಲಿ ಮೇಲ್ತರಗತಿಯ ಪಾಂಡಿತ್ಯ ಗಳಿಸಿದರು. ಆ ತಳಹದಿಯ ಮೇಲೆ ಅಲ್ಲಾಭಕ್ತಿ, ವಿಶ್ವಪ್ರೇಮಗಳಿಂದ ಕಟ್ಟಿದ ಭವ್ಯ ಜೀವನ ಅವರ್‍ದು.

ಕಳೆದ ವರ್ಷ ಹೈದರಾಬಾದಿನಲ್ಲಿ ಆರ್ಯಸಮಾಜದ ಧಾರ್ಮಿಕ ಸತ್ಯಾಗ್ರಹ ನಡೆದುದು ಇತಿಹಾಸಪ್ರಸಿದ್ಧವಾಗಿದೆ. ಹೇಗೋ ಏನೋ ಅದಕ್ಕೆ ಜಾತಿದ್ವೇಷದ ಹಿಂದೂ-ಮುಸ್ಲಿಮ ಜಗಳದ ಬಣ್ಣ ಕೊಡಲ್ಪಟ್ಟಿತು. ಹಿಂದುಸ್ತಾನದ ಮೂಲೆ ಮೂಲೆಗಳಿಂದಲೂ ಅದು ಹಿಂದುಗಳ ಒಳಸಂಚು ಎಂಬ ಗುಲ್ಲು ಕೇಳಿಬಂತು. ಆ ಸತ್ಯಾಗ್ರಹದಲ್ಲಿ ಏನಾದರೂ ತಿರುಳುಂಟೇ ಎಂಬ ಪ್ರಶ್ನೆಯೇ ಮುಸ್ಲಿಮ ನಾಯಕರ ತಲೆಯಲ್ಲಿ ಸುಳಿಯಲಿಲ್ಲ. 'ಸರಿ ಇದ್ದರೆ ನೀನು ಸೋತೆ, ಬೆಸನಾದರೆ ನಾನು ಗೆದ್ದೆ'—Head I win, Tail you loose- ಎಂಬ ಚಕ್ರತರ್ಕ ಅದು. ಮೌಲಾನಾ ಆಜಾದರೊಬ್ಬರು – ಅವರೊಬ್ಬರೆ- ಆ ಸತ್ಯಾಗ್ರಹವನ್ನು ಹರಿಸಿ ಬೆಂಬಲ ನೀಡಿದ 'ಕಾಫಿರರು'.

ಈ ಧರ್ಮಪರಾಯಣತೆ, ನಿಷ್ಪಕ್ಷಪಾತಗಳು ಉಳಿದ ಜನರಲ್ಲಿ ಕೊಂಚಮಟ್ಟಿಗಾದರೂ ಆದರಕ್ಕೆ ಪಾತ್ರವಾದವು. 'ಎಡಗೈಯಲ್ಲಿ ಕೊರಾನು ಬಲಗೈಯಲ್ಲಿ ಕತ್ತಿ' ಹಿಡಿದು 'ಸಾರೇ ಜಗತ್‌ಕೊ ಇಸ್ಲಾಮ ಬನಾಯೇಂಗೆ' ಎಂಬ ರಣಘೋಷವನ್ನು ನಂಬಿದ ಜನರಲ್ಲಿ ಆಜಾದರ ವಿಶಾಲತೆಗೆ ಏನು ಮನ್ನಣೆ ದೊರೆಯಬೇಕು? ಸತ್ಯಪರಮೇಶ್ವರನಾದ ಶ್ರೀರಾಮಚಂದ್ರನಿಗೆ ಜನ ಕೊಟ್ಟ ಬಹುಮಾನವೇನು? ಅಪನಿಂದೆ.

ಪರಮಜ್ಞಾನಿಯಾದ ಸಾಕ್ರೆಟೀಸನಿಗೆ ಸಿಕ್ಕ ಸನ್ಮಾನವೇನು? ಕಾಲ ಕೂಟದ ವಿಷದ ಬಟ್ಟಲು. ಆಜಾದರಿಗೂ ಬಹಿಷ್ಕಾರ, ವಿರೋಧ, ಕಾಫಿರ ಬಿರುದು ಎಲ್ಲಾ ದೊರೆತುವು. ಇವಕ್ಕೆಲ್ಲ ಅವರು ಬಗ್ಗಲಿಲ್ಲ. ಕಡೆಗೆ ಕಲಕತ್ತೆಯ ಮುಸ್ಲಿಮರು ಅವರ ಧರ್ಮಾಧಿಕಾರವನ್ನೂ ತಿರಸ್ಕರಿಸಿದರು.

ಬಕ್ರೀದ್ ಹಬ್ಬ ಮಹಮ್ಮದೀಯರಲ್ಲಿ ಮುಖ್ಯವಾದುದೊಂದು ಹಬ್ಬ; ಶೈವರಿಗೆ ಶಿವರಾತ್ರಿ, ಭಾಗವತರಿಗೆ ಗೋಕುಲಾಷ್ಟಮಿ ಇದ್ದಂತೆ. ಆ ಹಬ್ಬದಲ್ಲಿ ಸಾವಿರಾರು ಜನ ಮಹಮ್ಮದೀಯರು ತಮ್ಮ ತಮ್ಮ ಊರುಗಳಲ್ಲಿ ಸಮಾವೇಶವಾಗುತ್ತಾರೆ. ಅಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯುತ್ತದೆ. ಕಲಕತ್ತೆಯಲ್ಲಿ ಬಹಳ ದಿನಗಳಿಂದ ಆಜಾದರು ವಾಸವಾಗಿದ್ದಾರೆ. ಆ ಊರಿನ ಬಕ್ರೀದ್ ಹಬ್ಬದ ಪ್ರಾರ್ಥನೆಗೆ ಇವರೇ ಇಮಾಂ. ಎರಡು ವರ್ಷದ ಕೆಳಗೆ ಕಲಕತ್ತೆಯ ವೀರಮುಸ್ಲಿಮರು ಆಜಾದರನ್ನು ತಿರಸ್ಕರಿಸಿ ಬೇರೊಬ್ಬ ಇಮಾಂ ಸಾಹೇಬರನ್ನು ತಂದು ನಿಲ್ಲಿಸಿದರು. ಇತ್ತ ಕಡೆಯೂ ಕೆಲವು ಜನ ಇದ್ದರು. ಭದ್ರಾದ್ರಿಯಲ್ಲಿ ಭಕ್ತ ರಾಮದಾಸನನ್ನು ಅರ್ಚಕನಾಯಕರು ಗುಡಿಯಿಂದ ಹೊರಗೆ ಹಾಕಿದಂಥ ಪ್ರಸಂಗ. ರಾಮದಾಸರು ಅಲ್ಲಿ ನಡೆದಂತೆಯೇ ಆಜಾದರು ಇಲ್ಲಿ ನಡೆದರು. ಜನ ಇತ್ತಂಡವಾಗಿ ರೋಷ-ದ್ವೇಷಗಳಿಗೆ ಕಡಿವಾಣ ಕೊಟ್ಟು ದೊಂಬಿಯೆಬ್ಬಿಸಲು ಸಿದ್ಧರಾಗಿದ್ದರು. ತಮ್ಮದು ನ್ಯಾಯ, ಇದಿರಾಳಿಗಳು ಮಾಡಿದುದು ಹದಿನಾರಾಣೆ ಅನ್ಯಾಯ. ಆದರೂ ಆಜಾದರು ಆ ಪ್ರಸಂಗದಿಂದ ಸರಿದು ನಿಂತರು. ಅನ್ಯಾಯವನ್ನು ಹರ್ಷದಿಂದ ಸ್ವೀಕರಿಸಿದರು. ಹಿಂಸೆ, ಅಶಾಂತಿ, ರಕ್ತಪಾತಗಳ ಮೂಲಕ ನ್ಯಾಯ ಸಾಧಿಸುವುದು ಅವರಿಗೆ ಒಗ್ಗಲಿಲ್ಲ. ಇಮಾಂ ಪದವಿಯನ್ನೇ ತ್ಯಾಗ ಮಾಡಿದರು. ಧರ್ಮದ ಹೆಸರಿನಲ್ಲಿ ನಡೆಯಬಹುದಾಗಿದ್ದ ಧರ್ಮದ ಕೊಲೆಯನ್ನು ತಪ್ಪಿಸಿದರು. ಧರ್ಮವನ್ನೂ ಉಳಿಸಿದರು.

ರಾಜಕಾರಣವೂ ಅಧಿಕಾರಲಾಲಸೆಯೂ ಬಾಳಿನ ಹೆಗ್ಗುರಿಯಾಗಿರುವ ಕಾಲ ಇದು. ಹಿಂದೀ ಮುಸ್ಲಿಮರು ಗಳಿಸಿಕೊಂಡ ಹಿರಿಯರ ಸೊತ್ತು ಮುಲ್ಲಾ-ಮೌಲಾನಾರದಲ್ಲ. ಫಕೀರ-ದರ್ವೇಷರದಲ್ಲ. ಆಫಘಾನ

ಅರಸುಮಕ್ಕಳದು, ದೆಹಲಿಯ ಸುಲ್ತಾನರದು, ಆ ಅನುಗ್ರಹ. ಈ ಕಾಲದಲ್ಲಂತೂ ಧರ್ಮದ ಭಾವನೆ ಮಸಕಾಗಿರುವುದು ಸಹಜವೇ ಸರಿ. ಇಸ್ಲಾಮೀ ಧರ್ಮವೂ ನ್ಯಾಯನಿಷ್ಠವಾದುದು, ಪ್ರೇಮಪೂರ್ಣ ವಾದುದು ಎಂಬುದನ್ನು ಮರೆತು ಮರೆಯಿಸುವಷ್ಟು ದೂರಹೋಗಿ ದ್ದಾರೆ ಜನ. ಆಜಾದರಂಥ ಒಬ್ಬಿಬ್ಬರಾದರೂ ವ್ಯಕ್ತಿಗಳು ತಮ್ಮ ಜೀವನದಲ್ಲಿ ತೋರುತ್ತಿರುವ ಧರ್ಮವೇ ನಿಜವಾದ ಇಸ್ಲಾಮವನ್ನು ಇನ್ನೂ ನೆಲೆಗೊಳಿಸಿದೆ, ಬೆಳಗುತ್ತಿದೆ.

ಪರ್ಷಿಯಾದೇಶದ ತಾಬ್ರಿಜ್ ನಗರದಲ್ಲಿ ಕ್ರೈಸ್ತರೂ ಮುಸಲ್ಮಾ-ನರೂ ಒಟ್ಟಿಗೆ ವಾಸಿಸುತ್ತಿದ್ದರು. ಅಲ್ಲಿ ಕ್ರೈಸ್ತನೊಬ್ಬ ಭಾರಿ ವರ್ತಕ ನಾಗಿದ್ದ. ಒಂದು ದಿನ ಹಾಜಿಯೊಬ್ಬ (ಮಕ್ಕಾಯಾತ್ರೆ ಮಾಡಿದ ಮಹಾನುಭಾವ) ಅವನ ಅಂಗಡಿಗೆ ಬಂದು, ಈ ವರ್ತಕನನ್ನು ಮಹಮ್ಮ-ದೀಯನಾಗೆಂದು ಕೇಳಿದ. ವರ್ತಕನು ಆ ಮಾತಿಗೆ ಒಪ್ಪಲಿಲ್ಲ. ಅಂಗಡಿಗೆ ಬಂದ ಸತ್ಪುರುಷನನ್ನು ಬರಿಗೈಯಲ್ಲಿ ಕಳಿಸಬಾರದೆಂದು ಭಿಕ್ಷೆ ನೀಡಿದ. ಹಾಜಿಗೆ ಬೇಕಾದುದು ಭಿಕ್ಷೆಯಲ್ಲ; ಪರಿವರ್ತನ. ಹಾಗೆ ಹೇಳಿ ಭಿಕ್ಷೆ ತಿರಸ್ಕರಿಸಿದ. ಅಲ್ಲಿಂದ ಚರ್ಚೆ ಬೆಳೆದು ಹಾಜಿಗೆ ಸಿಟ್ಟುಬಂತು. ಅಲ್ಲಿದ್ದ ಕಾವಲಿನವನ ಕೈಯ ಕತ್ತಿಯನ್ನು ಸೆಳೆದುಕೊಂಡು ಸಿಟ್ಟಿನ ಭರದಲ್ಲಿ ಹಾಜಿ ವರ್ತಕನನ್ನು ಇರಿದು ಓಡಿಹೋದ. ನಗರಾಧಿಪತಿ ಮಹಮ್ಮ-ದೀಯ; ಆತನಿಗೆ ಇದು ತಿಳಿಯಿತು. ಆ ಹಾಜಿಯನ್ನು ಹಿಡಿದು ತರಿಸಿ, ತನ್ನ ಕೈಯಿಂದಲೇ ಅವನನ್ನು ತಿವಿದು ಕೊಂದುಹಾಕಿದ. 'ಹೀಗೆಯೇ ಮಹಮ್ಮದನ ಧರ್ಮವನ್ನು ಹರಡುವುದು? ನಾಯಿ' ಎಂದು ಅವನ ದೇಹವನ್ನು ನಾಯಿಗಳ ಪಾಲುಮಾಡಿದ.

ಮೌಲಾನರನ್ನು ನೆನೆದಾಗಲೆಲ್ಲ ಈ ಕತೆ ನೆನಪಾಗುತ್ತದೆ.

ಆಜಾದರು ಬರೀ ಪಂಡಿತರಲ್ಲ; ಒಳ್ಳೆಯ ಸಾಹಿತಿಗಳು. ಉರ್ದೂ ಭಾಷೆಯ ಮೇಲೆ ಇವರ ಹಿಡಿತ ಬಹಳ ಬಲವಾದುದು. ಪಾರ್ಸೀ ಅರಬ್ಬೀ ಭಾಷೆಗಳೂ ಇವರಿಗೆ ತಾಯಿನುಡಿಯಿದ್ದಂತೆ. ಅರೇಬಿಯಾದಲ್ಲಿ ಹುಟ್ಟಿ ಬೆಳೆದು ಈಜಿಪ್ಟಿನಲ್ಲಿ ವಿದ್ಯಾಭ್ಯಾಸ ಮಾಡಿದವರಿಗೆ ಅರಬ್ಬೀ ತಾಯಿನುಡಿ ಯಲ್ಲದೆ ಮತ್ತೇನು? ಅಂಥವರ ಕೈಯಲ್ಲಿ ಉರ್ದುನುಡಿ ಕುಣಿಸಿದಂತೆ

ಕುಣಿಯುತ್ತದೆ. ಮೌಲಾನಾ ವಿಪುಲವಾಗಿ ಬರೆದಿದ್ದಾರೆ. ಅನೇಕ ದೊಡ್ಡದೊಡ್ಡ ಗ್ರಂಥಗಳಿಗೆ ಅವರ ಕರ್ತೃತ್ವದ ಭಾಗ್ಯ ಲಭಿಸಿದೆ. ೨೫ ವರ್ಷಗಳಿಂದ ಒಂದೇಸಮನೆ ಬರೆವಣಿಗೆಯಲ್ಲಿ ತೊಡಗಿದ್ದಾರೆ. ಪತ್ರಿಕಾ ನಿರ್ವಹಣವೂ ಕೆಲವು ದಿನ ನಡೆಯಿತು. ೧೯೧೨ರಲ್ಲಿ ಸಂಪಾದಕ ವರ್ಗ ದಲ್ಲಿ ಸೇರಿದರು. ದೆಹಲಿಯಿಂದ 'ಅಲ್ ಹಿಲಾಲ್'—ಅರಿವಿನ ದೀವಟಿಗೆ—ಎಂಬ ವಾರಪತ್ರಿಕೆಯನ್ನು ಮೊದಲುಮಾಡಿದರು. ಅದಕ್ಕೆ ಮೊದಲು ಉರ್ದುನುಡಿಯ ವಾರಪತ್ರಿಕೆಗಳಿದ್ದರೂ ಇಲ್ಲದಂತೆಯೆ ಅಗಸ್ತ್ಯಭ್ರಾತ-ನಾಗಿದ್ದುವು. ಅಲ್ ಹಿಲಾಲ್ ಹಿಂದುಸ್ತಾನದ ಪತ್ರಿಕಾಗಗನದಲ್ಲಿ ಸೂರ್ಯ. ಅದೊಂದು ಚಿತ್‌ಜ್ಯೋತಿ. ಹಿಂದೀ ಜನರಲ್ಲಿ, ಮುಖ್ಯವಾಗಿ ಮುಸ್ಲಿಮ ರಲ್ಲಿ ತುಂಬಿದ್ದ ಕತ್ತಲೆಯನ್ನು ಕಳೆಯುವ ಪಂಜಿನಂತೆ ಅಲ್ ಹಿಲಾಲ್ ಮೆರೆಯಿತು. ಅದರ ಭಾಷೆ ಗಂಭೀರ. ಆ ಗಾಂಭೀರ್ಯ ಸಶಕ್ತವಾದುದು, ಬರೀ ಅಲಂಕಾರದ ಹೊರೆಯಲ್ಲ. ಅದರ ಭಾವ ಉದ್ದೀಪಕವಾದುದು, ಸಚೇತನ. ಅಭಿಪ್ರಾಯಗಳಲ್ಲಿ ನಿರ್ಭಯ, ನಿಸ್ಸಂಕೋಚ. ನಾಡಿನ ಜನಕ್ಕೆ ಈ ಬಗೆಯ ಭಾವ ಭಾಷೆ, ಈ ನಿರ್ಭಯದ ಅಭಿಪ್ರಾಯ ಹೊಸದು. ಆರಿ ಹೋಗಿದ್ದ ತಮ್ಮ ಹೃದಯಾಗ್ನಿಯನ್ನು ಹೊತ್ತಿಸುವ ಕಿಡಿಯಂತಿತ್ತು ಅದರ ಸಂದೇಶ. ಸರಕಾರಕ್ಕೆ ಈ ಪ್ರಚಂಡ ಶಕ್ತಿಯನ್ನು ಸಹಿಸುವುದು ಸಾಧ್ಯವೇ ? ಆ ಪತ್ರಿಕೆಯನ್ನು ಹಿಸುಕಿಬಿಟ್ಟರು.

ಆಜಾದರು ಅಷ್ಟು ಸುಲಭವಾಗಿ ಗೆಲ್ಲಬಹುದಾದ ಮನುಷ್ಯರಲ್ಲ. ಅವರು ಪತ್ರಿಕಾ ವ್ಯವಸಾಯವನ್ನು ಮೊದಲುಮಾಡಿದ್ದುದು ವಿಲಾಸಕ್ಕೂ ಅಲ್ಲ, ವ್ಯಾಪಾರಕ್ಕೂ ಅಲ್ಲ. ಅರೇಬಿಯಾ ಈಜಿಪ್ಟ್‌ಗಳ ಸ್ವತಂತ್ರ ವಾತಾವರಣದಲ್ಲಿ ಬೆಳೆದ ಜೀವ. ಈಜಿಪ್ಟ್‌ನಲ್ಲಿದ್ದಾಗ ಜಗಲೂಲ್ ಪಾಶ್ಶಾರ ಸ್ವಾತಂತ್ರ್ಯಸಂಗ್ರಾಮದ ರುಚಿಯನ್ನು ನೋಡಿಯೂ ಇದ್ದರು. ಹಿಂದುಸ್ತಾನದ ಮುಸ್ಲಿಮರು ಅಜ್ಞಾನಿಗಳಾಗಿ ಪರತಂತ್ರರಾಗಿದ್ದುದು ಇವರ ಮನಸನ್ನು ಕುದಿಸಿತು. ತಮ್ಮ ಜನರನ್ನು ಜಾಗೃತಗೊಳಿಸಿ ಪರಾಧೀನತೆಯ ಪಾಶವನ್ನು ಹರಿದೊಗೆಯುವಂತೆ ಪ್ರೇರೇಪಿಸುವ ದೃಢ-ಸಂಕಲ್ಪಮಾಡಿದರು. ಆ ಸಂಕಲ್ಪಕ್ಕೆ ಕಾಂಗ್ರೆಸ್ಸಾಗಲಿ ಮತ್ತಾವ ಚಳು-ವಳಿಯಾಗಲಿ ಕಾರಣವಲ್ಲ. ಅಲ್‌ಹಿಲಾಲ್ ಮೊದಲಾದಾಗ ಕಾಂಗ್ರೆಸ,

ಇನ್ನೂ ಬಾಲಾರಿಷ್ಟದ ಮಗು. ಬಂಗಾಲದ ವಿಭಜನ ಚಳುವಳಿ ಬಲವಾಗಿಯೆ ಇತ್ತಾಗಲಿ, ಅರಬ್ಬೀ ಪಾರ್ಸೀ ಪಂಡಿತರಾದ ಇವರಿಗೆ ಆ ಇಂಗ್ಲೀಷು ಚಳುವಳಿಯು ಅರ್ಥ ಆಗಬೇಕು ಹೇಗೆ? ಆಜಾದರ ತಂದೆ ಸಿಪಾಯಿಯ ದಂಗೆಯ ಕೊನೆಯ ಅಂಕದ ಪರಂಪರೆಯಲ್ಲಿ ಹಿಂದುಸ್ತಾನವನ್ನು ಬಿಡಬೇಕಾಯಿತು. ಆ ದೇಶಭ್ರಷ್ಟತೆಯ ಮೊದಲ ದಿನಗಳಲ್ಲಿ ಹುಟ್ಟಿದವರು ಆಜಾದ್. ಮೇಲೆ ಹೇಳಿದಂತೆ ಬೆಳೆದವರು. ಅವರ ಹುರುಪು-ಹಟಗಳನ್ನು ಗೆಲ್ಲಬಹುದೇ ?

ಕಲಕತ್ತೆಯಿಂದ ಮತ್ತೊಂದು ವಾರಪತ್ರಿಕೆ—ಅಲ್ ಬಲಾಗ್—ಹೊರಡಿಸಿದರು. ಈ ಸಲ ಸರಕಾರವು ಹೊಸ ಅಸ್ತ್ರವೊಂದನ್ನು ಉಪಯೋಗಿಸಿತು. ಬಂಗಾಲ ಪ್ರಾಂತದಿಂದ ಗಡೀಪಾರು ಮಾಡಿತು ಆಜಾದರನ್ನು. ಅದಕ್ಕೆ ಮೊದಲೇ ಸಂಯುಕ್ತಪ್ರಾಂತ, ಮುಂಬಯಿ, ಪಂಜಾಬು ಮುಂತಾದ ಪ್ರಾಂತಗಳು ಅವರನ್ನು ತಮ್ಮ ಪ್ರಾಂತಗಳಿಗೆ ಬಾರದಂತೆ ನಿಷೇಧಿಸಿದ್ದುವು. ನೆರೆಯ ಪ್ರಾಂತವಾದ ಬಿಹಾರವೊಂದರಲ್ಲಿ ಇವರಿಗೆ ಆಸರೆ ಸಾಧ್ಯವಿತ್ತು. ವಿಧಿಯಿಲ್ಲದೆ ಆಜಾದರು ಬಿಹಾರ ಪ್ರಾಂತಕ್ಕೆ ಬಂದರು. ಅಲ್ ಬಲಾಗ್ ಒಂದು ವರ್ಷವಾದರೂ ನಡೆಯದೆ ನಿಂತು ಹೋಯಿತು.

ಹಿಂದುಸ್ತಾನದ ಮುಸ್ಲಿಮರಲ್ಲಿ ಈ ಶತಮಾನದ ಮೊದಲಲ್ಲಿ ನಡೆದ ಅಲಿಘರ್ ಚಳುವಳಿಯನ್ನು ಕಂಡವರು ಮೌಲಾನಾರ ಪತ್ರಿಕಾವ್ಯವಸಾಯದ ಬೆಲೆ ಅರಿಯಬಲ್ಲರು. ಅಲಿಘರ್ ಚಳುವಳಿಯಲ್ಲಿ ಜಾತಿನಿಷ್ಠೆ ಸ್ವಾತಂತ್ರ್ಯವಿರೋಧಗಳ ಬೀಜ ಬಿತ್ತಲ್ಪಟ್ಟಿತ್ತು. ಬ್ರಿಟಿಷರ ಅಂಧಾನು-ಕರಣ—ಅಧಿಕಾರಲಾಲಸೆಗಳಿಗೆ ತೌರುಮನೆಯಾಗಿತ್ತು. ಮುಸ್ಲಿಂಲೀಗಿನ ಜನ್ಮ ಅಲಿಘರ್ ಚಳುವಳಿಯ ಫಲ. ಈಗ ದೇಶದಲ್ಲಿ ಕಾಣಬರುವ ದ್ವೇಷ ಅಸೂಯೆಗಳು ಅದರ ಪ್ರಸಾದ. ಚಳುವಳಿ ಬಲವಾಗಿತ್ತು. ವಿದ್ಯಾವಂತರೆಲ್ಲ ಆ ಚಳುವಳಿಗೆ ಶರಣುಹೋಗಿದ್ದರು. ಅಲಿಘರ್ ಹಿಂದುಸ್ತಾನದ ಮಕ್ಕಾ ಆಗಿತ್ತು. ಈ ಸಂಕುಚಿತವೃತ್ತಿಯ ವಿಘಾತಕ ಚಳುವಳಿ ಮೌಲಾನಾರ ವಿಶಾಲಬುದ್ಧಿಗೆ ಸ್ವಾತಂತ್ರ್ಯಪಿಪಾಸೆಗೆ ಸಹಿಸಲಿಲ್ಲ. ಬಲವಾದ ವಿರೋಧವನ್ನು ಮೊದಲುಮಾಡಿದರು. ತಮ್ಮ ಪ್ರಚಂಡ ಪಾಂಡಿ

ತ್ಯದ ಬಲದಿಂದ, ಧಾರ್ಮಿಕ ರಾಜಕೀಯ ವಾದಭೂಮಿಯಲ್ಲಿ ಸುಂಟರ-ಗಾಳಿಯನ್ನೆಬ್ಬಿಸಿದರು. ಸಂಪ್ರದಾಯದ ರೂಢ ಸಿದ್ಧಾಂತಗಳನ್ನು ಹೇತುವಾದಕ್ಕೆ ಗುರಿಮಾಡಿದರು. ಮೂಲ ಸಿದ್ಧಾಂತಗಳ ಕಡೆಗೆ ಜನರ ಮನಸವನ್ನೆಳೆದು ಹಾವಸೆಯನ್ನು ಕತ್ತರಿಸಿದರು. ರಾಜಕೀಯ ಭೂಮಿಯಲ್ಲಿ ಮುಸ್ಲಿಮರ ತಾಟಸ್ಥ್ಯವೃತ್ತಿಯನ್ನು ಖಂಡಿಸಿ ಕಾಂಗ್ರೆಸಿನೊಡನೆ ಸಹಕರಿಸಿರೆಂದು ಸಾರಿ ಹೇಳಿದರು. ಮುಸ್ಲಿಮ ಸಮಾಜದ ಹಳೆಯ ಹುಲಿಗಳೆಲ್ಲ ನಡುಗಿದುವು.

ಇದೆಲ್ಲ ನಡೆದಾಗ ಯುರೋಪಿನಲ್ಲಿ ೧೯೧೪ರ ಮಹಾಯುದ್ಧ ಪ್ರಾರಂಭವಾಯಿತು. ಇಸ್ಲಾಮಿಾ ಕ್ಷೇತ್ರಗಳ ಬಗ್ಗೆ ಸ್ವಲ್ಪ ಗೊಂದಲವಾಯಿತು. ಆದರ ಫಲವಾಗಿ ಹಿಂದೀ ಮುಸ್ಲಿಮರಲ್ಲಿ ಅಶಾಂತಿ ಬೆಳೆಯಿತು. ಹಿಂದೀ ಸೇನೆಯಲ್ಲಿ ಒಡಕು ಉಂಟಾಗುವ ಲಕ್ಷಣ ಕಂಡವು. ಮೌಲಾನಾ ಮುಹಮ್ಮದಾಲಿ ಮೌಲಾನಾ ಆಜಾದರಿಬ್ಬರೂ ಬಂಧನಕ್ಕೊಳಗಾದರು. ಬಿಹಾರ ಪ್ರಾಂತಕ್ಕೆ ಬಂದು ನೆಲಸಿ, ತಮ್ಮ ಗ್ರಂಥ ಪ್ರಕಟನ ಕಾರ್ಯವನ್ನು ಮಾಡಬೇಕೆಂದಿದ್ದರು ಆಜಾದರು. ೧೯೧೬ರಲ್ಲಿ ಬಂಗಾಲದಿಂದ ಹೊರದೂಡಲ್ಪಟ್ಟಾಗ ಅವರ ಬಯಕೆ ಈಡೇರಲಿಲ್ಲ. ಬಿಹಾರಕ್ಕೆ ಬಂದ ನಾಲ್ಕೈದು ತಿಂಗಳಲ್ಲಿ ಸೆರೆಮನೆಯನ್ನು ಸೇರಬೇಕಾಯಿತು. ನಾಲ್ಕು ವರುಷದ ಕಾಲ ರಾಂಚಿಯಲ್ಲಿ ಬಂಧಿತರಾಗಿದ್ದರು.

ಆಜಾದರ ಗ್ರಂಥರಾಶಿಯಲ್ಲಿ ಶ್ರೇಷ್ಠವಾದುವು ಅವರ 'ಆತ್ಮ ಚರಿತ್ರೆ', ಅವರು ಮಾಡಿದ ಕೊರಾನಿನ 'ಭಾಷಾಂತರ ಮತ್ತು ಭಾಷ್ಯ'. ಅವರ ಭಾಷ್ಯ ಇಸ್ಲಾಮಿಾ ಜಗತ್ತಿನಲ್ಲಿ ತುಂಬಾ ಮನ್ನಣೆ ಪಡೆದಿದೆ. ಅವರ ತಾರ್ಕಿಕಶಕ್ತಿ, ಅಗಾಧ ಪಾಂಡಿತ್ಯಗಳು ಅಲ್ಲಿ ಹೊರಸೂಸಿವೆ. ಅವರ ಆತ್ಮಚರಿತ್ರೆಯಲ್ಲಿ ತಮ್ಮ ಹಿರಿಯರ ಕತೆಯೇ ಬಹಳ. ಅವರ ತಂದೆ ಇಸ್ಲಾಮಿಾ ಧರ್ಮದಲ್ಲಿ ಹೆಸರಾದ ಪಂಡಿತರು. ಮಕ್ಕಾ ಮದೀನಾಗಳಲ್ಲಿ ಇವರ ಮನೆ ಒಂದು ಗುರುಕುಲವೇ ಆಗಿತ್ತು. ಆತ್ಮಚರಿತ್ರೆ ವಿಷಯದಲ್ಲಿದ್ದಂತೆ ಶೈಲಿಯಲ್ಲಿ ಹೊಸ ಬೆಳಕು. ಈ ಮೂವತ್ತು ವರ್ಷದ ಉರ್ದೂ ರಚನೆಯಲ್ಲಿ ಆಜಾದರ ಶೈಲಿಯ ಪ್ರಭಾವ ಸ್ಪಷ್ಟವಾಗಿ ಕಾಣುತ್ತದೆ. ಶೈಲಿಯ ಮಾದರಿ 'ಆತ್ಮಚರಿತ್ರೆ'.

ಆಜಾದ್ ಎಂಬುದು ಅವರ ಅಡ್ಡಹೆಸರು. ಉರ್ದು ಬರೆಹಗಾರರಲ್ಲಿ ಏನಾದರೊಂದು ಕಾವ್ಯನಾಮವು ಇಟ್ಟುಕೊಳ್ಳುವದು ರೂಢಿ; ನಮ್ಮಲ್ಲಿ ಮಾಸ್ತಿಯವರ ಶ್ರೀನಿವಾಸ, ಬೇಂದ್ರೆಯವರ ಅಂಬಿಕಾತನಯ, ಪಂಜೆ ಮಂಗೇಶರಾಯರ ಕವಿಶಿಷ್ಯ ಎಂಬ ಸಂಕೇತಗಳಿದ್ದಂತೆ. ಮೌಲಾನಾರ ಕಾವ್ಯನಾಮದಲ್ಲೂ ಅವರ ಸ್ವಾತಂತ್ರ್ಯ ಪ್ರೀತಿ ಕಾಣುತ್ತದೆ. ಆಜಾದ್ ಎಂದರೆ ಸ್ವತಂತ್ರ ಎಂದರ್ಥ. ಆ ಹೆಸರೇ ಅವರಿಗೆ ಅಂಟಿಕೊಂಡು ಅಡ್ಡ ಹೆಸರಾಗಿದೆ.

ವೈಯಾಕರಣಿ ಭಟ್ಟಾಚಾರ್ಯರು ತಮ್ಮ ಹೆಂಡತಿ ಸಂತಾನಕಾಮವನ್ನು ತೋರಿದಾಗ 'ಶಬ್ದೇಂದುಶೇಖರಃ ಪುತ್ರೋ ಮಂಜೂಷಾ ಮಮ ಪುತ್ರಿಕಾ' ಎಂದು ಹೇಳಿದರಂತೆ. ಕೃತಿಸಂತಾನದ ಆಧಿಕ್ಯ-ಆನಂದಗಳನ್ನು ಅದಕ್ಕಿಂತ ಹೆಚ್ಚು ಅರ್ಥವತ್ತಾಗಿ ವರ್ಣಿಸಬಲ್ಲ ಮಾತು ಇರಲಾರದು. ಸಾಹಿತಿಗೆ ಕಲಾಕೃತಿಗಿಂತ ಹೆಚ್ಚಿನ ಸಂತಾನವೇ? ತುಕಾರಾಮನ ಗ್ರಂಥರಾಶಿಯನ್ನು ಹೊಳೆಯಲ್ಲಿ ಹಾಕಿದಾಗ ಆ ಭಕ್ತನಿಗಾದ ನೋವನ್ನು ಅರಿಯೆವೇ? ಮೌಲಾನಾ ಆಜಾದರಿಗೂ ಅಂಥ ದಾರುಣ ಅನುಭವವಾಯಿತು. ಒಮ್ಮೆ ಅವರು ರಾಂಚಿಯಿಂದ ಮರಳಿದ ಮೇಲೆ, ತಮ್ಮ ಹಸ್ತಪ್ರತಿಗಳನ್ನು ನೋಡಿ ನೆಲಕ್ಕೇ ಇಳಿದುಹೋದರು. ಅವರ ಮುಖ್ಯವಾದ ಬರವಣಿಗೆಯೆಲ್ಲ ಛಿದ್ರವಾಗಿ ಗ್ರಂಥಪಾತವಾಗಿ ಹೋಗಿತ್ತು. ಅವರು ಇಲ್ಲದಾಗ ಪೋಲೀಸರು ಅವರ ಮನೆ ಶೋಧಿಸಿದರು. ಹಸ್ತಪ್ರತಿಗಳನ್ನೆಲ್ಲಾ ಓದಿನೋಡಿ, ಅಲ್ಲಲ್ಲಿ ಹಾಳೆ ಕತ್ತರಿಸಿ, ಕೆಲವು ಹಾಳೆಗಳನ್ನೇ ಕಿತ್ತುಹಾಕಿ, ತಿರುಪತಿ ಕ್ಷೌರಮಾಡಿಟ್ಟರು. ಅನೇಕ ವರ್ಷಗಳ ಸತತ ಪರಿಶ್ರಮದ ಫಲ. ಆ ನೋವು ಅನುಭವಿಸಿದವರಿಗೆ ಗೊತ್ತು. ಆದರೆ ಆಜಾದರು ಧೈರ್ಯಗೆಡಲಿಲ್ಲ. ಆ ಮಹಾಪ್ರಾಣಕ್ಕೆ ಇದೊಂದು ಲೆಕ್ಕವೆ? ಅದ್ಭುತವಾದ ಸ್ಮರಣಶಕ್ತಿ ಅವರದು. ಪಾತವಾಗಿದ್ದ ಭಾಗಗಳನ್ನೆಲ್ಲಾ ನೆನಪಿನಿಂದ ಮತ್ತೆ ಉದ್ಧರಿಸಿ ಬರೆದರು.

ಆಜಾದರು ರಾಂಚಿಯ ದಿಗ್ಬಂಧನದಿಂದ ಹೊರಬೀಳುವ ವೇಳೆಗೆ ಗಾಂಧೀಜಿಯ ಸತ್ಯಾಗ್ರಹ ಚಳವಳಿಯು ಮೊದಲಾಗಿತ್ತು. ಹೊರಗೆ ಬಂದದ್ದೇ ತಡ, ಅದರಲ್ಲಿ ಧುಮುಕಿದರು. ದೇಶಬಂಧು ದಾಸ ಮುಂತಾ

ದವರ ಜೊತೆಯಲ್ಲಿ ಮತ್ತೆ ಸೆರೆಮನೆ ಕಾಣಬೇಕಾಯಿತು. ಅಂದಿನಿಂದ ಇಂದಿನವರೆಗೆ ಕಾಂಗ್ರೆಸ್ಸಿಗೆ ಆಜಾದರು ಒಂದು ಮೂಲಸ್ತಂಭ. ಈ ಇಪ್ಪತ್ತು ವರ್ಷದ ಇತಿಹಾಸದಲ್ಲಿ ಆಜಾದರಷ್ಟು ಸ್ಥಿರವಾಗಿ ಅವಿಚ್ಛಿನ್ನ ವಾಗಿ ಕಾಂಗ್ರೆಸ್ಸನ್ನು ಹೊಂದಿಕೊಂಡು ಬಂದವರು ಬಹಳ ಕಡಿಮೆ. ಮತಾಭಿಮಾನದ ಕೋಮುವಾರದ ರಾಜಕಾರಣದ ಉಬ್ಬರಗಳು ಮೇಲೆ ಮೇಲೆ ಬಂದಿವೆ, ಬರುತ್ತಲೇ ಇವೆ. ಮೌಲಾನಾ ಮಾತ್ರ ಕಡಲ ನಡು ವಣ ಬೆಟ್ಟದಂತೆ ನಿಶ್ಚಲರಾಗಿದ್ದಾರೆ. ಈ ವಿಷಗಾಳಿ ಬೀಸುವ ಮುನ್ನ ಮುಸ್ಲಿಂಲೀಗಿಗೂ ಅಧ್ಯಕ್ಷರಾಗಿದ್ದರು; ಖಿಲಾಫತಸಮಿತಿಗೂ ಕರ್ಣ್ಣಾ ಗಿದ್ದರು. ೧೯೨೩ರಲ್ಲಿ ಅವನ್ನೆಲ್ಲ ಬಿಟ್ಟು ಕೇವಲ ಕಾಂಗ್ರೆಸ್ಸನ್ನೇ ಹಿಡಿದರು. ೧೯೩೦ ರ ಸತ್ಯಾಗ್ರಹ ನಡೆದಾಗ ಆಜಾದರೇ ಕಾಂಗ್ರೆಸ್ಸಿನ ಹಿರಿಯರು. ಗಾಂಧೀಜಿಯ ಸೂಚನೆಯ ಮೇರೆಗೆ ಕಾಂಗ್ರೆಸ್ಸಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ರೂಪುಗೊಂಡಾಗಿನಿಂದಲೂ ಮೌಲಾನಾ ಅದರ ಸದಸ್ಯರಾಗಿದ್ದಾರೆ; ಅಷ್ಟೇ ಅಲ್ಲ, ಮುಖ್ಯ ಸದಸ್ಯರಾಗಿದ್ದಾರೆ.

ಗಾಂಧೀಜೀ ಹಿಂದುಸ್ತಾನದ ರಾಜಕಾರಣದಲ್ಲಿ ಪ್ರವೇಶಿಸಿದಾಗಿ ನಿಂದ ಹಿಂದು-ಮುಸ್ಲಿಮ ಐಕ್ಯದ ಮಾತು ಕಾಂಗ್ರೆಸ್ಸಿನ ಪ್ರಧಾನ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಐಕ್ಯವಿಲ್ಲದೆ ಸ್ವರಾಜ್ಯವು ಬರೀ ಬಿಸಿಲು ಗುದುರೆಯೆಂದು ಹೇಳಿದ್ದಾರೆ. ಆ ಮಾತು ಗಾಂಧೀಜೀಗೆ ಒಂದು ಸಿದ್ಧಾಂತ ಮಾತ್ರವಲ್ಲ; ಅವರಿಗೆ ಅದರಲ್ಲಿ ಬಲವಾದ ನಂಬಿಗೆ. ಹಕೀಂ ಅಜಮಲ್ ಖಾನ್, ಡಾ. ಅನ್ಸಾರಿ, ಮೌಲಾನಾ ಆಜಾದರೊಡನೆ ಅವರು ಅನುಭವಿಸಿದ ಸ್ನೇಹವೇ ಅದಕ್ಕೆ ಸಾಕ್ಷಿ. ಮೊದಲಿನವರಿಬ್ಬರೂ ತೀರಿ ಕೊಂಡ ಮೇಲೆ ಆಜಾದರೇ ಕಾಂಗ್ರೆಸ್ಸಿನ ಮುಸ್ಲಿಂ ಸಚಿವರು. ಅವರ ಸಲಹೆಗೆ ತುಂಬಾ ಬೆಲೆ. ಗಾಂಧೀಜಿ ಪ್ರತಿಯೊಂದು ಸಣ್ಣಪುಟ್ಟ ಮಾತಿನಲ್ಲೂ ಆಜಾದರನ್ನು ಕೇಳುತ್ತಾರೆ. ಹಿಂದೂ ಮುಸ್ಲೀಮ ಸಂಧಾನದ ಯಾವ ಮಾತೂ ಅವರಿಲ್ಲದೆ ನಡೆದಿಲ್ಲ. ಕಾಂಗ್ರೆಸ್ಸಿನಲ್ಲೆ ಏಕೆ, ಸಂಸ್ಥಾನಗಳಲ್ಲೂ ಆ ಪ್ರಶ್ನೆ ಬಂದಾಗ ಅದು ಆಜಾದರ ದಪ್ತರಕ್ಕೆ-Portfolio- ಸೇರಿದ್ದು. ಹೈದರಾಬಾದಿನಲ್ಲಿ ಹಿಂದೂ ಮುಸ್ಲಿಮ ಸಂಧಾನ ನಡೆದಿತ್ತು. ಕೆಲವು ದಿನದ ಕೆಳಗೆ ಅದನ್ನು ಹೇಗೆ ನಡೆಯಿಸ

ಬೇಕೆಂದು ಅಲ್ಲಿಯ ಹಿಂದೂ ಜನ ಗಾಂಧೀಜಿಯನ್ನು ಕೇಳಿದರು. ಗಾಂಧೀಜಿ ಮೌಲಾನಾರ ಕಡೆಗೆ ಅದನ್ನು ಒಪ್ಪಿಸಿದರು. ಮೌಲಾನಾ ಅದರಲ್ಲಿ ತೊಡಗಿಕೊಂಡು ಹಿಂದುಗಳಿಗೆ ಸಲಹೆಕೊಟ್ಟರು. ಇನ್ನೂ ಆ ಪ್ರಶ್ನೆ ಅವರ ಕೈಯಲ್ಲೇ ಇದೆ.

ಮೌಲಾನಾ ಗಾಂಧೀಜಿಯನ್ನು ಕಂಡುದು ೧೯೨೦ರಲ್ಲಿ. ಮಹಮ್ಮದಾಲಿಯ ಬಂಧನದ ತರುವಾಯ ಎಲ್ಲ ಪ್ರಾಂತಗಳ ನಾಯಕರನ್ನೂ ಗಾಂಧೀಜಿ ಒಂದು ಪರಿಷತ್ತಿಗಾಗಿ ಮುಂಬಯಿಗೆ ಕರೆಯಿಸಿದರು. ಆಗ ಬಂಗಾಲದಿಂದ ಆಜಾದರು ಬಂದಿದ್ದರು. ಆಗಿನಿಂದ ಈಗಿನವರೆಗೆ ಗಾಂಧೀಜಿಗೆ ಅವರು ನಂಬಿಗೆಯ ಗೆಳೆಯರು, ಅತ್ತ ಇತ್ತ ಸರಿಯದ ಅನುಯಾಯಿ.

ಅಹಿಂಸೆಯೇ ಪರಮಧರ್ಮವೆಂದು ಗಾಂಧೀಜಿ ನಂಬಿದಂತೆ ನಂಬುವುದು ಎಲ್ಲರಿಗೂ ಸಾಧ್ಯವಾಗದ ಮಾತು. ಗಡಿನಾಡಿನ ಗಾಂಧಿಯೊಬ್ಬರು ಹಾಗೆ ನಂಬಿಯಾರು. ಆಜಾದರು ಅಹಿಂಸೆಯೇ ಏಕೈಕ ಧರ್ಮವೆಂದು ನಂಬಿರಲಿಕ್ಕಿಲ್ಲ; ಆದರೆ ಹಿಂಸೆಯು ಹಾದಿಯಲ್ಲವೆಂದು ನಂಬಿದ್ದಾರೆ. ಹಿಂಸೆಗೂ ಸಭ್ಯತೆಗೂ ಗಾವುದ ದೂರವೆಂದು ಅರಿತಿದ್ದಾರೆ. 'ಪ್ರಪಂಚವು ಅಲ್ಲಾನದು. ಅದು ಯಾರ ಸೊತ್ತೂ ಅಲ್ಲ. ಇದೊಂದು ಸಂಗಮ. ಇಲ್ಲಿ ಅಹಂಕಾರ ಸಲ್ಲದು, ಹಿಂಸೆ ಹೊಲ್ಲ' ಹೀಗೆ ಅವರು ಸಾರಿಹೇಳಿದ್ದಾರೆ. ಇಸ್ಲಾಮಿ ಧರ್ಮದಲ್ಲಿ ಅಹಿಂಸೆಗಿರುವ ಸ್ಥಾನವನ್ನು ಚರ್ಚಿಸುತ್ತ ಅವರು ಒಮ್ಮೆ ಕೊಟ್ಟ ಒಂದು ಹೇಳಿಕೆ ಅಹಿಂಸಾಸಾಹಿತ್ಯದಲ್ಲಿ ಅಮರವಾಗಿ ಉಳಿಯಬಲ್ಲುದು.

ಆಜಾದರು ಮನಬಿಚ್ಚಿ ಮಾತನಾಡುವುದು ಕಡಿಮೆ. ಒಳಗೊಳಗೇ ಹುಗಿದುಕೊಳ್ಳಲು ಪ್ರಯತ್ನ ಮಾಡುತ್ತಾರೆ. ಯಾವಾಗಲೂ ಹಿಂದೆ ಕೂತು ಚಪ್ಪಾಳೆಯಿಕ್ಕುವುದರಲ್ಲೋ ವಿಮರ್ಶಿಸಿಕೊಳ್ಳುವುದರಲ್ಲೋ ಅವರಿಗೆ ಆಶೆ. ಮುಂದೆ ಬಂದು ನಿಲ್ಲುವುದು ಅವರಿಗೆ ಒಗ್ಗದು. ಕಾಂಗ್ರೆಸ್ಸಿನಲ್ಲಿ ಉಳಿದ ಎಲ್ಲನಾಯಕರೂ ಒಂದಿಲ್ಲೊಂದು ತೀರ್ಮಾನದ ಬಗ್ಗೆ ಮಾತನಾಡುತ್ತಾರೆ. ಆಜಾದರು ಸದಾವೇದಿಕೆಯ ಮೇಲೆಯೆ. ಆದರೆ ಒಮ್ಮೆಯಾದರೂ ಭಾಷಣ ಮಾಡುವುದಿಲ್ಲ. ಸಂಧಾನಕ್ಕಾಗಿ ಸೂತ್ರಚಾಲನೆಗಾಗಿ ನಾಲ್ಕೂ ಪ್ರಾಂತಗಳಲ್ಲಿ ಓಡಾಡುತ್ತಾರೆ. ಇಂದು

ಪಂಜಾಬಿನ ಅಂತಃಕಲಹ ಶಾಂತವಾಯಿತು; ಅಲ್ಲಿ ವಾಯುವ್ಯಪ್ರಾಂತದಲ್ಲಿ ಕಾಂಗ್ರೆಸ್ಸೂ ಮಂತ್ರಿಮಂಡಲವೂ ಸಿಡಿದು ಹೋಗುವ ಸಂದರ್ಭ ಬಂದಿತ್ತು, ಅಂಥದನ್ನು ಉಳಿಸಿದರು. ದೇಹಲಿಯಲ್ಲಿ ಇತ್ತಂಡವಿದ್ದುದು ಸರಿಯಾಯಿತು, ಹೀಗೆ ಮೌಲಾನಾರ ಕೈವಾಡದ ಬಗ್ಗೆ ಆಗಾಗ ಸುದ್ದಿ ಬರುತ್ತಲೇ ಇರುತ್ತವೆ. ಆದರೆ ಎಲ್ಲಿಯೂ ಭಾಷಣವಾದ ಸುದ್ದಿ ಬರುವುದಿಲ್ಲ. ಮೌಲಾನಾ ಭಾಷಣಪ್ರಿಯರಲ್ಲ. ಎಲ್ಲಾದರೂ ಅವರು ಮಾತಾಡಲು ಒಪ್ಪಿದರೆ ಅದು ಬಲವಂತ ಮಾಘಸ್ನಾನ, ಅವರಿಗೆ ವಾಗ್ಮಿತ್ವವಿಲ್ಲವೆಂದಲ್ಲ. ಮಾತನಾಡಲು ನಿಂತರೆ ಕಲ್ಲಿನಗೊಂಬೆಗಳನ್ನೂ ಕುಣಿಸುವ ಧಾಟಿ ಅದು. ಅವರದು ಕಂಚಿನ ಕಂಠ. ಆ ಧ್ವನಿಯಲ್ಲಿ ಗರ್ಜನೆಯ ಗಾಂಭೀರ್ಯವಿದೆ. ಗುಟರಿನ ಹುಂಬತನವಿಲ್ಲ. ಅವರ ವಾಣಿ ಕಾಳೆಯ ಕೂಗಲ್ಲ, ಘಂಟೆಯ ನಾದ.

ಸಲ್ಲಾಪಗೋಷ್ಠಿಯಲ್ಲಿ ಕೂತರೆ ಮೌಲಾನಾ ಬಹು ಸರಸವಾಗಿ ಮಾತಾಡುತ್ತಾರೆ. ಒಳ್ಳೇ ವಿನೋದಿಗಳು. ವರ್ಧಾದ ಅತಿಥಿಭವನದಲ್ಲಿ ಎಡಗಡೆಯ ದೊಡ್ಡ ಕೊಠಡಿ ಇವರ ಬಿಡಾರ. ಅಲ್ಲಿ ನೆಲಕ್ಕೆ ಹಾಸಿದ ಮೆತ್ತೆ 'ಫರ್ಷ್'ಗಳ ಮೇಲೆ, ಒರಗುದಿಂಬಿಗೆ ಆತುಕೊಂಡು ಕುಳಿತು ಮೌಲಾನಾ ಮಾತುಕತೆ ನಡಿಸುವುದನ್ನು ನೋಡಿದರೆ, ಮೊಗಲಾಯಿಯ ಹಳೆಯವೈಭವವೆಲ್ಲ ಕಣ್ಣಿಗೆ ಕಟ್ಟುತ್ತದೆ. ಮಾತಿನಲ್ಲಿ ಬಹಳ ಮಿದುವು, ತುಂಬಾ ಔದಾರ್ಯ. ಆ ಗಾಂಭೀರ್ಯದಲ್ಲಿ ನಗೆ ಕಡಿಮೆ. ನಕ್ಕರೆ ಆ ಮುಗುಳಿನಲ್ಲಿ ರಾಜಠೀವಿ ಕಾಣಬರುತ್ತದೆ.

ಆಜಾದರು ಸುಂದರ ವಿಗ್ರಹವಾದರೂ, ಅದರಲ್ಲಿ ಯಮ-ನಿಯಮದ ನಿಷ್ಠುರತೆ ಇದೆ. ಆ ಮುಖದಲ್ಲಿ 'ಅತ್ತಣ ದಿನನಾಥನಿತ್ತ ಮೂಡುಗುವಲ್ತೆ?' ಎಂಬ ದೃಢಸಂಕಲ್ಪವಿದೆ. ಅವರ ಮೊನೆಯಾದ ಗಲ್ಲಕ್ಕೆ ಆ ಮಾಟಾದ ಗಡ್ಡವೂ ಆ ಗರುಡಮೂಗಿಗೆ ಹುರಿಮೀಸೆಯೂ ಸಂಕಲ್ಪಕ್ಕೆ ಸಾಹಸ ಜೊತೆಯಾದಂತಿವೆ. ಅವರ ಕಣ್ಣು ದೀವಿಗೆಯಂತೆ ಥಳಥಳಿಸುವುದಷ್ಟೇ ಅಲ್ಲ; ಗಾಂಭೀರ್ಯ ಅಧಿಕಾರಗಳು ಕಣ್ಣೊಳಗಿಂದ ಸುರಿಯುತ್ತವೆ. 'ಇಡೀ ಜಗತ್ತೇ ವಿರೋಧಿಸಲಿ, ನನ್ನ ಹಾದಿ ನಾ ಬಿಡಲಾರೆ' ಎಂಬ ಆತ್ಮವಿಶ್ವಾಸ ಆ ಮುಖದಲ್ಲಿ ಒಡೆದು ಕಾಣುತ್ತದೆ

ಆದರೆ, ತಾ ಹಿಡಿದ ಮೊಲಕ್ಕೆ ಮೂರೇ ಕಾಲೆಂಬ ಛಲವಿಲ್ಲ. ಕಿರಿಯರು, ತೀರ ಎಳೆಯರು ಕೊಟ್ಟ ಸಲಹೆ-ಮಾಡಿದ ಸೂಚನೆ ಈ ಉಕ್ಕಿನ ಮೂರ್ತಿ ಸಂತೋಷದಿಂದ ಸ್ವೀಕರಿಸುವುದುಂಟು. ಮೌಲಾನಾ 'ಶಾಪಾದಪಿ ಶರಾದಪಿ' ಎಂಬ ಹಾದಿಯಲ್ಲಿ ಕಲ್ಲಿಗಿಂತ ಕಠಿಣ. 'ಸಕೃದೇವ ಪ್ರಪನ್ನಾಯ' ಎಂಬ ವ್ರತದಲ್ಲಿ ಬೆಣ್ಣೆಗಿಂತ ಮಿದು. ಈ ಸಾಮರಸ್ಯವೇ ಅವರ ವ್ಯಕ್ತಿತ್ವದ ಅಡಿಗಲ್ಲು. ಅದೇ ಅವರ ಬಾಳುಗುಡಿಯ ಗೋಪುರ.



# ಜಮುನಾಲಾಲ್ ಬಜಾಜ್

•

ಜಯಪುರ ಪ್ರಭುತ್ವದ ಸುಗ್ರೀವಾಜ್ಞೆಯನ್ನು ತಿರಸ್ಕರಿಸಿ, ಸೆರೆಮನೆಯನ್ನು ಸೇರಲು ನಿರ್ಧಾರಮಾಡಿ ಬೊಂಬಾಯಿಯ ತಮ್ಮ ಗೆಳೆಯರ ಸಂದರ್ಶನಕ್ಕೆಂದು ಜಮುನಾಲಾಲರು ಅಲ್ಲಿಗೆ ಬಂದಾಗ ಜುಹುವಿನಲ್ಲಿರುವ ತಮ್ಮ 'ಜಾನಕೀ ಕುಟೀರ' ದಲ್ಲಿ ಇದ್ದರು. ಅವರ ಹೆಂಡತಿಯ ಹೆಸರಿನಲ್ಲಿ ಆ ಬಂಗಲೆ ಕಟ್ಟಿದಾರೆ. ಸಮುದ್ರಕ್ಕೆ ಅಂಟಿಕೊಂಡೇ ಮನೆ. ಅರ್ಧ ಫರ್ಲಾಂಗಿನೊಳಗಾಗೇ ನೀರು. ಪ್ರಶಾಂತಸಾಗರವು ತನ್ನ ಅಲೆಗಳೊಂದಿಗೆ ತಾನೇ ಆಟವಾಡುತ್ತಲಿರುತ್ತದೆ. ವರಣೇಶ್ವರನ ನಿತ್ಯನಾಟ್ಯದ ಆನಂದದಿಂದ ಚಿಮ್ಮುವ ಹತ್ತು ಸಾವಿರ ಭಂಗಿಗಳಂತೆ ಅಲೆಗಳು ಸಲಿಯುತ್ತವೆ. ಆ ಅಲೆಗಳ ಮೇಲೇರಿ ನೋಟಕ್ಕೆ ಸಿಗದೆ, ತಿಳಿವಿಗೆ ನಿಲುಕದೆ ಅನಂತದ ಭಾವನೆಯೊಂದು ಬಂದು ಮೂಡುತ್ತದೆ. ಬಾಳು ಆಳವೂ ಅಹುದು, ಹರಹೂ ಹೌದು. ಗಂಭೀರವಿದ್ದಷ್ಟೇ ವಿಶಾಲ. ಅನಂತವಾರಿಧಿಯಂತೆ ಎನಿಸುತ್ತದೆ. ಕುಟೀರದ ಅಂಗಳದಲ್ಲಿ ಕೂತು ಸಮುದ್ರದ ಕಡೆ ನೋಡುತ್ತಿದ್ದರೆ, ಅದೊಂದು ತೆರನಾದ ಯಕ್ಷಿಣಿಗೆ ವಶವಾದ ಹಾಗಾಗುತ್ತದೆ. ಇತ್ತ ನೆಲ, ಮುಂದೆ ನೀರು, ಹಿನ್ನೆಲೆಗೆ ಆಕಾಶ. ಮೂರೂ ಒಂದರೊಳಗೊಂದು ಹೆಣೆದುಕೊಂಡಿವೆ. ಯಾವುದೂ ಎಲ್ಲೂ ಮುಗಿಯುವುದಿಲ್ಲ. ಹಾಗೆ ಗೆರೆ ಎಳೆಯಲೂ ಬಾರದು. ಅದೊಂದು 'ರಾಸಕ್ರೀಡೆ.' ಮನೆಯ ಮಗ್ಗುಲಲ್ಲಿರುವ ತೆಂಗಿನ ಮರದ ಗರಿಯ ಸಪ್ಪಳದ ಅಪಶ್ರುತಿ ಇರದಿದ್ದರೆ, ಈ ಭಾವಸಮಾಧಿಗೆ ಭಂಗ ಕಡಿಮೆ.

ಆ ಅಂಗಳದಲ್ಲಿ ಜಮುನಾಲಾಲರು ಕುಳಿತಿದ್ದರು. ಇದರಿನಲ್ಲಿದ್ದ ಮುನ್ನೀರಿನಷ್ಟೇ ಮುಖಮುದ್ರೆಯೂ ಪ್ರಸನ್ನ ಗಂಭೀರ. ಕಣ್ಣಲ್ಲಿ ಸ್ಥಿರತೇಜ. ಸುತ್ತಲೂ ಜನ ಕುಳಿತಿದ್ದರು. ಕೆಲವರು ಸಂಗಡಿಗರು, ಕೆಲವರು ಅನುಯಾಯಿಗಳು. ಜಯಪುರ ಯುದ್ಧದ ಎತ್ತುಗಡೆಗಳ ನೀತಿ ನಿಯಮಗಳ ನಿರ್ಣಯ ನಡೆದಿತ್ತು. ಅವರ ಗೆಳೆಯರನೇಕರು ತಾವು ಅವರನ್ನು ಹಿಂಬಾಲಿಸುವ ಇಚ್ಛೆಯನ್ನು ತೋರಿಸಿದ್ದರು. ಎಷ್ಟೋ ಜನ ಕಾಗದ ಬರೆದಿದ್ದರು. ಕೆಲವರು ಬಂದೂ ಇದ್ದರು. ಎಲ್ಲರಿಗೂ ಒಂದೇ ಉತ್ತರ. ಜಯಪುರದ ಪ್ರಜೆಯಲ್ಲದವರಿಗೆ ಇದರಲ್ಲಿ ಸ್ಥಾನವಿಲ್ಲ. ಇದು ಮನೆಯ ಮಾತು. ತಂದೆ ಮಕ್ಕಳ ಜಗಳ. ಹೊರಗಿನವರಿಗೆ ಸಂಬಂಧವಿಲ್ಲ. ಕುಟುಂಬದ, ವ್ಯವಹಾರದ ಮಾತೂ ನಡೆದಿದ್ದವು. ಮತ್ತೆ ಎಂದೋ ಏನೋ! ಎಲ್ಲ ಪ್ರಶ್ನೆಗಳನ್ನೂ ಕೇಳಿಡಬೇಕು. ಎಲ್ಲ ಸೂಚನೆಗಳನ್ನೂ ತಿಳಿದುಕೊಳ್ಳಬೇಕು.

ಈ ಎಲ್ಲವೂ ನಡೆದಿದ್ದರೂ ಜಮುನಾಲಾಲರ ಜೀವ ಎಲ್ಲೋ ಒಳಗೊಳಗೇ ಸುಳಿದಾಡುವಂತಿತ್ತು. ಮಹತ್ವಾದ ಮಾತುಗಳ ನಿರ್ಣಯ. ಜಟಿಲವಾದ ಸಮಸ್ಯೆಗಳ ವಿಚಾರ. ಆದರೂ, ಮಾತನ್ನು ಮೀರಿ, ಚರ್ಚೆಯನ್ನು ದಾಟಿ, ಆಳವಾದ ಅನಂತದಲ್ಲಿ ಮುಳುಗಿದಂತಿತ್ತು, ಅವರ ಸ್ಥಿತಿ. ಅವರು ತಮ್ಮ ಬಾಳಿನೊಡನೆ ತಾವೇ ಆಟವಾಡುತ್ತಿದ್ದರು. ಆಸಕ್ತಿ-ಅನಾಸಕ್ತಿಗಳ ನಡುವೆ ನಿಂತು ಕಾದಿ, ಕಸನವಾಡಿ, ಅನಾಸಕ್ತಿಯ ಹೊಸ್ತಿಲಮೇಲೆ ಕೂತಂತಿತ್ತು ಅವರ ಮನಸ್ಸು. ಅಪಾರವಾದ ಐಶ್ವರ್ಯ, ವಿಸ್ತಾರವಾದ ಹೊಲಮನೆಗಳ ವ್ಯವಹಾರ. ವಿಶಾಲವಾಗಿ ಹರಡಿದ್ದ ವ್ಯಾಪಾರ. ಎಲ್ಲವನ್ನೂ ಕ್ರಮವಾದ ಒಂದು ವ್ಯವಸ್ಥೆಗೆ ಒಳಪಡಿಸಿ, ಯೋಗ್ಯ ವ್ಯವಸ್ಥಾಪಕರನ್ನು ಮೇಲ್ವಿಚಾರಣೆಗೆ ನೇಮಿಸಿ, ಹರೆಯಕ್ಕೆ ಬಂದ ಮಗನಿಗೆ ಸೂತ್ರಗಳನ್ನೆಲ್ಲಾ ವಹಿಸಿ ಅವರು ಆಸಕ್ತಿಯನ್ನು ಸೋಲಿಸಿದ್ದಾರೆ. ಜಮುನಾಲಾಲರ ಆತ್ಮಗರುಡನು ಗರಿಗೆದರಿ ಕೂತಿದಾನೆ. ರೆಕ್ಕೆ ಇನ್ನೂ ಬಲಿಯಬೇಕು. ಈ ಮನೋವೃತ್ತಿಯೇ ಅವರನ್ನು ಕೆಲವು ದಿನದ ಕೆಳಗೆ ಶ್ರೀ ರಮಣಮಹರ್ಷಿ, ಅರವಿಂದ ಘೋಷರ ಬಳಿಗೆ ಸೆಳೆದದ್ದು.

ವರ್ಧಾದಲ್ಲಿ ಮೊದಲು ನೋಡಿದಾಗಲೇ ಅವರ ಬಾಳಿನಲ್ಲಿ ಮೌನವಾಗಿ ಮಿಡಿಯುತ್ತಿದ್ದ ಈ ಶ್ರುತಿಯನ್ನು ಗುರುತಿಸಿಕೊಂಡೆ. ಅವರ ಎಲ್ಲ ಆಚರಣೆಗಳೂ ಕಾರ್ಯಕ್ರಮಗಳೂ ಈ ಶ್ರುತಿಗೆ ಸಮರಸವಾಗಿ ನಡೆಯುತ್ತವೆ. ಗಾಂಧೀಜಿಯ ಸರ್ವತೋಮುಖ ಸೃಷ್ಟಿಯಲ್ಲಿ ಜಮುನಾಲಾಲರದೇ ಒಂದು ವಿಶಿಷ್ಟ ಜಾತಿ. ಅವರೊಬ್ಬರದೇ ಆ ವ್ಯಕ್ತಿತ್ವ.

ಜಮುನಾಲಾಲರ ಕೊಡಗೈ ಹಿಂದುಸ್ತಾನಕ್ಕೆ ಚೆನ್ನಾಗಿ ಗುರುತಾಗಿದೆ. ಅಸಹಕಾರದ ದಿನಗಳಲ್ಲಿ ವಕೀಲಿ ಬಿಟ್ಟುಕೊಟ್ಟ ದೇಶಸೇವಕರಿಗಾಗಿ ಅವರು ನೀಡಿದ ಒಂದು ಲಕ್ಷ ರೂಪಾಯಿಗಳ ನಿಧಿಯೇ ಮುಂದೆ ತಿಲಕಸ್ವರಾಜ್ಯ ನಿಧಿಯಾಗಿ ಬೆಳೆಯಿತು. ಒಂದು ಲಕ್ಷ ಬೆಲೆ ಬಾಳುವ ಮಗನವಾಡಿಯ ತೋಟ ಅವರದು. ಗಾಂಧೀಜಿಯ ಆರ್ಥಿಕ ಕಾರ್ಯಕ್ರಮಗಳ ಪ್ರಯೋಗಕ್ಕಾಗಿ ಅದು ದತ್ತವಾಗಿದೆ.

ಮಹಾತ್ಮರ ಈಗಿನ ಆಶ್ರಮವಿರುವ ಸೇಗಾಂವ ಅವರ ಸೊತ್ತು. ಸಾಬರಮತಿಯ 'ಉದ್ಯೋಗ ಮಂದಿರ' ವನ್ನು ತ್ಯಾಗ ಮಾಡಿ ಸ್ವರಾಜ್ಯ ಸಿಗುವವರೆಗೆ ಅಲ್ಲಿ ಕಾಲಿಡೆನೆಂದು ಶಪಥ ತೊಟ್ಟು ಮಹಾತ್ಮರು ಇಡೀ ಹಿಂದುಸ್ತಾನವನ್ನೇ ಸಞ್ಚರಿಸಿದಾಗ ಅವರಿಗೆ ವಸತಿ ಕಲ್ಪಿಸಿದವರು ಜಮುನಾಲಾಲರು, ರಾಷ್ಟ್ರಸೇವೆಯಲ್ಲಿ ಮನೆ ಮುರಿದುಕೊಂಡ ಕೆಲಸಗಾರರ ಮಕ್ಕಳಿಗಾಗಿ ಆಶ್ರಯಸ್ಥಾನವನ್ನು ಕಟ್ಟಿದುದು ಅವರ ಉದಾರ ಸ್ವಭಾವ. ಅದೇ ಇಂದು ಅತ್ಯುತ್ತಮವಾದ ಮಹಿಳಾಶ್ರಮವಾಗಿದೆ. ಓದುವ ಹುಡುಗರಿಗೆ ಛಾತ್ರವೃತ್ತಿ, ಆಪದ್ಗ್ರಸ್ತರಿಗೆ ಸಹಾಯ, ರಾಷ್ಟ್ರಕಾರ್ಯಕ್ಕೆ ಪ್ರೋತ್ಸಾಹ, ಕಾರ್ಯಕರ್ತರಿಗೆ ಅನುಕೂಲ—ಇತ್ಯಾದಿ ಕ್ಷೇತ್ರಗಳಲ್ಲಿ ಅವರ ಔದಾರ್ಯ ಎಷ್ಟು ಆಳವಾಗಿ ಹರಿದಿದೆ ಎಂಬುದನ್ನು ತಿಳಿಯುವುದು ಕೂಡ ದುಸ್ಸಾಧ್ಯ.

ಮೇಲು—ಕೀಳು ಎಂಬ ಭಾವನೆ ಇವರಲ್ಲಿಲ್ಲ. ಹಿರಿಯರು ಕಿರಿಯರೆಂಬ ಗೋಡೆಯಿಲ್ಲ. ಇವರ ಅಪಾರವಾದ ವ್ಯವಹಾರದಲ್ಲಿ ಎಷ್ಟೋ ಜನ ಕೆಲಸಗಾರರು ತೊಡಗಿದ್ದಾರೆ. ಯಾರಿಗೂ ಇವರ ಅಧಿಕಾರದ ಕೊಂಡಿಯ ಪರಿಚಯವಾಗಿಲ್ಲ. ಬಜಾಜವಾಡಿ, ಬಜಾಜ ವ್ಯವಹಾರ—ಎಲ್ಲಾ ಒಂದು

ಕುಟುಂಬವಿದ್ದಂತೆ. ಇವರು ಯಜಮಾನರು. ಈ ಮಟ್ಟವನ್ನು ದಾಟಿ ಯಾರ ಭಾವನೆಯೂ ಹೋಗದಂತೆ ಬಜಾಜರು ಜೀವನವನ್ನು ನಡೆಸಿದ್ದಾರೆ. ಅವರೆಲ್ಲರ ಮದುವೆ–ಮುಂಜಿ, ಮನೆ–ಮಾರು, ಅಂತರಂಗದ ಸಮಸ್ಯೆಗಳು–ಎಲ್ಲವೂ ಇವರಲ್ಲಿ ಚರ್ಚೆಯಾಗಬೇಕು. ಇವರ ಸೂಚನೆಯಂತೆ ಅವರು ನಿರ್ಣಯಿಸಿಕೊಳ್ಳುತ್ತಾರೆ. ಯಾರಿಗೂ ಇವರು 'ಸೇಠಜೀ' ಆಗಿಲ್ಲ. ಎಲ್ಲರಿಗೂ ' ಕಾಕಾಜೀ'. ಇದೇ ಅವರ ಸೌಜನ್ಯದ ಸೂತ್ರ.

ಅತಿಥಿ ಭವನದಲ್ಲಿ ಕೂತು ' ಧನಿಕರೆಲ್ಲ ಜಮುನಾಲಾಲರಾಗಬಾರದೇಕೆ ? ಕೆರೆಯಲ್ಲಿ ನೀರು ನಿಂತರೆ ಹೊಲಕ್ಕೆ ಹೆದರಿಕೆಯೇನು ? ಅಡ್ಡಿಯೇನು ? ' ಎಂದು ನನ್ನನ್ನು ನಾನೇ ಕೇಳಿದ್ದೇನೆ. ' ಇಂಥ ತ್ಯಾಗಿಗಳನ್ನು ನೋಡಿಯೇ ಇರಬೇಕು, ಹಣವಂತಿಕೆ ರಾಷ್ಟ್ರವಿಕಾಸಕ್ಕೆ ಅಹಿತವಲ್ಲವೆಂದು ಗಾಂಧೀಜೀ ನಿರ್ಣಯಕ್ಕೆ ಬಂದುದು ' ಎಂದುಕೊಂಡಿದ್ದೇನೆ.

ಆದರೆ ಜಮುನಾಲಾಲರ ಜೀವನದಲ್ಲಿ ಅವರ ತ್ಯಾಗ, ದಾನಗಳು ಅಷ್ಟು ಪ್ರಧಾನವಲ್ಲ. ಅವರ ವಜ್ರಹೃದಯ, ವಿರಕ್ತ ಸ್ವಭಾವ, ವಿಶಾಲ ದೃಷ್ಟಿ, ಧೀರ ಶಾಂತತೆಗಳು ಅವರ ಬಾಳಿಗೆ ಬಣ್ಣ ಕೊಟ್ಟಿವೆ. ರಾಷ್ಟ್ರಹಿತಕ್ಕಾಗಿ ಅವರು ಮಾಡಿದ ಮೂಕಸೇವೆ ಅವರಿಗೆ ಈಗಿರುವ ಸ್ಥಾನಮಾನವನ್ನು ಕೊಟ್ಟಿದೆ. ಗಾಂಧೀಜಿಯ ತತ್ವದಲ್ಲಿ ಅವರಿಗಿರುವ ಅಚಲ ಶ್ರದ್ಧೆಯೇ ಅವರ ಬೆಳಕಾಗಿದೆ. ಮಾರವಾಡೀ ಸಮಾಜದಲ್ಲಿ ಸುಧಾರಣೆಗಳನ್ನು ತರಲು ಅವರು ಮಾಡಿದ ಪ್ರಯತ್ನ, ಪಟ್ಟ ಕಷ್ಟ ನಷ್ಟ, ಕೊಟ್ಟ ಬಲಿದಾನಗಳು ಅವರ ಬಾಳನ್ನು ಗಟ್ಟಿಮಾಡಿವೆ.

ಇಂದಿನ ಹಿಂದುಸ್ತಾನದ ಅನೇಕ ನಾಯಕರಿಗೆ ಗಾಂಧೀಜೀ ಗುರುಗಳಾಗಿ ' ಪುನರ್ಜನ್ಮ ' ಕೊಟ್ಟಿದ್ದಾರೆ. ಆ ಗಾರುಡಿಗನ ಕೈಚಳಕದಿಂದ ಕಸವೆಷ್ಟೋ ರಸವಾಗಿದೆ. ಜಮುನಾಲಾಲರೂ ಮೊದಲು ' ಟೊಳ್ಳು ' ಜಾತಿಗೆ ಸೇರಿದವರೆ. ಆಗರ್ಭ ಶ್ರೀಮಂತರಾಗಿ ಸುಖಭೋಗಗಳಲ್ಲಿ ನಿರತರಾಗಿದ್ದವರು. ಪಕ್ಕಾ ಸೇಠರಂತೆ ಹಣ ಗಳಿಸುವುದರಲ್ಲಿ ತೊಡಗಿದ್ದರು. ಅಧಿಕಾರಿಗಳ ಅನುಗ್ರಹಕ್ಕೆ ಪಾತ್ರರಾಗಿ ಹರೆಯದಲ್ಲೇ ರಾವಬಹದೂರಿ

ಯನ್ನು ಪಡೆದುಕೊಂಡಿದ್ದರು. ಬಿಟ್ರೀ ಮ್ಯಾಜಿಸ್ಟ್ರೇಟರ ಒಂದು ಗೌರವ ಕೆಲಸವೂ ಅವರ ಕೊರಳಿಗೆ ಬಿದ್ದಿತು. ಆ ಏಣಿಯನ್ನೇ ಹತ್ತಿದ್ದರೆ ಈಗ ಅವರು ಸರ್ ಇತ್ಯಾದಿ ಆಗಬಹುದಾಗಿತ್ತು. ಆದರೆ ಗಾಂಧೀಜಿಯವರ ರಣದುಂದುಭಿ ಇವರನ್ನು ಬೇರೆ ಹಾದಿಗೆ ಕರೆಯಿತು. ಸುಖ-ಭೋಗಗಳ ನಡುವೆ ಇದ್ದರೂ ಜಮುನಾಲಾಲರಿಗೆ ಆ ಕರೆ ಕೇಳಿಸದಿರಲಿಲ್ಲ. ಆ ವಿರಕ್ತ ಸ್ವಭಾವಕ್ಕೆ ಇದರಲ್ಲೊಂದು ಬೆಳಕು ಕಂಡಿತು. ಅಂದಿನಿಂದ ಇಂದಿನ ವರೆಗೆ ಅವರು ಮಾಡಿದ ರಾಷ್ಟ್ರಸೇವೆ ಅಮೂಲ್ಯವಾದದ್ದು.

ಗಾಂಧೀಜಿಯಲ್ಲಿ ಇವರಿಗೆ ಅಪಾರ ವಿಶ್ವಾಸ, ಭಕ್ತಿ. ಅವರ ರಾಜಕೀಯ ನೀತಿಯಲ್ಲಿ ಬಲವಾದ ನಂಬಿಗೆ, ರಚನಾತ್ಮಕ ಕ್ರಮದಲ್ಲಿ ಒಲವು. ಖಾದೀಕಲೆಗೆ ಸ್ಥಿರಸ್ವರೂಪ ಕೊಡುವುದಕ್ಕಾಗಿ ಬಹಳ ದುಡಿದಿದಾರೆ. ಗಾಂಧೀಜೀ ಮೊದಲು ಸೆರೆಮನೆಗೆ ಹೋದಾಗ ಇವರೇ ಖಾದೀ ಕಾರ್ಯದ ಹೊಣೆ ಹೊರಲು ಮುಂದೆ ಬಂದವರು. ಹರಿಜನ ಸೇವೆಯಲ್ಲೂ ಇವರ ಕೈಪಳಗಿದೆ. ಈಗಂತೂ ಗಾಂಧೀಜಿಯ ಅನೇಕ ಕನಸುಗಳನ್ನು ರೂಪಕ್ಕೆ ತರುವ ಕೈವಾರಿಯಾಗಿದಾರೆ. ಅಂತೆ ಇವರನ್ನು ಗಾಂಧೀ ಮಠದ ಮಹಂತರೆಂದು ನಾನು ಕರೆದದ್ದು.

೧೯೨೦ರ ಆ ಮರೆಯಲಾಗದ ಕಾಂಗ್ರೆಸ್ಸಿನ ಕಾಲಕ್ಕೆ ಜಮುನಾಲಾಲರು ಮೊದಲು ರಾಷ್ಟ್ರಸಭೆಗೆ ಸೇರಿದುದು. ನಾಗಪುರದಲ್ಲಿ ಆಗ ಕಾಂಗ್ರೆಸ್ಸು. ಅದಕ್ಕೆ ಇವರು ಸ್ವಾಗತಾಧ್ಯಕ್ಷರಾಗಿದ್ದರು. ಕಾಂಗ್ರೆಸ್ಸಿಗೆ ಸೇರಿದ್ದೇ ತಡ, ಯುದ್ಧಕ್ಕೇ ತೊಡಗಬೇಕಾಯಿತು. ಸುಖ ಸಂಪತ್ತು, ಪದವಿ—ಎಲ್ಲಾ ಬಿಟ್ಟು, ಸತ್ಯಾಗ್ರಹ ಸೇನೆಯ ಸಾಮಾನ್ಯ ಸಿಪಾಯಿಯಂತೆ ಸಿದ್ಧವಾದರು. ಇಡೀ ಹಿಂದುಸ್ತಾನದಲ್ಲಿ ಶಾಸನೋಲಂಘನಕ್ಕೆ ಮಾರ್ಗವನ್ನು ಪರಿಶೀಲಿಸಲು ೧೯೨೨ರಲ್ಲಿ ಒಂದು ಸಮಿತಿ ಏರ್ಪಾಟಾಯಿತು. ಅವರು ಭಾರತವನ್ನೆಲ್ಲ ಸುತ್ತಿ ಕೆಲವು ಸೂಚನೆಗಳನ್ನು ಮಾಡಿದರು. ಆ ಸಮಿತಿಯಲ್ಲಿ ಜಮುನಾಲಾಲರೂ ಒಬ್ಬರು. ಮರುವರ್ಷವೇ ನಾಗಪುರದಲ್ಲಿ ಧ್ವಜ ಸತ್ಯಾಗ್ರಹ ನಡೆಯಿತು. ಅದಕ್ಕೆ ಇವರೇ ಮುಂದಾಳಾಗಿದ್ದರು. ಸೆರೆಮನೆಯಲ್ಲಿ ೮-೧೦ ಸೇರು ದವಸವನ್ನು ಒಬ್ಬರೆ ಬೀಸಬೇಕಾಗುತ್ತಿತ್ತು. ಆದರ್ಶ ಸತ್ಯಾಗ್ರಹಿಯಂತೆ ಅದನ್ನು

ಸಹಿಸಿಕೊಂಡರು. ಇವರಿಗೆ ಕೊಟ್ಟ ಶಿಕ್ಷೆಯಲ್ಲಿ ದಂಡವೂ ಇತ್ತು. ಇವರ ಮೋಟಾರನ್ನು ಸ್ವಾಧೀನ ಪಡಿಸಿಕೊಂಡು ಪ್ರಭುತ್ವವು ಅದನ್ನು ಮಾರಿ, ದಂಡದ ಹಣ ಸಲ್ಲಿಸಿಕೊಳ್ಳುವ ಪ್ರಯತ್ನ ಮಾಡಿತು. ಇಡೀ ಜಿಲ್ಲೆಯಲ್ಲೇ ಅದನ್ನು ಕೊಳ್ಳುವ ಕಲ್ಲೆದೆಯ ಪ್ರಾಣಿ ಯಾರೂ ಮುಂದೆ ಬರಲಿಲ್ಲ. ಎಲ್ಲಿಗೋ ಪರಪ್ರಾಂತಕ್ಕೊಯ್ದು ಮಾರಿದರಂತೆ.

ಮುಂದಿನ ಸಮರದಲ್ಲಿ ಹೆಂಡತಿ ಮಕ್ಕಳೊಡನೆ ರಂಗದಲ್ಲಿಳಿದಿದ್ದರು. ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯಲ್ಲಿ ಬಹಳ ದಿನಗಳಿಂದಲೂ ಇದ್ದಾರೆ. ಕಾಂಗ್ರೆಸ್ಸಿನ ಕೋಶಾಧಿಕಾರವು ಆಗಿನಿಂದಲೂ ಇವರಿಗೇ ಪಟ್ಟಗಟ್ಟಲ್ಪಟ್ಟಿದೆ. ಆದರೂ ಆ ಸಮಿತಿಯ ಕಾರ್ಯಕಲಾಪಗಳಲ್ಲಿ ಇವರು ಹೆಚ್ಚು ಗದ್ದಲಕ್ಕೆ ಹೋಗಿಲ್ಲ. ಮೊದಲೇ ಮಾತು ಮಿತವರಿತು ಆಡುವ ಸ್ವಭಾವ. ಅದರಲ್ಲೂ ಚರ್ಚೆಗಿಳಿಯುವುದು ಕಡಿಮೆ. ಆದರೆ ಠರಾವುಗಳು ಕಾರ್ಯ ರಂಗಕ್ಕೆ ಇಳಿದರೆ ಇವರದೇ ಮೊದಲನೆ ಹೆಜ್ಜೆ. ಎರಡನೆಯ ಸತ್ಯಾಗ್ರಹ ದಲ್ಲಿ ಸರದಾರರು ಸೆರೆಯಾದ ಮೇಲೆ ಇವರು ಕಾಂಗ್ರೆಸ್ಸಿನ ಹಂಗಾಮಿ ಅಧ್ಯಕ್ಷರಾಗಿದ್ದರು. ಈಗಲೂ ಮಧ್ಯಪ್ರಾಂತದಲ್ಲಿ ಇವರ ಮಾತಿಗೆ ಇದುರಿಲ್ಲ.

ಹಿಂದೂ ಮುಸ್ಲಿಮ ಐಕ್ಯ, ವರ್ಣಾಂತರ ಸೌಹಾರ್ದ್ರಗಳಿಗಾಗಿ ಜಮನಾಲಾಲರ ಪ್ರಯತ್ನಗಳು ಅನೇಕ ವಿಧದಲ್ಲಿ ನಡೆದಿವೆ. ಭಿನ್ನ ಪ್ರಾಂತಗಳಲ್ಲಿ—ಭಿನ್ನ ವರ್ಣಗಳಲ್ಲಿ, ಬೇರೆ ಬೇರೆ ಶಾಲೆಗಳಲ್ಲಿ ಸಂಬಂಧ ಗಳನ್ನು ಗಂಟು ಹಾಕಿ 'ರಾಷ್ಟ್ರೀಯ ವಿವಾಹ' ಗಳನ್ನು ಮಾಡಿದಾರೆ. ಇದರ ಫಲವಾಗಿ ಅವರಿಗೆ 'ಷಾದಿಲಾಲ್ ಎಂಬ ಅಡ್ ಹೆಸರು ಒಂದು ಬಂದಿದೆ. ದೇವದಾಸಗಾಂಧಿ, ರಾಮದಾಸಗಾಂಧಿಯ ಮದುವೆಗಳು ಇವರ ಕೈವಾಡ. ಸರಹದ್ದು ಪ್ರಾಂತದ ಪ್ರಧಾನರು ಡಾ. ಖಾನರ ಮಗ ಬೊಂಬಾಯಿಯ ಶ್ರೀಮತಿ ಸಫಿಯಾ ಸೋಮ್ಜಿಯ ಕೈಹಿಡಿದಿದ್ದಾರೆ. ಅವರು ಪಠಾನರು, ಇವರು ಬೋಹ್ರಾಜಾತಿ. ಇದಕ್ಕೆ ಕಾರಣ, ಜಮನಾ ಲಾಲರು. ಪ್ರಸಿದ್ಧಿಗೇರದ ಮದುವೆಗಳು ಎಷ್ಟೋ ಆಗಿವೆ.

ರಾಷ್ಟ್ರಸೇವೆಯ ಮಬ್ಬಿನಲ್ಲಿ ಇವರು ತಮ್ಮ ಜಾತಿಯ ಸೇವೆ ಯನ್ನು ಮರೆತಿಲ್ಲ. ಮಾರವಾಡೀ ಸಮಾಜದಲ್ಲಿ ಹೇರಳವಾಗಿ ಸುಧಾರಣೆ

ಗಳನ್ನು ತಂದಿಟ್ಟಿದ್ದಾರೆ. ಇವರ ಈ ಉತ್ಸಾಹಕ್ಕಾಗಿ ಎಷ್ಟೋ ಸಲ ಪುರಾತನವಾದಿಗಳ ಅಂಗಾರಕ ದೃಷ್ಟಿಗೆ ಗುರಿಯಾಗಬೇಕಾಯಿತು. ಆದರೂ ಎದೆಗುಂದದೆ ಇನ್ನೂ ಆ ಹಾದಿಯಲ್ಲೇ ಇದ್ದಾರೆ. ಜಮುನಾ ಲಾಲರು ಬಹಳ ಮಿದು. ಬಹಳ ಶಾಂತ. ಆದರೆ ಒಮ್ಮೆ ಹಟತೊಟ್ಟರೆ ಆಯಿತು, ಚಾಣಕ್ಯಶಪಥ. ಬಾಳಿನಲ್ಲಿ ಎಷ್ಟು ಸರಳವೋ ಅಷ್ಟೇ ಕಠೋರ ಸಂಯಮ. ರಾಜ ಮಹಾರಾಜರಂತೆ ಬದುಕುವ ಅನುಕೂಲವಿದೆ. ಆಸೆಯೂ ಇತ್ತು. ಗಾಂಧೀಯುಗದಲ್ಲಿ ಆದರ್ಶ ಗೃಹಸ್ಥನಂತೆ, ಆದರ್ಶ ಸತ್ಯಾಗ್ರಹಿಯಂತೆ ಇರುವ ಹಟತೊಟ್ಟಮೇಲೆ ಎಲ್ಲಕ್ಕೂ ಎಳ್ಳುನೀರು ಕೊಟ್ಟರು. ಸತ್ಯಾಗ್ರಹವು ಸರಕಾರದೊಡನೆ ಹೊಡೆದಾಡುವ ಶಸ್ತ್ರವಲ್ಲ. ಅದೊಂದು ಜೀವನದ ರೀತಿ, ಹಾದಿ. ಅದು ಜೀವನದ ಮೂಲ ತತ್ವ. ಹೀಗೆ ಗಾಂಧೀಜೀ ಹೇಳಿದ್ದಾರೆ, ಹೇಳುತ್ತಾರೆ. ಜಮುನಾಲಾಲ ರನ್ನು ನೋಡಿ ಅದು ನಿಜ ಎನ್ನಿಸುತ್ತದೆ. ಅಷ್ಟೇ ಅಲ್ಲ. ಸತ್ಯಾಗ್ರಹವು ಅಸಿಧಾರಾವ್ರತ ಎನ್ನುವುದು ಮನವರಿಕೆಯಾಗುತ್ತದೆ.

ಜಮುನಾಲಾಲರಿಗೆ ಅಷ್ಟಾಗಿ ವಿದ್ಯಾಭ್ಯಾಸವಾಗಿಲ್ಲ. ಆಗದಿದ್ದುದೇ ಒಳ್ಳೆಯದಾಯಿತೆಂದು ತೋರುತ್ತದೆ. ವಿದ್ಯೆ ಬೆಳೆದರೆ ಬಾಳಿನಲ್ಲಿ ಶ್ರದ್ಧೆ, ಗೌರವ ಕಡಿಮೆಯಾಗುತ್ತದೆ. ಜೀವನವು ಬರೀ ಒಣ ವ್ಯವಹಾರವಾಗಿ ಬಿಡುತ್ತದೆ. ಜಮುನಾಲಾಲರಿಗೆ ಎದೆ ತುಂಬ ಧೈರ್ಯವಿದೆ. ಜೀವನದ ವೈಶಾಲ್ಯದಲ್ಲಿ ನಂಬಿಕೆಯಿದೆ. ಆದರ್ಶವನ್ನು ಸಾಧಿಸಿಯೇನು ಎಂಬ ದೃಢವೂ ಇದೆ. 'ಸಂಶಯಾತ್ಮ'ವಾದ ಬುದ್ಧಿಯನ್ನು ಮೀರಿ 'ಶ್ರದ್ಧಾ ಯೋಗ'ದಲ್ಲಿ ನಿರತರಾಗುವ ಈ ಅವಕಾಶ ಆಗ ಇರುತ್ತಿರಲಿಲ್ಲವೇನೋ!

ಆದರೂ ಇವರು ಟೀಕೆ–ಅಪನಿಂದೆಗಳಿಗೆ ಗುರಿಯಾಗದಿಲ್ಲ. ಸಾವಿರ ನಾಲಗೆಗಳ ಕಾಲ ಇದು. ಕಾಂಗ್ರೆಸ್ಸಿನ ಹಣದ ಬಗ್ಗೆ–ಇನ್ನೂ ಕೆಲವು ಮಾತಿನ ಬಗ್ಗೆ ಜನ ಇವರನ್ನು ನಿಂದಿಸಿದರು. ಜಮುನಾಲಾಲರು ಎಲ್ಲ ರನ್ನೂ ಇದುರಿಸಿ, ಇದುರಾಳಿಗಳಿಗೆ ಉತ್ತರಕೊಟ್ಟು, ಎಲ್ಲರಿಂದ ಕ್ಷಮಾ ಪಣೆ ಬೇಡಿಸಿಕೊಂಡಿದ್ದಾರೆ.

ಇನ್ನೂ ಐವತ್ತು ವರ್ಷ. ಒಳ್ಳೇ ದೃಢಕಾಯ. ಜಮುನಾಲಾಲರ ಚಿಕ್ಕೆ ಇನ್ನೂ ಮೇಲೇರುವುದರಲ್ಲಿ ಸಂದೇಹವಿಲ್ಲ.

# ಜಯರಾಮದಾಸ ದೌಲತ್‌ರಾಂ

•

'ನಾ ಹೆಚ್ಚೋ ನಿನ್ನ ತವರ್ಹೆಚ್ಚೋ' ಎಂದು ದುಃಖಿತಳಾಗಿದ್ದ ಗರತಿಯನ್ನು, ಹಳ್ಳಿಯ ನಲ್ಲನೊಬ್ಬನು ಒಳಗೆ ಹೋಗಿ ಕೇಳಿದನಂತೆ. ಜನಪದ ಸಾಹಿತ್ಯದಲ್ಲಿ ಬರುವ ಈ ಚಿತ್ರ ಜಗತ್ತಿನ ಕೌಟುಂಬಿಕ ಜೀವನದ ಅನಾದ್ಯನಂತವಾದ ಕೂಟಪ್ರಶ್ನೆ ಯೊಂದನ್ನು ಸಹಜಮಧುರವಾಗಿ ಚಿತ್ರಿಸುತ್ತದೆ. ತವರಿನ ಮಮತೆ ಎಂಥ ಹೆಣ್ಣಿಗೂ ತಪ್ಪಿದ್ದಲ್ಲ. ತಪ್ಪಬೇಕಾದ ಆಗತ್ಯವೂ ಕಾಣುವುದಿಲ್ಲ. ಪತಿಯ ಪ್ರೇಮವಂತೂ ಹೊಸ ಲೋಕವನ್ನೇ ತೆರೆದುಕೊಟ್ಟಿದೆ. ಜೀವನಪ್ರವಾಹಕ್ಕೆ ಎರಡು ದಂಡೆಗಳು. 'ಅದು ಹೆಚ್ಚು ಇದು ಹೆಚ್ಚು' ಎಂಬ ತರ್ಕಕ್ಕೆ ಅಲ್ಲಿ ಸ್ಥಾನವಿಲ್ಲ. ಹೀಗಿದ್ದರೂ ಗರತಿಗೆ ತವರಿಗಿಂತ ಪತಿಗೃಹಹೆಚ್ಚೇ. ಮಡದಿಯ ಒಲವಿನ ಬಾಳಿನಲ್ಲಿ ಇಂಥ ವಿಚಿತ್ರಪ್ರಶ್ನೆಯೂ ಕೂಡ ಮಗಳ ಮಮತೆಯೊಡನೆ ಮುಳುಗಿಹೋಗುತ್ತದೆ. ಪತಿಯ ಈ ಪ್ರಶ್ನೆಗೆ ಸತಿಯ ಮೌನ—ಸ್ಪಷ್ಟವಾಗಿಯೇ ನೀರವವಾಗಿ ಕೇಳಿಸುವ ಮೆಲು ನಗೆಗಳಿಗೆ ಬೇರೆ ಅರ್ಥವಿಲ್ಲ.

ಜೀವನದ ಅನೇಕ ರಂಗಗಳಲ್ಲಿ ಇಂಥ ಸಮಸ್ಯೆಗಳು ಮಾನವನ ಕಣ್ಣ ಮುಂದೆ ಬಂದು ನಿಲ್ಲುತ್ತವೆ. ಸಮರಸ ಜೀವನದ ತೂಕ ತಪ್ಪಿದರೆ ಕಾರ್ಪಣ್ಯದ ಪಾಲಾಗಿ ಧರ್ಮಸಮ್ಮೂಢರಾಗುವುದು ಇಂಥ ಸಂದರ್ಭದಲ್ಲಿ ಸಹಜ. ಸಾಧಾರಣ ಜನರಲ್ಲಿ ಆ ತೂಕವಿರದೆ ಆ ಸಮರಸಜೀವನದ ನೆಲೆಯಿರದೆ ಬಾಳು ಕಹಿಯಾಗಿ ಹೋಗುತ್ತದೆ; ತವ್ಪುಗಂಟಾಗುತ್ತದೆ. ತತ್ತ್ವಕ್ಷೇತ್ರದಲ್ಲಿ, ರಾಜಕೀಯ ರಂಗದಲ್ಲಿ, ವ್ಯವಹಾರದಲ್ಲಿ ಇಂಥ ಪ್ರಶ್ನೆಗಳು ತಿಳಿಗಣ್ಣವರಿಗೆ ಸದಾ ಬರುತ್ತಿರುತ್ತವೆ.

ಒಮ್ಮೊಮ್ಮೆ ಇಂಥ ಪ್ರಶ್ನೆಗಳಿಗೆ ಒಬ್ಬಿಬ್ಬರು ಧಿರೋದಾತ್ತರು ಕೊಟ್ಟ ಉತ್ತರ, ಇಂಥ ಸಂದರ್ಭಗಳಲ್ಲಿ ಅವರು ನಡೆದುಕೊಂಡ ರೀತಿ ದೇಶದ-ಜನಾಂಗದ–ಹೊಸ ಇತಿಹಾಸಕ್ಕೇ ಕಾರಣವಾಗಬಹುದು.

ಹಿಂದುಸ್ತಾನದ ಸದ್ಯದ ರಾಜಕೀಯ ಜೀವನದಲ್ಲಿ ಇಂಥದೊಂದು ಕಠಿಣ ಸಮಸ್ಯೆ ಅಡಿಯ ಕೆಸರೊಳಗಿಂದ ತೇಲಿ ಬಂದಿದೆ. ಪರಿಸ್ಥಿತಿಗೆ ಅನುಸಾರವಾಗಿ ಬೇರೆ ಬೇರೆ ರೂಪಗಳಿಂದ ಕಂಡು ಬಂದರೂ ಎಲ್ಲ ಕಡೆಯೂ ವ್ಯಾಪಿಸಿದೆ. 'ರಾಷ್ಟ್ರೀಯತೆ ಹೆಚ್ಚೋ ಜಾತಿನಿಷ್ಠೆಯು ಹೆಚ್ಚೋ?' ಎಂಬ ಸಂದೇಹ ಎಲ್ಲೆಡೆಯಲ್ಲೂ ಹಬ್ಬಿದೆ. ಮಹಮ್ಮದೀಯರಲ್ಲಿ ಈ ಸಂಶಯ ಇನ್ನೂ ಬೆಳೆದಿಲ್ಲವಾಗಲಿ, ಹಿಂದುಗಳಲ್ಲಿ ಎಲ್ಲರೂ ತಮತಮಗೆ ತೋರಿದಂತೆ ಈ ಪ್ರಶ್ನೆ ಬಿಡಿಸುತ್ತಿದ್ದಾರೆ. ಹಿಂದೂಜನ ಬಹುಸಂಖ್ಯಾಕರಾಗಿಯೂ ಬಲಿಷ್ಠರಾಗಿಯೂ ಇದ್ದರೆ ರಾಷ್ಟ್ರೀಯತೆ ಸಹಜವಾಗಿ ಬರುತ್ತದೆ. ಬಹುಸಂಖ್ಯಾಕರಾಗಿದ್ದೂ ದುರ್ಬಲರಾಗಿರುವೆಡೆ, ಬಲಿಷ್ಠರಾಗಿದ್ದರೂ ಅಲ್ಪಸಂಖ್ಯಾಕರಾಗಿರುವೆಡೆ ಜಾತಿನಿಷ್ಠೆ ಕೊಂಚವಾದರೂ ಇರುವುದು ಸಹಜವಾಗಿದೆ.

**ಶ್ರೀ ಜಯರಾಮದಾಸ್ ದೌಲತ್‌ರಾಮ್** ಅಂಥದೊಂದು ಪ್ರಾಂತಕ್ಕೆ ಸೇರಿದವರು. ಅವರ ಸಿಂಧಪ್ರಾಂತದಲ್ಲಿ ಹಿಂದೂ ಜನ ಅತಿ ಕಡಿಮೆ ಪ್ರಮಾಣದಲ್ಲಿದ್ದಾರೆ. ಮಹಮ್ಮದೀಯರು ಬಹಳ ಹೆಚ್ಚಿಗೆ ಇದ್ದಾರೆ. ಅವರ ಪ್ರಾಬಲ್ಯವೂ ಚೆನ್ನಾಗಿದೆ. ಪ್ರಬಲರಾದವರ ತುಳಿತಕ್ಕೆ ಸಿಕ್ಕು ದುರ್ಬಲರಾದವರ ಹಕ್ಕು-ಬಾಧ್ಯತೆಗಳಿಗಾಗಿ ಹೋರಾಡುವದು ಎಂಥವರಿಗೂ ಸಹಜ. ಅದರಲ್ಲೂ ಸ್ವಜಾತಿಯ ವಿಷಯ. ಜಯರಾಮದಾಸರು ಜನತೆಯ ಸೇವೆಗೆ ಮೊದಲಿಟ್ಟಾಗ ಸ್ವಾಭಾವಿಕವಾಗಿಯೇ ಮೇಲಿನ ಕೂಟಪ್ರಶ್ನೆ ಪ್ರತ್ಯಕ್ಷವಾಯಿತು. ೧೯೧೬ ರಲ್ಲಿ **ಆನಿ ಬಿಸೆಂಟಮ್ಮನ** ಹೊಂ ರೂಲು ಲೀಗಿನ ಚಳವಳಿಗೆ ಸೇರಿದಾಗಲೂ, ಮುಂದೆ ಮೂರು ವರ್ಷದ ಮೇಲೆ ಕಾಂಗ್ರೆಸ್ಸಿನ ಮಹಾಸಮುದ್ರದಲ್ಲಿ ಮುಳುಗು ಹಾಕಿದಾಗಲೂ ಜಯರಾಮದಾಸರ ಮನಸಿನಲ್ಲಿ ಸಂದೇಹಸಮರ ನಡೆದೇ ಇತ್ತು. ೧೯೨೦ ರಿಂದ ೧೯೨೪ ರ ವರೆಗೆ ಹಿಂದುಸ್ತಾನದಲ್ಲಿ

ರಾಷ್ಟ್ರೀಯತೆಯ ಉಗ್ರಜ್ವಾಲೆ ಉರಿಯಿತು. ಆಗ ಆ ಕಠೋರ ತಪಸ್ಸಿನ ಏಕಾಗ್ರತೆಯಲ್ಲಿ ಗುಪ್ತಗಾಮಿಯಾಗಿ ಹರಿಯುತ್ತಿದ್ದ ಈ ಸಂದೇಹದಲ್ಲಿ, ಜಾತಿನಿಷ್ಠೆ ತನ್ನ ಪ್ರಭಾವವನ್ನು ಬೀರಿತು. ೧೯೨೫ ರಲ್ಲಿ **ಲಾಲಾ ಲಜಪತರಾಯರು** ಹಿಂದೂ ಮಹಾಸಭೆಯ ಅಧ್ಯಕ್ಷರಾದರು. ಸರಿ; ಜಯರಾಮದಾಸರು ಹಿಂದೂ ಮಹಾಸಭೆಯ ಕಾರ್ಯದರ್ಶಿಯಾದರು. ಮೂರು ವರ್ಷ ಹಾಗೆಯೆ ಕಳೆಯಿತು.

ಆ ಮೂರು ವರ್ಷಗಳ ಮಥನದಲ್ಲಿ ಜಯರಾಮದಾಸರ 'ಕಸ್ಮೈ ದೇವಾಯ?'ದ ಉತ್ತರ ದೊರೆಯಿತು. ಜಾತ್ರಿ ತವರು, ರಾಷ್ಟ್ರ ಪತಿಯ ಮನೆ. ಜೀವನ ವಿರಾಟ್‌ಸ್ವರೂಪದಲ್ಲಿ ದೇಶವು ಪ್ರಕೃತಿಯಾದರೆ, ಜಾತಿ ರಾಷ್ಟ್ರಗಳು ಪುರುಷ-ಪುರುಷೋತ್ತಮರಿದ್ದಂತೆ; ಇದು ಅವರು ತಿಳಿದುಕೊಂಡ ಸತ್ಯ. ಮೂರನೆಯ ವರ್ಷವೇ ಜಯರಾಮದಾಸರು ಪೂರ್ಣ ಮನಸ್ಸಿನಿಂದ ಕಾಂಗ್ರೆಸ್ಸಿನಲ್ಲಿ ಸಮರಸವಾದರು.

ಹತ್ತು ಹನ್ನೆರಡು ವರ್ಷ ಎಡೆಬಿಡದೆ ದುಡಿದು ಸುರಿತಿದ್ದ ಬಂಟ ಆಳು. ೧೯೨೮ ರಲ್ಲಿ ಕಾಂಗ್ರೆಸ್ಸಿನಲ್ಲಿ ಪೂರ್ಣ ಶ್ರದ್ಧೆಯಿಂದ ತೊಡಗಿದುದೇ ತಡ, ಹೊಣೆಗಾರಿಕೆಯ ಕೆಲಸಗಳು ಅವರ ಪಾಲಿಗೆ ಕೂಡಲೆ ಬಂದವು. ಕಲ್ಕತ್ತೆಯ ಕಾಂಗ್ರೆಸಿನಲ್ಲಿ ಪರದೇಶೀ ವಸ್ತ್ರ-ಬಹಿಷ್ಕಾರ ಸಮಿತಿಯೊಂದು ಸರ್ವಾನುಮತಿಯಿಂದ ನಿರ್ಮಿತವಾಯಿತು. ಗಾಂಧೀಜಿಯೇ ಅದಕ್ಕೆ ಅಧ್ಯಕ್ಷರು. ಜಯರಾಮದಾಸರು ಅದರ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಬೇರೆ ಬೇರೆ ಪ್ರಾಂತಗಳಲ್ಲಿ ತಿರುಗಾಡಿ ಸಮಿತಿಯ ಕೆಲಸವನ್ನು ಸಮರ್ಪಕವಾಗಿ ಮಾಡಿದರು. ಕೈಕೊಂಡ ಈ ಕೆಲಸಕ್ಕೆ ಯಾವ ವಿಧವಾದ ಅಡಚಣೆಯೂ ಬರಬಾರದೆಂದು ಮುಂಬಯಿಯ ಶಾಸನ ಸಭೆಯ ಸದಸ್ಯತ್ವವನ್ನೂ ಬಿಟ್ಟುಕೊಟ್ಟರು. ಎರಡು ವರ್ಷದ ಈ ಅವಿಶ್ರಾಂತ ಪರಿಶ್ರಮದ ಫಲವಾಗಿ ೧೯೩೦ರಲ್ಲಿ ಜಯರಾಮದಾಸರು ಕಾಂಗ್ರೆಸ್ಸಿನ ಕಾರ್ಯದರ್ಶಿಗಳಲ್ಲಿ ಒಬ್ಬರಾಗಿ ಆರಿಸಲ್ಪಟ್ಟರು.

ಜಯರಾಮದಾಸರದು ಶಾಂತಸ್ವಭಾವ; ಮಾತು ಸ್ವಲ್ಪ ಕಡಮೆಯೇ. ಈಚೆಗೆ ಕೊಂಚ ಹೆಚ್ಚಾಗಿಯೇ ಬೇನೆ ಬಿದ್ದಿದ್ದರೂ ಮೊದಲಿ

ನಿಂದಲೂ ದೃಢಕಾಯರು. ಧೈರ್ಯ–ಸಾಹಸದಲ್ಲಿ ಅವರ ಸರಿಸಾಟಿಯು ಜನ ಸಿಗುವುದು ಅಪರೂಪ. ದೇಶನಾಯಕರ ಪ್ರಥಮ-ಶ್ರೇಣಿಯಲ್ಲಿ ಅವರ ಹಾಗೆ ಸಿಡಿಗುಂಡನ್ನು ಎದುರಿಸಿದವರೂ ಹುಲಿಯ ಬಾಯಲ್ಲಿ ಕೊರಳನ್ನು ಕೊಟ್ಟವರೂ ಮತ್ತೊಬ್ಬರಿಲ್ಲ. ನಿಜವಾಗಿಯೂ ಸಿಡಿ ಗುಂಡನ್ನು ಎದುರಿಸಿದ್ದಾರೆ ಜಯರಾಮದಾಸರು. ೧೯೩೦ ರ ಸತ್ಯಾಗ್ರಹದಲ್ಲಿ ಒಮ್ಮೆ 'ಕೆಲವರು ಸತ್ಯಾಗ್ರಹಿಗಳ ವಿಚಾರಣೆ ನಡೆದಾಗ' ನ್ಯಾಯಸ್ಥಾನದ ಮುಂದೆ ಜನರು ಗುಂಪಾಗಿ ಸೇರಿ ತಮ್ಮ ಭಕ್ತಿಪ್ರದರ್ಶನವನ್ನು ಮಾಡಿದರು. ಅಪರಾಧಿಗಳಿಗೆ ತಮ್ಮ ಕಣ್ಣೆದಿರೇ ಈ ಗೌರವವೆ? ಅಧಿಕಾರಿಗಳಿಗೆ ಇದು ಸಹನವಾಗಲಿಲ್ಲ; ಹೀಗಾದರೆ ರಾಜ್ಯತಂತ್ರ ಹೇಗೆ ನಡೆಯಬೇಕು? ಜನರಿಗೆ ಅಲ್ಲಿಂದ ಹೊರಟು ಹೋಗಲು ಕಟ್ಟಪ್ಪಣೆಯಾಯಿತು. ಜನ ಚದರಲಿಲ್ಲ, ಕದಲಲೇ ಇಲ್ಲ. ಈ ವಿಧೇಯತೆಗೆ ಗುಂಡಿನೇಟೇ ಉಪಾಯವೆಂದು ರೋಷದಿಂದ ತೀರ್ಮಾ ನಿಸಿದರು. ಕೂಡಲೆ ನಿಃಶಸ್ತ್ರರೂ ರಕ್ಷಣೋಪಾಯರಹಿತರೂ ಆದ ಜನರ ಮೇಲೆ ಗುಂಡಿನ ಸುರಿಮಳೆಯಾಯಿತು. ಆ ಗುಂಪಿನಲ್ಲಿ ಜಯರಾಮ ದಾಸರೂ ಇದ್ದರು. ಅವರಿಗೂ ಗುಂಡಿನೇಟು ಒಂದು ತಗುಲಿತು; ಅಲ್ಲಿಯವರೆಗೂ ಅವರೇನು ಸ್ಥಳ ಬಿಡಲಿಲ್ಲ. ಏಟು ತಗಲಿ ಕೆಳಗೆ ಬಿದ್ದ ಮೇಲೆ ಹತ್ತಿರಿದ್ದವರು ಅವರನ್ನು ಆಸ್ಪತ್ರೆಗೆ ಸಾಗಿಸಿದರು. ಮತ್ತೊಮ್ಮೆ ಮುಂಬಯಿಯಲ್ಲಿ ತಿಲಕರ ಜನ್ಮದಿನೋತ್ಸವಕ್ಕಾಗಿ ನಡೆಯಿಸಿದ್ದ ಮೆರ ವಣಿಗೆಯೊಂದರ ಗುಂಪಿನ ಮೇಲೆ ಪೋಲೀಸರ ಲಾಠೀ ಪ್ರಯೋಗವಾ ಯಿತು. ಸೈಮನ್ ಸಮಿತಿಯ ಬಹಿಷ್ಕಾರದ ಸಂದರ್ಭದಲ್ಲಿ ಲಾಹೋರಿ ನಲ್ಲಿ ಲಜಪತರಾಯರು ಶಾಂತಚಿತ್ತದಿಂದ ಲಾಠೀಪ್ರಯೋಗವನ್ನು ಎದು ರಿಸಿದಂತೆ ಜಯರಾಮದಾಸರೂ ಸಾವಧಾನತೆಯಿಂದ ಅದನ್ನು ಎದುರು ಗೊಂಡರು. ಸತ್ಯಾಗ್ರಹ-ಯುದ್ಧದ ಸಂಗ್ರಾಮಸಿಂಹರು ಅವರು.

ಮೊನ್ನೆ ಮೊನ್ನೆಯ ರಾಷ್ಟ್ರೀಯರಂಗದಲ್ಲಿ ಹೆಸರುವಾಸಿಯಾಗಿ ದ್ದರೂ ಜಯರಾಮದಾಸರು ೧೯೧೯ರಲ್ಲೆ–೩೦ ವರ್ಷದ ಕೆಳಗೆ-ಕಾಂಗ್ರೆಸು ಸೇರಿದರು. ಆಗಲೇ ರೌಲೆಟ್ ಶಾಸನ ಸತ್ಯಾಗ್ರಹವನ್ನು ಗಾಂಧೀಜೀ ಮೊದಲು ಮಾಡಿದ್ದು. ಜಯರಾಮದಾಸರು ವೃತ್ತಿಯಿಂದ ವಕೀಲರು.

೧೯೧೪-೧೫ ರಲ್ಲಿ ವಕೀಲಿ ಪ್ರಾರಂಭಿಸಿದ್ದರು. ನಾಲ್ಕು ವರ್ಷ ಆ ವೃತ್ತಿ ನಡೆಯಿಸುವುದರೊಳಗಾಗಿಯೇ ಗಾಂಧಿಜಿಯ ರಣದುಂದುಭಿ ಕೇಳಬಂತು. ಇನ್ನೂ ಹರೆಯವಾದರೂ ವಕೀಲಿಯನ್ನೂ ಸುಖಜೀವನವನ್ನೂ ಬಿಟ್ಟು ಕೊಟ್ಟು ಸತ್ಯಾಗ್ರಹದಲ್ಲಿ ಧುಮುಕಿದರು; ಮುಖ್ಯಪಾತ್ರವೊಂದನ್ನು ವಹಿಸಿದರು.

ಅಲ್ಲಿಂದ ಮುಂದೆ ಪತ್ರಿಕಾನಿರ್ವಹಣಕ್ಕೆ ತೊಡಗಿದರು. ದೇಶಭಾಷೆ 'ಭಾರತವಾಸಿ' 'ಹಿಂದು' 'ಒಂದೇ ಮಾತರಂ' ಪತ್ರಿಕೆಗಳನ್ನು ನಡೆಯಿಸಿದರು. ೧೯೨೧ ರಲ್ಲಿ ಅಸಹಕಾರ ಚಳವಳಿ ಒಂದಾಗ, ಇವರಿಗೆ ಎರಡು ವರ್ಷ ಶಿಕ್ಷೆಯಾಯಿತು. ಅದರ ಪರಿಣಾಮವಾಗಿ ಇವರ ಪತ್ರಿಕಾನಿರ್ವಹಣದ ಕಾರ್ಯ ನಿಂತುಹೋಯಿತಾಗಲಿ ಮುಂದೆ ದೇಹಲಿಯ 'ಹಿಂದುಸ್ತಾನ ಟೈಮ್ಸ್' ಪತ್ರದ ಸಂಪಾದಕರಾಗಿ ಕೆಲಕಾಲ ಕೆಲಸ ಮಾಡಿದರು. ಜನನಾಯಕರಲ್ಲಿ ವಕೀಲರೇ ಹೆಚ್ಚು; ವಕೀಲರೇ ನಾಯಕರಾಗಬಲ್ಲವರು ಎಂಬ ಪ್ರಸಿದ್ಧಿ ಒಂದು ಕಾಲದಲ್ಲಿ ಇತ್ತು. ನಮ್ಮ ದೇಶದಲ್ಲಿ ಗಾಂಧೀಯುಗದಲ್ಲಿ ವಕೀಲಿ ಎಂಬುದು ಸನಾತನಿಗಳಲ್ಲಿ ನಟವೃತ್ತಿಯಿದ್ದಂತೆ; ಕೊಂಚಗೌಣ. ಆದರೆ ಈಗ ಇನ್ನೊಂದು ಸೂತ್ರ ಹುಟ್ಟಿದ ಹಾಗೆ ಇದೇ ಪತ್ರಿಕಾವ್ಯವಸಾಯವು ನಾಯಕರ ಮುಖ್ಯ ಲಕ್ಷಣಗಳಲ್ಲಿ ಒಂದಾಗಿದೆ. ಮಹಾನಾಯಕಾಚಾರ್ಯನೇ ಆ ಉದ್ಯೋಗದಲ್ಲಿ ಎತ್ತಿದ ಕೈಯಲ್ಲವೆ? ಜಯರಾಮದಾಸರಿಗೆ ಈ ಗುಣವೂ ಇದೆ.

ಸೆರೆಮನೆಯನ್ನು ಹಲವು ಸಾರಿ ಕಾಣಬೇಕಾಯಿತು ಇವರು. ೧೯೩೦ ರಲ್ಲಿ ತಿಲಕಜನ್ಮ ದಿನದ ಸತ್ಯಾಗ್ರಹದಲ್ಲಿ ಜೈಲಿಗೆ ಹೋದವರು ೧೯೩೨ ರಲ್ಲಿ ಮತ್ತೆ ನಡೆದರು. ಎರಡು ವರ್ಷದ ಮೇಲೆ ಬಿಡುಗಡೆಯಾದಾಗ ಕಾಂಗ್ರೆಸ್ಸು ಶಾಸನಸಭೆಯ ಕಾರ್ಯಕ್ರಮಗಳನ್ನು ಸ್ವೀಕರಿಸಿತ್ತು. ಕೂಡಲೇ ಆ ಕೆಲಸಕ್ಕೆ ಹೆಗಲು ಕೊಟ್ಟು ನಿಂತರು. ಅಷ್ಟು ಹೊತ್ತಿಗೆ ಸಿಂಧಪ್ರಾಂತವು ಮುಂಬಯಿಯಿಂದ ಬೇರೆಯಾಗಿ ಸ್ವತಂತ್ರ ಆಡಳಿತವಾಗಿತ್ತು. ಸಿಂಧಪ್ರಾಂತದ ಕಾಂಗ್ರೆಸ್ ಪಕ್ಷದ ಮುಂದಾಳುತನ ಸಹಜವಾಗಿಯೇ ಇವರದಾಯಿತು.

ಸಿಂಧಪ್ರಾಂತದ ಕಾಂಗ್ರೆಸ್ ಪಕ್ಷ ಒಲವಾದುದಲ್ಲ; ಅದಕ್ಕೆ ಸೇರಿದವರ ಸಂಖ್ಯೆ ಬಹಳ ಕಡಮೆ. ' ಸಂಖ್ಯಾಬಲಕ್ಕಿಂತ ಐಕಮತ್ಯಬಲವೇ ಹಿರಿದು, ಬಲ ಅದರಲ್ಲಿಲ್ಲ ಇದರಲ್ಲಿಲ್ಲ ' ಎಂಬುದನ್ನು ಸಿಂಧ ಕಾಂಗ್ರೆಸ್ ಪಕ್ಷ ಇಂದು ಹಿಂದುಸ್ತಾನಕ್ಕೆ ತೋರುತ್ತಿದೆ. ಸಿಂಧ ಮುಸ್ಲಿಮ್ ಪ್ರಾಂತ. ಅಲ್ಲಿಯ ಮಂತ್ರಿಮಂಡಳದಲ್ಲಿ ಮುಸ್ಲಿಮರೇ ಮುಖ್ಯರು. ಮುಸ್ಲಿಂಲೀಗಿಗೆ ಪಂಜಾಬ-ಬಂಗಾಳಗಳಂತೆ ಆ ಪ್ರಾಂತವೂ ಆಧಾರವಾಗಬೇಕಾದುದು ಸಹಜವೇ ಆಗಿತ್ತು. ಭಾರತ ಮುಸ್ಲಿಮ್ ನಾಯಕರಾದ ಜಿನ್ನಾ ಆ ಬಗ್ಗೆ ಬಹಳ ಪ್ರಯತ್ನ ನಡೆಯಿಸಿದರು. ಕರಾಚಿಯಲ್ಲಿ ಮುಖ್ಯವಾದ ಸಂಧಾನಸಭೆಗಳನ್ನು ನಡೆಯಿಸಿದರು. ಸಿಂಧಪ್ರಾಂತದ ಪ್ರಧಾನ ಪೀರ್ ಇಲಾಹಿ ಅಲ್ಲಾಬಕ್ಷರು ಮುಸ್ಲಿಂ ಲೀಗಿನ ಸಂಧಾನ ಜಾಲದಲ್ಲಿ ಹದಿನಾಲ್ಕಾಣೆ ಭಾಗ ಸಿಕ್ಕುಹೋಗಿದ್ದರು. ಸಿಂಧಪ್ರಾಂತದ ಕಾಂಗ್ರೆಸ್ ಪಕ್ಷ ಜಾಗರೂಕವಾಗಿರದಿದ್ದರೆ ಗಾಂಭೀರ್ಯದಿಂದ ನಡೆಯದಿದ್ದರೆ ಜಿನ್ನಾರ ಪ್ರಯತ್ನ ಹಣ್ಣಾಗುವುದರಲ್ಲಿ ಸಂದೇಹವೇ ಇರಲಿಲ್ಲ. ತುತ್ತು ಕೈಗೆ ಬಂದಿತ್ತು. ಸಿಂಧ ಕಾಂಗ್ರೆಸಿನ ಪಕ್ಷಕ್ಕೂ ಅದೊಂದು ವಿಷಮ ಪರೀಕ್ಷೆ. ಅಲ್ಲಾಬಕ್ಷರನ್ನು ಕೈ ಬಿಟ್ಟರೆ ಮುಸ್ಲಿಂ ಲೀಗಿಗೆ ಪ್ರಾಂತವನ್ನು ಆಹುತಿ ಕೊಟ್ಟಂತೆ; ಅವರ ಕೈ ಹಿಡಿದರೆ, ಗವರ್ನರನ ನಿರಂಕುಶತೆಗೆ ಹಾದಿ ಮಾಡಿದಂತೆ. ಮೊದಲನೆಯದು ಕನಸಿನಲ್ಲೂ ಸಾಧ್ಯವಿಲ್ಲ; ಎರಡನೆಯದಕ್ಕೆ ಇಷ್ಟವಿಲ್ಲ; ಏಕೆಂದರೆ ಅಲ್ಲಾಬಕ್ಷರು ಗವರ್ನರನ ಮುಂದೆ ಇಲಿ. ಸಂದರ್ಭ ಅತ್ಯಂತ ವಿಷಮವಾದುದು; ಸಂಧಾನ ಅತಿ ಸೂಕ್ಷ್ಮವಾದುದು.

ಪತ್ರಿಕೆಗಳಲ್ಲಿ ಕಾಂಗ್ರೆಸ್ಸನಾಯಕರಿಗೂ ಅಲ್ಲಾಬಕ್ಷರಿಗೂ ನಡುವೆ ನಡೆದ ಸಂಧಾನದ ಸುದ್ದಿ ಕೆಲ ದಿನ ಬರಹತ್ತಿದುವು ಒಂದೇ ಸಮನೆ. ವರ್ಧಾದಲ್ಲಿ ಚರ್ಚೆ-ವಿಚಾರಗಳಾದುವು. ಕಾಂಗ್ರೆಸ್ಸು ಮಂತ್ರಿಮಂಡಲದ ಕೈ ಹಿಡಿಯಲಿಲ್ಲ. ಆದರೆ ಮುಸ್ಲಿಂ ಲೀಗಿನ ಕೈ ಹಿಡಿಯದಿರಲಿಲ್ಲ. ಅಂತೂ ಇಂತು ಮಂತ್ರಿಮಂಡಲ ಉಳಿಯಿತು.

ಜಯರಾಮದಾಸರ ಸಂಧಾನಕೌಶಲವೂ ಸಿಂಧ ಕಾಂಗ್ರೆಸ್ ಪಕ್ಷದ ಐಕಮತ್ಯಗಳೂ ಆ ಪವಾಡದ ಕಾರಣ. ಸಿಂಧ ಮಂತ್ರಿಮಂಡಳ

ಕಾಂಗ್ರೆಸ್ ಪಕ್ಷದ್ದಲ್ಲ. ಆದರೂ ಕಾಂಗ್ರೆಸ್ಸಿನ ವರ್ಚಸ್ಸು ಅಲ್ಲಿ ಕಾಣುತ್ತದೆ. ಕಾಂಗ್ರೆಸ್ಸಿನ ಪೂರ್ಣ ಕಾರ್ಯಕ್ರಮವನ್ನು ಅವರು ಅನುಸರಿಸುವುದು ಸಾಧ್ಯವಿಲ್ಲದಿದ್ದರೂ ಕಾಂಗ್ರೆಸ್ಸಿನ ಬಗ್ಗೆ ಸಹಾನುಭೂತಿ ಮಾತ್ರ ಸ್ಪಷ್ಟವಾಗಿಯೇ ಒಡೆದು ಕಾಣುತ್ತದೆ. ಜಯರಾಮದಾಸರ ಪುಣ್ಯ ಫಲವಿದು!

ಪರದೇಶೀ ವಸ್ತ್ರದ ಬಹಿಷ್ಕಾರಸಮಿತಿಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದಾಗಿನಿಂದ ಗಾಂಧೀಜಿಗೆ ಇವರ ಮೇಲೆ ವಿಶ್ವಾಸ ಹೆಚ್ಚು. ೧೯೩೦ ರಲ್ಲಿ ಮಹಾನಾಯಕರೆಲ್ಲ ಸೆರೆಮನೆಯಲ್ಲಿದ್ದಾಗ ತೇಜ ಬಹಾದ್ದೂರ್ ಸಪ್ರೂ ಮತ್ತು ಜಯಕರರು ಶಾಂತಿಸಂಧಾನ ನಡೆಯಿಸಿದರಷ್ಟೆ. ಯರವಡಾ ಸೆರೆಮನೆಯಲ್ಲಿ ಗಾಂಧೀಜಿಯೊಡನೆ ಅವರು ಆ ಮಾತುಕತೆ ನಡೆಯಿಸಿದಾಗ, ಮುಖ್ಯರಾದ ಕೆಲವರು ನಾಯಕರು ಗಾಂಧೀಜಿಯ ಆಲೋಚನಾಮಂಡಲಿಯಾಗಿದ್ದರು. ಜಯರಾಮದಾಸರಿಗೂ ಅದರಲ್ಲಿ ಸ್ಥಳವಿತ್ತು. ಈ ಮಾತು-ಕತೆಗಳ ಪರಿಣಾಮವೇ ಗಾಂಧೀ ಇರ್ವಿನ್ ಒಪ್ಪಂದ. ೧೯೩೫ ರಲ್ಲಿ ಮತ್ತೆ ಜಯರಾಮದಾಸರು ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದರು. ತರುವಾಯ ವರ್ಕಿಂಗ್ ಕಮಿಟಿಯ ಸದಸ್ಯರಾದರು. ಈಗಲೂ ಆಗಿದ್ದಾರೆ.

ಜಯರಾಮದಾಸರ ಪ್ರಾಯ ೪೭ಕ್ಕೆ ಮೀರಿಲ್ಲ. ಶಕ್ತಿಯೂ ಉಡುಗಿಲ್ಲ. ಭಾರತದ ರಾಜಕಾರಣದಲ್ಲಿ ಮುಂದೆ ಅವರು ಮಾಡಬಹುದಾದ ಮಾಡಬೇಕಾದ ಸೇವೆ ಇನ್ನೂ ಮಹತ್ತರವಾದುದಾಗಲಿ, ಎಂದು ಹಾರಯಿಸಲು ಬೇಕಾದಷ್ಟು ಅವಕಾಶವಿದೆ.

# ರಾಜೇಂದ್ರ ಪ್ರಸಾದ

•

ಗಾಂಧೀಜೀ ಅದ್ವಿತೀಯರು. ಅವರ ಸ್ಥಳ ಅವರದೇ.

ಗಾಂಧೀಜಿಯ ತರುವಾಯ ಹಿಂದುಸ್ತಾನದಲ್ಲಿ ಅವರ ಹಾಗೆಯೆ ಎಲ್ಲರ ಪ್ರೀತಿ ಮನ್ನಣೆಗಳಿಗೆ ಗುರಿಯಾದವರು ಯಾರು? ಯಾರ ಇದುರಿನಲ್ಲಿ ಚಿಲ್ಲರೆ ಹಗೆತನ-ಹೊಟ್ಟೆಯುರಿಗಳು ಮಾಯವಾಗುತ್ತವೆ? ಗಾಂಧೀಜಿಯ ಸೊತ್ತಾದ ಆ ಸೌಜನ್ಯ ಇನ್ನಾರಿಗಿದೆ?

ಈ ಪ್ರಶ್ನೆ ಹಿಂದುಸ್ತಾನದ ಜನರ ಮುಂದೆ ಒಂದುಸಲ ಬಂದು ನಿಂತಿತು. ಅದು ನಡೆದುದು ಹೀಗೆ:

ತ್ರಿಪುರಿಯ ಕಾಂಗ್ರೆಸ್ ಹಿಂದುಸ್ತಾನದ ರಾಜಕಾರಣದಲ್ಲಿ-ಅಂದರೆ ಗಾಂಧೀ ರಾಜಕಾರಣದಲ್ಲಿ-ಬಲವಾದ ಬಿರುಗಾಳಿ ಎಬ್ಬಿಸಿತು. ಅದರ ಹೊಡೆತಕ್ಕೆ ಕಾಂಗ್ರೆಸ್ ಇತ್ತಂಡವಾಗಿ ಹೋಯಿತು. ಇದಿರು ನಿಂತಿದ್ದ ಹಗೆಯನ್ನು ಮರೆತು ಸೇನೆ ಅಂತಃಕಲಹದಲ್ಲಿ ಮುಳುಗಿತು. ಶಿಸ್ತು, ಸಂಯಮ, ನೀತಿ ಎಲ್ಲ ಮರೆಯಾಗಿ ಒಳಜಗಳದ ಬೇತಾಳ ಏಕಾರವಾಗಿ ಕುಣಿಯ ತೊಡಗಿತು. ಕಲಕತ್ತೆಯಲ್ಲಿ ಅಖಿಲಭಾರತ ಕಾಂಗ್ರೆಸ್ ಸಮಿತಿ ನೆರೆದಾಗ ಪರಿಸ್ಥಿತಿ ತೀರಾ ವಿಕಟವಾಯಿತು. ಸುಭಾಷಚಂದ್ರ ಬೋಸರು ಕಾಂಗ್ರೆಸ್ಸಿನ ಮುಂದೆ-ಹಿಂದುಸ್ತಾನದ ಮುಂದೆ-ವಿಷದ ಬಟ್ಟಲವನ್ನೇ ಇಟ್ಟರು. ತಾವು ಕಾಂಗ್ರೆಸ್ಸಿನ ಅಧ್ಯಕ್ಷರಾಗಿರಲು ಇಷ್ಟವಿಲ್ಲ. ಇನ್ನೊಬ್ಬರು ಆ ಗದ್ದುಗೆಯೇರುವ ಮೊದಲು ಆ ವಿಷ ಕುಡಿದು ಅರಗಿಸಿಕೊಳ್ಳಬೇಕು. ಹೊಟ್ಟೆಯುರಿಯ ಹಾಲಾಹಲ ಅದು.

ಯಾರಿಗೆ ಆ ಬಲವಿದೆ? ತಮ್ಮ ನಾಯಕನನ್ನು ಗುರುತಿಸಲು ಜನರ ಕಣ್ಣು ಸುತ್ತಾಡಿತು. ಧೀರಜೀವಿ ಜವಾಹರರೆ? ಗಂಭೀರ ಗುಣಿಯಾದ ಮೌಲಾನಾವೆ–ಶಾಂತಮೂರ್ತಿಯಾದ ಗಡಿನಾಡಿನ ಗಾಂಧಿಯೆ? ಯಾರು?

ಅಲ್ಲ. ಅಜಾತ ಶತೃವಾದ ರಾಜೇಂದ್ರಬಾಬು ಆ ಬಟ್ಟಲನ್ನು ಎತ್ತಿದರು. ಕಾಂಗ್ರೆಸ್ಸಿನ ಕೀರ್ತಿ ಉಳಿಯಿತು. ನಾಡಿನ ಪುಣ್ಯದ ಗಡಿಗೆ ಚೂರಾಗದೆ ಉಳಿಯಿತು. ಹಿಂದುಸ್ತಾನಕ್ಕೆ ಹಿಂದುಸ್ತಾನವೇ ಹರುಷದಲ್ಲಿ ಈಸಾಡಿತು. ಹೂಮಳೆ ಕರೆಯಿತು.

ರಾಜೇಂದ್ರ ಬಾಬುವಿಗಲ್ಲದೆ ಬೇರೆ ಯಾರಿಗೂ ಆ ಸಂದರ್ಭದಲ್ಲಿ ಕಾಂಗ್ರೆಸ್ ಮಣಿಯುವ ಹಾಗಿರಲಿಲ್ಲ. ಅಂಥ ಸೌಜನ್ಯ ಅವರದು. ಅಜಾತ ಶತೃವೆಂದು ಹೆಸರಾದ ಧರ್ಮರಾಯನಿಗೂ ಕೌರವ, ಹಗೆಯಾಗಿ ಇದ್ದ. ಈ ಧರ್ಮರಾಯನಿಗೆ ಯಾರೂ ಇಲ್ಲ.

ಸಜ್ಜನಿಕೆಯ ಪೋಟೀ ನಡೆಸಿದರೆ ಹಿಂದುಸ್ತಾನದಲ್ಲೆ ಏಕೆ–ಇಡೀ ಜಗತ್ತಿಗೇ ರಾಜೇಂದ್ರಬಾಬು ಮೊದಲನೆಯವರಾಗಿ ಬಂದಾರು. ಅವರ ಸ್ವಭಾವ ಎಳೆಯ ಮಗುವಿನ ಹಾಗೆ. ಅದರಲ್ಲಿ ಏನೂ ಕೊಳೆ ನಿಲ್ಲುವುದಿಲ್ಲ. ಗಾಂಧೀಜಿಯ ವಿಶ್ವಮೋಹಕವಾದ ನಗೆ ಇವರಿಗಿಲ್ಲವಾಗಲಿ ಅವರ ಸಲಿಗೆಯ ಸ್ವಭಾವ, ಸರಳತೆಗಳು ಒಂದು ತೂಕ ಇವರಿಗೇ ಹೆಚ್ಚೋ ಏನೊ!

ಭಾಷಣ ಮಾಡುವುದರಲ್ಲೂ ಅವರ ನಿರ್ಮಲ ಮನೋವೃತ್ತಿ ಕಂಡು ಬರುತ್ತದೆ. ಮಾತಿನಲ್ಲಿ ದುಡುಕೂ ಕುದಿಯುವುದೂ ಇಲ್ಲ. ಆವೇಶದಿಂದ ಮಾತಾಡಿ ಜನರನ್ನು ರೊಚ್ಚಿಗೆಬ್ಬಿಸುವ ಮಾತುಗಾರಿಕೆಯಲ್ಲ ಅದು. ಕೇಳುವವರನ್ನು ತಲೆದೂಗಿಸಿ ಪರವಶತೆಯಲ್ಲಿ ಮುಳುಗಿಸುವ ಪಾಂಡಿತ್ಯ ಪ್ರಭಾವವಲ್ಲ. ಅದು ನಿರ್ಮಲ ಮನಸ್ಸಿನ ತ್ರಿಕರಣದ ಸತ್ಯದ ಕಲೆ. ಆ ಮಾತಿನಲ್ಲಿ ಅರ್ಥವಾಗದ ಗೂಢವಿಲ್ಲ. ಅನುಮಾನಕ್ಕೆ ಎಡೆಗುಡುವ ಶ್ಲೇಷ ಸರಣಿಯಿಲ್ಲ. ಆ ಮಾತಿನಲ್ಲಿ ಹೆಜ್ಜೆಹೆಜ್ಜೆಗೂ ಮಾತಾಡುವ ವ್ಯಕ್ತಿ ರೂಪುಗೊಂಡು ನಿಲ್ಲುತ್ತದೆ. ತಿಳಿಗೊಳವು ಆಕಾಶವನ್ನು ಕನ್ನಡಿಸುವಂತೆ

ಬಾಬುವಿನ ಭಾಷಣ ಅವರ ಹೃದಯವನ್ನು ಬಯಲಿಗಿಟ್ಟು ತೋರಿ ಸುತ್ತದೆ.

ಹೀಗೆಂದರೆ ಬಾಬು ಪಂಡಿತರಲ್ಲ ಎಂದಲ್ಲ. ಪಾಂಡಿತ್ಯದಲ್ಲಿ ಅವರಿಗೆ ಸಮನಾದವರು ಬಹಳ ಜನ ಸಿಗಲಾರರು. ಅವರ ವಿದ್ಯಾಭ್ಯಾಸದ ಪ್ರಕ ರಣ ಅಸಾಮಾನ್ಯ ಪ್ರತಿಭೆಯಿಂದ ಬೆಳಗಿತು. ಕಲಕತ್ತೆಯ ವಿಶ್ವವಿದ್ಯಾ ಲಯದ ಮೆಟ್ರಿಕ್ ಪರೀಕ್ಷೆಯಲ್ಲಿ ಮೊದಲನೆಯವರಾಗಿ ತೇರ್ಗಡೆಯಾಗು ವುದು ಬಂಗಾಳೀ ಜನರದೇ ಗುತ್ತಿಗೆಯಾಗಿತ್ತು. ಬಂಗಾಲ, ಬಿಹಾರ, ಉತ್ಕಲ, ಆಸಾಮ, ಬರ್ಮಾ—ಈ ಐದು ಪ್ರಾಂತಗಳಿಗೆಲ್ಲ ಕಲಕತ್ತೆಯ ವಿಶ್ವವಿದ್ಯಾಲಯ ಒಂದೇ ಆಗ ಇದ್ದುದು. ಅದರಲ್ಲಿ ಬಂಗಾಲದ ಹುಡು ಗರೇ ಯಾವಾಗಲೂ ಮೊದಲನೆಯವರು. ರಾಜೇಂದ್ರಬಾಬು ಬಂಗಾಳೀ ಜನರ ಈ ಗುತ್ತಿಗೆ ಮುರಿದರು. ಅಲ್ಲಿಂದ ಮುಂದೆ ಬಾಬು ವಿದ್ಯಾರ್ಥಿ ಯಾಗಿರುವವರೆಗೆ ಇವರದೇ ಗುತ್ತಿಗೆಯಾಯಿತು ಪ್ರಥಮಸ್ಥಾನ. ಅಷ್ಟೇ ಅಲ್ಲ. ಇವರ ಕಾಲೇಜು ವಿದ್ಯಾಭ್ಯಾಸದಲ್ಲಿ ಇವರು ಎಬ್ಬಿಸಿದ ಗೆಲುವಿನ ಧೂಳಿ ಇಂದಿಗೂ ಆ ಪ್ರಾಂತದ ಕಲಿತ ಜನರಲ್ಲಿ ಮನೆಮಾತಾಗಿದೆ, ಅದೊಂದು ಜೈತ್ರಯಾತ್ರೆಯಂತೆ ನಡೆದಿತ್ತು.

ಆ ಅಸಾಧಾರಣ ಪಾಂಡಿತ್ಯಕ್ಕೆ ನಾಡಿನಲ್ಲಿ ಸಿಗಲಾರದ ಪದವಿ ಇರಲಿಲ್ಲ, ದೊರೆಯಲಾರದ ಸಂಪತ್ತು ಇರಲಿಲ್ಲ. ಗಳಿಸುವ ಹಾದಿಯಲ್ಲಿ ನಡೆದಿದ್ದರೆ ಬಾಬು ಕುಬೇರರಾಗಬಹುದಾಗಿತ್ತು. ಅವರು ಮನಸು ಮಾಡಿದ್ದರೆ ಆ ದಾರಿಯಲ್ಲಿ ನಡೆದು ಇಂದು ಫೆಡರಲ್ ಕಚೇರಿಯ ನ್ಯಾಯಾಧೀಶರಾಗಬಹುದಾಗಿತ್ತು. ಯಾವುದಾದರೂ ಪ್ರಾಂತದ—ಬಿಹಾ ರವೇ ಏಕಾಗಬಾರದು—ಗವರ್ನರರೂ ಆಗಬಹುದಿತ್ತು. ಬಾಬುವಿನ ಸ್ವಭಾವಕ್ಕೆ ಆ ಹಾದಿ ರುಚಿಸದಿದ್ದರೂ ಜನರೇನೋ ಈ ಕನಸುಗಳನ್ನು ಕಟ್ಟಿದ್ದರು. ಪಾಟಣಾ ಹೈಕೋರ್ಟು ಅಂತೂ ಮಾಲೆ ಹಿಡಿದೇ ನಿಂತಿತ್ತು.

ಬಾಬು ಈ ಬಲೆಗೆ ಸಿಗಲೇ ಇಲ್ಲ. ಅಧಿಕಾರ ಸಂಪತ್ತುಗಳು ಅವರ ಬಳಿ ಸುಳಿಯಲೇ ಇಲ್ಲ. ಆಸೆ-ಲೋಭಗಳಂತೂ ಅವರ ಹೆಸರು ಹೇಳಿದರೆ ಸಾಕು ಸುತ್ತಹರದಾರಿಯೊಳಗೆ ನಿಲ್ಲದಂತೆ ಓಟ ಕಿತ್ತುತ್ತವೆ.

ಚಿಕ್ಕಂದಿನಿಂದಲೂ ಅವರ ಮನಸ್ಸು ಸೇವಾವ್ರತಕ್ಕೇ ಒಗ್ಗಿದೆ. ಅವರ ಮನಸಿಗೆ ಹಿರಿದು-ಕಿರಿದು ಭೇದ ಸಲ್ಲದು. ಬಾಬುವಿಗೆ ಬಲ್ಲಿದರಿಗಿಂತ ಬಡವರ ಮೇಲೆ ಪ್ರೀತಿ. ಪಟ್ಟಣಕ್ಕಿಂತ ಹಳ್ಳಿಯಲ್ಲಿ ಅವರ ಪ್ರಾಣ. ಬಿಹಾರ ಪ್ರಾಂತಕ್ಕೆ ರಾಜೇಂದ್ರಬಾಬು ಪ್ರೀತಿಯ ದೊರೆ. ಕಿರೀಟಕ್ಕೂ ಮೀರಿದ ಗೌರವ ಅವರಿಗೆ ಆ ಪ್ರಾಂತದಲ್ಲಿ. ಆದರೂ ಅವರ ವಾಸ ತಮ್ಮ ಹಳ್ಳಿಯಲ್ಲಿ. ಸಾರಣ ಜಿಲ್ಲೆಯ ಒಂದು ಹಳ್ಳಿ-ಜಿರದಾಯಿಗೆ ಆ ಭಾಗ್ಯ.

ಆ ಸರಳತೆ ಬಾಬುವಿನ ನೈಜಗುಣ. ಹಗಲುಹೊತ್ತೇ ದೀವಟಿಗೆ ಹಿಡಿದು ಹುಡಿಕಿದರೂ ಅವರಲ್ಲಿ ಕಪಟ ಎಳ್ಳಷ್ಟೂ ಸಿಗದು. ಅವರ ಮಾತು ಕತೆ--ಉಡಿಗೆ ತೊಡಗೆಗಳಲ್ಲಿ ಆ ಸರಳತೆ ಸ್ಪಷ್ಟವಾಗಿ ಕಾಣುತ್ತದೆ. ವರ್ಧಾ ಅತಿಥಿ ಭವನದ ಅಂಗಳದಲ್ಲಿ ಬೆಂಚಿನ ಮೇಲೆ ಕೂತು ಅವರು ಮಾತಾ ಡುವಾಗ ನೋಡಬೇಕು. ಆ ಸಲಿಗೆ, ಆ ಸುಲಭತೆ ಅನುಭವಿಸಿಯೇ ತಿಳಿಯಬೇಕು. ತಂದೆಯಂತೆ ಕರುಳುಗೊಂಡು ಮಾತಾಡುತ್ತಾರೆ. ನಾಯಕರೊಡನೆ ಮಾತುಕತೆ ಆಡುವಾಗ ಕೊಂಚ ಎಚ್ಚರಬೇಕು. ತೂಕ ತಪ್ಪಿದರೆ ಹಿಮಾಲಯವೇ ಮೇಲೆ ಬಿದ್ದಹಾಗೆ. ಜಂಬ-ಬಡಾಯಿಗೂ ರಾಜೇಂದ್ರ ಬಾಬೂವಿಗೂ ಎಣ್ಣೆ ಸೀಗೇಕಾಯಿ ನ್ಯಾಯ.

ಮಾತಿನಲ್ಲಿ ಹೇಗೋ ವೇಷದಲ್ಲೂ ಹಾಗೇ. ಬಹಳ ಸಾದಾ. ವಲ್ಲಭ ಭಾಯಿ ಪಟೇಲರು ಹಳ್ಳಿಗಾಡಿನ ಒಕ್ಕಲಿಗ ಇದ್ದ ಹಾಗೆ ಎಂದು ಹೇಳು ತ್ತಾರೆ. ರಾಜೇಂದ್ರ ಬಾಬುವನ್ನು ನೋಡಿದವರು ಹಾಗೆ ದಿಟ್ಟವಾಗಿ ಹೇಳಲಾರರು. ವಲ್ಲಭಭಾಯಿಯ ಮನೆತನ ಪಟೇಲರದು. ಬಲಿಷ್ಠರಾದ ಪಟೇಲರಿಗೆ ಇರಬೇಕಾದ ಉರುಟುತನದ ಗುಣಗಳೆಲ್ಲ ಅವರಿಗೆ ಇವೆ. ಆ ದಿಟ್ಟತನ-ಕಲಿತನಗಳೂ ಇವೆ. ಆ ನಾಲಿಗೆ ನಿಜವಾಗಿಯೂ ಪಟೇಲರದೇ. ಆದರೆ ರಾಜೇಂದ್ರ ಬಾಬುವಿಗೆ ಇರುವ ಗ್ರಾಮಸಂಸ್ಕೃತಿಯ ಸೌಮ್ಯ-ಸೌಜನ್ಯಗಳು ನಾಯಕರಲ್ಲಿ ಯಾರಿಗೂ ಇಲ್ಲ. ಉಡಿಗೆ-ತೊಡಿಗೆಯಲ್ಲಿ ಅವರು ತೀರಾ ಹಳ್ಳಿಗರು. ಹಳ್ಳಿಯ ಗೌಡನಿಗೆ ಹೇಗೋ ಹಾಗೆ ಅವ ರಿಗೆ ಅತ್ತಕಡೆ ಲಕ್ಷ್ಯವೇ ಇಲ್ಲ. ತೋಟ ಸಿಂಗಾರ ಮಾಡುವ ಬಹಿರಂಗ

ಶುಚಿಗೆ ಸಮಾಜದಲ್ಲಿ ಯಾವಾಗಲೂ ಗೌರವ ಇದೆ. ಆಗ ಆಚಾರ ಸಂಪ್ರದಾಯದ ಹೆಸರಿನಿಂದ ಮೆರೆದರೆ ಈಗ ಶಿಷ್ಟಾಚಾರದ ಫ್ಯಾಷನ್ ಆಗಿದೆ. ರಾಜೇಂದ್ರ ಬಾಬುವಿಗೆ ಈ ಕೈಯೆಣ್ಣೆ ಜಂಬ ಸೇರದು, ಬಾಬು ಹಳೆಯ ಕಾಲದ ಧರ್ಮಿಷ್ಠರಾದ ಹಿರಿಯಗೌಡರು ಇದ್ದಹಾಗೆ. ಅವರ ಹಾದಿ 'ಶೀಲದ ಶುಚಿ.' ಅವರ ಮಂತ್ರ 'ಸರ್ವೇಜನಾಃ ಸುಖಿನೋ ಭವಂತು.' ಅವರ ಗುರಿ 'ಸರ್ವೋದಯ.'

ಆ ಬಾಳಿನಲ್ಲಿ ತ್ಯಾಗವೇ ಧ್ರುವ ಶ್ರುತಿ. ತ್ಯಕ್ ತೇನ ಭುಂಜೀಥಾಃ ಎಂಬ ಉಪನಿಷತ್ತಿನ ಮಂತ್ರವನ್ನು ಓದಿದಾಗ ರಾಜೇಂದ್ರಪ್ರಸಾದರ ನೆನಪಾಗುತ್ತದೆ. ಅವರೇ ಆ ಮಾತು. ಹೇಳುತ್ತಿರುವರೇನು? ಇದು ವೇದಕಾಲದ ಹಳೆಯ ನುಡಿಯಲ್ಲ, ಇಂದು ಉಪದೇಶಿಸಲ್ಪಡುತ್ತಿರುವ ವಾಣಿ ಎನಿಸುತ್ತದೆ. ತ್ಯಾಗವೊಂದರಿಂದಲೇ ಅಮೃತತ್ವ ಎಂದು ಹೇಳಿದಾಗ ಬಾಬುವಿನ ಮೋರೆಯ ಅಖಂಡ ಶಾಂತಿಯನ್ನು ಆ ಋಷಿ ನೋಡಿದನೇನು ಎನಿಸಿಹೋಗುತ್ತದೆ. ಅವರನ್ನು ನೋಡಿದರೆ 'ಈವಂಗೆ ದೇವಂಗೆ ಯಾವುದಂತರವಯ್ಯ' ಎಂದು ಸರ್ವಜ್ಞ ಹೇಳಿದುದು ಹದಿನಾರಾಣೆ ಅನುಭವದ ಸತ್ಯ ಎಂಬುದು ಗೊತ್ತಾಗುತ್ತದೆ.

ತ್ಯಾಗಜೀವನ ಎಂದರೆ ಅಸಂಗ್ರಹ ಜೀವನ, ಅಸ್ವಾಮ್ಯ ಬುದ್ಧಿ. ಅಸಂಗ್ರಹ ಎಂದರೆ ಹಣವನ್ನೇ ಕೈಯಿಂದ ಮುಟ್ಟಬಾರದು; ಹೊನ್ನು ಮಣ್ಣು ನರಕದ ದಾರಿ ಎಂದಲ್ಲ. ಅದು ನಿವೃತ್ತಿ ಮಾರ್ಗದ ಒಂದು ಉಪಾಯ. ನಿಜವಾಗಿ ನೋಡಿದರೆ ಆ ಉಪಾಯ ಅವರ ಪಾಲಿಗೆ ಹೋತನ ಗಡ್ಡ. ಪ್ರಪಂಚವನ್ನೇ ಬಿಟ್ಟು ಹರಿದೋಡುವ ಸನ್ಯಾಸಿಗೆ ಸಂಗ್ರಹವೇನು--ಅಸಂಗ್ರಹವೇನು? ಈ ಕೂಟಪ್ರಶ್ನೆ 'ಇದ್ದು ಜೈಸುವ'ವನದು; ಕರ್ಮಯೋಗಿಯದು. ಗಳಿಸುವುದು ಸಂಗ್ರಹವೇ ಎಂಬ ಪ್ರಶ್ನೆ ಅವನಿಗೆ. ಅದಕ್ಕೆ ರಾಜೇಂದ್ರಬಾಬು ಕೊಟ್ಟ ಉತ್ತರ ಚಿರಸ್ಮರಣೀಯವಾಗಿದೆ. ಅವರ ದೃಷ್ಟಾಂತ ಕರ್ಮಮಾರ್ಗದಲ್ಲಿ ಶಾಶ್ವತವಾದ ಕೈಗಂಬ.

ಪಾಟನಾ ಹೈಕೋರ್ಟಿನಲ್ಲಿ ವಕೀಲಿ ಮಾಡುತ್ತಿದ್ದಾಗ ಬಾಬು ಸಾವಿರಗಟ್ಟಲೆ ಗಳಿಸಿದರು. ಆ ಪ್ರಾಂತದ ವಕೀಲರಲ್ಲಿ ಇವರದೇ ಮೇಲು

ಗೈ, ಮೊದಲುಗೈ. ಒರೀ ಗಳಿಕೆಯಲ್ಲಿ ಮೇಲುಗೈಯಲ್ಲ. ಕೊಡಗೈಯು ಕರ್ಣನೂ ಹೌದು. ಇವರು ' ಕರೆದು ದಾನವ ' ಮಾಡದ ಧರ್ಮಕಾರ್ಯ ಇರಲಿಲ್ಲ. ತಾವು ಗಳಿಸಿದ ಹಣದಲ್ಲಿ ತಮ್ಮ ಬಾಳುವೆಗೆ ಅಗತ್ಯವಾದಷ್ಟು ಮಾತ್ರ ಉಳಿಸಿಕೊಂಡು ಉಳಿದುದನ್ನೆಲ್ಲ ದಾನಮಾಡುತ್ತಿದ್ದರು. ಬಡ ಹುಡುಗರಿಗಂತೂ ಬಾಬು ದೊಡ್ಡದೊಂದು ನಿಕ್ಷೇಪ. ಇವರ ಸಹಾಯ ದಿಂದ ಓದುಬರೆಹ ಸಾಗಿಸಿದ ಹುಡುಗರಿಗೆ ಲೆಕ್ಕವೇ ಇಲ್ಲ. ಈ ದಾನ-ಧರ್ಮಕ್ಕೆ ಮೇರೆಯೇ ಇರಲಿಲ್ಲ. ' ಸಾಗರಕೆ ನೆಲೆಯಿಲ್ಲ; ' ಇವರ ' ಧರ್ಮಕ್ಕೆ ಆಗುಹೋಗಿಲ್ಲ.' ೧೯೨೦ ರಲ್ಲಿ ಅಸಹಕಾರ ಚಳುವಳಿಗೆ ಸೇರಲೆಂದು ರಾಜೇಂದ್ರಬಾಬು ವಕೀಲಿಯನ್ನು ಪೂರಾ ಬಿಟ್ಟುಕೊಟ್ಟರು. ನಾಲ್ಕು ವರ್ಷ ಮೊದಲೇ ಚಂಪಾರಣ್ಯದ ಸತ್ಯಾಗ್ರಹದಲ್ಲಿ ಬಿಟ್ಟ ಹಾಗೇ ಆಗಿತ್ತು. ೧೯೨೦ ರಲ್ಲಿ ಅದಕ್ಕೆ ಎಳ್ಳು ನೀರೇ.

ಬಾಬು ವಕೀಲಿಗೆ ಶರಣು ಹೊಡೆದ ದಿನ ಬ್ಯಾಂಕಿನಲ್ಲಿ ಇವರ ಹೆಸ ರಿನಲ್ಲಿ ೧೫ ರೂಪಾಯಿ ಇದ್ದವು. ಇದೇ ಇವರು ಸಂಗ್ರಹಿಸಿದ ಸರ್ವಸ್ವ.

ಇಂಥ ಕರ್ಮಯೋಗಿ ಗಾಂಧೀಪಂಥದಲ್ಲಿ ಸೇರಿದುದು ಏನಾ ಶ್ಚರ್ಯ? ಎಳೆತನದಿಂದಲೂ ಇವರಿಗೆ ಸಂಗ್ರಹಬುದ್ಧಿ, ವಿಲಾಸವೃತ್ತಿ ಕಡಿಮೆ. ಗೋಖಲೆಯವರ ಭಾರತ ಸೇವಕಸಂಘಕ್ಕೆ ಸೇರಬೇಕೆಂದು ಹರೆಯದಲ್ಲೇ ಇವರಿಗೆ ಆಸೆಯಿತ್ತು. ಇವರ ಅಸಾಮಾನ್ಯ ಪ್ರತಿಭೆ ಯನ್ನು ಕೇಳಿ ಸಂಘವೂ ಇವರನ್ನು ಕರೆಯಿತು. ಕುಟುಂಬದ ಜನಕ್ಕೆ ಇದು ಸರಿತೋರಲಿಲ್ಲ. ಬಾಬು ಆ ಹವ್ಯಾಸವನ್ನು ಬಿಡಬೇಕಾಯಿತು. ಆದರೆ ಸತ್ಯಹೃದಯದ ನಿರ್ಮಲ ಭಾವನೆ ಸಿದ್ಧಿಸದೆ ಹೋದೀತೇ? ಗಾಂಧೀಜೀ ಹಿಂದುಸ್ತಾನಕ್ಕೆ ಬಂದೊಡನೆಯೇ ಬಾಬು ಅವರ ಅನು ಯಾಯಿ ಆದರು. ಆ ಗಾರುಡಿಗನ ಬಲೆಗೆ ಮೊದಲು ಬಿದ್ದ ಮಹಾ ಜೀವಿಗಳಲ್ಲಿ ಇವರೇ ಶ್ರೇಷ್ಠರು.

ಗಾಂಧೀಜಿಯ ಅನುಯಾಯಿಗಳಲ್ಲಿ ಯಾರು ಆ ಗುರುವಿನ ಮುಖ್ಯ ಶಿಷ್ಯರು ಎಂಬ ತೊಡಕು ಆಗಾಗ ಬರುತ್ತದೆ. ಅಮಾತ್ಯ ರಾಜಗೋಪಾಲಾಚಾರ್ಯರನ್ನು ಗಾಂಧೀಜಿಯೇ ತಮ್ಮ ಮನಸಾಕ್ಷಿ- Keeper of my conscience–ಎಂದರು. ಸರದಾರ ವಲ್ಲಭಭಾಯಿಯುದೂ ಆದರದೂ

ಗಾಢವಾದ ಪ್ರೇಮ. ಅವರ ಬಲಗೈ. ಗಡಿನಾಡಿನ ಗಾಂಧಿಯಂತೂ ಸರಿಯೇ ಸರಿ. ಏಳು ಅಡಿ ಎತ್ತರದ ಆಳು. ಅವರು ಹಾರಿಸಿದ ಅಹಿಂಸೆಯ ಬಾವುಟ ಸಹಜವಾಗಿಯೇ ಎಲ್ಲಕ್ಕಿಂತ ಮೇಲೆ ಹಾರುತ್ತದೆ. ಮಹದೇವ ಭಾಯಿಯ ಮಾತು ಹೇಳಬೇಕಾದುದೇ ಇಲ್ಲ. ರಾಜೇಂದ್ರಬಾಬುವಿನ ಹೆಸರು ಎಲ್ಲೂ ಕೇಳಿಬರುವುದಿಲ್ಲ .

ಗಾಂಧೀಜಿಯೊಡನೆ ಮೊದಲು ಹೆಗಲಿಗೆ ಹೆಗಲು ಕೊಟ್ಟುದು ರಾಜೇಂದ್ರಬಾಬು. ಗಾಂಧೀ ಸೇವಾ ಸಂಘಕ್ಕೆ ಮೊದಲಿಂದಲೂ ಸದಸ್ಯ ರಾಗಿದಾರೆ. ಗಾಂಧೀಜಿಯ ಸತ್ಯಾಗ್ರಹ ಪ್ರಯೋಗ ಹಿಂದುಸ್ತಾನದಲ್ಲಿ ಮೊದಲು ನಡೆಸಿದ್ದು ಬಿಹಾರ ಪ್ರಾಂತದ ಚಂಪಾರಣ್ಯದಲ್ಲಿ: ಆ ಪ್ರಥಮ ವಿಜಯಕ್ಕೆ ರಾಜೇಂದ್ರಬಾಬು ಕಾರಣರು. ಆದರೂ ಜನ ಇವರ ಹೆಸರಿಗೆ ಆ ಪಟ್ಟ ಕಟ್ಟಿಲ್ಲ. ಸರಳ ಜೀವನ ಇವರದು. ಬಿಸಿಲ ಅಡಿಯ ಹಿಮದಂತೆ ಅವರು ಯಾವಾಗಲೂ ಹಿಂಬದಿಗೇ. ಎಲೆಯ ಮರೆಯ ಕಾಯ ಹಾಗೆ ಯಾವಾಗಲೂ ಮರೆಯಲ್ಲೇ.

ಜನ ಅನ್ನಲಿ ಬಿಡಲಿ; ರಾಜೇಂದ್ರಬಾಬು ಆ ಗುರುವಿಗೆ ತಕ್ಕ ಶಿಷ್ಯ. ಅಹಿಂಸೆಯನ್ನು ಅರ್ಥಮಾಡಿಕೊಂಡವರಲ್ಲಿ ಇವರು ಯಾರಿಗೂ ಕಡಮೆ ಯಲ್ಲ. ಇವರ ಬಾಯಿಂದ ಎಂದೂ ಉರುಟು ಮಾತು ಒಂದಿಲ್ಲ. ಅವರ ಮಾತಿನಲ್ಲಿ ಬಿಸಿಯನ್ನು ಯಾರೂ ಕಂಡಿಲ್ಲ. ಬಾಬು ಹುಟ್ಟಿದುದು ಬಿಹಾರ ಪ್ರಾಂತ. ಮೊದಲಿಗೆ ಆ ಪ್ರಾಂತ ಬುದ್ಧನ ನಾಡು. ಅಹಿಂಸೆಯ ಧ್ವಜ ಅಲ್ಲಿ ಅಖಂಡವಾಗಿ ಕೆಲವು ಕಾಲ ಹಾರಾಡುತ್ತಿತ್ತು. ಆ ಸಂಸ್ಕೃತಿ ಇವರಿಗೆ ಸಹಜವಾಗಿಯೇ ಬಂದಿದೆ. ಆ ಹಿರಿಯರ ಪುಣ್ಯ ಇವರಲ್ಲಿ ಫಲಿಸಿದೆ.

ಬಿಹಾರ ಪ್ರಾಂತದಲ್ಲಿ ಕೆಲವು ಕಾಲದ ಹಿಂದೆ ಭಯಂಕರವಾದ ಭೂಕಂಪ ಆಯಿತು. ಆ ಹೊತ್ತಿಗೆ ಇವರು ಜೇಲಿನಲ್ಲಿ ಇದ್ದರು. ಶ್ವಾಸ ರೋಗ ಹೆಚ್ಚಾಗಿ ಆರೋಗ್ಯ ಬಹಳ ಕೆಟ್ಟಿತ್ತು; ಸರಕಾರಕ್ಕೆ ಹೆದರಿಕೆ ಆಯಿತು. ವೈದ್ಯರ ಸಲಹೆಯ ಮೇರೆಗೆ ಇವರನ್ನು ಬಿಡುಗಡೆ ಮಾಡಿದರು. ಬಿಟ್ಟಾಗ ಭೂಕಂಪವಾಗಿ ಎರಡು ದಿನ ಆಗಿತ್ತು.

ತಮ್ಮ ಜನರ ಗೋಳನ್ನು ಬಾಬು ನೋಡಿದರು. ನೋಡಿ ತಡೆಯು ಲಾಗಲಿಲ್ಲ. ಸಾವಿನ ದವಡೆಯೊಳಗೇ ನುಗ್ಗಿದರು. ಸೇವೆಗೆ ನಡುಕಟ್ಟಿದರು. ಬಿಹಾರ ಪ್ರಾಂತದ ನಿವಾರಣಾಸಮಿತಿಗೆ ಮುಂದಾಳಾದರು. ವೈದ್ಯರೆಲ್ಲರೂ ಬೇಡ ಬೇಡ ಎಂದರೂ ಕೇಳಲಿಲ್ಲ. ನಾಡಿನಲ್ಲಿ 'ರಾಜೇಂದ್ರ ಪ್ರಸಾದ ನಿಧಿ' ಎಂಬ ಯೋಜನೆ ರೂಪುಗೊಂಡಿತು. ನಾಲ್ಕಾರು ವಾರಗಳಲ್ಲಿಯೇ ೨೮ ಲಕ್ಷ ನಿಧಿ ಕೂಡಿತು. ಹಣವಿಲ್ಲದೆ ಕಾಳುಕಡಿ, ಅರಿವೆ ಔಷಧವೂ ರಾಶಿರಾಶಿಯಾಗಿ ಬಂದು ಬಿದ್ದಿತು.

ಸರಕಾರವೂ ಸುಮ್ಮನೆ ಕೂಡಲಿಲ್ಲ. ವೈಸರಾಯ ನಿಧಿ ಏರ್ಪಾಡಾಯಿತು. ಅಧಿಕಾರಿಗಳು ತಮ್ಮ ಬಲದಿಂದ ಬೇಡಿದರು. ರಾಜಮಹಾರಾಜರು ಧಾರಾಳವಾಗಿ ನಾನು ಮುಂದೆ ತಾನು ಮುಂದೆ ಎಂದು ತೆತ್ತರು. ಸರಕಾರದ ಅನುಗ್ರಹಾರ್ಥಿಗಳಾದ ನಾಮಧಾರಿಗಳೂ—ಬಿರುದಾವಳಿಯ ಗೋತ್ರದವರು—ಕೊಟ್ಟರು. ಆದರೂ ಆ ನಿಧಿ ಮೂರು ಲಕ್ಷಕ್ಕೆ ಮೀರಲಿಲ್ಲ.

ಎಲ್ಲಾ ಕಣ್ಣುಕಟ್ಟಿನಂತೆ, ಕವಿಯ ಕನಸಿನಂತೆ ಆಗಿಹೋಯಿತು. ಮಸಣವಾಗಿದ್ದ ನಾಡು ಮತ್ತೆ ನಗೆಯಿಂದ ನಲಿಯಿತು. ಸ್ವಾರ್ಥತ್ಯಾಗದ ಬಲ ಅಹಿಂಸೆಯ ಶಕ್ತಿ ಹಿಂದುಸ್ತಾನಕ್ಕೆ ಗೊತ್ತಾಯಿತು. ಧರ್ಮತೇಜೋಬಲದ ಮುಂದೆ ಅಧಿಕಾರ ಬಲ ಆನೆಯ ಮುಂದೆ ಸೊಳ್ಳೆ ಎಂಬುದು ತಿಳಿಯಿತು.

ಚಂಪಾರಣ್ಯ ಸತ್ಯಾಗ್ರಹವೂ ಅಷ್ಟೆ. ಚಂಪಾರಣ್ಯ ನೀಲಿ' ತೋಟಗಳ ಪ್ರದೇಶ. ಅಲ್ಲಿ ರೈತರಿಗೆ ಆಗುತ್ತಿದ್ದ ಬಾಧೆ ಅನುಭವಿಸಲಾಗದ ಸಂಕಟ. ಬಿಹಾರ ಮೊದಲೇ ಬಡಸೀಮೆ. ಈ ಸಂಕಟದಿಂದ ಜನ ನುಗ್ಗಾಗಿ ಹೋಗಿತ್ತು. ಗಾಂಧೀಜೀ ಅವರ ಪಾಲಿನ ದೇವರಾಗಿ ಅಲ್ಲಿಗೆ ಬಂದಾಗ ರಾಜೇಂದ್ರಬಾಬು ಆ ಚಳವಳಿಯಲ್ಲಿ ಧುಮುಕಿದರು. ಸರಕಾರ ಹೆದರಿ ೨೪ ತಾಸಿನೊಳಗಾಗಿ ಬಿಹಾರದಿಂದ ಹೊರಟು ಹೋಗಬೇಕೆಂದು ಗಾಂಧೀಜಿಗೆ ಅಪ್ಪಣೆಮಾಡಿತು. ಅವರು ಹೋಗಲಿಲ್ಲ. ಅಷ್ಟೇ ಅಲ್ಲ. ಬೇರೆ ಬೇರೆ ಪ್ರಾಂತಗಳಿಂದ ಸತ್ಯಾಗ್ರಹಿಗಳು ಬರತೊಡಗಿದರು. ಸರಕಾರ ಸೋತು ಹೋಯಿತು. ಗಾಂಧೀಜಿಯ ಮನಸಿನಂತೆ ಒಂದು ವಿಚಾರಣಾ

ಸಮಿತಿ ನಿರ್ಮಿತವಾಯಿತು. ಕೂಲಿಜನರಿಂದ ಗಾಂಧೀಜೀ, ರಾಜೇಂದ್ರ ಬಾಬು ಸಾವಿರಾರು ಹೇಳಿಕೆಗಳನ್ನು ತೆಗೆದುಕೊಂಡರು. ಸತ್ಯವನ್ನು ಬಯಲಿಗೆ ಎಳೆದರು. ರಚನಾತ್ಮಕ ಕಾರ್ಯಕ್ಕೆ ಅದು ಇಂದಿಗೂ ಒಂದು ಮೇಲಾದ ಉದಾಹರಣೆ ಆಗಿದೆ. ಚಂಪಾರಣ್ಯದಲ್ಲಿ ಗಾಂಧೀಜಿಗೆ ಉಭಯಲಾಭ; ಸತ್ಯಾಗ್ರಹ ಗೆದ್ದಿತು. ರಾಜೇಂದ್ರಬಾಬು ಅವರ ಗೆಳೆಯರೂ ಸಂಗಡಿಗರೂ ಆದರು. ಅದು ಬಿಹಾರದ ಭಾಗ್ಯ. ಆದರೆ ಇದು ಭಾರತದ ಪುಣ್ಯ.

ಆದೇ ಮೊದಲು, ಬಿಹಾರ ಗಾಂಧೀ ಪ್ರಾಂತವಾಗಿದೆ. ಗುಜರಾತಿನ ತರುವಾಯ ಗಾಂಧೀಜಿಯ ಪೂರ್ಣಪ್ರಭಾವ ಎಲ್ಲಾದರೂ ಕಂಡರೆ ಅದು ಬಿಹಾರದಲ್ಲಿ. ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮದಲ್ಲಿ ಬಿಹಾರಕ್ಕೆ ಅಗ್ರಸ್ಥಾನ. ನಾಡೆಲ್ಲ ಖಾದಿಮಯ. ಕಾಂಗ್ರೆಸ್ಸು ಸದಸ್ಯರ ಸಂಖ್ಯೆ ಅಲ್ಲೇ ಹೆಚ್ಚು. ಕಾಂಗ್ರೆಸ್ಸಿನಲ್ಲಿ ಬಿಹಾರದ್ದೆಲ್ಲ ಒಂದೇ ಧ್ವನಿ, ಒಂದೇ ಓಟು, ಶಾಂತಿಯಲ್ಲಿ ಹೇಗೋ ಸಮರಸದಲ್ಲಿ ಹಾಗೆಯೆ. ಶಾಸನ ಸಭೆಗಳಿಗೆ ಕಾಂಗ್ರೆಸ್ಸು ಬಹಿಷ್ಕಾರ ಹಾಕಿದಾಗ ಯಾರು ಓಟು ಕೊಡಬೇಕು? ವೆಂಕ-ನೊಣ-ಶೀನ ಆ ಬಹಿಷ್ಕಾರ ತೆಗೆದು ಶಾಸನ ಸಭೆಯ ಚುನಾವಣೆಗೆ ಕಾಂಗ್ರೆಸ್ಸು ನಿಂತಾಗ ನೋಡಬೇಕು; ನಾಡಿಗೆ ನಾಡೇ ಓಟಿನ ಕಚೇರಿಗಳಲ್ಲಿ ನಿಂತಿತ್ತು. ಅಸಹಕಾರದ ರಣಭೇರಿ ಬಾರಿಸಿದಾಗ ಈ ಖಾದೀ ಬಿಹಾರದಲ್ಲಿ ಯೋಧರ ತಂಡ ತಂಡಗಳು ಸೆರೆಮನೆಗೆ ಸದ್ದಿಲ್ಲದೆ ನುಗ್ಗಿದವು. ಸರಕಾರದ ವಿದ್ಯಾಲಯಗಳನ್ನು ಬಹಿಷ್ಕರಿಸಬೇಕೆಂದು ಕಾಂಗ್ರೆಸ್ಸು ತೀರ್ಮಾನ ಮಾಡಿತು. ಆಗ ಸಾವಿರಾರು ಜನ ಹುಡುಗರು ಶಾಲೆ-ಕಾಲೇಜುಗಳನ್ನು ಬಿಟ್ಟರು. ರಾಜೇಂದ್ರಬಾಬು ಪಾಟನಾ ವಿಶ್ವವಿದ್ಯಾಲಯದ ಸಿಂಡಿಕೇಟ್-ಸಿನೇಟಗಳಿಗೆ ನಮಸ್ಕಾರ ಹಾಕಿದರು. ಕೆಲವು ದಿನದೊಳಗೆಯೇ ೬೫೦ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳು ಬಿಹಾರದಲ್ಲಿ ಮೊದಲಾದವು. ೬೩ ಸಾವಿರ ಹುಡುಗರು ಸೇರಿದರು. ಬಿಹಾರ ವಿದ್ಯಾಪೀಠ ಎಂದು ರಾಷ್ಟ್ರೀಯ ವಿಶ್ವವಿದ್ಯಾಲಯವೇ ರೂಪುಗೊಂಡಿತು. ಶಿಸ್ತು-ಸಂಯಮಗಳ ಪವಾಡಗಳು ಬಿಹಾರದಲ್ಲಿ ಕಂಡಹಾಗೆ ಹಿಂದುಸ್ತಾನದಲ್ಲಿ ಎಲ್ಲಿಯೂ ಕಂಡಿಲ್ಲ. ಅಲ್ಲಿ ಗಾಂಧೀಧರ್ಮದ ಬೆಳಕು

ಬಿದ್ದ ಹಾಗೆ ಇನ್ನೆಲ್ಲೂ ಬಿದ್ದಿಲ್ಲ. ಆ ಹೊಸನೋಟ, ಆ ಏಕಮತ್ಯಕ್ಕೆ ಆದೇ ನೆಲೆಯಾಯಿತು. ಇದೆಲ್ಲಕ್ಕೆ ಕಾರಣ ರಾಜೇಂದ್ರಬಾಬುವಿನ ಕೈವಾಡ ಎಂದು ಹೇಳಬೇಕೇ?

ರಾಜೇಂದ್ರ ಬಾಬುವಿಗೂ ಕಾಂಗ್ರೆಸ್ಸಿಗೂ ಇರುವ ಗಂಟು-ನಂಟು ಬಹಳ ಹಳೆಯದು. ಕಾಲೇಜಿನಲ್ಲಿ ಓದುತ್ತಿರುವಾಗಲೇ ಕಾಂಗ್ರೆಸ್ಸಿನ ಸ್ವಯಂಸೇವಕರಾಗಿ ದುಡಿದರು. ೧೯೦೬ ರಲ್ಲಿ ಕಾಂಗ್ರೆಸ್ಸು ಕಲಕತ್ತೆಯಲ್ಲೇ ಆಗಿತ್ತು. ಅಂದಿನಿಂದಲೇ ಇವರ ಮನಸ್ಸು ದೇಶಸೇವೆಗೆ ತಿರುಗಿತು. ಇವರ ಪ್ರತಿಭಾಪೂರ್ಣವಾದ ವಿದ್ಯಾಭ್ಯಾಸ ಮುಗಿದು ಪ್ರೊಫೆಸರರಾಗಿ ಹೆಸರು ಹೊಂದಿದಾಗಲೂ ಇವರ ಮನಸ್ಸು ಸೇವೆಯ ಕಡೆಗೇ ತೂಗುತ್ತಿತ್ತು. ಮೊದಲು ಆಂಗ್ಲಸಾಹಿತ್ಯ, ಆಮೇಲೆ ಇತಿಹಾಸ, ಅರ್ಥಶಾಸ್ತ್ರ, ತರುವಾಯ ನ್ಯಾಯಶಾಸ್ತ್ರ—ಹೀಗೆ ನಾಲ್ಕು ತೆರದ ಉಪಾಧ್ಯಾಯ ವೃತ್ತಿ ಆಯಿತು. ಕಡೆಗೆ ಪಾಟನಾಕ್ಕೆ ಬಂದು ವಕೀಲರಾದರು. ೧೯೧೨ರಲ್ಲೇ—ಗಾಂಧೀಜಿಯ ಗುರುತಾಗುವುದಕ್ಕಿಂತ ಮೊದಲೇ—ಬಾಬು ಅಖಿಲಭಾರತ ಕಾಂಗ್ರೆಸ್ ಸಮಿತಿಗೆ ಸದಸ್ಯರಾದರು. ಅಂದಿನಿಂದ ಈ ೨೮ ವರ್ಷಗಳ ಕಾಲವೂ ಬಾಬುವಿಗೆ ಆ ಸದಸ್ಯತ್ವ ಅಂಟಿಕೊಂಡೇ ಇದೆ. ಗಾಂಧೀಜಿ ಭಾರತದ ರಾಜಕಾರಣದಲ್ಲಿ ಹೊಕ್ಕಮೇಲೆ ೧೯೨೨ರಲ್ಲಿ ಕಾಂಗ್ರೆಸ್ ವರ್ಕಿಂಗ ಕಮಿಟಿಯ ಸದಸ್ಯರಾದರು. ತ್ರಿಪುರಿಯ ಅಂತ-ರ್ನಾಟಕದ ಮೂರು ತಿಂಗಳು ಬಿಟ್ಟರೆ ಆಗನಿಂದ ಈಗಿನ ವರೆಗೆ ಹದಿನೆಂಟು ವರುಷದ ಕಾಲ ಆ ಕಮಿಟಿಯ ಸದಸ್ಯರಾಗಿ ಎಡಬಿಡದೆ ದುಡಿದಿದಾರೆ. ಇಂಥ ಅವಿಚ್ಛಿನ್ನ ಸೇವೆಗೆ ಜನ ತಲೆಬಾಗದೆ ಇರಬಹುದೆ? ೧೯೩೪ ರಲ್ಲಿ ಮುಂಬಯಿಯಲ್ಲಿ ಕಾಂಗ್ರೆಸ್ಸು ನಡೆದಾಗ ಬಾಬು ಅಧ್ಯಕ್ಷರಾದರು.

ಸರಳತೆ ಎಂದರೆ ಭೋಳೇತನವಲ್ಲ. ಬಾಬು ಸರಳರಿದ್ದ ಹಾಗೆ ಚಾಣಾಕ್ಷರೂ ಹೌದು. ಇವೆರಡೂ ಗುಣ ಒಂದಕ್ಕೊಂದು ಹಗೆ ಅಲ್ಲ. ಬಿಹಾರ ದೊಡ್ಡ ದೊಡ್ಡ ಜಮೀನುದಾರರಿಗಳ ದೇಶ. ಸಾಮ್ಯವಾದಕ್ಕೂ ಅದೇ ನೆಲೆಗಟ್ಟು. ಸಾಮ್ಯವಾದಿಗಳ ಮುಖಂಡರು ಜಯಪ್ರಕಾಶರು, ಬಿಹಾರದವರೇ. ಕಿಸಾನ ಸಭೆಯೂ ಅಲ್ಲಿ ಬಲವಾಗಿದೆ. ಸ್ವಾಮಿ ಸಹಜಾನಂದರ ಕಾರ್ಯಕ್ಷೇತ್ರ ಅಲ್ಲೇ. ಬಿಹಾರದಲ್ಲಿ ಅನೇಕ ಸಲ ಈ ಅಂತಃಕಲಹ

ಗಳು ಎದ್ದವು. ರಾಜೇಂದ್ರಬಾಬುವಿನ ಚಾಣಾಕ್ಷತನದ ಕೈವಾಡವಿರದೆ ಇದ್ದರೆ ಬಿಹಾರದಲ್ಲಿ ಯಾದವೀಲೀಲೆ ಆಗಬೇಕಾಗಿತ್ತು. ದೊಂಬಿ ದಂಗೆ ಗಳಾಗದೆಯೆ ಜಮೀನುದಾರರು ಕಿಸಾನರಿಗೆ ಕೆಲವು ಅನುಕೂಲ ಮಾಡಿ ಕೊಟ್ಟರು. ಪಾಟನಾದ ಪುರಸಭೆಯ ಅಧ್ಯಕ್ಷರಾಗಿ ಬಹಳ ಕಾಲ ಕೆಲಸ ಮಾಡಿದರು. ಅದರಲ್ಲೂ ಆ ಚಾಣಾಕ್ಷತನ ಕಾಣಿಸದೆ ಇರಲಿಲ್ಲ. ಇವರ ವ್ಯಕ್ತಿತ್ವದ ಪ್ರಭಾವವೇ ಅಂಥದು.

ಬಾಬು ಬರೀ ರಾಜಕಾರಣದಲ್ಲೇ ಮುಳುಗಿದ ಸಿಪಾಯಿ ಅಲ್ಲ. ಸಾಹಿತ್ಯದ ಮೇಲೆ ತುಂಬಾ ಪ್ರೀತಿ. ಇಂಗ್ಲೀಷಿನಲ್ಲಿ ಎಂ. ಎ; ಎಂ. ಎಲ್. ಹಿಂದಿಯಲ್ಲಿ ಒಳ್ಳೇ ಪಂಡಿತರು. ಕೆಲವು ಕಾಲ ಆಂಗ್ಲ ಸಾಹಿತ್ಯದ ಪ್ರೊಫೆ ಸರರಾಗಿದ್ದರು. ಇವರಿಗೆ ಇವು ಎರಡಲ್ಲ—ಏಳು ಭಾಷೆ ಬರುತ್ತವೆ. ಸಣ್ಣತನದಲ್ಲಿ ಉರ್ದು ಪಾರಶೀ ಕಲಿತರು; ಬಿಹಾರಿ ಬಂಗಾಲಿಗಳು ಮನೆ ಮಾತೇ ತಾನೆ. ಇವರ ಸಾಹಿತ್ಯಪ್ರೇಮ, ಪಾಂಡಿತ್ಯಗಳಿಗೆ ಮನ್ನಣೆ ಸಾಕಷ್ಟು ದೊರೆತಿದೆ. ಪಾಟನಾ ವಿಶ್ವವಿದ್ಯಾಲಯ ಇವರಿಗೆ ಡಾಕ್ಟರ್ ಪದವಿಯನ್ನು ಕೊಟ್ಟು ಗೌರವ ತೋರಿಸಿತು. ಅಖಿಲ ಭಾರತ ಹಿಂದೀ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದರು. ಭಾರತದ ನಾಯಕ ಮಣಿಗಳಲ್ಲಿ ಮೌಲಾನಾ ಅಬುಲ್ ಕಲಾಮ್ ಆಜಾದರನ್ನು ಬಿಟ್ಟರೆ, ಕವಯಿತ್ರಿ ಸರೋಜಿನಿಯನ್ನು ಲೆಕ್ಕ ಹಿಡಿಯದೆ ಹೋದರೆ, ಭಾಷಾ ಪ್ರೇಮದಲ್ಲಿ ಬಾಬುವೇ ಅಗ್ರಗಣ್ಯರು. ಅವರ ಭಾಷಾಪ್ರೇಮವಾದರೂ ಸಂಕುಚಿತವಲ್ಲ. ನುಡಿಗೆ ನುಡಿ ಭಾರವಾಗಿರುವ ನಮ್ಮ ದೇಶದಲ್ಲಿ ಹಿಂದಿ ಯನ್ನು ರಾಷ್ಟ್ರಭಾಷೆಯಾಗಿ ಮಾಡದೆ ರಾಷ್ಟ್ರೀಯತೆಯೇ ಇಲ್ಲ. ಐಕ್ಯವು ಕನಸು ಎಂದು ಜನರಿಗೆ ನಂಬಿಗೆ. ಅಂತಲೇ ಹಿಂದೀ ಪ್ರಚಾರ ದಲ್ಲಿ ಬಾಬುವಿಗೆ ತುಂಬಾ ಶ್ರದ್ಧೆ. ಅದಕ್ಕಾಗಿ ಬಹಳ ಕಷ್ಟಪಡುತ್ತಾರೆ. ಹಿಂದಿ-ಹಿಂದುಸ್ತಾನಿ-ಉರ್ದುಗಳ ಗೊಂದಲ ಈ ಹಾದಿಯಲ್ಲಿ ದೊಡ್ಡ ಕಡಲೆ ಕಾಳು ಗಣಪತಿಯಂತೆ ಕೂತಿದೆ. ಅದನ್ನು ನಿವಾರಿಸಲು ಬಾಬುವಿಗಿಂತ ಹೆಚ್ಚು ಯೋಗ್ಯರು ಯಾರು?

ಈಗ ಕಾಂಗ್ರೆಸ್ಸಿನಲ್ಲಿ ಇತ್ತಂಡ. ಇಂಥದೇ ಗಲ ವರ್ಷಗಳ ಕೆಳಗೆ ಗಯಾ ಕಾಂಗ್ರೆಸ್ಸಿನಲ್ಲೂ ಬಂದಿತ್ತು. ನಡುನಡುವೆ ಚಿಲ್ಲರೆ ಕೀಟಲೆಗಳು

ಬಂದವು. ಆಗಲೂ ಈಗಲೂ ಬಾಬುವಿನ ಸ್ಥಳ ಗಾಂಧೀಜಿಯ ದೋಣಿಯಲ್ಲೇ. ಗಯೆಯಲ್ಲಿ ಗಾಂಧೀವಾದಿಗಳಾಗಿ ತಮ್ಮ ಜೊತೆಗಿದ್ದ ಮುಂದಾಳುಗಳೆಲ್ಲ ಇಂದು ಬೇರೆ ಹಾದಿ ಹಿಡದಿದಾರೆ. ಆದರೂ ಬಾಬುಗೆ ಗಾಂಧೀಜಿಯೇ ಧ್ರುವನಕ್ಷತ್ರ.

ರಾಜೇಂದ್ರಬಾಬು ಹಿಂದುಸ್ತಾನದ ಸಂಸ್ಕೃತಿಯ ವಿಲಕ್ಷಣ ಉದಾಹರಣೆ. ಪಾಂಡಿತ್ಯಶಿಖರವನ್ನೇ ಏರಿದಾರೆ; ಆಗಲಿ ತುಂಬಾ ಸ್ನೇಹ, ಸುಲಭ. ಮೇಧಾವಿಯಾದ ರಾಜಕಾರಣಪಟುವಾದರೂ ಅತ್ಯಂತ ಸರಳರಾದ ಗ್ರಾಮಸೇವಕರು. 'ವಿದ್ಯೆಯ ಪರ್ವತ' ವೆ ಆದರೂ ವಿನಯದಲ್ಲಿ ಅವರದೇ ಮೊದಲ ಹೆಸರು. ಆಗರ್ಭ ಶ್ರೀಮಂತರು; ಬಡತನದ ವ್ರತವನ್ನೆ ತೊಟ್ಟರು. ಇವರು ಮೂರನೆಯ ತರಗತಿ ಬಿಟ್ಟು ರೇಲವೇ ಪ್ರಯಾಣ ಮಾಡಿದುದನ್ನು ಈ ಜನರು ಕಂಡೇ ಇಲ್ಲ. ಬಿಹಾರದ ಪ್ರಧಾನಮಂತ್ರಿತ್ವ ಇವರ ಕಾಲಬಳಿ ಹೊರಳಾಡಿತು. ಇವರಿಗೆ ಮಾತ್ರ ತಮ್ಮ ಹಳ್ಳಿಯನ್ನು ಬಿಡುವ ಮನಸ್ಸೇ ಆಗಲಿಲ್ಲ. ಹಿಂದೂದೇಶದ ಜನ ಈ ವ್ಯಕ್ತಿತ್ವವನ್ನು ಗುರುತಿಸಿಕೊಂಡಿದಾರೆ. ಅಂತಲೇ ಜಗತ್ತಿಗೆಲ್ಲ ಇವರು ಡಾಕ್ಟರ್ ರಾಜೇಂದ್ರ ಪ್ರಸಾದರಾಗಿದ್ದರೂ ಅವರಿಗೆ ಬರೀ ರಾಜೇಂದ್ರಬಾಬು. ಅದೇ ಅವರ ಅಮೃತತ್ವದ ಗುರುತು; ಅದುವೆ ಅವರ ಗುಟ್ಟು.



# ಶರಚ್ಚಂದ್ರ ಬೋಸ್

●

Words, words, words,—ಮಾತು, ಮಾತು, ಬರೀ ಗಾಳಿ ಮಾತು, ಎಂದು ಗಂಭೀರವಾಣಿಯಿಂದ ತ್ರಿಪುರಿಯ ಕಾಂಗ್ರೆಸ್ ವೇದಿಕೆಯ ಮೇಲೆ ನಿಂತು ಶರಚ್ಚಂದ್ರ ಬೋಸರು ಮಾಡಿದ ಭಾಷಣದ ಪಲ್ಲವಿ ಇನ್ನೂ ಕಿವಿಯಲ್ಲಿ ಆಡುತ್ತಿದೆ. ಗೊತ್ತುವಳಿಯನ್ನು ಸೂಚಿಸಿದವರು ಸೌಮ್ಯವಾದಿಗಳ ಮುಂದಾಳು ಜಯಪ್ರಕಾಶ ನಾರಾಯಣರು; ಅದನ್ನು ಅಣಿಮಾಡಿದವರು, ಅದಕ್ಕೆ ಬೆಂಬಲವಾಗಿದ್ದವರು, ಜವಾಹರಲಾಲರು. ಸುಭಾಷರ ಅಧ್ಯಕ್ಷ ಭಾಷಣದಲ್ಲಿ ಹೇಳಿದ ಕಾರ್ಯಕ್ರಮಕ್ಕೂ ಇಲ್ಲಿ ಸೂಚಿತವಾದುದಕ್ಕೂ ಮೂಡಲು-ಪಡುವಲಷ್ಟು ವ್ಯತ್ಯಾಸ. ಇದನ್ನು ಶರತ್ ಬಾಬು ವಿರೋಧಿಸಿದರು. ಸೀಜರ್ ಚಕ್ರವರ್ತಿ ಕೊಲ್ಲಲ್ಪಟ್ಟಾಗ ಬ್ರೂಟಸ್ ಮುಂತಾದವರ ಮಾತು ಕೇಳಿ ಸೀಜರನದು ತಪ್ಪೆಂದು ಜನ ಉದ್ರೇಕಗೊಂಡಿದ್ದಾಗ, ಆಂಟೋನಿ ಬಂದು ನಿಲ್ಲುತ್ತಾನೆ ಅವರ ನಡುವೆ. ಜನರ ಆ ಉದ್ವಿಗ್ನ ಮನಸ್ಸನ್ನು ತಿರುಗಿಸಲು ಆದೀತೆ? ಶರತ್ ಬಾಬು ಅಂದು ಮಾತಾಡಿದಾಗ ಆ ರೀತಿ, ಆ ಉಕ್ತಿಗಾಂಭೀರ್ಯ, ಆ ಭಾವ ವೈಖರಿ, ಆ ವ್ಯಂಗ್ಯ—ಎಲ್ಲಾ ಹಿಂದಿನ ಆ ಚಿತ್ರವನ್ನು ನೆನಪಿಗೆ ತಂದವು. ಜವಹರರ ಭಾಷಣದಲ್ಲಿ ಜೋಗಕಣಿವೆ ಜಲಪಾತದ ಆ ವೇಗ, ಭೂಲಾಭಾಯಿ ದೇಸಾಯಿ ತೋರುವ ಸೂಕ್ಷ್ಮ ತರ್ಕ ಅದರಲ್ಲಿ ಇಲ್ಲ. ಬುದ್ಧಿರಸಗಳನ್ನು ಮೇಳಯಿಸಿ ಹದವಾಗಿ ಮಾತಾಡುವ ವಿದ್ವದ್ಗಾಂಭೀರ್ಯ ಅವರಲ್ಲಿದೆ. ಜನಜಂಗುಳಿಯನ್ನು ಹೊಡೆದೆಬ್ಬಿಸುವ ಮಾತಿನ ಚಡಿಮಳೆಯು

ಈ ಕಾಲದಲ್ಲಿ ಅವರ ಭಾಷಣ ಜವಹರರು ಅಂದಂತೆ ಓಬೀರಾಯನ ಕಾಲದ ರೀತಿಯಾದೀತು. ಆದರೆ ಜವಹರರು ಆ ದಿನ ಅಡ್ಡಬಾರದಿದ್ದರೆ ಶರತಬಾಬುವಿನ ಭಾಷಣದ ಪರಿಣಾಮ ಈಗ ಆದ ಹಾಗೆ ಆಗುತ್ತಿರಲಿಲ್ಲ ವೇನೋ !

ಈ ಹಿಡಿತವೇ ಬಂಗಾಳದ ವಕೀಲವೃತ್ತಿಯಲ್ಲಿ ಅವರ ಬಾವುಟ ವನ್ನು ಎಲ್ಲರಿಗಿಂತಲೂ ಮೇಲೆ ಹಾರಿಸುತ್ತಿದೆ. ಚಿತ್ತರಂಜನದಾಸರ ತರುವಾಯ ನೃಪೇಂದ್ರನಾಥ ಸರಕಾರರು ಕಲ್ಕತ್ತೆಯ ವಕೀಲರ ಮುಂದಾಳಾದರು. ಅವರ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ಶರತ್‌ಬಾಬು ನಡೆದರು. ರಾಜಕೀಯ ಪ್ರವಾಹದ ಏರಿಳಿತಗಳಿಗೆ ಸಿಗದಿದ್ದರೆ ಅವರು ಇಂದಿಗೆ ಕುಬೇರರಾಗಿರಬಹುದಾಗಿತ್ತು.

ಬಂಗಾಳದ ಶಾಸನಸಭೆಯ ಕಾಂಗ್ರೆಸಪಕ್ಷದ ನಾಯಕತ್ವವೂ ಅಷ್ಟೆ. ಶಾಸನ ಸಭೆಯಲ್ಲಿ ಸರ್ಕಾರವನ್ನು ವಿರೋಧಿಸುವ ರಾಜಕೀಯ ಚಾತುರ್ಯವನ್ನು ಹಿಂದೂಸ್ಥಾನದಲ್ಲಿ ಮೊದಲು ಮಾಡಿದವರು ಚಿತ್ತ ರಂಜನದಾಸರು. ಅವರಿಗೆ ಮೋತಿಲಾಲನೆಹರು ಒತ್ತಾಸೆಯಾಗಿ ನಿಂತರು. ಇವರ ಸ್ವರಾಜ್ಯಪಕ್ಷವು ಸರಕಾರದ ನಿರಂಕುಶತೆಗೆ ಗಂಟಲುಗಾಣವಾಗಿ ಪದೇ ಪದೇ ಅವರ ಬೆನ್ನು ಮಣ್ಣುಮಾಡಿ, ಹಿಂದೂಸ್ಥಾನದಲ್ಲಿ ಜಯ ಘೋಷಗಳ ತೆರೆಗಳನ್ನೇ ಎಬ್ಬಿಸಿತು. ಜಗತ್ತಿನ ಶಾಸನ ಸಭೆಗಳ ಇತಿ ಹಾಸದಲ್ಲಿ ದಾಸರು ಹೊಸದೊಂದು ಪ್ರಕರಣವನ್ನೇ ಬರೆಯಿಸಿದರು. ಶರತ್‌ಬಾಬುವಿಗೆ ಆ ನಾಯಕನೊಡನಿದ್ದು ಆ ರಂಗದಲ್ಲಿ ಕೆಲಸಮಾಡಲು ಅದೃಷ್ಟ ದೊರೆಯಿತು. ಆ 'ಬಂಗಾಲ ಸಿಂಹ'ದ ಪರಾಕ್ರಮ ಗಾಂಭೀರ್ಯ ಗಳು ಈ ಕಿಶೋರಕ್ಕೂ ಬಂದಿವೆ. ಬಂಗಾಳದಲ್ಲಿ ಕಾಂಗ್ರೆಸ್ಸ ಪಕ್ಷಕ್ಕೆ ಬಹು ಸಂಖ್ಯೆಯ ಬಲವಿಲ್ಲ. ಸ್ವಯೂಥ ಕಲಹಗಳು ಇವೆ. ಆದರೂ ಎದೆಗೆಡದೆ ಬಿಟ್ಟುಬಿಡದೆ ವಿರೋಧ ಪಕ್ಷವನ್ನು ನಡೆಸಿಕೊಂಡು ಹೋಗು ತ್ತಿದ್ದಾರೆ. ಶಾಸನಸಭೆಯಲ್ಲಿ ಅವರು ಮಾಡಿದ ವಿರೋಧ ಭಾಷಣಗಳು ಉತ್ತಮ ಕಲಾಕೃತಿಗಳಾಗಿವೆ.

ಶರತ್‌ಬಾಬು ತಮ್ಮ ವೃತ್ತಿಯನ್ನು ಬಿಟ್ಟು ರಾಜಕೀಯ ರಂಗದಲ್ಲಿ ಬೇಗನೆ ಕಾಲಿಡಲಿಲ್ಲ. ಪ್ರವೇಶಮಾಡಿದರೂ ಮುಂದೆ ಬಂದು ನಿಲ್ಲಲಿಲ್ಲ.

ಆಗ ದಾಸರಿಗಾಗಿ ಆ ಸ್ಥಾನ ಮೀಸಲಿತ್ತು; ಈಗ ಅವರ ತಮ್ಮ ಸುಭಾಷ ಚಂದ್ರರು ಮುಂದಾಳು. ಬಾಬುವಿಗೆ ಮುಂದಾಳ್ತನದ ಹಸಿವೂ ಇಲ್ಲ; ತಮ್ಮ ಕೈಲಾದುದನ್ನು ತಮ್ಮ ಮನಸಿಗೆ ಬಂದುದನ್ನು ಮಾಡಿ ತೃಪ್ತ ರಾಗುವ ಆತ್ಮನಿಷ್ಠ ಸ್ವಭಾವ ಅವರದು. ಸ್ವರಾಜ್ಯಪಕ್ಷ ಹುಟ್ಟಿದ ಮೇಲೇ ಅವರಿಗೆ ರಾಜಕೀಯದ ಸೆಕೆ ತಗಲಿದುದು. ಅಷ್ಟು ಹೊತ್ತಿಗೆ ಸುಭಾಷರಾಗಲೇ ಸೆರೆಮನೆಯ ರುಚಿ ಕಂಡಿದ್ದರು. ದಾಸರು ತಮ್ಮ ಪಕ್ಷದ ಬೆಂಬಲಕ್ಕಾಗಿ ಫಾರ್ವರ್ಡ್ ಎಂಬ ಪತ್ರಿಕೆ ಪ್ರಾರಂಭಿಸಿ ಅದರ ಸರ್ವ ಯಾಜಮಾನ್ಯವನ್ನು ಬಾಬುವಿನ ತಲೆಗೆ ಕಟ್ಟಿದರು. ಹೆಸರಿಗೆ ಮಾತ್ರ 'ದೇಶಬಂಧು'ವೇ ಸಂಪಾದಕರು. ಈ ಪತ್ರಿಕಾ ನಿರ್ವಾಹವು ಶರತ್‌ಬಾಬುವಿನ ವಾದಪಟುತ್ವ ವಿದ್ವತ್ತುಗಳಿಗೆ ಚಲೋ ಗೊಬ್ಬರ ಹಾಕಿದ ಹೊಲದಂತೆ ಆಯಿತಾಗಲಿ, ಆರ್ಥಿಕ ಪರಿಸ್ಥಿತಿಗೆ ಸೋಕಿದ್ದನ್ನೆಲ್ಲಾ ಕೊಚ್ಚಿಕೊಂಡು ಹೋಗುವ ಹುಚ್ಚುಹೊಳೆಯಂತಾಯಿತು. ಬಂಗಾಲ ದಲ್ಲಿ ಸ್ವರಾಜ್ಯಪಕ್ಷದ ಅಪೂರ್ವ ವಿಜಯ ಪರಂಪರೆಯ ಕೀರ್ತಿ ಶರತ್ ಬಾಬುವಿನ ಪತ್ರಿಕಾ ನಿರ್ವಾಹಕ್ಕೆ ಕೊಂಚಮಟ್ಟಿಗಾದರೂ ಸಲ್ಲಬೇಕು. ೧೯೨೮ರಲ್ಲಿ ಈಸ್ಟ್ ಇಂಡಿಯಾ ರೈಲ್ವೆ ಕಂಪೆನಿ ಬೇಲೂರಿನ ಬಳಿ ದೊಡ್ಡ ಅನಾಹುತಕ್ಕೆ ಗುರಿಯಾಯಿತು. ಆಗ ಫಾರ್ವರ್ಡ್ ಕೆರಳಿಬಿಟ್ಟಿತು. ಆ ಗುಡುಗನ್ನು ಸಹಿಸಲಾರದೆ ಸರ್ಕಾರ ಪತ್ರಿಕೆಯ ಕತ್ತನ್ನು ಹಿಸುಕಿಬಿಟ್ಟಿತು. ಶರತ್‌ಬಾಬುವಿನ ಅಭಿಮಾನದ ಜೀವಕ್ಕೆ ಅದೊಂದು ಲೆಕ್ಕವೆ ? ಲಿಬರ್ಟಿ ಯೆಂಬ ಮತ್ತೊಂದು ಪತ್ರಿಕೆ ಹೊರಡಿಸಿದರು. ಅದರ ಜೊತೆಗೆ ಎರಡು ಬಂಗಾಳಿ ಪತ್ರಿಕೆಗಳು ಕೂಡ. ಅವರ ದುರದೃಷ್ಟ. ಆದರಿಂದ ಅವರ ಬೆರಳು ಮಾತ್ರ ಮಾಯಲಾರದಂತೆ ಸುಟ್ಟುಹೋದವು. ನಮ್ಮ ದೇಶದಲ್ಲಿ ಎಲ್ಲಿ ತಾನೇ ನಿಜವಾದ ರಾಜಕೀಯ ಪತ್ರಿಕೆಗಳಿಗೆ ನೂರು ವರ್ಷ ಆಯುಸ್ಸಿದೆ? ಬರೀ ಸೊಟ್ಟ ಸುದ್ದಿ, ಅಪನಿಂದೆಯ ಸಾಹಿತ್ಯಗಳಲ್ಲಿ ಮುಳುಗಿ ತೇಲುತ್ತಿ ರುವ ನಮಗೆ ತಾತ್ವಿಕ ಚರ್ಚೆ ರುಚಿಸೀತು ಹೇಗೆ? ಮದರಾಸಿನ ಹಿಂದೂ ಪತ್ರಿಕೆಯೊಂದು ಮಾತ್ರ ಮೃತ್ಯುಂಜಯನ ಕರುಣೆಗೆ ಪಾತ್ರನಾದ ಮಾರ್ಕಂಡೇಯ.

ಶರತ್‌ಬಾಬು ಕಾಂಗ್ರೆಸ್ಸಿನಲ್ಲಿ ಪೂರಾ ಮುಳುಗಿ ಹತ್ತೇ ವರ್ಷ

ತ್ಯಾಗದ ಮಡುವಿನಲ್ಲಿ ಪೂರ್ಣ ಮನಸ್ಸಿನಿಂದ ಧುಮುಕಿದರೂ ಉಳಿದವ ರಂತೆ ಜನಸಾಮಾನ್ಯರ ಮುಂದಾಳುತನದ ಗಡ್ಡೆಯ ಮೇಲೆ ತೇಲಲಿಲ್ಲ. ಕಲಕತ್ತಾ ನಗರದ ವ್ಯವಹಾರದಲ್ಲೇ ಅವರಿಗೆ ತೃಪ್ತಿ. ಬಂಗಾಲ ಪ್ರಾಂತದ ಕಾಂಗ್ರೆಸ್ ಕಮೀಟಿಯಲ್ಲಿ ಇವರ ಸ್ಥಾನ ಬಹಳ ಮುಖ್ಯವಾದುದು. ಹದಿನೈದು ವರ್ಷಗಳಿಂದ ಕಲಕತ್ತೆಯ ಪೌರಸಭೆಯಲ್ಲಿ ಸದಸ್ಯರಾಗಿದಾರೆ; ಆದರ ಅಲ್ಡರ್‌ಮನ್ (ಉಪಾಧ್ಯಕ್ಷ) ಆಗಿದ್ದಾರೆ. ಅವರ ಈ ತೃಪ್ತಿಗೆ ಸುಭಾಷರ ಮೇಲೆ ಅವರಿಗಿರುವ ಭ್ರಾತೃಪ್ರೇಮವೂ ಒಂದು ಕಾರಣ. ನಾಡಿನ ಒಳಿತಿಗಾಗಿ ತ್ಯಾಗಮೂರ್ತಿಗಳೇ ಆದವರು ಈ ಕಾಲದಲ್ಲಿ ಕೆಲವ ರಾದರೂ ಸಿಕ್ಕಾರು. ಒಡಹುಟ್ಟಿದವರ ಪ್ರೀತಿಗಾಗಿ ಶರತ್‌ಬಾಬುವಿನಂತೆ ಆತ್ಮದಾನ ಮಾಡಿದವರು ಮತ್ತೊಬ್ಬರಿಲ್ಲ.

ರಾಜಕೀಯ ರಂಗದಲ್ಲಿ ಪ್ರತ್ಯಕ್ಷವಾಗಿ ಪಾಲುಗೊಳ್ಳದಿದ್ದರೂ ಅವರ ನ್ಯಾಯದೃಷ್ಟಿ ಪಾಂಡಿತ್ಯಗಳು ಬಹಳ ದಿನಗಳ ಹಿಂದೆಯೇ ರಾಜಕಾರಣದ ವಾದಭೂಮಿಯಲ್ಲಿ ಪ್ರವೇಶ ಮಾಡಿಸಿದವು; ರಾಜಕೀಯ ಖಟ್ಲೆಗಳಲ್ಲಿ ವಕೀಲಿ ಮಾಡಿಸಿದವು. ಹಿಂದುಸ್ಥಾನದಲ್ಲಿ ಸತ್ಯಾಗ್ರಹವು ಮೊದಲಾದ ದಿನಗಳಲ್ಲಿ ಹರತಾಳ ಪದ್ಧತಿ ಹರಡಿತು. ಆಗ ಬಂಗಾಳದಲ್ಲಿ ನೃಪೇಂದ್ರ ನಾಥ ಸರಕಾರರು ಹರತಾಳವು ನ್ಯಾಯದ ಕಣ್ಣಿಗೆ ಅಪರಾಧವೆಂದು ಹುಯ್ಲು ಎಬ್ಬಿಸಿದರು. ನೃಪೇಂದ್ರ ಮೊದಲೇ ಕಾಂಗ್ರೆಸು ವಿರೋಧಿ; ಅಸಹಕಾರ ಅವರ ಪಾಲಿಗೆ ನೀರಿಗೆ ಬೆಂಕಿಯಿದ್ದಂತೆ. ಅಂಥವರು ಸಾಧಾ ರಣ ಕಾನೂನಿನ ಪ್ರಕಾರ ಹರತಾಳ ತಪ್ಪು ಎಂದು ಬಲವಾಗಿ ವಾದಿಸಿ ದಾಗ, ಶರತ್‌ಬಾಬು, ಇದಿರಾಳಿ ವೃತ್ತಿಯಲ್ಲಿ ತಮ್ಮ ನಾಯಕನೆಂಬುದನ್ನು ಮರೆತುಬಿಟ್ಟರು. ಹರತಾಳ ಮಾಡಲು ಜನರಿಗೆ ಹಕ್ಕಿಲ್ಲವೇ ಎಂಬ ಪ್ರಶ್ನೆ ಯನ್ನು ಎತ್ತಿ ಪತ್ರಿಕೆಗಳಲ್ಲಿ ವಿರೋಧ ಪಕ್ಷವನ್ನು ಕಟುವಾಗಿ ಖಂಡಿಸಿ ದರು. ಬಂಗಾಳದ ಕ್ರಾಂತಿಕಾರ ಚಳುವಳಿಯನ್ನು ಅಣಗಿಸಲೆಂದು ಸರಕಾರವು ಬಹು ಜನರ ಮೇಲೆ ವ್ಯಾಜ್ಯ ಹೂಡಿತು. ಆಗ ಶರತ್‌ಬಾಬು ನೀಡಿದ ದಾನ ಅಮೂಲ್ಯವಾದುದು. ಅವರ ಯೋಧಜೀವಕ್ಕೆ ಬರೀ ದ್ರವ್ಯದಾನ ತೃಪ್ತಿಕೊಡಲಿಲ್ಲ. ಚಿತ್ತಗಾಂಗಿನ ಆಯುಧ ದರೋಡೆಯ ವ್ಯವಹಾರದಲ್ಲಿ ಬಹಳ ದಿನ ವಕೀಲರಾಗಿ ಕೆಲಸ ಮಾಡಿದರು.

ಶರತ್‌ಬಾಬು ಸ್ವತಂತ್ರ ಪ್ರವೃತ್ತಿಯ ಜೀವ. ಯಾರ ಹಂಗು ಹಸಾದಗಳಿಗೂ ಸಿಲುಕುವವರಲ್ಲ. ವರ್ಧಾದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಜನವೆಲ್ಲ ಜಮುನಾಲಾಲ ಬಜಾಜರ ಬಳಿ ಬಿಡಾರ ಮಾಡಿದರೆ ಇವರು ಮಾತ್ರ ಊರಲ್ಲಿ ಯಾರೋ ತಮ್ಮ ಗುರುತಿನವರಲ್ಲಿ ಇಳಿಯ ಬೇಕು. ಮಾತಿನಲ್ಲಿ ಅವರು ಸ್ವಲ್ಪ ನಿರ್ದಾಕ್ಷಿಣ್ಯ—ಖಂಡತುಂಡ—ಸ್ವಭಾವ. ವಿರೋಧಕ್ಕೆ ನಿಂತರೆ ಗಂಡುಗೊಡಲಿ; ಇದಿರಿನಲ್ಲಿದ್ದ ಮೂರ್ತಿ ಮುಕ್ಕಾಗಲಿ ಮಣ್ಣಾಗಲಿ, ಹಿಡಿದುದನ್ನು ಸಾಧಿಸಬೇಕೆಂಬ ಹಟವಿದೆ; ಅನಿಸಿದುದನ್ನೇ ಆಡುವ ಧಾರಾಳವಿದೆ. ಆದರೆ ರಾಜಕಾರಣದಲ್ಲೇ ಮುಳುಗಿ ಹೋಗುವ ಆಸೆಯೂ ಇಲ್ಲ, ಅವಕಾಶವೂ ಕಡಿಮೆ.

ಬಂಗಾಳದ ಹಿಂದೂ ಜನರಲ್ಲಿ ಸಂಘಟನೆಯ ನೋಟ, ಜಾತೀಯ ಭಾವನೆ ಬಹಳ ಮುಂದಿಗೆ ಇವೆ. ಬಂಗಾಳ ಮೊದಲು ಹೇಗೆ ಇದ್ದರೂ ಈಗ ಆ ಪ್ರಾಂತದಲ್ಲಿ ಹಿಂದುಗಳ ಕೈಸೋತಿದೆ. ಅಲ್ಪ ಸಂಖ್ಯಾಕರಿಗೆ ಅನೇಕ ವಿಧಗಳಲ್ಲಿ ತೊಂದರೆಗಳಿವೆ. ಮುಹಮ್ಮದೀಯರು ಅಲ್ಲಿ ಬಹು ಸಂಖ್ಯಾಕರಾಗಿರುವುದಲ್ಲದೆ ಪ್ರಬಲರೂ ಆಗಿದ್ದಾರೆ. ಆಡಳಿತವೂ ಅವರ ಕೈಯಲ್ಲೇ. ಪ್ರತಿಯೊಬ್ಬ ಮುಸ್ಲಿಮನೂ ಒಂದೊಂದು ಹುಲಿಯೆಂದು ಪೌರುಷವಾಡಿದ ಬಂಗಾಳದ ಹುಲಿ ಫಜಲುಲ್ ಹಕ್‌ರೇ ಪ್ರಧಾನಿ. ಈ ಪರಿಸ್ಥಿತಿಯಲ್ಲಿ ಅಲ್ಲಿನ ಹಿಂದೂ ಜನರಲ್ಲಿ ಜಾತೀಯ ಭಾವನೆ ಹರಿಯು ವುದು ಸಹಜ, ಸ್ವಾಭಾವಿಕ. ಬಂಗಾಳದಲ್ಲಿ ಇಂದು ಹಿಂದೂ ಮಹಾಸಭೆ ವಿಜೃಂಭಿಸ ಬಯಸುತ್ತಿದೆ. ಇಷ್ಟಾದರೂ ಬಂಗಾಲದ ಕಾಂಗ್ರೆಸ್ ಪಕ್ಷ ದಲ್ಲಿ ಮಾತ್ರ ಆ ಭಾವನೆ ಎಳ್ಳಷ್ಟಾದರೂ ಸುಳಿದಿಲ್ಲ. ಬಂಗಾಲದ ಹಿಂದೂ ಮಹಾಸಭೆಯವರು ಎರಡು ವರ್ಷದ ಕೆಳಗೆ ಸರಕಾರಿ ನೌಕರಿಗಳಲ್ಲಿ ತಮಗೆ ಇಂತಿಷ್ಟು ಪಾಲು ಸಿಗಬೇಕೆಂದೂ, ಮುಹಮ್ಮದೀಯರಿಗೆ ನೌಕರಿ ಗಳು ಬಹಳ ದೊರೆತಿವೆಯೆಂದೂ ಗುಲ್ಲು ಮಾಡಿದಾಗ ಕಾಂಗ್ರೆಸ್ ಪಕ್ಷದ ನಾಯಕರಾಗಿ ಶರತ್‌ಬಾಬು ಕೊಟ್ಟ ಉತ್ತರವನ್ನು ಓದಿದರೆ ಈ ಮಾತು ಸ್ಪಷ್ಟವಾಗಿ ತಿಳಿಯುತ್ತದೆ. ರಾಷ್ಟ್ರೀಯ ಸಾಹಿತ್ಯದಲ್ಲಿ ಚಿರಕಾಲ ಕಾದಿಡಬೇಕಾದುದು ಅದು. ಶರತ್‌ಬಾಬು ಈ ವಿಷಯದಲ್ಲಿ ಅಷ್ಟು ಗಟ್ಟಿ ಮನಸ್ಸಿನವರಾಗದೆ ಇದ್ದಿದ್ದರೆ ಇದೆಲ್ಲ ಸಾಧ್ಯವೇ ಆಗುತ್ತಿರಲಿಲ್ಲ.

ಜಾತೀಯ ನಿರ್ಣಯ (Communal award) ವನ್ನು ಕಾಂಗ್ರೆಸ್ ವಿರೋಧಿಸದಿದ್ದರೂ ಇವರು ವಿರೋಧಿಸಿದರು. ಇದಕ್ಕಾಗಿ ಕಾಂಗ್ರೆಸ್ ಪಕ್ಷವನ್ನು ಬಿಟ್ಟು ರಾಷ್ಟ್ರೀಯ ಪಕ್ಷದ ಪರವಾಗಿ ಒಮ್ಮೆ ಶಾಸನ ಸಭೆಯ ಚುನಾವಣೆಗೆ ನಿಲ್ಲಬೇಕಾಯಿತು. ಆದರೂ ಇವರನ್ನು ಜಾತೀಯತೆಯ ಬಣ್ಣದಲ್ಲಿ ಅದ್ದುವ ಸಾಹಸ ಯಾರಿಗೂ ಆಗಿಲ್ಲ.

ಸಮಯ ಬಂದಾಗಲ್ಲದೆ ಇವರ ಪರಾಕ್ರಮ ತ್ಯಾಗಗಳ ಆಳ ಗೊತ್ತಾಗುವುದಿಲ್ಲ. ಬಂಗಾಲದಲ್ಲಿ ಸ್ವಾತಂತ್ರ್ಯ ಚಳುವಳಿಯ ಕಾಲಕ್ಕೆ ರೂಢಿಗೆ ಬಂದ ದಬ್ಬಾಳಿಕೆಯ ಶಾಸನಗಳು ಭೀಮಸೇನನ ಗದೆಯಿದ್ದಂತೆ; ಅವಕ್ಕೆ ಸರಿಸಮನಾದ ದೌರ್ಜನ್ಯ ಹಿಂದುಸ್ಥಾನದಲ್ಲೇ ಮತ್ತಾವ ಪ್ರಾಂತದಲ್ಲೂ ಆಗಲಿಲ್ಲ. ಆ ಪ್ರಾಂತದ ತರುಣರಲ್ಲಿ ಚಲೋ ಪಾಡಾದ ಹಣ್ಣುಗಳನ್ನೆಲ್ಲ ಸೆರೆಮನೆಯ ನೀರೊಳಕ್ಕೆ ಕಿತ್ತೆಸೆದಿತು ಈ ಶಾಸನ ಮರ್ಕಟ. ಸುಭಾಷ ಶರಚ್ಚಂದ್ರರಿಗೂ ಈ ಪಾಡು ತಪ್ಪಲಿಲ್ಲ. ಈಗ ಎಲ್ಲ ಕಡೆಗಳಲ್ಲೂ ಹರಡಿರುವ 'ಕ್ರಿಮಿನಲ್ ಲಾ ಅಮೆಂಡ್‌ಮೆಂಟ್' ಕಾನೂನು ಮೊದಲು ಹುಟ್ಟಿದ್ದು ಬಂಗಾಲದಲ್ಲಿ. ೧೯೩೪ರಲ್ಲಿ ಬಂಗಾಲದ ಪೂರ್ಣಾಹುತಿ ತೆಗೆದುಕೊಂಡ ಬಂಗಾಲ 'ಆರ್ಡಿನೆನ್ಸೇ' ಇದು. ಇದೂ ೧೮೧೮ರ ತೃತೀಯ ನಿಬಂಧನೆಯೂ ಅವಳಿಜವಳಿ ಮಕ್ಕಳು. ಈ ನಿಬಂಧನೆಯೇ ಶರತ್‌ಬಾಬುವಿಗೆ ದೀರ್ಘಕಾಲ ಸರ್ಕಾರದ ಆತಿಥ್ಯವನ್ನು ಸಲ್ಲಿಸಿದುದು. ಪರುಷಗಟ್ಟಲೆ ಸೆರೆಮನೆಯಲ್ಲಿ ಕೊಳೆತು ಮನೆ ಮುರಿದುಕೊಂಡು ಮೈ ಸವೆಸಿಕೊಂಡು ಕೂಡ ಬಾಬುವಿಗೆ ರಾಜಕಾರಣದಲ್ಲಿ ಮೊದಲಿದ್ದ ಉತ್ಸಾಹ ತಗ್ಗಲಿಲ್ಲ.

ಇಂಥ ಶಾಸನ ನಿಬಂಧನೆಗಳನ್ನೆಲ್ಲ ಸಂಗ್ರಹಿಸಿ ತಾವೇ ಸ್ವಯಂ ಪರಿಶೋಧಿಸಿ 'ನಿರಂಕುಶ ನ್ಯಾಯಶಾಸನಗಳು' (Lawless Laws) ಎಂಬ ಹೆಸರಿನಿಂದ ಪ್ರಕಟಿಸಿದರು. ಅವುಗಳನ್ನು ಕೆಚ್ಚಿನಿಂದ ಖಂಡಿಸಿ ವಿರೋಧ ವಿಮರ್ಶೆಯ ಸುಂಟರಗಾಳಿಯನ್ನೇ ಎಬ್ಬಿಸಿದರು. ಕೊನೆಗೆ ತಾವೇ ಅದಕ್ಕೆ ಬಲಿಯಾದರು.

ಶಾಸನಸಭೆಗಳಿಗೆ ಕಾಂಗ್ರೆಸ್ಸಿನವರು ಹೋಗಬೇಕೆಂದು ನಿರ್ಧರಿಸಿ ಚುನಾವಣೆಗಾಗಿ ಹೊಡೆದಾಡುತ್ತಿದ್ದಾಗ ಶರತ್‌ಬಾಬು ಸೆರೆಮನೆಯಲ್ಲಿ ಇದ್ದರು. ಆದರೂ ಬಂಗಾಳದವರು ಅವರನ್ನೇ ತಮ್ಮ ಪಕ್ಷದಿಂದ ಹುರಿಯಾಳಾಗಿ ನಿಲ್ಲಿಸಿದರು. ಆಗ ಅವರಿಗೆ ದೊರೆತ ಗೆಲವು ಮತಪ್ರಾಪ್ತಿಯದಲ್ಲ, ಜನರ ಅಭಿಮಾನ ವಿಶ್ವಾಸಗಳ ಅಪೂರ್ವ ವಿಜಯ.



# ಪಟ್ಟಾಭಿ ಸೀತಾರಾಮಯ್ಯ

●

ಪಟ್ಟಾಭಿಯನ್ನು ಮೊದಲು ನೋಡಿದ್ದು ವರ್ಧಾ ಅತಿಥಿಭವನದಲ್ಲಿ, ಸರದಾರರ ಕೋಣೆಯಲ್ಲಿ. ಅತಿಥಿಭವನದಲ್ಲಿ ನಾಯಕರಿಗೆ ಅವರವರ ಕೋಣೆಗಳೆ ಇವೆ. ಸರದಾರರು ಆಗ ಅಲ್ಲಿರಲಿಲ್ಲ. ಪಟ್ಟಾಭಿಯೊಡನೆ ಕೆಲವರು ಆಂಧ್ರಮಿತ್ರರು ಮಾತಾಡುತ್ತಿದ್ದರು. ವಿಷಯ ಆಂಧ್ರಪ್ರಾಂತ ನಿರ್ಮಾಣ.

ಸಹಜವಾಗಿಯೆ ಮನಸ್ಸು ನಾಯಕರಿಬ್ಬರ ವ್ಯಕ್ತಿತ್ವದ ಕಡೆ ಹರಿಯಿತು. ಅವರಿಬ್ಬರ ಗುಣದಲ್ಲಿ ಕಂಡು ಬರುವ ಪರಸ್ಪರ ವಿರೋಧದ ಕಡೆ ಹರಿಯಿತು. ಸರದಾರರಿಗೆ ಮಾತೇ ಸೇರದು; ಅವರು ಸ್ಫಿಂಕ್ಸ್ ಇದ್ದ ಹಾಗೆ. ಮಾತಾಡಿದರೆ ಮುತ್ತು ಒಡೆದೀತೆಂಬ ಬಿಗಿ. ಪಟ್ಟಾಭಿ ಮಾತೆಂದರೆ ಲೋಕವನ್ನೇ ಮರೆತಾರು; ಅಷ್ಟು ಮಾತಾಳಿ. ಮಾತಿಗೇನು ಕಾಸು ಕೊಡಬೇಕೆ ಎಂಬ ಸರಸ. ಸರದಾರರ ಮೌನಗಾಂಭೀರ್ಯದಲ್ಲಿ ಒಂದು ಆಳವಿದೆ; ಒಂದು ದಾರ್ಢ್ಯವಿದೆ; ಅದು ಜಗಜಟ್ಟಿ ಗಾಮಾನ ಬಲದ ಹಾಗೆ. ಪಟ್ಟಾಭಿಯ ಸರಸವಾಣಿಯಲ್ಲಿ ಒಂದು ವೈಶಾಲ್ಯವಿದೆ; ಒಂದು ತರಳತೆ ಇದೆ; ಅದು ರಸಿಕತೆಯ ಪ್ರಭಾವ. ಸರದಾರರದು ವಜ್ರಮುಷ್ಟಿ. ಪಟ್ಟಾಭಿ ಮುಷ್ಟಿ ಮುಚ್ಚುವುದೇ ಇಲ್ಲ. ಅದರಲ್ಲೊಂದು ಮಡಿವಂತಿಕೆ, ಕುಡಿ ಮಿಂಚು, ಕ್ಷಾತ್ರತೇಜಸ್ಸು. ಇದರಲ್ಲಿ ಅವು ಯಾವುದೂ ಇಲ್ಲ. ಸಮಸ್ತ ಸನ್ಮಂಗಳಾನಿಭವಂತು ಎಂಬ ಬ್ರಾಹ್ಮಣ ಚಿತ್ತವೃತ್ತಿ.

ದೇಶಭಕ್ತಿ, ಸ್ವರಾಜ್ಯಾಕಾಂಕ್ಷೆ-ಇವುಗಳ ಜೊತೆಗೆ ಗಾಂಧೀಜಿಯ ಪ್ರಭಾವ ಎಂಥೆಂಥವನ್ನೂ ಸೆಳೆದು ತಂದು ಸಮುಸಿಸಿವೆ. ಆ ಮಹಾಶಕ್ತಿಯ ಲೀಲೆಯಲ್ಲಿ ಇದೂ ಒಂದು.

ಪಟ್ಟಾಭಿಯೊಡನೆ ಮಾತಾಡುವುದೆಂದರೆ ಅದೊಂದು ಸರಸ ಸಜ್ಜನಿಕೆಯ ಸುಖ. ಒಂದು ಕತೆಯಲ್ಲ, ಒಂದು ಪುರಾಣವಲ್ಲ, ಒಂದು ವಿಷಯವಲ್ಲ, ಶಾಸ್ತ್ರವಲ್ಲ. ಪಟ್ಟಾಭಿ ಇದ್ದರೆ ವಿಶ್ವಕೋಶವೇ ಮೈತಾಳಿ ಇದುರಿಗೆ ಬಂದು ಕೂತಹಾಗೆ. ಅವರ ಸಲ್ಲಾಪ ಜೊಳ್ಳುಮಾತಿನ ಹರಟೆಯಲ್ಲ; ಒಂದು ಅಭ್ಯಾಸಮಂಡಲದ ಪ್ರಾರಂಭ ಭಾಷಣ. ಅವರ ಬುದ್ಧಿಯ ರುಚಿ ಅಷ್ಟು ವ್ಯಾಪಕ; ಅವರ ವಿಷಯಸಂಗ್ರಹ ಅಷ್ಟು ಉತ್ತಮ; ರೀತಿ ಅಷ್ಟು ಚುರುಕು. ಇತಿಹಾಸವೇನು, ಅರ್ಥಶಾಸ್ತ್ರವೇನು; ರಾಷ್ಟ್ರೀಯ ಶಿಕ್ಷಣವೇನು; ಗ್ರಾಮೋದ್ಧಾರವೇನು; ರಾಜಕಾರಣವೇನು; ಪತ್ರಿಕಾ ಪ್ರಪಂಚವೇನು; ಔಷಧಶಾಸ್ತ್ರವೇನು; ಬ್ಯಾಂಕುಗಳೇನು; ಪರಸ್ಪರ ಸಹಕಾರವೇನು; ವಿಮಾವಾಣಿಜ್ಯವೇನು—ಎಲ್ಲವೂ ಅವರಿಗೆ ಅಂಗೈನೆಲ್ಲಿಕಾಯಿ. ಬರಿ ಅಗಳು ಹಿಸುಕಿ ನೋಡಿದ ಕೈಯಲ್ಲ. ಎಲ್ಲವನ್ನು ಅರಗಿಸಿಕೊಂಡ ಜೀವ. ವಿಮರ್ಶೆಗೆ ತೊಡಗಿದರೆ ಪಟ್ಟಾಭಿಯ ಕತ್ತಿಗೆ ಇದುರಿಲ್ಲ. ಆ ವಿಮರ್ಶೆ ಪಟ್ಟಾವರಸೆ. ಎಂಥ ಎದೆಗಾರನಾದರೂ ನಡುಗಿ ಹೋಗಬೇಕು ಆ ಪ್ರಶ್ನೆಗಳಿಗೆ ಆ ತರ್ಕವಿತರ್ಕಕ್ಕೆ. ದೇವರೇ ಆ ಕಣ್ಣಿಗೆ ಅಂಜನಹಚ್ಚಿ ಕಳಿಸಿದ ಹಾಗೆ ಇದೆ. ಎಂಥ ಕ್ಲಿಷ್ಟ ಸಮಸ್ಯೆಯಾದರೂ ಆ ಕಣ್ಣಿಗೆ ಒಂದು ಉತ್ತರ ಕಾಣುತ್ತದೆ. ಆ ವಿವೇಚನೆಯಲ್ಲಿ ಸಮಸ್ಯೆಯಲ್ಲಿ ತುಂಬಿದ್ದ ಬಗ್ಗಡವೆಲ್ಲ ಸರಿದುನಿಂತು ಮೂಲ ವಿಚಾರ ತಿಳಿಯಾಗಿ ಕಾಣುತ್ತದೆ. ಎಂಥ ಸೂತ್ರವೇ ಇರಲಿ ಪಟ್ಟಾಭಿಯದೊಂದು ವ್ಯಾಖ್ಯಾನ ಅದಕ್ಕೆ ಉಂಟು. ಗಾಂಧೀಜಿಯ ಸಿದ್ಧಾಂತ ಮೊದಮೊದಲು ತುಂಬಾ ಗಡುಚಾಗಿರುತ್ತವೆ. ಅವರು ಯಾವುದನ್ನೂ ತರ್ಕದ ಹಾದಿಯಲ್ಲಿ ಮೊದಲು ಸಿದ್ಧಮಾಡುವುದಿಲ್ಲ. ತಮ್ಮ ಏಕಾಗ್ರದೃಷ್ಟಿಗೆ ಕಂಡುದನ್ನೇ ನಂಬುತ್ತಾರೆ. ಅದನ್ನು ಅವರ ಅನುಯಾಯಿಗಳು ತರ್ಕಕ್ಕೆ ಹೊಂದಿಸಿ ಜಗತ್ತಿಗೆ ತಿಳಿಸಬೇಕಾಗುತ್ತದೆ. ಗಾಂಧೀಜಿಯ ಸಿದ್ಧಾಂತಕ್ಕೆ ಪಟ್ಟಾಭಿಯ ವ್ಯಾಖ್ಯಾನ. ಈ ಇಪ್ಪತ್ತು ವರುಷ ಹೀಗೆ ನಡೆದಿದೆ. ಆ ವೈಶ್ಯ

ಸೂತ್ರಕಾರನಿಗೆ ಈ ಬ್ರಾಹ್ಮಣ ವೃತ್ತಿಕಾರ ಎಂಬುದು ಕೆಲವು ದಿನ ಪತ್ರಿಕಾ ಪ್ರಪಂಚದಲ್ಲಿ ದಿನಬಳಕೆಯ ಮಾತಾಗಿತ್ತು. ಈಗಲೂ ಅಷ್ಟೇ. ಕೃಪಾಲಾನಿ ಕಿಶೋರಲಾಲರೂ ಗಾಂಧಿವಿಚಾರದೋಹನಕ್ಕಾಗಿ ದುಡಿದಿದಾರೆ. ಆದರೆ ಪಟ್ಟಾಭಿಯ ಸಿದ್ಧಹಸ್ತ ಅವರಿಗಿಲ್ಲ. ಗಾಂಧೀಜೀ ಹೊಸದಾಗಿ ಯಾವುದಾದರೂ ಮಾತು ಎತ್ತಿದರೆಂದು ವರ್ಧಾ ಸುದ್ದಿಯಲ್ಲಿ ಬರಲಿ, ಮಾರನೆಯದಿನ ಮಚಲೀ ಬಂದರಿನ ಸುದ್ದಿಯಲ್ಲಿ ಅದರ ವ್ಯಾಖ್ಯಾನ ವಿಶದೀಕರಣ ಒಂದೇ ತೀರಬೇಕು. ಮದರಾಸಿನ ಪತ್ರಿಕೆಯೊಂದರಲ್ಲಿ ದೇಶನಾಯಕರನ್ನು ಅವರ ಸ್ವಭಾವಕ್ಕನುಗುಣವಾಗಿ ಚಿತ್ರಿಸಿದ ವ್ಯಂಗ್ಯಚಿತ್ರ ಒಂದು ಬಂದಿತ್ತು ಕೆಲವು ದಿನದ ಹಿಂದೆ. ಅದರಲ್ಲಿ ಪಟ್ಟಾಭಿ ಸರ್ಕಸ್ಸಿನ ಡೇರೆಯ ಮೇಲೆ ಕುಳಿತು ತಮ್ಮ ಪ್ರಕಟನೆ–ಲೇಖನ ವಿಮರ್ಶೆ–ಸಂದರ್ಶನಗಳ ಹಾಳೆಗಳನ್ನು ಅಲ್ಲಿಂದ ಎಸೆಯುತ್ತ ಇದ್ದ ಹಾಗೆ ಚಿತ್ರಿಸಿದ್ದರು. ಅದು ನಾಯಕರೆಲ್ಲ ಕ್ರಿಸ್‌ಮಸ್ ಬಿಡುವಿಗಾಗಿ ತಮ್ಮ ಸರ್ಕಸ್ಸಿನಿಂದ ವಿರಾಮಪಡೆದು ಮಾಡುತ್ತಿದ್ದ ವಿನೋದ. ಆಗಲೂ ಪಟ್ಟಾಭಿಗೆ ಪತ್ರಿಕೆಯ ಸಂಬಂಧ ತಪ್ಪಲಿಲ್ಲ. ಈ ವ್ಯಂಗ್ಯಚಿತ್ರ ಹೇಗೇ ಇರಲಿ, ಮಚಲೀಬಂದರಿನ ಸುದ್ದಿಗಾರರ ಪುಣ್ಯಕ್ಕೆ ಎಷ್ಟೋ ಸಲ ನಾನೇ ಕರುಬಿದೇನೆ.

ಪತ್ರಿಕೆ ಎಂದರೆ ಪಟ್ಟಾಭಿಗೆ ಪಂಚಪ್ರಾಣ. ಮೊದಲಿಂದಲೂ ಅವರಿಗೆ ಪತ್ರಿಕೆಗೆ ಬರೆವ ಚಟ ಇದೆ. ಕೆಲವು ದಿನ ತಮ್ಮ ಊರಿನಲ್ಲಿ 'ಜನ್ಮಭೂಮಿ' ಎಂಬ ಇಂಗ್ಲಿಷು ಪತ್ರಿಕೆಯನ್ನು ಹೊರಡಿಸುತ್ತಿದ್ದರು. ಆಗ ತೆಲುಗು ನಾಡಿಗೆ 'ಜನ್ಮಭೂಮಿ' ಒಂದು ಬೆಳಕಾಗಿತ್ತು. ಆ ಕಾಲಕ್ಕೆ ಅದೇ ತೆಲುಗರ 'ನವಜೀವನ'. ಆಂಧ್ರಪ್ರಾಂತದಲ್ಲಿ ಇಂದು ಕಂಡು ಬರುವ ಏಳಿಗೆಗೆ ಪಟ್ಟಾಭಿಯ ಪ್ರತಿಭಾಪೂರ್ಣ ಲೇಖನೆಯೂ 'ಜನ್ಮ-ಭೂಮಿ'ಯೂ ಒಂದು ಕಾರಣ. ಪಟ್ಟಾಭಿ ಮುಂದೆ ಕೆಲವು ದಿನದಲ್ಲೆ ರಾಜಕೀಯ ರಂಗದಲ್ಲಿ ಹೊಕ್ಕುದು ಹಿಂದುಸ್ತಾನದ ಪತ್ರಿಕಾಪ್ರಪಂಚಕ್ಕೆ ದೊಡ್ಡ ನಷ್ಟವೇ ಆಯಿತು.

ಪತ್ರಿಕಾ ವ್ಯವಸಾಯವನ್ನು ಬಿಟ್ಟರೂ ಲೇಖನ ವ್ಯವಸಾಯವನ್ನೇನು ಪಟ್ಟಾಭಿ ಬಿಟ್ಟಿಲ್ಲ. ಈಗಲೂ ದೇಶನಾಯಕರಲ್ಲಿ ಸುದ್ದಿಗಾರರು

ಪತ್ರಿಕಾರರು ಎಂದರೆ ಇವರು ಕಂಡಷ್ಟು ಆದರದಿಂದ ಉಳಿದವರು ಯಾರೂ ಕಾಣುವುದಿಲ್ಲ. ಕಾಂಗ್ರೆಸ್ ವರ್ಕಿಂಗ್ ಕಮಿಟಿ ನಡೆಯುವಾಗ ನಾಯಕರೆಲ್ಲ ಬಿಂಕದ ಗೌರಿಯ ಹಾಗೆ ಇರುತ್ತಾರೆ. ಸುದ್ದಿಗಾರರಿಗೆ ಅಷ್ಟೋ ಇಷ್ಟೋ ಬೆಳಕೆಂದರೆ ಇವರೊಬ್ಬರೇ. ಕಮಿಟಿಯಲ್ಲಿ ಕೂತು ಬೇಸರವಾದಾಗಲೋ ಕೆಲಸ ಮುಗಿದ ಮೇಲೋ ಅಂಗಳದ ಬೆಂಚಿನ ಮೇಲೆ ಕೂತು ಸುದ್ದಿಗಾರರೊಡನೆ ವಿನೋದವಾಗಿ ಹರಟೆ ಹರಡುತ್ತಾರೆ. ಹಾಗಿಷ್ಟು ಹೀಗಿಷ್ಟು, ಹರಟುತ್ತ ನಗುತ್ತ ಸುದ್ದಿ ಹೇಳುತ್ತಾರೆ. ಉಳಿದವರು ಯಾರು ಸುದ್ದಿಗಾರರನ್ನು ಹತ್ತಿರ ಬರಗೊಡುವುದೇ ಇಲ್ಲ. ಪತ್ರಿಕಾಪ್ರಪಂಚಕ್ಕೆ ಸರಿಯಾದ ಬೆಲೆ ಕೊಡುವುದು ಇವರಿಗೊಬ್ಬರಿಗೇ ಗೊತ್ತಿದ್ದಂತಿದೆ. ಮುಖ್ಯವಾಗಿ ಆ ಮಾತಿನಲ್ಲಿ ಗೆಳೆಯರಂತೆ ನಡೆಯುತ್ತಾರೆ. ತಮ್ಮ ತಲೆಯ ಮೇಲಿನ ಕಿರೀಟದ ನೆನಪಾಗುವುದಿಲ್ಲ. ಉಳಿದವರಿಗೆ ಇದ್ದಂತೆ ಇವರಿಗೆ ತಲೆಯ ಮೇಲೆ ಟೋಪಿಯೂ ಇಲ್ಲವಲ್ಲ.

ಬರೆವಣಿಗೆಯಲ್ಲಿ ಇವರ ಧಾಟಿಗೆ ತಡೆಯಿಲ್ಲ. ವ್ಯಂಗ್ಯ, ಕಟೂಕ್ತಿಗಳಿಗೆ ಎತ್ತಿದ ಕೈ. ಬರೆಯುವಾಗ ಪದಕ್ಕಾಗಿ ಹುಡುಕಬೇಕಾಗಿಲ್ಲ. ಶಬ್ದಭಾಂಡಾರ ಲೇಖನಿಯ ತುದಿಯಲ್ಲಿಯೆ. ಉದ್ದವಾದ ವಾಕ್ಯಗಳನ್ನು ಬರೆಯುವುದುಂಟು. ಕಿರಿವಾತಿನ ಸಿಡಿಗುಂಡೂ ಉಂಟು. ಏನೇ ಬರೆಯಲಿ ಅದರಲ್ಲಿ ಸ್ಪಷ್ಟತೆ ಇದೆ. ಯಾವುದನ್ನೂ ಗಾಳಿಯಲ್ಲಿ ತೇಲಿಬಿಡುವುದಿಲ್ಲ. ಇದಮಿತ್ಥಂ ಎಂಬ ಗುಂಪು ವಿಚಾರಕ್ಕೆ ಇಂಥಲ್ಲಿ ಒಂದು ಅಲಗು, ವಾದಕ್ಕೆ ಒಂದು ಮೊನೆ. ರಾಜಕೀಯ ಪ್ರತಿ ಪಕ್ಷದವರು ಹೂಡುವ ವಿರೋಧದ ಮೂಲೋದ್ದೇಶವನ್ನು ಕಂಡುಹಿಡಿದು ಅದನ್ನು ಖಂಡಿಸುವುದು ಎಷ್ಟು ಸುಲಭವೋ ಹಾಗೆಯೆ ಶಾಸನಸಭೆಯ ಅಂದಾಜು ಪಟ್ಟಿಯನ್ನು ಅಷ್ಟೇ ಸರಾಗವಾಗಿ ವಿಮರ್ಶಿಸಬಲ್ಲರು. ಖಾದಿಯ ಉಪಯೋಗವನ್ನು ತಿಳಿಸಿ ಹೇಳುವ ರೀತಿಯಲ್ಲಿಯೆ ರಿಸರ್ವ್‌ಬ್ಯಾಂಕ್, ಎಕ್ಸ್‌ಛೇಂಚ್‌ರೇಷಿಯೋಗಳನ್ನು ಬಿಡಿಸಿ ಹೇಳಬಲ್ಲರು. ಎಂಥ ಕೂಟ ಪ್ರಶ್ನೆಗೂ ಸುಲಭ ವ್ಯಾಖ್ಯಾನ. ಎಲ್ಲ ಬರೆವಣಿಗೆಗೂ ಅಂದಕೊಡುವ ಹಾಸ್ಯಕ್ಕೇನು ಕಡಮೆಯಿಲ್ಲ. ಸಕ್ಕರೆ ಹೊಟ್ಟೆತುಂಬ ನಗುತ್ತಾರೆ. ಅದು ಹಳ್ಳಿಯ ಬಣ್ಣವಿಲ್ಲದ ನಗು. ಪಟ್ಟಣದ ನಾಗರಿಕತೆಯ ಮುಗುಳು ಮುಗುಳು

ನಗೆಯಲ್ಲ. ಪಟ್ಟಾಭಿ ಹಿಂದುಸ್ತಾನವೆಲ್ಲ ನೋಡಿದಾರೆ. ನಗರಗಳಲ್ಲಿ ಬೇಕಾದಷ್ಟು ಓಡಾಡಿದಾರೆ. ಆದರೂ ಇವರಿಗೆ ಆ ನಾಗರಿಕತೆಯ ಗಾಳಿ ಸೋಕಿಲ್ಲ. ಆದರೆ ಜೊತೆಗೆ ಬರುವ ಜಂಬ ಡಂಬಗಳಾವುವೂ ಇವರಲ್ಲಿಲ್ಲ.

ಪಟ್ಟಾಭಿ ನಾಲ್ಕಾರು ಪುಸ್ತಕ ಬರೆದಿದಾರೆ. ಆದರೆ ಅದರಲ್ಲಿ ಮುಖ್ಯವಾದುದು ಕಾಂಗ್ರೆಸ್ ಇತಿಹಾಸ. ೩೦–೩೫ ವರ್ಷದಿಂದ ಇವರು ಕಾಂಗ್ರೆಸ್ಸಿನಲ್ಲಿದಾರೆ. ಹೆಚ್ಚು ಕಡಿಮೆ ಪ್ರಮುಖ ಪಾತ್ರವನ್ನೇ ವಹಿಸಿದಾರೆ. ಕಾಂಗ್ರೆಸ್ ಸೂತ್ರಧಾರಿಗಳ ಪರವಾಗಿಯೂ ವಿರೋಧವಾಗಿಯೂ ಆಗಾಗ ವಿಮರ್ಶೆ ಮಾಡುತ್ತಲೇ ಬಂದಿದಾರೆ. ಕಾಂಗ್ರೆಸ್ಸಿನ ನೀತಿಯನ್ನು ನಿರ್ಧರಿಸುವ ಹೊಣೆ ಇವರ ಪಾಲಿಗೂ ಎಷ್ಟೋ ಸಲ ಬಂದಿದೆ. ಇಂಥ ಆಪ್ತ ವಿಷಯವನ್ನು ಇತಿಹಾಸದಂತೆ ಬರೆಯಲು ಯಾರಿಗಾದರೂ ಬಹಳ ಮೇಲ್ತರದ ನಿರ್ಲಿಪ್ತತೆ ಬೇಕು. ಪಟ್ಟಾಭಿ ಬರೆದ ಕಾಂಗ್ರೆಸ್ ಇತಿಹಾಸಕ್ಕೆ ಈ ಮಾತಿನಲ್ಲಿ ಹೆಸರಿಡುವ ಹಾಗೆ ಇಲ್ಲ. ನಿಷ್ಪಕ್ಷಪಾತದೃಷ್ಟಿ ಒಂದೇ ಗ್ರಂಥಕ್ಕೆ ಬಣ್ಣ ಕೊಡಲಾರದು. ಅದರಲ್ಲಿ ಸರಸತೆ ಮಿನುಗಬೇಕು. ಇಲ್ಲದಿದ್ದರೆ ಅದೇನು ಕತೆಯೆ ಕಾದಂಬರಿಯೆ? ಇವರ ಕೈಯಲ್ಲಿ ಆ ಇತಿಹಾಸ ಗೊಡ್ಡು ವರದಿಯಾಗಿಲ್ಲ. ಪುಟಪುಟದಲ್ಲೂ ಜೀವ ಸುಳಿದಿದೆ. ಚಿತ್ತರಂಜನದಾಸರು ಮದರಾಸು ಕಡಲ ದಂಡೆಯಲ್ಲಿ ನಿಂತು ಗಾಂಧೀಜಿಯನ್ನು ಹರಿತವಾಗಿ ಟೀಕೆ ಮಾಡಿದಾಗ, ಅದರಲ್ಲಿ ಏನೂ ಸರಸತೆ ತೋರಿರದಿದ್ದರೂ ಆ ಸಂದರ್ಭವನ್ನು ಹೇಳಬೇಕಾದರೆ ಪಟ್ಟಾಭಿ ಬಹಳ ಸರಸವಾಗಿ ವರ್ಣಿಸಿದಾರೆ. ಇವರ ಭಾವಗರ್ಭಿತ ಚತುರೋಕ್ತಿಗೆ ಈ ಗ್ರಂಥದಲ್ಲಿ ಬೇಕಾದಷ್ಟು ಉದಾಹರಣೆ ಸಿಗುತ್ತವೆ. ಒಂದು ಕಡೆ: The wheels of Govt. grind slow, but grind steady ಎಂದಿದಾರೆ. ಸರಕಾರದ ಗಾಣ ಕಲ್ಲುಗಾಣ; ತಿರುಗುವುದು ನಿಧಾನವಾದರೂ ಹಿಂಡಿ ಆಗುವುದರಲ್ಲಿ ಪ್ರಮಾಣ ಎಂತ. ನಮ್ಮ ಈ ೫೦ ವರ್ಷದ ಬದುಕಿನಲ್ಲಿ ಹಾಸುಹೊಕ್ಕಾಗಿ ಬರುವ ನಾಯಕರ ಪರಿಚಯ ಮಾಡಿಕೊಡುವಾಗ ಇವರ ಕೈಚಳಕ ಅತ್ಯುತ್ತಮವಾಗಿದೆ. ಗಂಭೀರ ಹಾಸ್ಯದಿಂದ ಆ ಪ್ರತಿಮೆಗಳಿಗೆ ಜೀವ ಎರೆದಿದಾರೆ. ನಡುನಡುವೆ ಬರುವ ಒಂದೇ ನುಡಿಯ

ವಿಮರ್ಶೆ ಆ ಸಾಮರ್ಥ್ಯದ ಕುರುಹು. ಒಂದೊಂದು ವಿಶೇಷಣಮಾತ್ರ ದಿಂದ ಜನರ ಪರಿಚಯ ಮಾಡಿಕೊಡುವ ಚಾತುರ್ಯ ಅದು. ಬಂಗಾಲ ಪ್ರಾಂತದಲ್ಲಿ ನಾಲ್ಕು ಗುಂಪು ರಾಜಕಾರಣದಲ್ಲಿ. ಒಂದು ಸ್ವರಾಜ್ಯವಾದಿ; ಎರಡನೆಯದು ಸ್ವರಾಜ್ಯಹಿಂದೂ; ಮೂರನೆಯದು ತುರುಕ ಸ್ವರಾಜ್ಯ ವಾದಿ; ಕಡೆಯದು ಸ್ವರಾಜ್ಯ ತುರುಕ. ಆ ಹೆಸರುಗಳಿಂದಲೇ ಆ ಗುಂಪು ಗಳ ಬಣ್ಣ ಬೆಳಕು ಎಲ್ಲಾ ಸ್ಪಷ್ಟ.

ಗೋಖಲೆ-ಟಿಳಕ; ಇಬ್ಬರನ್ನೂ ಹೋಲಿಸುತ್ತ ಅವರ ಗುಣಗಳನ್ನೂ ವಿವರಿಸಿ ಅವರ ವ್ಯಕ್ತಿತ್ತ್ವವನ್ನೂ ಓದುಗರ ಮನಸಿನಲ್ಲಿ ಮೂಡುವಂತೆ ಮಾಡಿದ ಸಂದರ್ಭ ಬಹಳ ಸೊಗಸಾಗಿದೆ.

'ಇದ್ದಂಥ ಆಡಳಿತ• ಕ್ರಮವನ್ನು ತಿದ್ದಿ ಸರಿಮಾಡುವುದು ಗೋಖಲೆಯ ಹಂಚಿಕೆ; ಇದ್ದುದನ್ನು ಕೆಡವಿ ಹೊಸದು ಕಟ್ಟಬೇಕೆಂಬುದು ಟಿಳಕರ ಇಷ್ಟ. ಗೋಖಲೆಗೆ ಸರಕಾರದೊಡನೆ ಸಹಕಾರ ಬೇಕು; ಟಿಳಕರಿಗೆ ಬೇಕಾಗಿದ್ದುದು ಅವರೊಡನೆ ಹೋರಾಟ. ಸಾಧ್ಯವಿರುವತನಕ ಸಹಕಾರ, ಅಗತ್ಯ ಬಿದ್ದರೆ ವಿರೋಧ ಎಂಬುದು ಗೋಖಲೆಯ ರೀತಿ; ಪೂರಾ ವಿರೋಧ ಟಿಳಕರ ಹಾದ. ಆಡಳಿತ ಅದರ ತಿದ್ದುಪಡೆ ಗೋಖಲೆಯ ವಿಚಾರ; ರಾಷ್ಟ್ರ ಅದರ ನಿರ್ಮಾಣ ಟಿಳಕರ ಆಲೋಚನೆ. ಗೋಖಲೆಯ ಗುರಿ ಪ್ರೇಮ, ಸೇವೆ; ಟಿಳಕರ ಗುರಿ ಸೇವೆ, ತ್ಯಾಗ. ಪರದೇಶಿಯನ್ನು ಒಲಿಸುವುದು ಗೋಖಲೆಯ ದಾರಿ; ಅವನನ್ನೂ ಉರುಳಿಸುವುದು ಟಿಳಕರ ದಾರಿ. ಗೋಖಲೆಯ ಮಂತ್ರ ಪರಾನುಗ್ರಹ; ಟಿಳಕರ ಮಂತ್ರ ಆತ್ಮಬಲ. ಗೋಖಲೆಯ ಕಣ್ಣಿಗೆ ಕಂಡವರು ಬಲ್ಲಿದರು ವಿದ್ಯಾವಂತರು; ಟಿಳಕರಿಗೆ ಕಂಡದ್ದು ಬಡಜನರ ಕಡಲು. ಗೋಖಲೆಯ ರಣರಂಗ ಶಾಸನ ಸಭೆ; ಟಿಳಕರ ವಾದಭೂಮಿ ಹಳ್ಳಿಯ ಚಾವಡಿ. ಗೋಖಲೆ ಮಾತಾಡಿದ್ದು ಇಂಗ್ಲೀಷು; ಟಿಳಕರು ಮರಾಠಿ. ಸ್ವರಾಜ್ಯ ಒಂದು ಸಿದ್ಧಿ ಗೋಖಲೆಗೆ; ಸ್ವರಾಜ್ಯ ಜನ್ಮಸಿದ್ಧ ಹಕ್ಕು ಟಿಳಕರಿಗೆ. ಅವರಿಗೆ ಅದನ್ನು ಇನ್ನೊಬ್ಬರು ನೀಡಬೇಕು; ಇವರಿಗೆ ಬೇರೆ ಯಾರೂ ತಡೆಯಬಾರದು. ಗೋಖಲೆ ತಮ್ಮ ಕಾಲಕ್ಕೆ ತಕ್ಕ ಹಾಗೆ ಇದ್ದರು; ಟಿಳಕರು ತಮ್ಮ ಕಾಲವನ್ನು ಮೀರಿ ಮುಂದೋಡಿದರು.

ಪಟ್ಟಾಭಿಯಲ್ಲಿ ಒಳ್ಳೆಯ ಸಾಹಿತ್ಯಗುಣವಿದೆ. ಗಾಂಧೀಜಿಯ ಬರೆಹದ ಹಾಗೆ ಅದು ಸರಲಸುಂದರವಲ್ಲ. ಜವಾಹರಲಾಲರ ಬರೆವಣಿಗೆಯ ಹಾಗೆ ಉತ್ತುಂಗಭಾವಪೂರ್ಣವೂ ಅಲ್ಲ. ಆದರೂ ಅದರಲ್ಲಿ ಒಂದು ಬಿಕ್ಕಟ್ಟು ಇದೆ; ಒಂದು ಸೊಬಗು ಇದೆ. ವಿಷಯವಿಪುಲತೆಯಲ್ಲಿ ಅಲಹಾಬಾದಿನ ಚಿಂತಾಮಣಿಯನ್ನು ಮೀರಿಸಲಾರರು. ಆದರೆ ಅವರಲ್ಲಿ ಇಲ್ಲದ ಒಂದು ಭಾವೋದ್ವೇಗ ಇವರಲ್ಲಿದೆ. ಎಲ್ಲಕ್ಕಿಂತ ಹೆಚ್ಚಾಗಿ ಸಮಯಸ್ಫೂರ್ತಿ ಇವರ ಶ್ರೇಷ್ಠ ಗುಣ. ಸರಸವಾಗಿ ವಿನೋದದಲ್ಲಿ ಮಾತಿಗೆ ಮಾತಾಡುವ ಪ್ರತ್ಯುಕ್ತಿ–ಚತುರೋಕ್ತಿಗಳಲ್ಲಿ ಸಿ. ಆರ್. ರೆಡ್ಡಿ ಬಹಳ ಹೆಸರಾದವರು. ಒಂದೊಂದು ಮಾತಿನಲ್ಲೇ ಅಷ್ಟು ಕೆಲಸ ಮಾಡುತ್ತಾರೆ. ಪಟ್ಟಾಭಿ ಕೂಡ ರೆಡ್ಡಿಯ ಹಾಗೆ ತೆಲುಗರೇ. ಅವರಿಗ್ಗೇನು ಕಡಮೆಯಿಲ್ಲ.

ವಾದದಲ್ಲಂತೂ ಇವರು ಸಿಡಿಲುಮರಿ. ಸ್ವಪಕ್ಷದ ಗೆಳೆಯರಿಗೆ ಇವರ ವಾದಕೌಶಲವು ಸವಿಯೂಟವಾಗಲಿ, ವಿರೋಧಪಕ್ಷಕ್ಕೆ ಅದು ನಂಜಿನೂಟ. ಆ ವಾದದ ಕುಟುಕಿನ ವಿಷ ಕಡುದಾರುಣವಾದುದು. ಪಂಡಿತ ಮೋತೀಲಾಲರಂಥವರಿಗೂ ಕೂಡ ಪಟ್ಟಾಭಿಯ ವಿಮರ್ಶೆ ಎಂದರೆ ಸ್ವಲ್ಪ ಕುಟುಕುಟು.

ಇಷ್ಟೆಲ್ಲ ಅದ್ಭುತಶಕ್ತಿಯಿದ್ದರೂ ಪಟ್ಟಾಭಿ ನಿಜವಾಗಿ ಗೋವಿನಂಥವರು. ಅವರ ಎದೆಯಲ್ಲಿ ಕ್ಷಾತ್ರವಿಲ್ಲ. ಸೌಜನ್ಯವಿದೆ, ವಿಶ್ವಾಸವಿದೆ. ಈ ಇಳಿವಯಸ್ಸಿನಲ್ಲಿ ಉರ್ದೂ-ಫಾರಸೀ ಕಲಿಯುತ್ತ, ಕ್ಲಿಷ್ಟವಾದ ಪರ್ಶಿಯನ್ ಪದಗಳನ್ನು ಬಳಸುತ್ತ ತೂಕಮಾಡಿ ಗಂಟೆಗೊಂದು ವಾಕ್ಯ ಮಾತಾಡುವುದನ್ನು ನೋಡಿ ಜನಕ್ಕೆ ವಿಚಿತ್ರವೆನಿಸುತ್ತದೆ. ಜನ ನಕ್ಕರೂ ಇವರು ಅಧೀರರಾಗುವುದಿಲ್ಲ. ಆ ಉತ್ಸಾಹದಲ್ಲಿಯೆ ಇವರ ಸರಸ ಹೃದಯದ ಗುರುತು ಕಾಣುತ್ತದೆ. ನಡುನಡುವೆ ಸಾಲೆಯ ಹುಡುಗರಂತೆ ಈ ಪದ ಸರಿಯಲ್ಲವೇ ಆ ಪದ ತಪ್ಪಲ್ಲವೆ ಎಂದು ಆ ನುಡಿ ಬಲ್ಲವರನ್ನು ಕೇಳುತ್ತಾರೆ. ತಮ್ಮ ಸರ್ವಶಕ್ತಿಯನ್ನೂ ಆತ್ಮೋಲ್ಲಾಸಕ್ಕಾಗಿ ಉಪಯೋಗಿಸಿಕೊಳ್ಳುವ ಹದ ಇವರದು. ಆದರಿಂದ ಮುಂದೆ ಬಂದು ಮೆರೆಯಬೇಕೆಂಬ ಹಿರಿಯಾಸೆ ಇಲ್ಲ.

ಇವರಿಗೆ ಹಲವು ಭಾಷೆ ಬರುತ್ತವೆ. ತಮಿಳು ಚೆನ್ನಾಗಿ ಬರುತ್ತದೆ.

ಹಿಂದೀ ಕಲಿತಿದ್ದಾರೆ. ತೆಲುಗು ಇಂಗ್ಲಿಷುಗಳು ತಾಯಿ ಮಲತಾಯಿ ಇದ್ದಂತೆ. ಕನ್ನಡವೂ ಸಾಧಾರಣವಾಗಿ ಪರಿಚಿತವಾದುದು. ಇವರ ಸೊಸೆ ಮೈಸೂರು ಕಡೆಯವರು ಇರಬೇಕು.

ಪಟ್ಟಾಭಿ ಗೋಖಲೆಯ ಹಾಗೆ ೧೮ ವರುಷಕ್ಕೇ ಪದವೀಧರರಾದರು. ಓದಿನಲ್ಲಿ ತುಂಬಾ ಚುರುಕಾಗಿದ್ದರು. ಕಲಿತದ್ದು ವೈದ್ಯವಾದರೂ ರುಚಿ ಸಾಹಿತ್ಯದಲ್ಲಿ. ಮುಂದೆ ಔಷಧಿ ಕೊಡುವುದಕ್ಕಿಂತ ಲೇಖನ ಬರೆಯುವುದರಲ್ಲಿ ಒಲವು ಬಹಳ. ಇವರ ಈ ವ್ಯಾಪಕ ಚೇತನಕ್ಕೆ ವೈದ್ಯವೃತ್ತಿ ಸಾಲಲಿಲ್ಲ. ತಿಮಿಂಗಲವನ್ನು ಬಾವಿಯಲ್ಲಿ ಬಿಡಲು ಬಂದೀತೇ? ಹತ್ತೇ ವರ್ಷದಲ್ಲಿ ತಮ್ಮ ಇಡೀ ಜೀವನಕಾಲದೊಳಗೆ ಉದರನಿರ್ವಾಹಕ್ಕೆ ಬೇಕಾಗುವಷ್ಟು ಗಳಿಸಿಕೊಂಡು ಸಾರ್ವಜನಿಕ ಸೇವೆಗೆ ಬಿದ್ದರು. ೧೯೧೬ರಲ್ಲೇ —ಇನ್ನೂ ಅಸಹಕಾರ ಕನಸಿನಲ್ಲಿಯೂ ಹುಟ್ಟದ ದಿನಗಳಲ್ಲಿಯೇ— ವೈದ್ಯವೃತ್ತಿಯನ್ನು ಬಿಟ್ಟುಕೊಟ್ಟರು. ರಾಜಕಾರಣದಲ್ಲಿ ಸೇರಿದರು.

ರಾಷ್ಟ್ರಸೇವೆಯಲ್ಲಿ ಪಟ್ಟಾಭಿ ಚೆನ್ನಾಗಿ ಸುರಿತಿದ್ದಾರೆ. ರಾಷ್ಟ್ರೀಯ ಶಿಕ್ಷಣಕ್ಕಾಗಿ ಬಹಳ ಹೋರಾಡಿದರು. ಆಂಧ್ರರ ಜಾತೀಯ ಕಳಾಶಾಲೆ–ಜಾತೀಯ ಶಬ್ದವನ್ನು ರಾಷ್ಟ್ರೀಯ ಎಂಬರ್ಥದಲ್ಲಿ ತೆಲುಗರು ಉಪಯೋಗಿಸುತ್ತಾರೆ–ಪಟ್ಟಾಭಿಯೂ ಇವರ ಗೆಳೆಯರೂ ಕಟ್ಟಿದ ವಿದ್ಯಾಪೀಠ. ಆಂಧ್ರ ಚಿತ್ರಕಲೆಗೆ ಒಂದು ರೂಪು ಕೊಟ್ಟ ರಾಮರಾವು ಮೊದಲು ಚಿತ್ರಕಲೆ ಕಲಿತುದು ಅಲ್ಲಿ. ಆಂಧ್ರ ಪ್ರಾಂತ ನಿರ್ಮಾಣಕ್ಕಾಗಿ ಬಲವಾದ ಚಳುವಳಿ ನಡೆದಿದೆ ತೆಲುಗರಲ್ಲಿ. ಅದಕ್ಕೆ ಇವರು ಮುಂದಾಳು. ಆಂಧ್ರ ಸಾಹಿತ್ಯದ ಪುನರುಜ್ಜೀವನ ನಡೆದಿದೆ. ಆ ದೀಪಾವಳಿಯಲ್ಲಿ ಇವರದೂ ಒಂದು ದೀಪವಿದೆ. ಆಂಧ್ರ ಪ್ರಾಂತೀಯ ಕಾಂಗ್ರೆಸಿಗೆ ಬಹಳ ಕಾಲ ಅಧ್ಯಕ್ಷರಾಗಿದ್ದರು.

ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಗಳಲ್ಲಿಯೂ ಪಟ್ಟಾಭಿಗೆ ಪರಿಶ್ರಮ ಹೆಚ್ಚು. ಗಾಂಧೀವಾದ–ಸ್ವರಾಜ್ಯವಾದ ಎಂದು ಇತ್ತಂಡವಾದಾಗ ಪಟ್ಟಾಭಿ ಪೂರಾ ನೋ ಛೇಂಜರ್. ಆದರೆ ಗಾಂಧೀಜಿಗಿಂತ ಇವರು ರಾಜಗೋಪಾಲಾಚಾರ್ಯರ ಜೊತೆ ಎಂದು ಕಾಣುತ್ತದೆ.

ಈಗ ದೇಶಸೇವೆಯಲ್ಲಿ ಪಟ್ಟಾಭಿಯದು ಹಗಲಿರುಳು ದುಡಿತ. ಅವರ

ಹಾಗೆ ಪೂರ್ಣವಾಗಿ ಸಾರ್ವಜನಿಕ ಕೆಲಸಕ್ಕೇ ತಮ್ಮನ್ನು ಅರ್ಪಿಸಿಕೊಂಡ ವರು ಕಡಮೆ. ಇವರು ವೈದ್ಯವೃತ್ತಿಯನ್ನು ಬಿಟ್ಟಾಗಲೇ ಇದರಲ್ಲಿ ಧುಮುಕಿದರು. ಆಗಿನಿಂದಲೂ ಕಾಂಗ್ರೆಸ್ಸೇ ಅವರ ಪ್ರಾಣ. ೧೯೧೭ ರಿಂದಲೂ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿದ್ದಾರೆ. ಬಹುಶಃ ಈಗಿನ ನಮ್ಮ ನಾಯಕರಲ್ಲೆಲ್ಲ ಅವರೇ ಅದರ ಹಳೆಯ ಸದಸ್ಯರಿರಬೇಕು. ಕಾಂಗ್ರೆಸ್ಸಿನ ರಚನಾತ್ಮಕ ಚಳುವಳಿಯೇನು ಶಾಸನೋಲ್ಲಂಘನದ ಸತ್ಯಾಗ್ರಹವೇನು ಎಲ್ಲದರಲ್ಲಿಯೂ ತಮ್ಮ ಪ್ರಾಂತದಲ್ಲಿ ಪಟ್ಟಾಭಿಯದು ಮುಖ್ಯ ಹೆಜ್ಜೆ. ಸತ್ಯಾಗ್ರಹದ ಚಳುವಳಿಗಳಲ್ಲಿ ದೀರ್ಘಕಾಲ ಸೆರೆಯಾಳೂ ಆಗಿದ್ದರು.

ಪಟ್ಟಾಭಿಯ ಸಿಶ್ಚಿತಬುದ್ಧಿಗೆ ಬರಿಯ ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯ ಸಾಲಲಿಲ್ಲ. ಆ ಹುರುಪೂ ಹುಮ್ಮಸ್ಸೂ ಅಂಥದು. ಆಂಧ್ರದಲ್ಲಿ ಕೆಲವು ವಿಮಾ ಸಂಸ್ಥೆಗಳನ್ನು ಸ್ಥಾಪಿಸಿದರು. ಬ್ಯಾಂಕುಗಳನ್ನು ಹೂಡಿ ದರು. ಪರಸ್ಪರ ಸಹಕಾರ ಸಂಘಗಳಿಗಾಗಿ ದುಡಿದರು. ಮದರಾಸಿನಲ್ಲಿ ಕಾಂಗ್ರೆಸು ಮಂತ್ರಿಮಂಡಲ ಈ ಬಗ್ಗೆ ಒಂದು ವಿಮರ್ಶಕ ಸಮಿತಿಯನ್ನು ನಿರ್ಮಿಸಿದಾಗ ಅದರಲ್ಲಿ ಪಟ್ಟಾಭಿಯ ಹೆಸರು.

ಈಗ ದೇಶೀ ಸಂಸ್ಥಾನಗಳ ಸಮಸ್ಯೆಗೆ ಪಟ್ಟಾಭಿ ಒಂದು ಮುಖ್ಯಾ ಧಾರ. ಯಾವ ಸಂಸ್ಥಾನಕ್ಕೂ ಸೇರಿದವರಲ್ಲದಿದ್ದರೂ ಅಖಿಲ ಭಾರತ ಸಂಸ್ಥಾನೀ ಪರಿಷತ್ತಿನಲ್ಲಿ ಅವರದು ಮುಖ್ಯ ಪಾತ್ರ. ಸಂಸ್ಥಾನಗಳ ಸಮಸ್ಯೆಯಲ್ಲಿ ತೊಡಗಿಕೊಂಡ ಮೇಲೆ ಹಿಂದುಸ್ಥಾನವನ್ನೆಲ್ಲಾ ಸುತ್ತಿ ದ್ದಾರೆ. ಸಣ್ಣಪುಟ್ಟ, ಹಿರಿದು ಎಲ್ಲ ಸಂಸ್ಥಾನಗಳನ್ನೂ ನೋಡಿದಾರೆ. ಅಲ್ಲಿನ ಪರಿಸ್ಥಿತಿಯನ್ನು ಕೂಲಂಕಷವಾಗಿ ಬಲ್ಲರು. ಪಟ್ಟಾಭಿ ಸಂಸ್ಥಾನ ಗಳ ಸಮಸ್ಯೆಯನ್ನು ತಮ್ಮದಾಗಿ ಮಾಡಿಕೊಳ್ಳುವ ತನಕ ಅಖಿಲ ಭಾರತ ಸಂಸ್ಥಾನ ಪರಿಷತ್ತು ಅಗಸ್ತ್ಯಭ್ರಾತನಂತಿತ್ತು. ಸಂಸ್ಥಾನಗಳ ಚಳುವಳಿ ಯಾರಿಗೂ ಬೇಡಾದ ಮಗುವಿನಂತಿತ್ತು. ಪಟ್ಟಾಭಿ ಅದರ ಚುಕ್ಕಾಣಿ ಹಿಡಿದ ಮೇಲೆ ಕಾಂಗ್ರೆಸ್ಸು ಸಮುದ್ರದಲ್ಲೂ ಈ ದೋಣಿಗೆ ರಹದಾರಿ ಸಿಕ್ಕಿತು. ಒಬ್ಬರೊಬ್ಬರಾಗಿ ನಾಯಕರು ಅತ್ತ ಕಡೆ ಓಡಿದರು. ಗಾಂಧೀಜೀ ಸಂಸ್ಥಾನಗಳ ತೊಡಕಿನಲ್ಲಿ ಬಂದುದೂ ಜವಾಹರಲಾಲರು

ಅ. ಭಾ. ಸಂ. ಪರಿಷತ್ತಿನ ಅಧ್ಯಕ್ಷರಾದುದೂ ಪಟ್ಟಾಭಿಯ ಹಿಡಿತದ ಫಲ. ಕಾಂಗ್ರೆಸ್ ಈಗ ಈ ಸಮಸ್ಯೆಯನ್ನು ತನ್ನದಾಗಿ ಮಾಡಿಕೊಂಡಿದೆ. ಗಾಂಧೀಜಿಯಂತೂ ಪಾರ್ಲಮೆಂಟರಿ ಉಪಸಮಿತಿ ಇದ್ದಹಾಗೆ ಸಂಸ್ಥಾನಗಳ ಉಪಸಮಿತಿ ಒಂದಿರಬೇಕು ಎನ್ನುತ್ತಿದಾರೆ. ದೇಶೀ ಸಂಸ್ಥಾನಗಳ ಚಳುವಳಿಗೆ ಬೀಜವಾದ ಹರಿಪುರದ ತೀರ್ಮಾನ ಪಟ್ಟಾಭಿಯ ನಾಯಕತ್ವದ ಫಲ. ಈ ಚಳುವಳಿಗೆ ಇವರು ಧರ್ಮಪಿತೃ God father ಇದ್ದ ಹಾಗೆ.

ಇಷ್ಟೆಲ್ಲ ಆದರೂ ಪಟ್ಟಾಭಿ ಅಖಿಲ ಭಾರತ ನಾಯಕರ ಪಟ್ಟಿಯಲ್ಲಿ ಮೇಲೇರಿ ಬಂದಿಲ್ಲ. ರಾಷ್ಟ್ರಪತಿಯ ಪದವಿ ಇವರ ಕೈಯ ತನಕ ಬಂದು ಬಾಯಿಗೆ ಬರಲಿಲ್ಲ. ಅಷ್ಟರಲ್ಲಿ ಆದರಲ್ಲಿ ನೊಣಬಿತ್ತು. ಈ ವರ್ಷ ವರ್ಕಿಂಗ್ ಕಮಿಟಿಯಲ್ಲಿಯೂ ಇಲ್ಲ. ಇದಕ್ಕೆಲ್ಲ ಕಾರಣ ಇವರ ಅಲ್ಪತೃಪ್ತಿ. ಅದು ಇವರ ಪ್ರಧಾನಗುಣ. ಇದ್ದುದರಲ್ಲಿಯೆ ದೇವರನಾಮ ನೆನೆದುಕೊಂಡು ಬದುಕುವ ಜಾತಿ. ಬಹಳ ದಿನದ ಕೆಳಗೆಯೆ ಬೊಂಬಾಯಿಂದ ಇವರಿಗೆ ಕರೆಬಂದಿತ್ತು ಪತ್ರಿಕಾಸಂಪಾದನಕ್ಕೆ. ಹೋಗಿದ್ದರೆ ಪತ್ರಿಕಾಪ್ರಪಂಚದಲ್ಲಿ ಒಂದು ಪ್ರಚಂಡ ಶಕ್ತಿಯಾಗಬಹುದಾಗಿತ್ತು. ಕಾಂಗ್ರೆಸ್ಸಿನಲ್ಲಿ ಹೆಚ್ಚು ಜವಾಬದಾರಿಯ ಕೆಲಸಕ್ಕೆ ಹೊಂದಿಕೊಳ್ಳಬಹುದಾಗಿತ್ತು. ಆದರೆ ಅವು ಯಾವುದೂ ಇವರಿಗೆ ಬೇಡ. ಮನೆಯೇ ಕಾಶಿ ಮನವೇ ಗಂಗೆ ಎಂಬ ಹಾದಿ ಇವರದು. ಮಚಲೀಪಟ್ಟಣವೇ ಇವರಿಗೆ ಕೈಲಾಸ; ತಮ್ಮ 'ಜನ್ಮಭೂಮಿ'ಯೇ ಸರ್ವಸ್ವ. ಗರಿ ಇದ್ದರೂ ಹಾರುವುದು ಬೇಡ. ಪಟ್ಟಾಭಿಗೆ ಸ್ವಲ್ಪ ಆಶೆ-ಆಕಾಂಕ್ಷೆ-ರಾಜಕಾರಣದಲ್ಲಿ-ಇದ್ದಿದ್ದರೆ ಆಂಧ್ರವೂ ಮುಂದೆ ಬರುತ್ತಿತ್ತು.

ಆ ಗೌರವ ಸಿಗಲಿ ಸಿಗದಿರಲಿ; ಪಟ್ಟಾಭಿಗೆ ಸಿಕ್ಕ ಗೌರವ ಉಳಿದವರಿಗೆ ಸಿಗುವುದು ಅಸಂಭವ. ಜನರ ಸಲಿಗೆ ವಿಶ್ವಾಸದ ಮಾತಲ್ಲ. ಅದು ಪಟ್ಟಾಭಿಗೆ ಎಲ್ಲರಿಗಿಂತ ಹೆಚ್ಚಾಗಿಯೇ ಇದೆ. ಗಾಂಧೀಜಿಯ ವಿಶ್ವಾಸದ ಮಾತು. ತ್ರಿಪುರಿ ಕಾಂಗ್ರೆಸ್ಸಿಗಾಗಿ ಪಟ್ಟಾಭಿ ನಿಂತು ಸೋತು ಹೋದರಷ್ಟೆ. ಆ ಸಂದರ್ಭದಲ್ಲಿ ಆ ಪೋಟೀಗೆ ನಿಲ್ಲಲು ಈ ಅನಾಸಕ್ತ ಹೃದಯ

ಕ್ಕಲ್ಲದೆ ಉಳಿದವರಿಗೆ ಸಾಧ್ಯವಿರಲಿಲ್ಲ. ಆಗ ಗಾಂಧೀಜಿ ಬರೆದದ್ದು ಎಂಥ ಮಾತು! 'ಸೋಲು ಪಟ್ಟಾಭಿಯದಲ್ಲ, ನನ್ನದು' ಹತ್ತು ಸಲ ರಾಷ್ಟ್ರಪತಿಯಾಗಿ ಏನು ಭಾಗ್ಯ? ಗಾಂಧೀಜಿಯ ಈ ಹರಕೆ ಪಟ್ಟಾಭಿಯ ಅಂತರಂಗಕ್ಕೆ ಒಂದು ಬೆಳತಿಗೆ, ಅದೊಂದು ಚಿರಜೀವಿ ಪಟ್ಟ.



# ಸರ್ ರಾಧಾಕೃಷ್ಣನ್

•

ಬೆಳ್ಳಗೆ ಹೊಳೆವ ಮಲ್ಲಿಗೆ ಧೋತರ, ಶುಭ್ರವಾದ ರೇಶಿಮೆಯ ನಿಲುವಂಗಿ, ರುಮಾಲು; ಈ ಮುಗುಳು ನಗೆ, ಈ ಅಭಿಮಾನದ ಮಾತು, ಕಣ್ಣಿನ ಮಿಂಚಿನ ಗೊಂಚಲು; ಮನೆತುಂಬ ಮಕ್ಕಳು, ಬಳಗ,—ಇದೇ ಏನು ? ವೇದಾಂತಿಯ ಲಕ್ಷಣ ? ಈ ವ್ಯವಹಾರ ಮಗ್ನತೆ, ಭೋಗ ಜೀವನ, ಇದೆಲ್ಲಾ ಜ್ಞಾನಯೋಗದ ಗುರುತೇ ? ಅಪರಶಂಕರನೆಂದು ಆಂಧ್ರರು ಹೊಗಳಿದ್ದು ಈತನನ್ನೇ ?

ನಾವು ಎಲ್ಲೋ ಬೇಸ್ತು ಬಿದ್ದಿರಬೇಕು. ಇದಲ್ಲ ಆ ವ್ಯಕ್ತಿ. ಮಂಡೆ ಬೋಳಿಸಿಲ್ಲ, ಮೈಗೆ ಲೇಪನವಿಲ್ಲ; ಕಷಾಯವಿಲ್ಲ, ಕಮಂಡಲು ವಿಲ್ಲ. ಹೋಗಲಿ, ಮಹಾಮಹೋಪಾಧ್ಯಾಯರ ಮೊಳದಗಲ ಜರತಾರಿ ಸೇಲೆಯಿಲ್ಲ, ಸ್ವರ್ಣ ಕಂಕಣವಿಲ್ಲ. ಯಾವ ರೀತಿಯಲ್ಲೂ ವೇದಾಂತಿ ಯಂತೆ ಕಾಣುವುದಿಲ್ಲ. ವೇದಾಂತಿಯೆಂದರೆ ಹೀಗೆ ಹಾಗೆ ಎಂದು ಲೆಕ್ಕ ಹಿಡಿದಿರುವ ಸಾಂಪ್ರದಾಯಿಕರೇ ಬೇಸ್ತು ಬಿದ್ದವರು. ರಾಧಾಕೃಷ್ಣನ್ ಅವರ ವರ್ಣನೆಗೆ ಹೊಂದುವುದಿಲ್ಲ. ವೇದಾಂತಕ್ಕೆ ಬೇಕಾದ 'ಜಗನ್ಮಿ ಥ್ಯಾತ್ವದ ಅವಧೂತವಾಗಲಿ ಪರಮೇಕಾಂತದ ವೀರಸಾತ್ವಿಕವಾಗಲಿ ಇವರಲ್ಲಿಲ್ಲ. ಆದರೂ ಇವರು 'ಅಪರ ಶಂಕರ' ಜಗದ್ವಂದ್ಯ ಜ್ಞಾನ ಯೋಗಿ. ಮನೆಯಲ್ಲಾಗಲಿ ಮಾರಿನಲ್ಲಾಗಲಿ ಇವರಿಗೆ ಇದುರಿಲ್ಲ ವೇದಾಂತದಲ್ಲಿ.

" ಸಭೆಯಲ್ಲಿ ಎದ್ದು ನಿಂತು ಇವರು ಮಾತಾಡಲು ಮೊದಲಿಟ್ಟರೆ ಸಾಕು ಒಂದೇ ತೊಡರಿಲ್ಲ, ತಡೆಯಿಲ್ಲ. ನುಡಿಯಲ್ಲಿ ನುಡಿದೇವಿ ಮೂಡುತ್ತಾಳೆ. ಆದೊಂದು ವಶೀಕರಣಶಕ್ತಿ ಆ ಮಾತಿನಲ್ಲಿದೆ, ಗಾರುಡಿಗನ ನಾಗಸ್ವರದಂತೆ. ಕೇಳುವ ಜನ ಮೈಮರೆತು ತನ್ಮಯರಾಗುತ್ತಾರೆ. ಒಂದೊಂದಾಗಿ ಹರಿತವಾದ ಹುರುಳಾದ ಕಿರುನುಡಿಗಳನ್ನು ಹೃದ್ಯವಾಗಿ ಎಸೆಯುತ್ತ, ಉಕ್ಕಿನ ಕಡಲೆಯೆನಿಸಿದ ವೇದಾಂತದ ರಹಸ್ಯಗಳನ್ನು ಸುಲಿದ ಬಾಳೆಯ ಹಣ್ಣಿನಂದದಿ ಸುಲಭವಾಗಿ ತಿಳಿಸುತ್ತ, ತರ್ಕದಲ್ಲಿ ವಿನೋದ ತುಂಬಿ, ತತ್ವದಲ್ಲಿ ಕಾವ್ಯ ಬೆರಸಿ, ನುಡಿಯೊಡನೆ ಆಟವಾಡುತ್ತ ಕೇಳುವ ಜನರನ್ನು ಆ ಆಟದಲ್ಲಿ ಸೆಳೆದು ಮುಳುಗಿಸುತ್ತಾರೆ. ಆ ಸೆಳೆತ ಕೃಷ್ಣನ ಕೊಳಲಿದ್ದಂತೆ ತಡೆಯಲಾಗದುದು, ತಡೆಯಲು ಬಾರದುದು. ಇಂಗ್ಲೆಂಡಿನಲ್ಲೊಮ್ಮೆ ಈ ಮಾತಿನ ಪರೀಕ್ಷೆಯೇ ಆದಂತಾಯಿತು. ಇವರು ಆಪ್‍ಟನ್ ಭಾಷಣಗಳಿಗಾಗಿ ಅಲ್ಲಿಗೆ ಹೋದಾಗ ವಿಶ್ವವಿದ್ಯಾನಿಲಯದ ಡೋಣಿ ಪೋಟಿಗಳ ಸಂದರ್ಭ. ಆ ಪೋಟಿಯೆಂದರೆ ಕಲಿತವರಿಗೆ ಕಲಿಯದವರಿಗೆ ಎಲ್ಲರಿಗೂ ಒಂದು ಜಾತ್ರೆಯಿದ್ದಂತೆ. ಆ ಪ್ರಸಂಗದಲ್ಲಿ ಅಲ್ಲಿನ ಜನದ ಪ್ರಾಣವೆಲ್ಲಾ ಅಲ್ಲೇ. ಎಂಥ ಕೊಂಬು ತಿರುಗಿದ ಪಂಡಿತ ಬಂದರೂ ಗೋಡೆಗೆ ಭಾಷಣ ಹೇಳಬೇಕಾದುದೇ. ರಾಧಾಕೃಷ್ಣನ್ ಈ ಸಂದರ್ಭ ಗಮನಿಸಿದರು. ಅಳುಕದೆ ಒಳುಕದೆ 'ಆದದ್ದೆಲ್ಲಾ ಆಗಲಿ' ಎಂಬ ಭಕ್ತಿಯಿಂದ 'ಹರಿನಿಸ್ನ ಚಿತ್ತ' ವೆಂಬ ಅನಾಸಕ್ತ ಬುದ್ಧಿಯಿಂದ ತಮ್ಮ ಭಾಷಣ ಮೊದಲು ಮಾಡಿದರು. ಮೂರು ದಿನ ಭಾಷಣ ನಡೆದವು. ಮೂರನೆಯ ದಿನ ಸದಿಯ ದಂಡೆಗೆ ನಾಲ್ಕಾರು ಜನ ಮಾತ್ರ ಉಳಿದಿದ್ದರು. ಅದು ರಾಧಾಕೃಷ್ಣನ್‍ರ ಗೆಲವಷ್ಟೇ ಅಲ್ಲ, ಮೈಯ ರುಚಿಯ ಮೇಲೆ ಮನಸಿನ ಸಂಸ್ಕೃತಿಯ ಗೆಲವು

ಅಲ್ಲೇ ಅಲ್ಲ, ಅಮೇರಿಕಾದಲ್ಲೂ ಅದೇ ಹಾಡು. ಪ್ರಪಂಚದ ಮೂಲೆಯಿಂದ ಮೂಲೆಗೆ ರಾಧಾಕೃಷ್ಣನ್ ಭಾಷಣಗಳಿಗಾಗಿ ಹೋಗಿದಾರೆ. ಅವರ ಹಾದಿಗುಂಟ ಗೆಲುವಿನ ಧೂಳಿಯೆದ್ದಿದೆ. ರಾಧಾಕೃಷ್ಣನ್ ಸ್ವಲ್ಪ ಎತ್ತರವಾದ ಆಳು ಆದರೂ ಎಂಥ ಕಿರುಬಾಗಿಲಲ್ಲೂ ಇವರು ತಲೆ ತಗ್ಗಿಸಿಲ್ಲ. ತಮ್ಮ ಎತ್ತರಕ್ಕೆ ತಕ್ಕಂತೆ ಬಾಗಿಲು ಹಿಗ್ಗಿಸಿ ಒಳನುಗ್ಗಿ

ದಾರೆ. ಎಲ್ಲಿಡೆಯಲ್ಲೂ ಅದೇ ಗಾಂಭೀರ್ಯ, ವಿನಯ, ನಿರಹಂಕಾರ, ಅದೇ ಅಂತಃಕರಣ; ಅವೇ ಅವರ ಬಾಳಹೂವಿನ ನಾಲ್ಕು ದಳ.

ಮಾತು ಜೇನೇ ಆದರೂ ಅವರು ಮಾತಾಳಿಯಲ್ಲ. ಮೂರು ಹೊತ್ತೂ ಪುಸ್ತಕ ಓದುತ್ತಿರುತ್ತಾರೆ. ಓದುಗುಳಿ ಜಾತಿ; ಕೈಗೆ ಸಿಕ್ಕದ್ದನ್ನು ಓದದೆ ಬಿಡುವದಿಲ್ಲ. ವಿಷಯಗಳಲ್ಲಾಗಲಿ ಲೇಖಕರಲ್ಲಾಗಲಿ ಅವರಿಗೆ ಪಕ್ಷಪಾತವಿಲ್ಲ. ಸಾಹಿತ್ಯವೂ ಸರಿ. ವೇದಾಂತವಂತೂ ತಿಳಿದೇ ಇದೆ. ಇತಿಹಾಸ, ಚರಿತ್ರೆ, ಕಾವ್ಯ, ಕಾದಂಬರಿ, ನಾಟಕ ಯಾವುದೂ ಈ ವೇದಾಂತಿಗೆ ಮೈಲಿಗೆಯಲ್ಲ. ಯಂತ್ರಶಾಸ್ತ್ರ ಪಶುವೈದ್ಯಗಳಂಥವನ್ನು ಬಿಟ್ಟರೆ ಅದರ ಕಾರಣ ಅರುಚಿಯಲ್ಲ. ಅದಕ್ಕೆ ಬೇಕಾದ ಶಿಕ್ಷಣದ ಪೂರ್ವ ಪೀಠಿಕೆಯಿಲ್ಲದುದು. ಅವರ ವಾಚನಾಭಿರುಚಿ ಅವರ ಬ್ರಹ್ಮನಂತೆ ಸರ್ವವ್ಯಾಪಿ.

ಸದಾ ಓದುತ್ತಿರುವ ಜನ ನಾಲ್ಕಾಣೆ ನಾವೆಲಿನ ಈ ಕಾಲದಲ್ಲಿ ಅಷ್ಟೇನು ಅಪರೂಪವಲ್ಲ. ಓದಿದ ಪುಸ್ತಕದಲ್ಲಿ ಸೀಸ ಕಡ್ಡಿಯ ಗುರುತು ಹಾಕುವ ಚಟವೂ ಅಲ್ಲಲ್ಲಿ ಇದೆ. ಇವರ ಹಾಗೆ ‘ ಓದಿನ ಒಡಲು ತಿಳಿದ ’ ವರು ಇಲ್ಲ. ಇವರು ಬರೆದ ಪುಸ್ತಕಗಳಲ್ಲಿ ಹೆಜ್ಜೆಜ್ಜೆಗೂ ಆ ತಪಸ್ಸಿನ ಫಲ ಕಾಣಬರುತ್ತಿದೆ. ಇವರು ಮಾತಾಡುತ್ತಿದ್ದರೆ ಬರೆಯುತ್ತಿದ್ದರೆ ಆ ನೋಂಪಿ ಇವರಿಗಾಗಿ ನಡೆಮುಡಿಹಾಸುತ್ತ ನಡೆದಿದೆ. ವೇದಾಂತ ಚರ್ಚೆಯಲ್ಲಿ ಇವರ ಸಾಹಿತ್ಯಾಭ್ಯಾಸದ ಸೊಬಗಿನ ರಸ ಬೇರೆತು ಬರುತ್ತದೆ. ಸಾಹಿತ್ಯ ವಿಮರ್ಶೆಯಲ್ಲಿ ವೇದಾಂತ ಜ್ಞಾನದ ಧೂಪ ಆಡುತ್ತಿರುತ್ತದೆ. ಅದೊಂದು ಅಪೂರ್ವ ಮೇಳನ. ಕವಿ ಎಂದರೆ ಋಷಿ ಎಂಬ ಅರ್ಥ ಒಂದು ಕಾಲದಲ್ಲಿ ಇತ್ತು. ದ್ರಷ್ಟಾರನಾದವ ಕವಿ. ಈ ಅರ್ಥದಲ್ಲಿ ಎಲ್ಲ ವೇದಾಂತಿಗಳೂ ಕವಿಗಳೇ. ವೇದಾಂತಿಗಳು ಅನುಭವವನ್ನು ಕಳೆದುಕೊಂಡು ಬರಿಯ ಶಬ್ದಕ್ಕೆ ಜೋತು ಬಿದ್ದಾಗ ತರ್ಕಟತನವನ್ನು ಬೆಳೆಸಿ ಕವಿಗುಣವನ್ನು ಕಳೆದುಕೊಂಡರೋ ಏನೋ. ವೇದಾಂತಿಗಳು ಕವಿಗಳಿರಲಿ ಬಿಡಲಿ ರಾಧಾಕೃಷ್ಣನ್ ಮಾತ್ರ ಕವಿ. ಅವರ ಹೃದಯ ಹದಿನಾರಾಣೆ ಕವಿಹೃದಯ.

ರಾಧಾಕೃಷ್ಣನ್ ಬಹಳ ಪುಸ್ತಕ ಬರೆದಿದಾರೆ. ಕತೆ ಕಾದಂಬರಿ,

ನಾಟಕ-ಹತ್ತಾರು ಬರೆದರೂ ಬರೆಯಬಹುದು. ಬರೆದವರೂ ಇದ್ದಾರೆ. ಆದರೆ ತತ್ವಜ್ಞಾನದ ಗ್ರಂಥಗಳನ್ನು ಇಷ್ಟು ಹೆಚ್ಚಾಗಿ ಬರೆಯುವುದು ಕಷ್ಟ. ಬರೆದರೂ ಅವು ಜನರಿಗೆ ಬೇಸರ ಬರದೆ ಇರುವುದು ಕಡಿಮೆ. ಆದರೆ ಇವರ ಪುಸ್ತಕ ಪರಂಪರೆಯಾಗಿ ಬರುತ್ತಲೇ ಇವೆ. ಇನ್ನೂ ನಾಲ್ಕು ಬರಲಿ ಎಂಬ ಜನರೇ ಬಹಳ. ಹಿಂದೆ ವೇದಾಂತ ದೇಶಿಕರೊಬ್ಬರು ಹೀಗೆ ಬಹು ಗ್ರಂಥರಾಶಿಯನ್ನು ನಿರ್ಮಿಸಿದವರು.

ಇವರ ಕವಿಹೃದಯ, ಇವರ ಗ್ರಂಥಗಳಲ್ಲಿ ಒಡೆದು ಕಾಣುತ್ತದೆ. ಘಟಪಟಗಳ ತತ್ವ ವಿವೇಚನೆಯಲ್ಲ ಅದು. ಸತ್ ಅಸತ್‌ಗಳ ನಿರ್ಣಯವೂ ಅಲ್ಲ. ಬಾಳಿಗೆ ಹೊಂದದ ಬರಿಯ ವೇದಾಂತವಲ್ಲ. ಧರ್ಮ-ತತ್ವ ಬಾಳನ್ನು ಹೇಗೆ ಬೆಳಗಿತು ಎಂಬ ಜಿಜ್ಞಾಸೆ. ಮಾನವ ಜೀವನದಲ್ಲಿ ಧರ್ಮದಿಂದ ಎಂಥ ಅಂದವಾದ ಹೂವನ್ನು ಅರಳಿಸಬಹುದು ಎಂಬ ಕನಸು. ನಾವೆ ದೇವರಾದರೆ ದೇವರ ಹಾಗೆ ನಡೆಯಬೇಡವೆ? ನಾವು ದೇವರ ಕಿಂಕರರಾದರೆ ದೇವರ ಇಷ್ಟವರಿತು ನಡೆಯಬೇಡವೇ? ಆಚಾರ್ಯ ರಾಧಾಕೃಷ್ಣನ್ ಈ ಹಾದಿಯಲ್ಲಿ ಮೂಡ-ಪಡುವಲು ಎಲ್ಲ ಧರ್ಮಸಾಹಿತ್ಯವನ್ನೂ ಸೋಸಿ ನೋಡಿದಾರೆ. ಎಲ್ಲ ತತ್ವಶಾಸ್ತ್ರವನ್ನೂ ಅಳೆದಿದಾರೆ. ಎಲ್ಲ ಧರ್ಮಗಳ ಬಾಗಿಲಲ್ಲೂ ಹಣಿಕಿಹಾಕಿದಾರೆ. ಆದರಿಂದ ಅವರ ಜೀವ ಪುಷ್ಟಿಗೊಂಡಿದೆ; ತೃಪ್ತಿಗೊಂಡಿದೆ. ಆ ತೃಪ್ತಿಯಲ್ಲಿ ಅವರ ಕವಿ ಹೃದಯ ಆಗಾಗ ಮುಳುಗಿಹೋಗುತ್ತದೆ. ಜಗತ್ತನ್ನು ಹೊಸದಾಗಿ ಕಟ್ಟಬೇಕೆಂಬ ಕನಸು ಆ ವಿವೇಕದಲ್ಲಿ ಅಡಗಿ ಹೋಗುತ್ತದೆ. ಜಗತ್ತಿನಲ್ಲಿ ಎಷ್ಟು ಧರ್ಮ ಹುಟ್ಟಿ ಅಳಿದಿಲ್ಲ. ಎಷ್ಟು ಕನಸು ಕಟ್ಟುವ ಮೊದಲೇ ಬಯಲಾಗಿಲ್ಲ. ಇತಿಹಾಸ ತೋರುವುದೇನು? ಮಾನವ ಯತ್ನದ ನಿಸ್ಸಾರತೆ. ರಾಮರಾಜ್ಯ ಉಳಿಯಿತೇ? ಬುದ್ಧ ಭಗವಾನನ ಅವತಾರ ಹಿಂಸೆಗೆ ಭರತವಾಕ್ಯ ಹೇಳಿತೇ? ಈ ವಿಚಾರ ಬಂದು, ಆಚಾರ್ಯರು ತಮ್ಮ ರೆಕ್ಕೆಯನ್ನು ಮುದುರಿಸಿಕೊಳ್ಳುತ್ತಾರೆ ಎನಿಸುತ್ತದೆ.

ಆದರೆ ತಾವು ಹುಟ್ಟಿಬಂದ ಈ ಲೋಕದ, ಅರಿವನ್ನು ಬಾಳನ್ನು ಕೊಂಚ ಮೇಲು ಮಟ್ಟಕ್ಕೆ ಒಯ್ಯುವ ಹಂಬಲ ಆಗಾಗ ಹೊರಬೀಳುತ್ತದೆ. ಇಂಗ್ಲೆಂಡಿನಲ್ಲಿ ಹಿಂದೂ ಸಂಸ್ಕೃತಿಯ ಉಪದೇಶಕರಾಗಿ ನೇಮಕ

ವಾದ ಮೇಲಂತೂ ಈ ಹುರುಪು ಹೆಚ್ಚಿದೆ. ಬಾಳು ಒಂದು ಕೂಟಪ್ರಶ್ನೆ. ಇಪ್ಪತೆಂಟು ತರದ ಎಳೆಗಳು ಸೇರಿದ ಬಣ್ಣದ ಬಟ್ಟೆ. ಇದರ ನೈಜವನ್ನು ಕಾಣಬೇಕು. ಯೋಗ್ಯವಾಗಿ ಬದುಕಬೇಕು ಎಂದು ಹೇಳುತ್ತಿದಾರೆ. ಪಡುವಲ ನಾಡಿನಲ್ಲಿಯೇ ನಿಂತು ಅವರ ಚಾರ್ವಾಕವಾದವನ್ನೂ ಹೇತುವಾದವನ್ನೂ ಖಂಡಿಸಿದ್ದಾರೆ. ಬಾಳಿಗೆ ಒಂದು ಗುರಿ ಇದೆ. ಅದನ್ನು ಧರ್ಮದಲ್ಲಿ ಕಂಡುಕೊಳ್ಳಬೇಕು. ದೇವರು ಮಾತಿಗೆ ಸಿಗುವವನಲ್ಲ. ಅನುಭೂತಿ ಬೇಕು ಎಂದು ಡಾಣಾ ಡಂಗುರವಾಗಿ ಹೇಳಿದಾರೆ. ಅವರ ಗ್ರಂಥಗಳ ಹೆಸರೂ ಹಾಗೆ ಇವೆ. Hindu view of life; Idealist view of life; Reign of Religion in contemporary philosophy; Religion we need; unborn soul.

ಒಂದು ಸಲ ಇಂಗ್ಲೆಂಡಿನಲ್ಲಿ ವಿಶ್ವವಿದ್ಯಾನಿಲಯದಲ್ಲಿ ಮಾತಾಡಿದರು.[೧] ಆಗ ಮೈ ಬಿಸಿಯಾಗಿತ್ತಂತೆ. ಮನಸ್ಸೂ ಬಿಸಿಯಾಗಿದ್ದಿರಬೇಕು. ಆ ದಿನ ಅವರ ಕವಿಹೃದಯ ಗರಿಗೆದರಿ ಮೇಲೇರಿತ್ತು. ತಪೋಬ್ರಹ್ಮದ ವ್ಯಾಖ್ಯಾನ ಅಂದು ಮಾಡಿದ್ದು. ತಪಸ್ಸಿಲ್ಲದೆ ಸೃಷ್ಟಿ ಇಲ್ಲ. ತಪವಿಲ್ಲದೆ ಸತ್ಯವಿಲ್ಲ. ತಪಸ್ಸೇ ಎಲ್ಲ ಕ್ರಾಂತಿಗೂ ಆಧಾರ. ಗಾಂಧೀಜಿಯ ಹೆಸರು ಆ ಇಡೀ ಭಾಷಣದಲ್ಲಿಯೇ ಇಲ್ಲ. ಆದರೆ ಇಡೀ ಭಾಷಣವೇ ಗಾಂಧೀಜಿಯನ್ನು ಲಕ್ಷ್ಯದಲ್ಲಿಟ್ಟು ಹೇಳಿದುದು. 'ನಾಡಿನ ಲೋಪದೋಷಗಳನ್ನು ತನ್ನವು ಎಂದು ತಿಳಿದವನೆ ನಿಜವಾದ ನಾಯಕ' ಎಂದು ಸತ್ಯಾಗ್ರಹದ ಅಂತರಾರ್ಥವನ್ನು ಸಾರಿದರು. ಎಲ್ಲರೂ ಎಲ್ಲ ನಾಡಿನವರೂ ಹೊಸ ಬದುಕನ್ನು ಕಟ್ಟಬೇಕೆಂದಿದಾರೆ. ಬೇರೆಬೇರೆ ರೀತಿಯಲ್ಲಿ ಹೆಣಗುತ್ತಿದಾರೆ. ಆದರೆ ಎಲ್ಲವೂ ಗಾಳಿಗೋಪುರ. ತಪಸ್ಸಿನಿಂದ ಸಾಧಿಸಿದುದೇ ನಿತ್ಯ.

ರಾಧಾಕೃಷ್ಣನ್ ಮುಗಿಲು ನೋಡುವ ವೇದಾಂತಿಯಲ್ಲ. ಕರ್ಮಕ್ಕೆ ಬೆದರಿ ಕೈಹಿಸುಕುವ ತಾರ್ಕಿಕರೂ ಅಲ್ಲ. ಜಗತ್ತೆಲ್ಲ ಅನಿತ್ಯವೆಂದು ತಿಳಿದು ದೂರ ಸರಿಯುವ ಶೂನ್ಯವಾದಿಯೂ ಅಲ್ಲ. ಆಸನ ಮುದ್ರೆಗಳ ಯೋಗವನ್ನು ನಂಬಿಲ್ಲ. ಅವರಿಗೆ ಎದೆಯಲ್ಲಿ ಭಕ್ತಿಯಿದೆ.

---

೧ ಆಕ್ಸ್‌ಫರ್ಡ್ ೧೯೩೦, ಜುಲೈ ೮. Revolution through suffering.

ತಲೆಯಲ್ಲಿ ಜ್ಞಾನವಿದೆ. ಎರಡನ್ನೂ ಹದವಾಗಿ ಬೆರೆಸಿಕೊಂಡು ಬಾಳುವ ಕೌಶಲವಿದೆ. ಅಂತಲೇ ಅವರಿಗೆ ತಾಯಿನಾಡಿನ ಮೇಲೆ ಅಮಿತಪ್ರೇಮ ವಿದೆ. ತಾಯಿನಾಡಿಗೆ ಹೃದಯವಾಗಿ ಬೆಳಕಾಗಿ ಬೆಳಗುವ ಮಹಾತ್ಮಾ ಗಾಂಧೀಜಿಯ ಬಗ್ಗೆ ಅಪಾರ ಆದರವಿದೆ. ಹಾಗೆಯೆ ಸಂಸಾರದಲ್ಲಿ ಶ್ರದ್ಧೆ ಯಿದೆ. ಹೆಂಡತಿ ಮಕ್ಕಳು ಗೆಳೆಯರು ಎಲ್ಲರೂ ಬೇಕು. ಯಾರನ್ನೂ ಅಸಡ್ಡೆ ಮಾಡರು.

ಈ ಹದವಿಲ್ಲದೆ ಆ ವಿನಯ ಆ ಒಲಿವು ಸಾಧ್ಯವಿಲ್ಲ. ಪಂಡಿತೋ-ತ್ತಮರಾಗಿದ್ದರೂ ಅವರ ಮಾತಿನಲ್ಲಿ ಡಂಬವಿಲ್ಲ; ನಡತೆಯಲ್ಲಿ ಸಿಡಿಮಿಡಿ-ಮಡಿ ಇಲ್ಲ. ಅವರ ಮಾತಿನಲ್ಲಿ ಬ್ರಹ್ಮ-ಆತ್ಮ-ವೇದಗಳು ಉರುಳಿ ಬೀಳುವುದಿಲ್ಲ. ಎಷ್ಟೇ ಹೊಸಬರಿರಲಿ ಹಳೆಯ ಗುರುತಿನವರಂತೆ ಯೋಗ ಕ್ಷೇಮದ ಮಾತನ್ನಾಡುತ್ತಾರೆ. ಅಥವಾ ಅದು ಸರಿ ಇದು ತಪ್ಪು ಎಂಬ ವಿಮರ್ಶೆಯ ಗುಡುಗೂ ಇಲ್ಲ. ಕಾಲ ಬಂದಾಗ ಎಲ್ಲವೂ ಸರಿ ಹೋಗುತ್ತದೆ ಎಂಬ ಅಂತಃಕರಣವಿದೆ. ನಡತೆಯಲ್ಲೂ ಅಷ್ಟೆ. ಜಗದ್ಗುರು ಶಂಕರಾಚಾರ್ಯರನ್ನು ಸೇವಿಸಿದಾಗ ವಿನಯ ಕಂಡು ಬಂದರೆ ಸಿನಿಮಾ ನಟಿ ಒಬ್ಬಳನ್ನು ಮಾತಾಡಿಸಿದಾಗ ಗೌರವಭಾವನೆ ಕಂಡೀತು. ರಾಜಾಧಿ-ರಾಜರನ್ನು ಅಂತರಂಗದಲ್ಲಿ ಭೆಟ್ಟಿಯಾದಾಗ ಗೆಳೆತನ ತೋರಿದರೆ ಕಾಲೇಜಿನಲ್ಲಿ ಕಾಣಲು ಬಂದ ವಿದ್ಯಾರ್ಥಿಗೂ ಅದೇ ಅಭಿಮಾನ.

ಈ ಸಮಭಾವನೆಗೆ ಪಾಪಿ-ಪುಣ್ಯಶಾಲಿ ಎಂಬ ಭೇದವಿಲ್ಲ. ಹಾಗೆನ್ನುವುದಕ್ಕಿಂತ ಪಾಪಿಗಳ ಮೇಲೆ ಕನಿಕರ ಹೆಚ್ಚು ಎನ್ನುವುದು ಸರಿ. ಪಾಪ ಎಂಬುದು ಒಂದು ಅಪಶ್ರುತಿ, ತಪ್ಪಿದ ತಾಳ. ಲಯ ಜಗತ್ತಿನ ಜೀವಾಳ. ಲಯವೆಂದರೆ ಬರಿಯ ತಾಳವಲ್ಲ. ಅದು ತಾಳ-ಮೇಳ; ಸಾಮ್ಯ. ಒಂದಕ್ಕೊಂದು ಸರಿಜೋಡಿ. ನಮ್ಮ ಸ್ವಭಾವ ದಲ್ಲಿ ಆ ಲಯ ತಪ್ಪಿದಾಗ ಬದುಕಿನಲ್ಲಿ ವಿರಸ ಹುಟ್ಟುತ್ತದೆ. ಅದರ ಫಲ ಅಜ್ಞಾನ-ಅಕೃತ್ಯ. ಮಾನವ ಜೀವನವು ಒಂದು ಹಾಡುಗಾರರ ಗುಂಪಿನ ವಾದ್ಯಮೇಳನವಿದ್ದ ಹಾಗೆ. ಅಲ್ಲಿ ಎಲ್ಲಾ ಛಟ್ಟು ಪರಿಣಾಮದ ಕಡೆ ಗಮನವಿರಬೇಕು. ನನ್ನ ವಾದ್ಯ ಎಲ್ಲಕ್ಕಿಂತ ಮೇಲಾಗಲಿ ಎಂಬ ಹಮ್ಮು-ಹುರುಪು ಸಲ್ಲದು. ಅದೇ ಲಯವನ್ನು ಕೆಡಿಸುತ್ತದೆ. ಈ

ನೋಟ ಮನುಷ್ಯನಿಗೆ ಒರುವ ತಸಕ ತಪ್ಪು ಯಾವಾಗ ಮಾಡಿಯಾನು ಹೇಳಲು ಬರುವ ಹಾಗೆ ಇಲ್ಲ. ಆದರೆ ಆ ತಪ್ಪಿಗೆ ಮದ್ದು ದಂಡನೆಯಲ್ಲ. ಕನಿಕರವೇ ಅವರ ಉಪಾಯ. ರಾಧಾಕೃಷ್ಣನ್ ಕಲಕತ್ತೆಯಲ್ಲಿದ್ದಾಗ ಅವರ ಕೀರ್ತಿಗೆ ಕರುಬಿ ಕೆಲವರು ಅವರ ಹೆಸರನ್ನು ಕೆಸರಿನಲ್ಲಿ ಎಳೆಯುವ ಪ್ರಯತ್ನ ಮಾಡಿದರು. ಕೋರ್ಟು ಕಚೇರಿಗಳ ವರೆಗೂ ಹೋಗ ಬೇಕಾಯಿತು. ವಾಲ್ಟೇರಿಯಲ್ಲಿ ಆಂಧ್ರ ವಿಶ್ವವಿದ್ಯಾಲಯದ ಸ್ಥಾನಪತಿ ಗಳಾಗಿದ್ದಾಗಲೂ ಆ ತರದ ಪ್ರಯತ್ನ ನಡೆಯಿತು. ಅವರ ಆಟ ಸಾಗ ಲಿಲ್ಲ. ಆ ಬೇಳೆಬೇಯದಿರಲು ಇವರ ಈ ಔದಾರ್ಯವೂ ಒಂದು ಮುಖ್ಯ ಕಾರಣ. 'ಮಾನವರ ಕಣ್ಣು ತಪ್ಪಿನ ಮೇಲೆ, ದೇವರ ಕಣ್ಣು ಸಾಧ ನೆಯ ಮೇಲೆ' ಎಂಬುದು ಅವರ ಸೂತ್ರ. ( Man notices our failings, God sees our strivings) ನಮಗೆ ಸೋಲು ಕಾಣುತ್ತದೆ. ದೇವರ ನೋಟಕ್ಕೆ ಆಟ ಮಾತ್ರ.

ಅಂದ ಚೆಂದದ ಬಗ್ಗೆಯೂ ಅಷ್ಟೇ. ರವೀಂದ್ರರಂತೆ ಚೆಲುವಿಗೆ ಜೋತುಬೀಳುವುದೂ ಇಲ್ಲ. ತಪಸ್ವಿಗಳಂತೆ ಚೆಲುವಿಗೆ ಬೆದರಿ ಓಡು ವುದೂ ಇಲ್ಲ. ಅಮಾತ್ಯರಾಜಗೋಪಾಲಾಚಾರ್ಯರ ಹಾಗೆ ಸಿನಿಮಾ ನೋಡದ ವ್ರತವನ್ನೂ ಹಿಡಿದಿಲ್ಲ. ಗಾಂಧೀಜಿಯ ಹಾಗೆ ತಾಪಸ ಜೀವ ನವನ್ನೂ ತೊಟ್ಟಿಲ್ಲ. ರವೀಂದ್ರನಾಥರಂತೆ ನಂದನವನದಲ್ಲಿಯೇ ಬದುಕು ವುದೂ ಇಲ್ಲ. ರಾಧಾಕೃಷ್ಣನ್‌ರಿಗೆ ಕಲೆಯಲ್ಲಿ ರುಚಿಯಿದೆ. ಸಂಗೀತ ನಾಟಕಗಳಲ್ಲಿ ಇಷ್ಟವಿದೆ. ಸಿನಿಮಾದಲ್ಲೂ ಅಭಿರುಚಿ. ಚಿತ್ರಶಿಲ್ಪ ಯಾವುದೂ ಅರುಚಿಯಲ್ಲ. ಆದರೂ ಆ ರುಚಿ ಬಹಳ ಆಳವಾದುದಲ್ಲ. ಒಂದು ವೇಳೆ ಆಳದಿಂದ ಬಂದರೂ ಅದಕ್ಕೆ ವಿವೇಕದ ಕಡಿವಾಣ ಇದೆ. ಅಲ್ಲದೆ ಮೊದಲಿಂದಲೂ ಅವರಿಗೆ ಪುಸ್ತಕ ಓದುವುದರಲ್ಲಿ ವಿಚಾರಮಗ್ನ ರಾಗುವುದರಲ್ಲಿ ಇದ್ದ ರುಚಿ-ಒಲವು ಯಾವುದರಲ್ಲೂ ಇಲ್ಲ. ಅವರು ಸುಮ್ಮನೆ ಓದುತ್ತ ಒಂದು ಮೂಲೆಯಲ್ಲಿ ಕುಳಿತರೆ ಜಗತ್ತೇ ಬೇಡವಾಗು ತ್ತದೆ. ಮೈಸೂರಲ್ಲಿ ಪ್ರೊಫೆಸರ್ ಆಗಿದ್ದಾಗ ವೈಸರಾಯ ಅಲ್ಲಿಗೆ ಬಂದರು. ಎಲ್ಲ ಪ್ರೊಫೆಸರರೂ ನಿಲ್ದಾಣಕ್ಕೆ ಇದಿರುಗೊಳ್ಳಲು ಹೋಗಬೇಕಾಗಿತ್ತು. ಇವರೊಬ್ಬರೆ ಹೋಗಲಿಲ್ಲ. ಪ್ರಿನ್ಸಿಪಾಲ್ ಸುಬ್ಬರಾಯರು ಸಂಜೆಗೆ

ಕೇಳಿದರು; ಏನು ಬರಲಿಲ್ಲ ಎಂತ. 'ಏನೋ ಓದುತ್ತಾ ಇದ್ದೆ. ತುಂಬಾ ಚೆನ್ನಾಗಿತ್ತು' ಎಂದುಬಿಟ್ಟರು. ಮೈಸೂರಿನ ಜನ ಖಾಸ್ ಬಂಗಲೆ ನೋಡದೆ ಇರುವುದು ಅಪರೂಪ. ಆಚಾರ್ಯರು ತಮ್ಮ ೪-೫ ವರ್ಷಗಳಲ್ಲಿ ಅದನ್ನು ನೋಡಿರಬಹುದೆಂದು ಅನ್ನುವಂತಿಲ್ಲ. ಈಜಿಪ್ಟಿಗೆ ಹತ್ತು ಸಲ ಹೋಗಿರಬಹುದು. ಆದರೆ ಜಗತ್ತಿಗೆ ಅತ್ಯದ್ಭುತವೆನಿಸಿರುವ ಪಿರಾಮಿಡ್ ಗೋಪುರಗಳನ್ನು ನೋಡಿಲ್ಲ. ವಿಲಾಯತಿಗೆ ಅನೇಕ ಸಲ ಹೋಗಿದ್ದಾರೆ. ಅಲ್ಲಿನ ಸುಂದರ ಸ್ಥಳಗಳನ್ನು ನೋಡುವ ಗೋಜಿಗೆ ಹೋಗಿಲ್ಲ. ಹೀಗೆಂದರೆ ಬದುಕಿನಲ್ಲಿ ಇವರಿಗೆ ರುಚಿಯಿಲ್ಲ. ಶ್ರದ್ಧೆಯಿಲ್ಲ ಎಂದಲ್ಲ. ತಮ್ಮ ಜೊತೆಯ ಪ್ರೊಫೆಸರರಿಗೆ ಔತಣಮಾಡಿ ಇವರು ನಗುತ್ತ ಕೆಲೆಯುತ್ತ ಇದ್ದುದನ್ನು ನೋಡಿದವರಿಗೆ ಆ ರುಚಿ ಗೊತ್ತಾಗುತ್ತದೆ. ಇಷ್ಟೆ. ಅವರ ಪಾಲಿಗೆ ಕಲೆ ನಾಮರೂಪದಲಿಲ್ಲ. ಅದರ ಹಿಂದಿನ ವಸ್ತುತತ್ವದಲ್ಲಿ.

ಅಂತಲೆ ಅವರ ಜೀವನ ಸಾದಾ. ಯಾವ ಆಡಂಬರವೂ ಇಲ್ಲ. ಮನೆಯಲ್ಲಿ ಅಂದಚಂದವಿಲ್ಲ; ಅಲಂಕಾರವಿಲ್ಲ. ಅವರ ಕೋಣೆಯಲ್ಲಿ ಪುಸ್ತಕಗಳ ರಾಶಿ. ನಡುನಡುವೆ ಒಂದೆರಡು ಕುರ್ಚಿ, ಟಯಿಫ್‌ರಯಿಟರ್ ಯಂತ್ರ, ಕಾಗದ. ಮನೆಗೆ ಬರಹೋಗುವವರಿಗೆ ಲೆಕ್ಕವಿಲ್ಲ. ಮನೆ ತುಂಬ ಮಕ್ಕಳು ಒಳಗ. 'ನಮ್ಮ ಮನೆ ಒಂದು ಸತ್ರ' ಎಂದು ಅವರು ಹೇಳುವುದುಂಟು ಆಗಾಗ.

ಅವರ ಬದುಕಿನಲ್ಲಿ ಒಂದು ಗಳಿಗೆಯಾದರೂ ವಿರಾಮವಿಲ್ಲ. ಸದಾ ಕೆಲಸ. ವೇಗವೂ ಅಪರಿಮಿತ. ೨೦೦-೩೦೦ ಪುಟಗಳ ಪುಸ್ತಕವನ್ನು ೨-೩ ಗಂಟೆಯೊಳಗೆ ಆಮೂಲಾಗ್ರವಾಗಿ ಓದಿ ಬಿಡಬಲ್ಲರು. ಸುಮ್ಮನೆ ಹಾಳೆ ಮಗಚುವುದಲ್ಲ. ಸೀಸದ ಕಡ್ಡಿಯ ಗುರುತು ಧಾರಾಳವಾಗಿ ನೋಡಬಹುದು. ಬರೆಹ ಬ್ರಹ್ಮಲಿಪಿಯಾದರೂ ಬರೆವಣಿಗೆ ಮಾತ್ರ ವಾಯುಯೋಗ. ಆ ಜ್ಞಾಪಕ ಶಕ್ತಿಗೆ ಒಮ್ಮೆ ಓದಿದುದನ್ನು ಮತ್ತೆ ಓದಬೇಕಾಗಿಲ್ಲ. ಅವರು ಮಾತಾಡಲು ನಿಂತರೆ ಗಾಳಿಯಲ್ಲೇ ಹಾರಿ ಹೋಗುತ್ತಾರೆ. ಹಿಂದುಸ್ತಾನದಲ್ಲಿ ಭಾಷಣಕಾರರಲ್ಲಿ ಮದರಾಸಿನವರು ಬಹಳ ಚುರುಕು. ನಿಮಿಷಕ್ಕೆ ನೂರರ ಕೆಳಗೆ ಮಾತೇ ಇಲ್ಲ.

ಅವರಲ್ಲಿ ಇವರು ಮೊದಲಿಗರು. ಇವರ ವಿಷಯವೂ ಎಂಥದು. ಉದ್ವೇಗದಿಂದ ಆಡಬಹುದಾದ ದೇಶಭಕ್ತಿ ರಾಜಕಾರಣವಲ್ಲ. ಶಾಂತವಾಗಿ ಹೇಳಬೇಕಾದ ತತ್ವವಿಚಾರ. ಅವರ ಬಾಳು ಹಾಗೆಯೆ. ೧೮ ವರುಷಕ್ಕೆ ಪದವೀಧರ; ೨೧ ಕ್ಕೆ ಮಕ್ಕಳೊಂದಿಗ; ೩೦ ಕ್ಕೆ ತತ್ವಜ್ಞಾನಿಗಳಲ್ಲಿ ಶ್ರೇಷ್ಠ.

ಅವರ ಬದುಕಿನಲ್ಲಿ ಈ ಸೌರಭ ಅರಳೀತು ಎಂದು ಯಾರೂ ಎಣಿಸಿರಲಿಲ್ಲ. ಅವರಿಗೇ ಗೊತ್ತಿರಲಿಲ್ಲ. ಹುಟ್ಟಿದುದು ಚಿಕ್ಕದೊಂದು ಹಳ್ಳಿ. ಕಲಿತದ್ದು ಅಯ್ಯನವರ ಸಾಲೆಯಲ್ಲಿ. ಅವರ ತಂದೆ ಅಂಥ ಶ್ರೀಮಂತರಲ್ಲ. ಇವರಿಗೆ ಯಾವ ವಿಶೇಷ ಸೌಕರ್ಯಗಳನ್ನೂ ಒದಗಿಸಲಿಲ್ಲ. ಹೇಗೋ ಹಾಗೆ ಕಾಲೇಜಿಗೆ ಬಂದರು. ಅಲ್ಲಿಯು ತನಕ ಅಂಥ ವಿಶೇಷ ಪ್ರತಿಭೆಯೂ ಕಾಣಲಿಲ್ಲ. ಕಾಲೇಜಿಗೆ ಬಂದ ಮೇಲೆ ಆಚಾರ್ಯರು ನಡೆವುದನ್ನು ಬಿಟ್ಟು ಓಡತೊಡಗಿದರು. ಇಬ್ಬರು ಇಂಗ್ಲೀಷು ಜನ ಇವರಿಗೆ ಪ್ರಿನ್ಸಿಪಾಲರಾಗಿದ್ದರು. ಅವರ ಸಹಾಯ-ಬುದ್ಧಿವಾದ ಇವರಿಗೆ ಅದೃಷ್ಟದ ಬಾಗಿಲನ್ನು ತೆರೆಯಿತು. ಆದುದರಿಂದಲೇ ಇಂಗ್ಲೆಂಡಿನ ಬಗ್ಗೆ ಇವರಿಗೆ ಆದರ.

ಕಾಲೇಜಿನಲ್ಲಿ ಇವರು ವೇದಾಂತಶಾಸ್ತ್ರ ಕಲಿತುದೂ ಒಂದು ಯೋಗಾಯೋಗ. ಇವರ ಬಳಗದವ ಒಬ್ಬಾತ ವೇದಾಂತಶಾಸ್ತ್ರ ಓದುತ್ತಿದ್ದ. ಇವರು ಕಾಲೇಜಿಗೆ ಬಂದಾಗ ಆತ ತೇರ್ಗಡೆ ಆಗಿದ್ದ. ಆತನು ಪುಸ್ತಕ ಇವರಿಗೆ ಕೊಟ್ಟ, ಪುಕ್ಕಟೆ ಸಿಕ್ಕವಲ್ಲ ಪುಸ್ತಕ ಎಂದು ಇವರು ವೇದಾಂತಶಾಸ್ತ್ರ ತೆಗೆದುಕೊಂಡದ್ದು. ಆ ಬಳಗದಾತನೇ ನಿಮಿತ್ತವಾಗಿ ಇವರ ಬದುಕು ಈ ದಾರಿಯಲ್ಲಿ ಹರಿಯಿತು. ಅಂದು ಆ ಯೋಗ ಕಲೆತು ಬಾರದಿದ್ದರೆ ಏನು ಆಗುತ್ತಿತ್ತೋ ?

ಮನುಷ್ಯರಲ್ಲಿ ಎರಡು ತೆರ: ಭ್ರಷ್ಟ ಜಾತಕರು, ಅದೃಷ್ಟ ಜಾತಕರು ಎಂದು. ಭ್ರಷ್ಟರು ಹಿಡಿದಿದ್ದೆಲ್ಲ ಹುಸಿ. ಅದೃಷ್ಟ ಜಾತಕರು ಮಣ್ಣು ಹಿಡಿದರೂ ಬಂಗಾರ. ರಾಧಾಕೃಷ್ಣನ್‌ರದು ಎರಡನೆಯದು. ನಿಜವಾಗಿ ಇವರು ಅದೃಷ್ಟ ಜಾತಕ. ಇವರ ಹಿಂದಿನ ಪುಣ್ಯ ಇದುರಿಗೆ ನಿಂತು ಹೇಳಿ ಬರೆಯಿಸಿರಬೇಕು ಬ್ರಹ್ಮನಿಂದ. ಇಲ್ಲದಿದ್ದರೆ ಇವರು

ಮುಟ್ಟಿದ್ದೆಲ್ಲ ಬಂಗಾರ. ಹೂಡಿದ್ದೆಲ್ಲ ರಾಜಸೂಯ ಆಗುವುದು ಸಾಧ್ಯವೇ? ಕಾಲಿಟ್ಟ ಕಡೆ ಕಲ್ಲಿನಲ್ಲೂ ಜೀವಕೊನರಿಸುತ್ತಿದಾರೆ.

ರಾಜಕಾರಣವು ರಾಜಸಿಗಳಿಗೆ. ಮಧ್ಯಮ ಪುರುಷರಿಗೆ ಆ ಗೊಡವೆ ಏಕೆ ಎಂದು ಆಚಾರ್ಯರು ಅನ್ನುತ್ತಿದ್ದರು. ರಾಜಕೀಯದ ರಾಗ ದ್ವೇಷಗಳ ಸುಳಿಯಲ್ಲಿ ಬೀಳಬಾರದೆಂಬ ವಿವೇಕ ಅದು. ಆದರೆ ಗಾಂಧೀಜೀ ರಾಜ ಕಾರಣದಲ್ಲಿ ತೊಡಗಿದ ಮೇಲೆ ರಾಜಕಾರಣಕ್ಕೆ ಒಂದು ಕಳೆ ಬಂತು. ಅಹಿಂಸೆ ಅದರಲ್ಲಿ ನುಸುಳಿದ ಮೇಲೆ ಅದರಲ್ಲಿ ಒಂದು ನೈರ್ಮಲ್ಯ ಬಂತು. 'ಪೂರ್ಣ ಅಂಧಕಾರಾವೃತವಾದ ಜಗತ್ತಿನಲ್ಲಿ ಅಹಿಂಸೆ ಸ್ವರ್ಗತೇಜದ ಕಿರಣ' ಎಂದು ಅವರೇ ಅಂದರು. 'ಅದರ ಬೆಳಕು ಕಾಲದೇಶದಲ್ಲಿ ಆಳ ವಾಗಿ ಹರಡೀತು' ಎಂದರು. ಈಗೀಗ ರಾಜಕೀಯದ ಕಡೆ ಗಮನ ಕೊಡುತ್ತಿದಾರೆ. ಅದರಲ್ಲಿ ಒಂದು ನಿರ್ಭಯ ಇದೆ, ಸ್ವತಂತ್ರತೆ ಇದೆ.

ರಾಜಕಾರಣಕ್ಕೂ ಧರ್ಮಶಾಸ್ತ್ರಕ್ಕೂ ಗಂಟು ಇರಬಾರದೆ? ಮೊದಲು ಇರಲಿಲ್ಲವೆ? ವಸಿಷ್ಠನಿಂದ ವಿದ್ಯಾರಣ್ಯರ ವರೆಗೆ, ರಾಮದಾಸರ ತನಕ ಈ ಗಂಟು ಇರಲಿಲ್ಲವೆ? ಈಗಂತೂ ರಾಜಕಾರಣವು ತಾನೇ ತಾನಾಗಿ ಮಾನವ ಜೀವನದ ಎಲ್ಲ ಸಂದಿಗೊಂದಿಗಳಲ್ಲೂ ಸ್ವೇಚ್ಛೆಯಾಗಿ ಮೆರೆಯುತ್ತಿದೆ. ನೀತಿಯನ್ನು ಕಾಲಕೆಳಗೆ ತುಳಿದಿದೆ. ಧರ್ಮವು ಈಗ ಮುಂದೆ ಬಂದು ರಾಜಕಾರಣದ ಹೆಮ್ಮೆಯನ್ನು ಇಳಿಸಿ, ಅದನ್ನು ಅದರ ಸ್ಥಳಕ್ಕೆ ನೂಕಬೇಕಾಗಿದೆ. ಗಾಂಧೀಜೀ ಆ ಕೆಲಸ ಮಾಡುತ್ತಿದಾರೆ. ರಾಧಾಕೃಷ್ಣನ್ ಅದಕ್ಕೆ ಬೆಂಬಲವಾಗಬಲ್ಲರೇನು? ಆ ಧರ್ಮಸಂಸ್ಥಾಪ ನೆಯ ಕಾರ್ಯದಲ್ಲಿ ಇವರ ಜ್ಞಾನ ಅವರ ಯೋಗಕ್ಕೆ ನೆರವಾದೀತೇ!

ಗಾಂಧೀಜಿಯ ಬಗ್ಗೆ ಆಚಾರ್ಯರಿಗೆ ತುಂಬಾ ಆದರವಿದೆ. ಅವರ ೭೫ನೆಯ ಜಯಂತಿಗಾಗಿ ಒಂದು ಅಭೂತಪೂರ್ವವಾದ ಕಾಣಿಕೆಯನ್ನು ಒಪ್ಪಿಸಿದಾರೆ. ಅವರ ತೇಜಸ್ಸಿನ ಬೆಳಕನ್ನು ಇಡೀ ಜಗತ್ತಿಗೇ ಹರಡಿಸಲು ಪ್ರಯತ್ನ ಮಾಡಿದಾರೆ. ಆ ಒಲವಿನಲ್ಲಿ ಆಶಾಂಕುರವಿದೆ.

ಸೇವಾಗ್ರಾಮಕ್ಕೆ ಒಂದು ಸಲ ರಾಧಾಕೃಷ್ಣನ್ ಬಂದಿದ್ದರು. ಇಂಗ್ಲೆಂಡಿಗೆ ಹೋಗುವ ಮುನ್ನ ಮಹಾತ್ಮರ ಹರಕೆ ಪಡೆಯಲು ಬಂದಿ ದ್ದರು. 'ಗಾಂಧೀಜೀ, ನಾನು ಕಲಿಸುವ ಹಿಂದೂ ತತ್ವಶಾಸ್ತ್ರದ ಪ್ರತ್ಯಕ್ಷ

ಆಧಾರ ನೀವೇ. ಧರ್ಮನೀತಿಗಳೇ ನಿಮ್ಮ ಪರಮ ಪ್ರಮಾಣ. ಭಾರತದಲ್ಲಿ ದ್ರೌಪದಿ ಹೇಳುತ್ತಾಳೆ:

**ಕುಲೇ ಮಹತಿ ಜಾತಾಸ್ಮಿ ದಿವ್ಯೇನ ವಿಧಿನಾ ಕಿಲ ।**
**ಕೇಶಗ್ರಹ ಮನುಪ್ರಾಪ್ತಾ ಕಾನುಜೀವೇತ ಮಾದೃಶೀ ॥**

ಆದರೆ ದ್ರೌಪದಿಯ ದೃಢಭಕ್ತಿಗೆ ಗೆಲವಾಯಿತು. ನೀವು ತಳವೂರಿ ನಿಂತಿರುವ ತತ್ವಗಳ ಮೇಲೆಯೆ ನಾವೂ ನಿಂತರೆ ನಮಗೆ ಗತಿ. ನೀತಿ ನಿಷ್ಠೆಯೇ ಎಲ್ಲಕ್ಕಿಂತ ಹಿರಿದಾದ ಆಶ್ರಯ. ನಿಮ್ಮ ಧಾರ್ಮಿಕ ನೈತಿಕ ಜೀವನವೇ ನನ್ನ ಮಂತ್ರ. ಋಗ್ವೇದದಲ್ಲಿ ಹೇಳಿಲ್ಲವೆ!

**ಯದಾ ಪಶ್ಯಂತಿ ಸೂರಯಃ ತದ್ವಿಷ್ಣೋಃ ಪರಮಂ**
**ಪದಂ ದಿವೀವ ಚಕ್ಷುರಾತತಮ್—**

'ನಮ್ಮ ಬರಿಗಣ್ಣಿಗೆ ಸೂರ್ಯ ಕಾಣುವ ಹಾಗೆ ಋಷಿಗಳಿಗೆ ಸದಾ ವಿಷ್ಣುವಿನ ಪರಮಪದ ಕಾಣುತ್ತಿರುತ್ತಿದೆ.'

ಮಾನವ ಜೀವನದ ಶ್ರೇಷ್ಠತೆ–ಕೀರ್ತಿಯ ಅಳತೆಗೋಲು ಬದುಕಿನ ಆಳ, ಸಾಂಸ್ಕೃತಿಕ ಸೌರಭ. ಸಾಂಸ್ಕೃತಿಕವಲ್ಲದ್ದು ಬಹಳ ದಿನ ಬಾಳಲಾರದು. ರಣರಂಗದ ಕಲಿತನ, ಐಶ್ವರ್ಯದ ಹೆಚ್ಚಳ–ಯಾವುದೂ ನೆನಪುಳಿಯದು. ಆತ್ಮದ ಸೌರಭವೇ ಕಡೆತನಕ ಬಾಳೀತು.

ಈ ಅಳತೆ ಗೋಲಿಗೆ ಆಚಾರ್ಯ ರಾಧಾಕೃಷ್ಣನ್ ಸಿಕ್ಕಾರು ಎಂಬ ಸಂದೇಹವಿಲ್ಲ. ಆ ಸಂಸ್ಕೃತಿಯ ಗುಣವೇ ಅಂಥದು.



# ಕಿಶೋರಿಲಾಲ ಮಶ್ರೂವಾಲಾ

•

'**ಸಂಘಂ ಶರಣಂ ಗಚ್ಛಾಮಿ**' ಎಂಬ ಮಂತ್ರವನ್ನು ತನ್ನ ಅನುಯಾಯಿಗಳಿಗೆ ಪಾಠುಮಾಡಿಸುತ್ತಿದ್ದಾಗ ಭಗವಾನ್ ಬುದ್ಧದೇವನು ಜಗತ್ತಿಗೇ ಒಂದು ಬೆಳಕನ್ನು ತೋರಿದ. ಬೌದ್ಧರಿಗೆ ಬುದ್ಧನೆ ಭಗವಂತ· ಬುದ್ಧನನ್ನೂ ಸತ್ಯವನ್ನೂ ಶರಣುಹೋಗಬಹುದು. ಆದರೆ ಸಂಘವನ್ನು ಮರೆತರೆ ಆವೆರಡೂ ನಿರುಪಯೋಗವಾದಾವು. ಸತ್ಯವೇ ಆಗಲಿ ಒಂದು ಸಂಘಟಿತ ಸ್ವರೂಪ, ಒಂದು ಕ್ರಮ ವ್ಯವಸ್ಥೆ ಇರದೆ ಇದ್ದರೆ ಅದು ಬೆಳೆಯು ಲಾರದು. ಬೆಳೆದರೂ ಅದರ ಪರಿಣಾಮ ಕಾಡಿನಲ್ಲಿ ಚೆಲ್ಲಿದ ಬೆಳುದಿಂಗಳ ಹಾಗೆ.

ಈ ಮಾತನ್ನು ವ್ಯಾಸ ಮಹರ್ಷಿಯು ತಿಳಿಸಿದಷ್ಟು ಮೊನೆಯಾಗಿ ಹರಿತವಾಗಿ ಯಾರೂ ತಿಳಿಸಿಲ್ಲ. ವೇದದ ಕಡಲಲ್ಲಿ ಮುಳುಗಿ ತೇಲಿ ಅದ ನ್ನೆಲ್ಲ ಸರಿಯಾಗಿ ವಿಂಗಡಿಸಿ, ಸಮನಿಸಿ ಇಟ್ಟ ಮಹಾನುಭಾವ. ಧರ್ಮ ವನ್ನು ಬುಡದಿಂದ ಕೊನೆಯುವರೆಗೆ ಪರಿಶೋಧಿಸಿ ಕಂಡುಹಿಡಿದ ಮಹಾ ಸಾಹಸಿ. ಸಮಾಜದ ಆಳ-ಎತ್ತರಗಳನ್ನೂ ಇರುಕು-ಅಗಲುಗಳನ್ನೂ ಅಳೆದು ನೋಡಿದ ಅನುಭವಶಾಲಿ. ಪಂಚಮ ವೇದವನ್ನೇ ಹೇಳಿದ. ಗೀತೆ ಯನ್ನೇ ಜಗತ್ತಿನ ಮುಂದೆ ಇಟ್ಟ. ಪುರಾಣಗಳನ್ನೇ ಉಪದೇಶಿಸಿದ. ಹಿಂದೂ ಧರ್ಮಕ್ಕೆ ವ್ಯಾಸಮಹರ್ಷಿ ಮಾಡಿದ ಉಪಕಾರ ಸಾಟಿ ಇಲ್ಲ ದುದು. ಅಂಥ ಅದ್ಭುತಜೀವ ಜಗತ್ತಿನಲ್ಲಿ ಬೇರೆಲ್ಲಿಯೂ ಹುಟ್ಟಿಲ್ಲ.

ಮತ್ತೆ ಇಲ್ಲೇ ಹುಟ್ಟುವ ನಂಬಿಗೆ ಸಾಲದು. ವ್ಯಾಸ ಪ್ರೋಕ್ತವಲ್ಲದುದು ಏನಿದೆ ಹಿಂದೂ ಧರ್ಮದಲ್ಲಿ? ಆ ಕೈವಾಡಕ್ಕೆ ಹೊರತಾದದ್ದು ಏನಿದೆ ಈ ಸಂಸ್ಕೃತಿಯಲ್ಲಿ?

ಅಂತಹ ವ್ಯಾಸರೂ ಕೊನೆಯ ದಿನಗಳಲ್ಲಿ ಗೋಳಾಡುತ್ತ ಹೇಳಿದರು;

ಊರ್ಧ್ವ ಬಾಹುರ್ವಿರೌಮ್ಯೇಷ ನ ಚ ಕಶ್ಚಿಚ್ಛೃಣೋತಿ ಮೇ।
ಧರ್ಮಾದರ್ಥಶ್ಚ ಕಾಮಶ್ಚ ಸ ಧರ್ಮಃ ಕಿಂ ನ ಸೇವ್ಯತೇ॥

ನಾನು ಇಷ್ಟು ಸಾರಿಸಾರಿ ಕೈಯೆತ್ತಿ ಹೇಳುತ್ತಿದ್ದರೂ ಕೇಳುವವರೇ ಇಲ್ಲವಲ್ಲಾ. ಧರ್ಮವು ಅರ್ಥವನ್ನೂ ಕಾಮವನ್ನೂ ಕೊಡುತ್ತದೆ. ಯಾಕೆ ನೀವು ಧರ್ಮವನ್ನೂ ಅನುಸರಿಸಬಾರದು? ಆದರೆ ಯಾರೂ ಆ ಹಾದಿ ತುಳಿಯರು. ಏಕೆ ಹೀಗೆ?

ಅರ್ಥಬಲಕ್ಕೆ ಅಂಗಬಲಬೇಕು. ಇವೆರಡಕ್ಕೂ ಒಂದು ಶಿಸ್ತು-ಸಂಘಟನೆ ಬೇಕು. ದೇವರಿಗೇ ಆದರೂ ಒಂದು ರೂಪಬೇಕು. ರೂಪ ವಿಲ್ಲದ ನಿರಾಕಾರನಾದ ದೇವರು ಜನರ ಮನಸ್ಸಿನಲ್ಲಿ ನಿಲ್ಲಲಾರ. ಹೊಗೆ ಯಂತೆ ತೆಳ್ಳಗಾಗಿ ತಿಳಿಯಾಗಿ ಹೋಗುತ್ತಾನೆ. ಈ ನಿಯಮ ನಾವು ರೂಪದ ಈ ಜಗತ್ತಿನಲ್ಲಿ ಎಲ್ಲಕ್ಕೂ ಇದೆ. ಸತ್ಯಕ್ಕೇ ಆಗಲಿ ಧರ್ಮಕ್ಕೇ ಆಗಲಿ ಮಿಂಚಿನಂತೆ ಯಾವಾಗಲಾದರೂ ಹೊಳೆದು ಹೋಗುವ ರೂಪು ಸಾಲದು. ಆ ಜೀವಕ್ಕೆ ಒಂದು ಮೈಬೇಕು. ಬುದ್ಧ ದೇವನಿಗಿಂತ ಮೊದಲು ಈ ಮಾತು. ಧರ್ಮದ ಅಂಗಳದಲ್ಲಿ ಯಾರಿಗಾದರೋ ಒಪ್ಪಿಗೆ ಆಗಿತ್ತೋ ಇಲ್ಲವೋ ತಿಳಿದಿಲ್ಲ; ಬುದ್ಧನ ಕಾಲದಲ್ಲಿ ಈ ಮಾತಿನ ಅನುಭವ ಬರಿಯ ಶಾಸ್ತ್ರವಾಗಿ ಉಳಿಯಲಿಲ್ಲ. ಅರ್ಥಜಗತ್ತಿಗೇ ಜ್ಞಾನದೀಕ್ಷೆ ಕೊಟ್ಟು ಹೊಸತೊಂದು. ಬೆಳಕನ್ನು ಸಂಸ್ಕೃತಿಯಲ್ಲಿ ಬೆರೆಯಿಸಿದ ಬೌದ್ಧ ಭಿಕ್ಷು ಸಂಘವಾಗಿ ರೂಪುಗೊಂಡಿತು.

ಬುದ್ಧದೇವನ ತರುವಾಯ ಹುಟ್ಟಿದ ಯಾವ ಮುಂದಾಳೂ ಆ ಸೂತ್ರವನ್ನು ಮರೆತಿಲ್ಲ. ಸಂಘ ಶಕ್ತಿಯ ಬಲವನ್ನು ಯಾರೂ ಅಸಡ್ಡೆ ಮಾಡಿಲ್ಲ. ದ್ವೈತಾದ್ವೈತ ವಿಶಿಷ್ಟಾದ್ವೈತಗಳೇನು, ಸಾಮ್ಯವಾದ ರಾಷ್ಟ್ರವಾದಗಳೇನು ಎಲ್ಲವೂ ಸಂಘವನ್ನು ಶರಣುಹೋಗಿವೆ. ತಮ್ಮ

ತಮ್ಮ ಕೋಟೆಕೊತ್ತಳಗಳನ್ನು ಕಟ್ಟಿಕೊಂಡಿವೆ. ಧರ್ಮ-ಸಂಸ್ಥಾಪನೆಯಾಗಲಿ ರಾಷ್ಟ್ರನಿರ್ಮಾಣವಾಗಲಿ ಲೋಕಸಂಗ್ರಹವಿಲ್ಲದೆ ಆಗದು. ಲೋಕಸಂಗ್ರಹಕ್ಕೆ ಸಮಾಜದಲ್ಲಿ ಸಂಘಟನೆ ಬೇಕು.

ಗಾಂಧಿಜೀ ಈ ನೀತಿಯನ್ನು ಚೆನ್ನಾಗಿ ಬಲ್ಲರು. ಕೈಯಲ್ಲಿ ಕತ್ತಿಯನ್ನು ಹಿಡಿದು ಜನರನ್ನೆಲ್ಲ ಒಂದು ಮುಂದೆಯಾಗಿ ಸೇರಿಸುವ ಬಲವು ಒಂದು ಚಾತುರ್ಯವಲ್ಲ. ಸುಖ-ಭೋಗಗಳಿಗೆ ಹಾದಿ ಮಾಡಿ ತಮ್ಮ ಪಕ್ಷ ಬೆಳೆಯಿಸುವುದೂ ವಿಶೇಷವಲ್ಲ. ತ್ಯಾಗ-ಸೇವೆಗಳ ಕಂಟಕ ಕಿರೀಟವನ್ನು ಕೈಯಲ್ಲಿ ಹಿಡಿದು ಕೇವಲ ಬಿನ್ನಹ ತರ್ಕಗಳಿಂದ ಕೋಟಿಗಟ್ಟಲೆ ಜನರನ್ನು ಒಂದು ನಿಯಮ-ಶಿಸ್ತು, ಒಂದು ವ್ಯವಸ್ಥಿತವಾದ ಆಡಳಿತಕ್ಕೆ ಒಳಪಡಿಸಿಕೊಳ್ಳುವುದು ಗಾಂಧೀಜಿಗೆ ವಿನಾ ಬೇರೆ ಯಾರಿಗೂ ಸಾಧ್ಯವಲ್ಲ.

ತಮ್ಮ ಸತ್ಯಾಗ್ರಹ ಸಿದ್ಧಾಂತವನ್ನು ಬಿತ್ತಲೂ ಹರಡಲೂ ಗಾಂಧೀಜಿ ಹಲವು ಬಗೆಯ ಸಾಧನೆಗಳನ್ನು ಉಪಯೋಗ ಮಾಡಿದ್ದಾರೆ. ಅವರ ದರ್ಶನ ಬಹಳ ವ್ಯಾಪಕವಾದುದು. ಇಡಿಯ ಜೀವನವನ್ನೇ ಕವಿದುಕೊಳ್ಳುತ್ತದೆ. ಬರಿಯ ರಾಜಕಾರಣದ ಕಾಂಗ್ರೆಸ್ ಅವರಿಗೆ ಸಾಲಲಿಲ್ಲ. ಖಾದೀ ಕೇಂದ್ರಗಳನ್ನು ಹೂಡಿದರು. ಆಶ್ರಮಗಳನ್ನು ಸ್ಥಾಪಿಸಿದರು. ಹರಿಜನ ಸೇವಕ ಸಂಘವನ್ನು ಕಟ್ಟಿದರು. ಪತ್ರಿಕೆಯನ್ನು ಹಿಡಿದರು. ರಾಷ್ಟ್ರೀಯ ಶಾಂತಿ ವಿದ್ಯಾಪೀಠಗಳನ್ನು ನಿರ್ಮಿಸಿದರು. ಗ್ರಾಮೋದ್ಯೋಗ ಸಂಘವನ್ನು ನೆಲೆಗೊಳಿಸಿದರು. ಇವೆಲ್ಲದರ ಜೀವಾಳವಾಗಿ ಗಾಂಧೀ ಸೇವಾ ಸಂಘ ರೂಪುಗೊಂಡಿತು. ಅದೇ ಗಾಂಧೀಜಿಯ ಸತ್ಯ ಅಹಿಂಸೆಗಳ ಸತ್ಯಾಗ್ರಹದ ಗುಡಿಯನ್ನು ಹಿಡಿದು ನಿಂತ ಗಾಂಧೀ ಸೇನೆ.

ಆ ಸೇನೆಯ ಅಲಗು-ಅದರ ಮೊದಲಾಳು **ಕಿಶೋರಿಲಾಲ ಮಶ್ರೂವಾಲಾ.** ಅವರೇ ಅದರ ಧ್ವಜಧಾರಿ. ಎಂದೂ ಆ ಬಾವುಟವನ್ನು ಅವರು ಕೆಳಗೆ ಇಳಿಸಿಲ್ಲ. 'ಪ್ರಾಪ್ಯವರಾನ್ನಿಬೋಧತ' ಎಂಬ ಶ್ರುತಿಯನ್ನು ನಂಬಿ, ತಡೆ-ಬಿಡುವು ಇಲ್ಲದೆ ಆ ಗುಡಿಯನ್ನು ಹೊತ್ತು ಸಾಗಿದ್ದಾರೆ.

ಕಿಶೋರಿಲಾಲರನ್ನೂ ಗಾಂಧೀ ಸೇವಾ ಸಂಘವನ್ನೂ ನೆನೆದರೆ ಒಂದು ಚಿತ್ರ ಕಣ್ಣಿಗೆ ಕಟ್ಟಿ ನಿಲ್ಲುತ್ತದೆ. ಟೆನಿಸನ್ ಕವಿಯ

and tho'......

We are not now that strength which in old days
Moved earth and heaven; that which we are, we are;
One equal Temper of heroic hearts,
Made weak by time and fate, but strong in will
To strive, to seek, to find and not to yield.

ಎಂಬ ಸಾಲುಗಳು ನೆನಪಿಗೆ ಬರುತ್ತವೆ.

ಮಹಾಯುದ್ಧವು ಮೊದಲಾದ ಮೇಲೆ ಗಾಂಧೀಜಿಯ ಶಿಷ್ಯರಲ್ಲಿ— ಗಾಂಧೀಸೇವಾಸಂಘದ ಸದಸ್ಯರಲ್ಲಿ ಕೂಡ—'ಅಹಿಂಸೆಯು ಅಂತಿಮ ಸತ್ಯವೇ;' 'ಧರ್ಮ್ಯವಾದ ಹಿಂಸೆಗೂ ಸ್ಥಾನ ಇಲ್ಲವೇ?' ಎಂಬ ಸಂದೇಹ ಬಂದಿದೆ. ಗಾಂಧೀವಾದಗಳಲ್ಲಿ ಪ್ರಮುಖರೆನಿಸಿದ್ದವರು ಕೂಡ ತಮಗಾಗಿಯೋ, ತಮ್ಮ ಅನುಯಾಯಿಗಳಿಗಾಗಿಯೋ, ಅಹಿಂಸೆಯು ಪರಧರ್ಮವಾದರೂ ಸರ್ವಕಾಲದ ಸರ್ವಪ್ರದೇಶದ ಧರ್ಮವಲ್ಲ ಎಂದು ಬಿಟ್ಟರು. ಅವರಲ್ಲಿ ಬುದ್ಧಿವಂತರಾದವರು ಧರ್ಮ್ಯಹಿಂಸೆ ಅಹಿಂಸೆಯೇ ಎಂದರು. ಇದೆಲ್ಲವನ್ನು ನೋಡಿ ಗಾಂಧೀಜಿ 'ಒಂಟಿಯಾದರೂ ನನ್ನ ದಾರಿ ಬಿಡಲಾರೆ. ಒಂದೇ ನೇಗಿಲಾದರೂ ಚಿಂತೆಯಿಲ್ಲ ನಾನು ಉಳುವೆ' ಎಂದರು. ಕಿಶೋರಲಾಲರು ಅಂತಹ ಹೊತ್ತಿನಲ್ಲಿ ಗಾಂಧೀ ಧರ್ಮದ ಗುಡಿಯನ್ನು ಕೆಳಗೆ ಇಳಿಸಲಿಲ್ಲ.

ಈ ವರ್ಷ ಕಿಶೋರಿಲಾಲರು ಗಾಂಧೀ ಸೇವಾ ಸಂಘದ ಸಮಿತಿಯ ಸದಸ್ಯರು. ಅಧ್ಯಕ್ಷರು ಬೇರೆ. ಆದರೂ ಇವರೇ ಅದರ ಜೀವಾಳ. ಕಳೆದ ಐದು ವರ್ಷಗಳಿಂದಲೂ ಅದರ ಅಧ್ಯಕ್ಷರಾಗಿದ್ದವರು ಇವರೇ. ಈ ಐದು ವರ್ಷಗಳಲ್ಲಿ ಸಂಘವು ಅನೇಕ ಮಹತ್ವದ ಮಾತುಗಳನ್ನು ಆಲೋಚಿಸಿ ನಿರ್ಣಯಮಾಡಿದೆ. ಸತ್ಯಶೋಧಕರ ಈ ಗುಂಪಿನಲ್ಲಿ ರಾಜಕಾರಣದ ಪ್ರಭಾವ ಬಹಳ ಬೆಳೆದಿತ್ತು. ರಾಜಕೀಯ ನಾಯಕರೇ ಇಲ್ಲಿಯೂ ಮುಂದಾಳುಗಳಾಗಿ ಇದ್ದರು. ಕಿಶೋರಿಲಾಲರ ಶುದ್ಧ ಜೀವಕ್ಕೆ ಈ

ಕಲಬೆರಕೆಯ ಸೊಪ್ಪು ನಿರುಪಯೋಗ ಎನಿಸಿತು. ಮೊದಲು ಮಂತ್ರಿಗಳು, ಶಾಸನಸಭೆಯ ಸದಸ್ಯರು, ಕೊನೆಗೆ ರಾಜಕೀಯ ನಾಯಕರು— ಒಂದೊಂದು ಹೆಜ್ಜೆಯಂತೆ ಎಲ್ಲರನ್ನೂ ಗಾಂಧಿ ಸೇವಾಸಂಘದಿಂದ ದೂರ ಮಾಡಿ, ಆ ಗುಂಪೀ ಸತ್ಯವನ್ನು ಕಾಯ್ದುಕೊಳ್ಳಲು ಯತ್ನಮಾಡಿದರು. ಸತ್ಯಸಾಧನೆಯಲ್ಲಿ ಗಾಂಧೀಜಿಯಲ್ಲಿ ಇದ್ದಷ್ಟೇ ನಿಷ್ಠುರವೃತ್ತಿ ಇವರದು. ಗಾಂಧೀ ಸೇವಾ ಸಂಘವನ್ನೇ ಮುರಿಯದೆ ಗಾಂಧೀಧರ್ಮ ಉಳಿಯದು ಎಂದು ಇವರಿಗೆ ಅನಿಸಿದೊಡನೆ, ಆ ತ್ಯಾಗಕ್ಕೂ ಸಿದ್ಧರಾದರು. ಸತ್ಯಕ್ಕಾಗಿ ಯಾವ ತ್ಯಾಗವಾದರೇನು ?

ಇವರು ಗುಜರಾತಿ ಜನ. ವೈಶ್ಯ ವರ್ಣ. ಆದರೆ ಮಹಾರಾಷ್ಟ್ರದಲ್ಲಿ ಹುಟ್ಟಿ ಬೆಳೆದಿದ್ದಾರೆ. ಆ ಪ್ರಾಂತದ ವಿವೇಕ ಈ ಪ್ರಾಂತದ ದಾರ್ಢ್ಯ ಎರಡೂ ಇವರಿಗೆ ಲಭಿಸಿವೆ. **ಬಿಹಾರಪ್ರಾಂತದ ಅಕೋಲಾದವರು.** ಅಲ್ಲಿ ವಕೀಲರಾಗಿದ್ದರು. ಗಾಂಧೀಜಿಯ ಕಹಳೆಯ ಧ್ವನಿಗೆ ಓಗೊಟ್ಟು ವಕೀಲಿಯನ್ನು ಬಿಟ್ಟು ಸಾಬರಮತಿಯ ಕಡೆಗೆ ಓಡಿದರು. ಅಲ್ಲಿಂದ ಮುಂದೆ ಇವರಿಬ್ಬರ ನಿಕಟ ಸಂಬಂಧ ಬೆಳೆಯಿತು.

ಕಿಶೋರಿ ಲಾಲರಿಗೆ ಶಿಕ್ಷಣ, ತತ್ವಶಾಸ್ತ್ರಗಳಲ್ಲಿ ರುಚಿ ಹೆಚ್ಚು. ಯಾವ ವಿಷಯವನ್ನೇ ಆಗಲಿ ಸೂಕ್ಷ್ಮವಾಗಿ ಪರಿಶೀಲಿಸಿ, ಆಳವಾಗಿ ವಿಂಗಡಿಸಿ ನೋಡುತ್ತಾರೆ. ತರ್ಕದ ಹಿಡಿತ ಚೆನ್ನಾಗಿದೆ. ಜೀವನದಲ್ಲಿ ಸಂಭವಿಸುವ ಕೃತಿಗಳನ್ನು ತತ್ವದ ಒರೆಗೆ ಹಚ್ಚಿ ನೋಡುವುದರಲ್ಲಿ ನಿಪುಣರು. ಪ್ರವೃತ್ತಿ ಆಧ್ಯಾತ್ಮಿಕ, ಸ್ವಭಾವ ಸೂಕ್ಷ್ಮ, ಮಾತಿನಲ್ಲಿ ಸ್ಪಷ್ಟ ಭಾಷೆ, ಇವರು ವಿಚಾರ ಮಾಡುವ ಹಾದಿ ತೀರಾ ಸ್ವತಂತ್ರವಾದುದು. ಹೀಗಾಗಿ ಅನೇಕ ಸಲ ಇವರ ವಿಮರ್ಶೆ ಟೀಕೆ ಬಹಳ ಕಟುವಾಗಿ ಕಾಣ ಬರುತ್ತದೆ. ಗಾಂಧೀಜಿಯ ಸಿದ್ಧಾಂತಗಳನ್ನು ಪೂರ್ಣವಾಗಿ ಗ್ರಹಿಸಿದ ವರು ಹಿಂದುಸ್ಥಾನದಲ್ಲಿ ಬಹಳೇ ಸ್ವಲ್ಪ ಜನ. ಕಿಶೋರಿಲಾಲರು ಅವರಲ್ಲಿ ಮುಖ್ಯರಾದ ಒಬ್ಬರು ಅಂತೇ ೧೯೩೪ ರಲ್ಲಿ ಗಾಂಧೀ ಸೇವಾ ಸಂಘವು ಈಗಿನ ರೂಪಕ್ಕೆ ಬಂದಾಗ ಗಾಂಧೀಜೀ ಇವರನ್ನು ಅದಕ್ಕೆ ಅಧ್ಯಕ್ಷ ರಾಗಿರಲು ಆರಿಸಿದರು. ಅಂದಿನಿಂದ ಕಿಶೋರಿಲಾಲರು ವರ್ಧಾದಲ್ಲೇ ಇದ್ದಾರೆ.

ಕಾಂಗ್ರೆಸ್ಸಿನ ವ್ಯವಹಾರದಲ್ಲಿ ಇವರು ಹೆಚ್ಚು ಪ್ರವೇಶಿಸುವುದಿಲ್ಲ. ಆದರೂ ಬೊಂಬಾಯಿ ಕಾಂಗ್ರೆಸ್ಸಿನಲ್ಲಿ ಕಾಂಗ್ರೆಸ್ಸಿನ ರಚನೆ, ಘಟನೆಗಳಲ್ಲಿ ಮಾಡಲ್ಪಟ್ಟ ದೂರವ್ಯಾಪಿಯಾದ ಬದಲಾವಣೆಗಳಿಗೆ ಇವರು ಕಾರಣರು. ಗಾಂಧೀಜಿಯೊಡನೆ ಅನೇಕ ಸಲ ಧೈರ್ಯವಾಗಿ ಸ್ಪಷ್ಟವಾಗಿ ವಾದಿಸಿ ತಮ್ಮ ಭಿನ್ನಾಭಿಪ್ರಾಯವನ್ನು ತೋರಿಸಿದಾರೆ. ಇವರಿಬ್ಬರಲ್ಲಿ ತಾತ್ವಿಕ ಮತಭೇದವಾದಾಗ ಕಿಶೋರಿಲಾಲರಿಗೇ ಜಯವಾಗುವುದು ಹೆಚ್ಚು ಸಲ. ಇವರದು ಸಿದ್ಧಾಂತದ ಅಸಿಧಾರೆ. ಗಾಂಧೀಜಿಯದು ವ್ಯವಹಾರದ ಸಮನ್ವಯ. ವ್ಯವಹಾರಕ್ಕಾಗಿ ಆದರ್ಶವನ್ನು ಮಸಕು ಮಾಡಿದರೆ ಬೆರಳು ಕೊಟ್ಟು ಕೈನುಂಗಿಸಿಕೊಂಡಂತೆ ಎಂದು ಸಂಘದ ಅಧ್ಯಕ್ಷರ ದೃಷ್ಟಿ. ಸಂಘದ ಸದಸ್ಯರು ರಾಜಕೀಯ ಶಾಸನಸಭೆಗಳಲ್ಲಿರಬೇಕೋ ಬೇಡವೋ ಎಂಬ ಪ್ರಶ್ನೆ ಮೇಲೆ ಹೇಳಿದ ರೀತಿಯಲ್ಲಿ ತೀರ್ಮಾನವಾಗಲು ಕಿಶೋರಿಲಾಲರ ಆದರ್ಶವಾದಿತ್ವವೇ ಕಾರಣ.

ಕಿಶೋರಿಲಾಲರು ಗುಜರಾತಿಗೆ ಹೋದಮೇಲೆ ಗುಜರಾಥ ವಿದ್ಯಾಪೀಠದ ರೆಜಿಸ್ಟ್ರಾರರಾಗಿದ್ದರು. ಸತ್ಯಾಗ್ರಹದ ಬೇಗೆಯಲ್ಲಿ ಇವರೂ ಕಾರಾಗಾರ ಕಂಡಿದಾರೆ. ಒಂದು ಸಲ ಇವರೂ ಸರದಾರರೂ ಒಟ್ಟಿಗೆ ಸೆರೆಯಲ್ಲಿದ್ದರು. ಇವರ ಮೈ ಹುಟ್ಟಾ ದುರ್ಬಲವಾದುದು. ಇವರ ಮನೆತನದಲ್ಲೇ ಶ್ವಾಸರೋಗ ಹುಟ್ಟಿ ಬಂದಿದೆ. ಸೆರೆಮನೆಯಲ್ಲಿ ಆರೋಗ್ಯ ಮತ್ತೂ ಕೆಟ್ಟು ಹೋಯಿತು. ನೋಡಲು ಕಡ್ಡಿಯಂತೆ ಸೀರಲು, ಬರಗಾಲದ ಕಂಗಾಲರಂತೆ ಕಾಣುತ್ತಾರೆ. ಆದರೆ, ಈ ನಿರ್ಬಲ ದೇಹದಲ್ಲಿ ಅಡಗಿರುವ ಜೀವ ಮಾತ್ರ ಅಜೇಯವಾದುದು, ಅದಮನೀಯವಾದುದು.

ಕಿಶೋರಿಲಾಲರ ಬಾಳಿನಲ್ಲಿ ಈ ಅಮರಜ್ಯೋತಿಯನ್ನು ಬೆಳಗಿಸಿದ ಹಣತೆಗಳು ಅವರ ಸತ್ಯಪ್ರೇಮ, ಬ್ರಹ್ಮಚರ್ಯ. ಸತ್ಯವಾಡುವುದು ಇವರಿಗೊಂದು ವ್ರತ ಎನ್ನುವುದಕ್ಕಿಂತ ಹಟ ಎನ್ನುವುದು ಸರಿ. ಇದರ ಜೊತೆಯಲ್ಲೇ ಅಸತ್ಯದ ಬಗ್ಗೆ ಅಸಹನೆಯೂ ಬೆಳೆದು ಬಂದಿದೆ. ಸುಳ್ಳು ಕಪಟಗಳು ಇವರಿಗೆ ಸೇರುವುದಿಲ್ಲ. ಇಲಿ, ಬೆಕ್ಕಿನ ನ್ಯಾಯ ಅದು. ಗಿರಾಕಿ ತಂದುಕೊಟ್ಟ ನಾಣ್ಯದಲ್ಲಿ ಒಂದೇ ಖೋಟಾ ನಾಣ್ಯವಿದ್ದರೂ ಆ ಹಣವೆಲ್ಲಾ ತಳ್ಳಿ ಬಿಡುವ ಕೋಮಟಿಯಂತೆ ಇವರು. ೧೯೩೨ ರ

ಸತ್ಯಾಗ್ರಹದಲ್ಲಿ ವ್ಯೂಹರಚನೆ ಗುಪ್ತವಾಗಿತ್ತು. ಸರಕಾರಕ್ಕೆ ಸ್ವಲ್ಪವೂ ತಿಳಿಯಗೊಡದಂತೆ ಎಲ್ಲವೂ ಗುಟ್ಟಾಗಿ ನಡೆಸಲ್ಪಟ್ಟಿತು. ಮುಂದೆ ಗಾಂಧೀಜಿ ಈ ಗುಟ್ಟಿನ ಪದ್ಧತಿಯನ್ನು ಬಹಳ ನಿಂದಿಸಿದರು. ಸತ್ಯಾಗ್ರಹ ದಲ್ಲಿ ಇಂಥ ಗುಟ್ಟಿನ ವ್ಯವಹಾರವು ಪಾಪ ಎಂದರು. ಇದಕ್ಕೆಲ್ಲ ಕಿಶೋರಿ ಲಾಲರ ಸತ್ಯಪ್ರೇಮವು ಕಾರಣ.

ಇವರ ಬ್ರಹ್ಮಚರ್ಯ ಆದರ್ಶದ ಜಾತಿಯದು. ಇವರಿಗೆ ಮೊದಲೇ ಮದುವೆಯಾಗಿತ್ತು. ಸಾಬರಮತಿಯ ಗಾಳಿ ಕುಡಿದ ಮೇಲೆ ಬ್ರಹ್ಮ ಚರ್ಯದಲ್ಲಿ ಇವರಿಗೆ ಶ್ರದ್ಧೆ ಉಂಟಾಯಿತು. ಅಂದಿನಿಂದ ಗಂಡಹೆಂಡರಿಬ್ಬರೂ ಬ್ರಹ್ಮಚಾರಿಗಳಾಗೇ ಇದಾರೆ. ಸುಳ್ಳು ಹೇಳದವರು, ಧರ್ಮವಾಗಿಯೇ ನಡೆಯುವವರು ಸಿಕ್ಕಾರು. ಆದರೆ ಇಂದ್ರಿಯ ಸಂಯಮದಲ್ಲಿ ತೇರ್ಗಡೆ ಹೊಂದುವವರು ಅತಿ ವಿರಳ.

ಕಿಶೋರಿಲಾಲರು ಆ ಹಾದಿಯಲ್ಲಿ ನಡೆದಿದಾರೆ.



# ಸರದಾರ ವಲ್ಲಭಭಾಯಿ

•

'ರಾಜಾಜಿ ಗೆದ್ದುಕೊಂಡ ಜನರಲ್ಲಿ ಸರದಾರರು ಅತ್ಯಮೂಲ್ಯವಾದ ಬೇಟೆ'—ಎಂದು ಗಾಂಧೀಜಿ ಮೊನ್ನೆ ಮೊನ್ನೆ ಹರಿಜನದಲ್ಲಿ ಬರೆದರು. ರಾಜಗೋಪಾಲಾಚಾರ್ಯರಿಗೂ ಗಾಂಧೀಜಿಗೂ ಅಹಿಂಸೆಯ ರಾಜಕೀಯ ಸ್ವರೂಪದ ಬಗ್ಗೆ ಅಭಿಪ್ರಾಯ ಭೇದವಾದಾಗ ಕಾಂಗ್ರೆಸ್ಸಿನ ಮುಂದಾಳುಗಳ ನಡುವೆ ಅದೊಂದು ಬಲವಾದ ಹಗ್ಗದೆಳೆದಾಟವೇ ಆಯಿತು. ವರ್ಕಿಂಗ್ ಕಮಿಟಿಯಲ್ಲೇ ಎರಡು ತಂಡಗಳಾದವು. ನಾಲ್ಕು ಗಳಿಗೆ ಗಾಂಧೀಜಿ ಕಾಂಗ್ರೆಸ್ಸಿನ ಪರಲು ಹರಿದುಕೊಂಡರು. ಈ ಇಪ್ಪತ್ತು ವರ್ಷದ ನಿರಂತರ ಪರಿಶ್ರಮವೆಲ್ಲ ಬೂದಿಯಲ್ಲಿ ಮಾಡಿದ ಹೋಮವಾಯಿತೇನೋ ಎನಿಸಿತು. ಅಂಥ ಗಾಢವಾದ ನೋವಿನ ಹೊತ್ತಿನಲ್ಲಿ ಗಾಂಧೀಜಿ ಬರೆದ ವಾಕ್ಯ ಅದು. ರಾಜಗೋಪಾಲಾಚಾರ್ಯರಂತೂ ಪ್ರತ್ಯಕ್ಷವಾಗಿ ಇದಿರು ನಿಂತರು. ಅವರು ನಿಂತರೆ ನಿಲ್ಲಲಿ ಎಂದರೆ ಸರದಾರರನ್ನೂ ತಮ್ಮ ಕಡೆ ಸೆಳೆದುಕೊಂಡು ಬಿಟ್ಟರಲ್ಲ!

ಗಾಂಧೀಜಿಗೆ ಸರದಾರರೆಂದರೆ ಪ್ರಾಣ. ಅವರ ಬಗ್ಗೆ ಗಾಂಧೀಜಿಗೆ ಅಷ್ಟು ಬೆಲೆ, ಅಭಿಮಾನ. ಅದನ್ನು ಹತ್ತಾರು ಸಲ ಅವರು ಆಡಿತೋರಿಸಿದಾರೆ. ಸರದಾರರ ಬಗ್ಗೆ ಸಾವಿರ ದೂರು ಬಂದಿವೆ. ಸರದಾರರನ್ನು ಕೆಳಗೆಳೆಯಲು ಕಾಂಗ್ರೆಸ್ಸಿನಲ್ಲಿ ಬಹಳ ಪ್ರಯತ್ನ ನಡೆದಿವೆ. ಗಾಂಧೀಜಿಯದು ಅದಕ್ಕೆಲ್ಲ ಒಂದೇ ಉತ್ತರ. 'ಸರದಾರರ ತಪ್ಪು ನನ್ನ ತಪ್ಪು. ಗೆದ್ದರೂ ಸೋತರೂ ನಾನು ಸರದಾರರ ಜೊತೆಯಲ್ಲಿಯೆ.' ಮೊನ್ನಿನ

ಗದ್ದಲದಲ್ಲಿಯೂ ಇದೇ ತರದ ಭಾವ, ಮಾತು ಆಡಿದರು. ಕಾಂಗ್ರೆಸ್ಸಿನಲ್ಲಿ ಈ ಒಳಜಗಳವಾದಾಗ ಕಾಂಗ್ರೆಸ್ ಸದಸ್ಯರ ಹಾದಿ ಯಾವುದು? ಗಾಂಧೀಜಿಯ ಹಿಂದೆ ಬರಬೇಕೇ ಸರದಾರರ ಹಿಂದೆ ಹೋಗಬೇಕೋ? ಸಾಧಾರಣ ಸದಸ್ಯನಿಗೆ ಈ ತಾತ್ವಿಕ ವಿಚಾರದ ಗೊಂದಲವೇಕೆ. ಆಗ ಗಾಂಧೀಜಿ ಹೇಳಿದ ಮಾತು ಸರದಾರರ ಬಗ್ಗೆ ಅವರಿಗಿರುವ ಆದರವನ್ನೂ ಸೂಚಿಸುತ್ತದೆ. 'ನಿಸ್ಸಂದೇಹವಾಗಿ ಸರದಾರರ ಹಿಂದೆಯೇ ಹೋಗಿರಿ. ಅದೇ ನಿಮ್ಮ ಧರ್ಮ.'

೧೮೫೭ರ ಸಿಪಾಯಿ ದಂಗೆಯಲ್ಲಿ ಇಡೀ ಹಿಂದುಸ್ಥಾನವೇ ಆಳರಸರನ್ನು ವಿರೋಧಿಸಿತು. ಹೈದರಾಬಾದು ಒಂದೇ ಅಡ್ಡಗೋಡೆಯ ಮೇಲೆ ದೀಪವಿಟ್ಟುಕೊಂಡು ಕೂತಿತ್ತು. ಆಗ ಹೈದರಾಬಾದಿನ ರೆಸಿಡೆಂಟನಿಗೆ ಬ್ರಿಟಿಷ ಸರಕಾರದಿಂದ ಒಂದು ತಾರು ಬಂತು—If Nizam is lost all is lost ಸರದಾರರ ಬಗ್ಗೆ ಗಾಂಧೀಜಿಗೆ ಹೆಚ್ಚು ಕಡಿಮೆ ಅದೇ ಭಾವ.

ಅಂತಲೇ ಇಂದು ಹಿಂದುಸ್ಥಾನದ ರಾಜಕಾರಣದಲ್ಲಿ ಗಾಂಧೀಜಿಯ ತರುವಾಯ ವಲ್ಲಭಭಾಯಿ ಪಟೇಲರೇ ಪ್ರಧಾನ ಪಾತ್ರ. ಗಾಂಧೀಜಿಯ ಬಲಗೈ ಎಂದು ಹೆಸರಾಗಿದಾರೆ. ಬಲಗೈ ಏಕೆ ಅವರ ದೇಹವೇ ಸರಿ. ರಾಜಗೋಪಾಲಾಚಾರ್ಯರ ಬುದ್ಧಿ ಕುಶಲತೆ, ಧಾರ್ಮಿಕ ದೃಷ್ಟಿಗಳು ಸರದಾರರಿಗಿಲ್ಲ. ಜವಾಹರಲಾಲರ ವೈಶಾಲ್ಯ, ಸಜ್ಜನಿಕೆಗಳಾಗಲಿ ಮೌಲಾನಾ ಆಜಾದರ ಪಾಂಡಿತ್ಯ ಪ್ರಕಾಂಡತೆಯಾಗಲಿ ಇವರಿಗಿಲ್ಲ. ರಾಜೇಂದ್ರಬಾಬುವಿನ ಶಾಂತಿ ಸೌಜನ್ಯಗಳೂ ಇಲ್ಲ. ಆದರೂ ಇಂದಿನ ರಾಜಕೀಯ ಮಂಟಪದಲ್ಲಿ ಸರದಾರರಿಗೇ ಅಗ್ರತಾಂಬೂಲ. ಅದು ಸರದಾರರ ಕ್ರಿಯಾಶಕ್ತಿಯ ಅದ್ಭುತ ಸಾಮರ್ಥ್ಯದ ಕಾಣಿಕೆ.

ಸರದಾರರ ಕ್ರಿಯಾಶಕ್ತಿ ವಿಲಕ್ಷಣವಾದುದು. ಅದರಲ್ಲಿ ಹತ್ತು ಜನರ ಮುಂದಾಳಾಗುವ ದಿಟ್ಟತನವಿದೆ. ಅವರನ್ನು ಆಳುವ ಗಡಸುತನವಿದೆ. ಆ ಶಕ್ತಿಗೆ ಕಾರ್ಯಸಾಧನೆಯ ದೀಕ್ಷೆ ಸಹಜವಾದುದು; ಇದುರಿಗೆ ಬಂದು ಮಲೆತು ನಿಂತದ್ದು ಮಣಿಯಬೇಕು, ಇಲ್ಲವೆ ಅಳಿಯಬೇಕು. ಅದು ತ್ರಿವಿಕ್ರಮನ ಪಾದ. ಅದರ ಹೊರತು ಬೇರೆಯ ವಸ್ತುವಿಗೆ ಎಲ್ಲಿಯೂ ಇಂಬುಗೊಡಲಿಕ್ಕಿಲ್ಲ. ಯಾವುದಕ್ಕಾದರೂ ಆ ತುಳಿತ

ದಲ್ಲಿ ಆ ಹಿಡಿತದಲ್ಲಿ ಇಂಬು ಸಿಕ್ಕರೆ ಅದು ಬಲಿಚಕ್ರವರ್ತಿಗೆ ಮಾತ್ರ. ಆ ಹಿಡಿತದ ಮುಂದೆ ಯಾವುದೂ ನಿಲ್ಲಲಾರದು. ಸೋಲುಗಾಣದ ಸಂಕಲ್ಪ ಅದು. ಅಡಿಯು ಹಿಂದಿಡೆ ನರಕವೆಂದು ನಂಬಿದ ಮನೋವೃತ್ತಿ. ಒಮ್ಮೆ ಮನಸ್ಸು ಮಾಡಿದರಾಯಿತು, ತ್ರಿಮೂರ್ತಿಗಳೇ ಬರಲಿ ಗಾಂಧೀಜಿಯೇ ಹೇಳಲಿ ಸರದಾರರು ಹಿಡಿದ ಹಾದಿ ಬಿಡಲಿಕ್ಕಿಲ್ಲ. ಆ ಮುಷ್ಟಿ ವಜ್ರಮುಷ್ಟಿ. ಧರ್ಮರಾಯನ ಮಾತಿಗೆ ಸೋತು ಭೀಮಸೇನ ತನ್ನ ಪೌರುಷವನ್ನು ಅಣಗಿಸಿದ್ದಾನು. ಈ ಭೀಮಸೇನನಿಗೆ ಧರ್ಮರಾಯನೇ ಸೋಲಬೇಕಾದುದೇ.

ಇಲ್ಲಿ ಒಂದು ಹರಿತವಾದ ಲಕ್ಷ್ಯಶುದ್ಧಿ ಇದೆ, ರಾಮಬಾಣಕ್ಕಿದ್ದಂತೆ, ಅದಕ್ಕೆ ಜೊತೆಯಾಗಿ ಕೆಲಸದಲ್ಲಿ ಉಡದ ಹಿಡಿತವೂ ಇದೆ, ವಿಶ್ವಾಮಿತ್ರನಂತೆ ಬಿದ್ದು ಎದ್ದು ಕುಂಟುತ್ತ ಗುರಿಯ ಕಡೆ ಸಾಗುವ ಅಲ್ಪಜೀವವಲ್ಲ. ಧ್ರುವನಂತೆ ಪ್ರಹ್ಲಾದನಂತೆ ಒಂದೇ ನಿಟ್ಟುಳ್ಳ ಧೀರ ಜೀವ. ಆ ನೋಟಕ್ಕೆ ವಿಸ್ತಾರ ಇರಲಿಕ್ಕಿಲ್ಲ. ಆದರೆ ಮೊನೆ ಇದೆ. ಸಪ್ತಲೋಕಗಳನ್ನೂ ತೂರಿ ದಾಟಿ ತನ್ನ ಗುರಿಯನ್ನು ಗುರುತಿಸುವ ಏಕಾಗ್ರತೆ ವೇಗಗಳು ಇವೆ. ಅಡ್ಡಹಾದಿಯ ಸೆಳೆತಗಳಿಗೆ ಆ ಹೆಜ್ಜೆ ಸಿಗುವ ಸಂಭವವೇ ಇಲ್ಲ. ಈ ಗುಣವೇ ಆ ಕ್ರಿಯಾಶಕ್ತಿಯ ತಳಹದಿ. ಸರದಾರರ ಬಾಳಿನ ಭವ್ಯಶಿಲ್ಪವೆಲ್ಲ ಅಲ್ಲಿದೆ.

ಗಾಂಧೀಜೀ ಒಂದು ಸಲ ಹೇಳಿದರು. ನಾಡಸೇವೆ ಮಾಡುವವರು ತಮ್ಮ ಸುತ್ತಲಿನ ಜನರ ಬಾಳುವೆಯನ್ನು ತಮ್ಮ ಅಂಕೆಯಲ್ಲಿಟ್ಟುಕೊಳ್ಳಬೇಕು. ಜನ ಇವರ ಕೈಕಾಲಿನಂತೆ ಆಗಬೇಕು. ನಮ್ಮ ಕೈಕಾಲು ಅಲುಗಾಡಿಸಿದ ಹಾಗೆ ಜನರನ್ನು ನಾವು ಆಡಿಸಬೇಕು. ಮುಂದಾಳಾಗುವವನು ಸಮಾಜದ ಪ್ರಾಣವೇ ಆಗಬೇಕು. ಗಾಂಧೀಜೀ ಈ ಸೂತ್ರ ಹೇಣೆದಾಗ ಸರದಾರರನ್ನೇ ತಮ್ಮ ಕಣ್ಣೆದಿರು ಇಟ್ಟುಕೊಂಡಿರಬೇಕು. ವಲ್ಲಭಭಾಯಿಯ ಮುಂದಾಳುತನದಲ್ಲಿ ಆ ಲಕ್ಷಣ ಪೂರಾ ಇವೆ. ಅವರು ಇರುವುದು ಮುಂಬಯಿಯಲ್ಲಿಯಾದರೂ ಗುಜರಾಥ ಪ್ರಾಂತದ ಜೀವ. ಆ ಪ್ರಾಂತಕ್ಕೆ ಅವರು ನಿಜವಾಗಿ ಕಿರೀಟವಿಲ್ಲದ ದೊರೆ. ಒರಟು ಮಾತಿನಲ್ಲಿ ಹೇಳುವುದಾದರೆ ಅವರೆ ಅದರ ಪಾಳೇಗಾರರು. ಸರದಾರರು

ಕೈಹಿಡಿಯುವುದೆಂದರೆ ಕಾಂಗ್ರೆಸ್ಸಿನ ಕೈ ಹಿಡಿದಂತೆ, ಹಿಂದುಸ್ತಾನದ ಕೈ ಹಿಡಿದಂತೆ. ಅವರನ್ನು ಇದುರಿಸುವುದೆಂದರೆ ಹಿಂದುಸ್ತಾನವನ್ನೇ ಇದುರಿಸಿದಂತೆ.

ಗುಜರಾಥ ಪ್ರಾಂತದಲ್ಲಿ ಪಟೇಲರದು ಸುಗ್ರೀವಾಜ್ಞೆ. ಅವರು ತುಳಿದ ಹಾದಿಯಲ್ಲದೆ ಅಲ್ಲಿ ಬೇರೆ ಹಾದಿ ಇಲ್ಲ. ಬೇರೆ ದಾರಿಗಳಲ್ಲಿ ಒಂದೇ ನಿಟ್ಟಿನ ಹಾದಿ- One way traffic ಆ ನಿಟ್ಟು ಪ್ರಾಂತದ ಹೊರಗಡೆಗೆ. ಕಾಂಗ್ರೆಸು ಕೆಲಸಗಾರರೇ ಇರಲಿ ಸರಕಾರದ ಅಧಿಕಾರಿಗಳೇ ಆಗಲಿ ಒಂದೇ ಮಂತ್ರ. ಅದು ಕತ್ತಿಯ ಹಿರಿತ. ಎರಡು ಕತ್ತಿ ಒಂದೇ ಒರೆಯಲ್ಲಿ ಇರಬೇಕು ಹೇಗೆ? ನಾಡು-ಜನ ಕವಡು ಅರಿಯದ ಮುಗ್ಧೆಯಂತೆ ದಿಟ್ಟಳಾದ ಪಾಂಚಾಲಿಯು ಹಾಗಲ್ಲ. ಅಲ್ಲಿ ಯಜಮಾನ್ಯ ಒಬ್ಬರದೇ ಸರಿ. ಮುಂಬಯಿಯ ಕೊಮಟಿಗಳಿಗೆ ಕೋಟಿಯ ಕೆಳಗೆ ಅಂಕಿಗಳೇ ಗೊತ್ತಿಲ್ಲವಂತೆ. ಸರದಾರರ ಲೆಕ್ಕದಲ್ಲಿ ಯಜಮಾನ್ಯದ ಹೊರತು ಬೇರೆ ಬಾಬತ್ತು ಇಲ್ಲವೇ ಇಲ್ಲ.

ಈ ಹರಿತವಾದ ರೀತಿಗೆ ವ್ಯವಹಾರದಲ್ಲಿ ಸಾಟಿಯಿಲ್ಲದ ಗೆಲುವು ದೊರೆತಿದೆ. ೧೯೨೮ ರಲ್ಲಿ ಬಾರ್ಡೋಲಿ ಸತ್ಯಾಗ್ರಹ ಆ ಗೆಲವಿನ ಗುಡಿಯನ್ನು ಮುಗಿಲಿಗೇ ಏರಿಸಿತು. ದೊಡ್ಡ ದೊಡ್ಡ ಅಧಿಕಾರಿಗಳು ಬಾರ್ಡೋಲಿಯ ಹಳ್ಳಿಗಳಿಗೆ ಬಂದರೆ ಅವರಿಗೆ ಇರಲು ಮನೆಯಿಲ್ಲ, ತಿನ್ನಲು ಅನ್ನವಿಲ್ಲ; ಕಡೆಗೆ ಸಿಲ್ದಾಣದಿಂದ ಊರೊಳಗೆ ಹೋಗಬೇಕೆಂದರೆ ಸರದಾರರ ಅಪ್ಪಣೆಯಿಲ್ಲದೆ ಗಾಡಿ ಸಿಗುವಂತಿಲ್ಲ. ಸರದಾರರ ವ್ಯೂಹರಚನೆಯಲ್ಲಿ ಎಲ್ಲಿಯೂ ಬಿರುಕು ಇರಲಿಲ್ಲ. ಹೊಲಗಳನ್ನೆಲ್ಲ ಸರಕಾರ ಜಪ್ತಿಮಾಡಿತು; ಹರಾಜು ( ಲಿಲಾವು ) ಮಾಡಿತು. ಆದರೆ ಯಾರು ಕೊಳ್ಳಬೇಕು ? ಡಂಗುರ ಸಾರುವ ಎಂದರೆ ಜನವಿಲ್ಲ. ಪಟೇಲ ಶ್ಯಾನುಭೋಗರು ಸರಕಾರದ ಉಪ್ಪಿನಿಂದ ಬೆಳೆದವರು. ಆದರೆ ಅವರ ಧಣಿ ಸರದಾರರು. ಮುಂಬಯಿಯಿಂದ ಆ ಹೊಲಗಳನ್ನು ಕೊಳ್ಳುವ ನಾಟಕಕ್ಕಾಗಿ ಪಾರಸೀ ಜನರನ್ನು ತರಬೇಕಾಯಿತು. ಹಳ್ಳಿಯ ಜನರನ್ನು ಬೆದರಿಸಿ ಪೀಡಿಸಿ, ಅತ್ಯಾಚಾರಮಾಡಿ ಮಣಿಸಲು ಪಠಾಣರನ್ನೇ ತಂದರು. ಜನ ತಮ್ಮ ಹೊಲಮನೆಗಳನ್ನೇ ಬಿಟ್ಟು ನೆರೆಯ ಜಿಲ್ಲೆ-ಪ್ರಾಂತಗಳಿಗೆ

ಸರಿದರು. ಸರಕಾರದ ದೌರ್ಜನ್ಯಕ್ಕೆ ಆ ಐಕಮತ್ಯದ ಕೋಟೆ ಒಡೆಯು ಲಿಲ್ಲ. ಇವರ ಹಿಂಸೆಗೆ ಅವರ ಹಟ ಕರಗಲಿಲ್ಲ. ಸರಕಾರ ಕುಂಭಕರ್ಣನ ಕೈಗೆ ಸಿಕ್ಕ ಕಪಿಗಳಂತೆ ಸಪ್ಪಗಾಯಿತು. ಈ ಬಾರ್ಡೋಲಿಯ ಗೆಲವೇ ವಲ್ಲಭಭಾಯಿಗೆ ಅಖಿಲಭಾರತ ನಾಯಕ ಪದವಿಯನ್ನು ಕೊಟ್ಟಿತು. ಗಾಂಧೀಜಿಗೆ ಅವರು ಒಪ್ಪಿಸಿದ ಗುರುದಕ್ಷಿಣೆ ಅದು.

ಮುಂದೆ ಎರಡೇ ವರ್ಷದಲ್ಲಿ ಇಡೀ ಹಿಂದುಸ್ತಾನದಲ್ಲಿ ಶಾಸನೋಲ್ಲಂಘನದ ಚಳುವಳಿ ಮೊದಲಾಯಿತು. ಆಗ ಗುಜರಾತ ಪ್ರಾಂತವು ತೋರಿದ ಧೈರ್ಯ, ಮಾಡಿದ ತ್ಯಾಗ ಭಾರತ ಇತಿಹಾಸದಲ್ಲಿ ಚಿರಕಾಲ ಬಾಳುವ ಸಂಗತಿಗಳು. ದಂಡಿ ಉಪ್ಪಿನ ಸತ್ಯಾಗ್ರಹದ ಕಾಲಕ್ಕೆ ಗುಜರಾತಿನಲ್ಲಿ ಶೌರ್ಯದ ಹೊಳೆ ಉಕ್ಕಿ ಹರಿದಂತಿತ್ತು. ಹೆಂಗುಸರಲ್ಲಿ ಕೂಡ ಒಂದು ಅದಮನೀಯವಾದ ಉತ್ಸಾಹ, ಅಖಂಡವಾದ ಪರಾಕ್ರಮ ಕಂಡು ಬಂದವು. ಒಲೆಯ ಮುಂದೆ ಕೂತು, ಮನೆಯ ಮೂಲೆಯಲ್ಲಿ ಅಡಿಗಿ ಹೇಡಿಯಾಗಿದ್ದ ಹೆಣ್ಣು ಗಂಡುಸಿಗಿಂತಲೂ ತ್ಯಾಗದಲ್ಲಿ ದೇಶಪ್ರೇಮದಲ್ಲಿ ಒಂದು ತೂಕ ಹೆಚ್ಚು ತೂಗಿದಳು. ಸತ್ಯಸಮರದಲ್ಲಿ ಗುಡಿಗಾರ್ತಿಯಾಗಿ ನಿಂತಳು. 'ಊರೆಲ್ಲ ಸೆರೆಮನೆಗೆ ಹೋಗುತ್ತಿರುವಾಗ ನಿಮಗೆ ನಾಚಿಕೆಯಾಗದೆ ; ಮನೆಮಕ್ಕಳನ್ನೂ ನಾನೆಲ್ಲ ನೋಡಿಕೊಳ್ಳುತ್ತೇನೆ. ನೀವು ಹೋಗಿರಿ. ಸಂದರ್ಭಬಂದರೆ ಅಲ್ಲಿಗೆ ನಾವೂ ಬರುತ್ತೇವೆ.' ಎಂದು ಹೆಂಗಸರು ಮೂದಲಿಸಿದರಂತೆ. ಸೋತು ಬಂದ ದೊರೆಗೆ ಕೋಟೆಯ ಬಾಗಿಲನ್ನು ತೆರೆಯದೆ ಮೂದಲಿಸಿ ಮತ್ತೆ ಯುದ್ಧಕ್ಕೆ ಅಟ್ಟಿದ್ದಳಂತೆ ಹಿಂದೆ ಒಬ್ಬ ರಾಜಪುತ್ರ ರಾಣಿ. ಅಂಥವೇ ಪ್ರಸಂಗ ಗುಜರಾತಿನಲ್ಲಿ ಆ ಸತ್ಯಾಗ್ರಹದಲ್ಲಿ ಮತ್ತೆ ನಡೆದವು. ಈ ವಿಚಿತ್ರ ಕ್ರಾಂತಿಗೆ ಗಾಂಧೀಜಿಯ ಕೈವಾಡವೇ ಕಾರಣವಾದರೂ ವಲ್ಲಭಭಾಯಿಯ ಅವಿಶ್ರಾಂತ ಪರಿಶ್ರಮ, ವ್ಯೂಹರಚನಾ ಸಾಮರ್ಥ್ಯಕ್ಕೂ ಆ ಕೀರ್ತಿ ಸಲ್ಲದೆ ಇರಲು ಸಾಧ್ಯವಿಲ್ಲ. ಇದನ್ನು ಹಿಂದುಸ್ತಾನ ಗುರುತಿಸದೆ ಇರಲಿಲ್ಲ. ಕರಾಚಿಯಲ್ಲಿ ಕಾಂಗ್ರೆಸು ನಡೆದಾಗ ತನ್ನ ಕೃತಜ್ಞತೆ–ಮೆಚ್ಚುಗೆಗಳನ್ನು ತೋರಿಸಿತು. ಕರಾಚಿಯ ಕಾಂಗ್ರೆಸಿಗೆ ಸರದಾರರೇ ರಾಷ್ಟ್ರಪತಿ.

ಇವೆರಡು ಪ್ರಕರಣಗಳಲ್ಲಿ ಕಂಡುಬಂದ ಸಬೂಲಕ್ಕೆ ಸರಕಾರ ನಡುಗಿ

ಹೋಯಿತು. ೧೯೩೨ರಲ್ಲಿ 'ಮತ್ತೆ ಸತ್ಯಾಗ್ರಹ ಮೊದಲಾದಾಗ ಸರದಾರರನ್ನು ಮೊದಲ ತುತ್ತಿಗೇ ತೆಗೆದುಕೊಂಡರು. ಗಾಂಧೀಜಿಯ ಜೊತೆಯಲ್ಲಿಯೆ ಇವರ ಸರತಿಯೂ ಬಂತು. ಎರಡು ವರ್ಷ ವಿಚಾರಣೆ ಕೂಡಾ ಇಲ್ಲದೆ ಇಟ್ಟಿದ್ದರು.

ಅಲ್ಲಿಂದ ಮುಂದೆ ಕಾಂಗ್ರೆಸಿನ ರಾಜಕಾರಣದಲ್ಲಿ ವಲ್ಲಭಭಾಯಿಗೆ ಒಂದು ಪ್ರತ್ಯೇಕ ಸ್ಥಾನ. ಬಾರ್ಡೋಲಿಯಲ್ಲಿ ರೈತರ ಕಂದಾಯ ಕಡಮೆ ಮಾಡಿಸಲು ಸತ್ಯಾಗ್ರಹ ಮಾಡಿಸಿದುದು. ಅದು ಸ್ವರಾಜ್ಯದ ಕುಸ್ತಿಯ ಮೊದಲನೆಯ ಸರತಿ. ಬಾರ್ಡೋಲಿಯ ರೈತರ ನಾಯಕರಂತೆ ಪಟೇಲರು ರಂಗಕ್ಕೆ ಇಳಿದುದು. ಅಖಿಲ ಭಾರತದ ಅದ್ವಿತೀಯ ನಾಯಕರಂತೆ ಹಿಂದಿರುಗಿದರು. ಸತ್ಯಾಗ್ರಹದ ರಚನೆಯೇ ಹಾಗೆ. ಅದರಲ್ಲಿ ಸಾಧಿಸಿದ ಲಾಭವಾಗಲಿ ಸಾಧಿಸಲು ಹೊರಟ ವಿಷಯವಾಗಲಿ ಮುಖ್ಯವಲ್ಲ. ಅದರಲ್ಲಿ ಸತ್ಯಾಗ್ರಹಿಯು ತೋರುವ ಶಕ್ತಿ—ಆ ಸತ್ಯಪರಾಕ್ರಮವೇ ಮುಖ್ಯ. ಅಡಿಯ ಮುಂದಿಡೆ ಸ್ವರ್ಗ ಎಂಬುದು ಜನರ ಸೂತ್ರ. ಜನರ ಹೃದಯ ಕೂಟಕ್ಕೆ ಶೌರ್ಯವೇ ಬೀಗದ ಕೈ. ವಿಚಾರ ಮಾಡುತ್ತ ಗುಣಾಕಾರ ಮಾಡುವ ತಾತ್ವಿಕರನ್ನು ಜನ ಮೆಚ್ಚದು. ಮುಂದೆ ನುಗ್ಗಿ ಹುಲಿಯ ಬಾಯೊಳಗೆ ತಲೆಯೊಡ್ಡುವ ನಿರ್ಭಯಕ್ಕೆ ಆ ಮೆಚ್ಚು. ನೂರು ವಾದಗಳಲ್ಲಿ ಗೆಲ್ಲಬಹುದು. ಸಾವಿರ ಧರ್ಮಸೂಕ್ಷ್ಮಗಳನ್ನು ನಿರ್ಣಯಮಾಡಬಹುದು. ಆದರೆ ಊರಿನ ದನಕ್ಕೆ ಮೃತ್ಯುವಾದ ಒಂದು ಹೊನ್ನಿಗನನ್ನು ಹೊಡೆದವನ ಕತ್ತಿಗೇ ಹೂಮಾಲೆ.

ವಲ್ಲಭಭಾಯಿಗೆ ನಿರ್ಭಯ ಹುಟ್ಟುಗುಣ. ಅಂತೆಯೆ ಅವರಿಗೆ ವಿಚಾರದ ಗೊಂದಲ ಸೇರದು. ಅವರು ಕರ್ಮದ ಉಕ್ಕಿನ ವಿಗ್ರಹ. ವಿಚಾರದ ಮೀನಮೇಷ ಬೇಡ, ಮಿಂಚಿನಂತೆ ಕೆಲಸ ಸಾಗಲಿ ಎಂಬುದು ಅವರ ಸಿದ್ಧಾಂತ. ಸತ್ಯಾಗ್ರಹದ ಸಿದ್ಧಾಂತ—ಸಂದರ್ಭ ನಿರ್ಣಯ ಗಾಂಧೀಜಿಗೆ ಸೇರಿದುದು. ಸೇನೆ ನಡೆಸುವುದು, ವ್ಯೂಹ ರಚಿಸುವುದು ಸರದಾರರ ಕೆಲಸ. ಆ ಕೆಲಸದಲ್ಲಿ ಸಾವಿರ ತೊಡಕು ಬಂದಾವು; ಸಾವಿರ ಹಗೆತನ ಮೂಡಿಯಾವು. ಅವು ಯಾವುದಕ್ಕೂ ಸರದಾರರು ಅಂಜುವುದಿಲ್ಲ. ಹಿಡಿದುದನ್ನು ಕಡೆತನಕ ಬಿಡದ ಚಾಣಕ್ಯಪಂಥ ಅವರದು. ಆ ಸಂದರ್ಭದ

ನೀತಿ-ಅನೀತಿ, ಧರ್ಮ-ಅಧರ್ಮಗಳ ಗೊಂದಲಕ್ಕೆ ಅವರು ಪುನಸು-ಗೊಡುವುದಿಲ್ಲ. ಅದು ಆವರ ಗುರುವಿನ ಕೆಲಸ. ಗಾಂಧೀಜಿ ಜಕಣಾಚಾರಿಯಾದರೆ ಸರದಾರರು ಮುಖ್ಯ ಮೇಸ್ತ್ರಿ. ಈ ಮಾತಿನಲ್ಲಿ ಸರದಾರರು ಸಜ್ಜಾದ ಸಿಪಾಯಿ. ಸಿಪಾಯಿಗೆ ಯಾಕೆ ಏಸು ಎಂದು ಕೇಳುವ ಗೋಜಿಲ್ಲ. ದಳಪತಿ ಹೇಳಿದುದನ್ನು ಮಾಡುವುದು—ಮಡಿಯುವುದು. ಅದರಲ್ಲಿಯೆ ಅಡಿಗಡಿಗೆ ಅಶ್ವಮೇಧ ಫಲವಿದೆ. ಸರದಾರರ ಸಿಪಾಯಿಗಿರಿಯಲ್ಲಿ ಆ ಗುಣವಿದೆ. ಒಮ್ಮೆ ದಳಪತಿಯನ್ನು ಆರಿಸಿಕೊಂಡರೆ ಆಯಿತು. ತರುವಾಯ ಅವನ ಅಪ್ಪಣೆ ವೇದವಾಕ್ಯ. ವಲ್ಲಭಭಾಯಿ ಗಾಂಧೀಜಿಯನ್ನು ತಮ್ಮ ದಳಪತಿಯಾಗಿ ಆರಿಸಿಕೊಂಡರು. ಆ ದಳಪತಿಯ ಬಾವುಟವನ್ನು ಹಿಡಿದು ಹೇಗೆ ಎಡಬಲ ನೋಡದೆ, ಹೆಜ್ಜೆ ಸರಿಸದೆ ತಪ್ಪದೆ ನಡೆದಿದಾರೆಂಬುದು ಇಡೀ ಹಿಂದುಸ್ಥಾನಕ್ಕೇ ಗೊತ್ತಿದೆ. ಗಾಂಧೀಜಿಯಂಥ ನಾಯಕರಿದ್ದಲ್ಲಿ ಸರದಾರರಂಥ ಸಿಪಾಯಿ ಇರಲೇಬೇಕು. ಆಗಲೇ ಆ ಕರ್ಮಜೀವನ ಪೂರ್ಣವಾದೀತು. ರಾಮನಿದ್ದಲ್ಲಿ ಹನುಮಂತ ಇರಲೇಬೇಕು. ಒಂದು ಮಾತ್ರ ನಿಜ. ರಾಮನಂಥವು ಒಂಭತ್ತು ಅವತಾರ ಆಯಿತು. ಹನುಮಂತನಂಥ ಅನುಯಾಯಿ ಮತ್ತೆ ಹುಟ್ಟಲಿಲ್ಲ. ಅರಸಾಗುವುದು ಸುಲಭ. ಆಳಾಗುವುದು ಕಷ್ಟ. ಅದಕ್ಕಾಗಿಯೇ ನಮ್ಮಲ್ಲಿ ಈಗ ಎಲ್ಲರೂ ನಾಯಕರೇ!

ಆಳಾಗಿ ಅರಸಾದರೂ ವಲ್ಲಭಭಾಯಿಯ ನೆತ್ತರೇ ಅರಸುತನದ್ದು. ಜನು ಅವರ ಧೈರ್ಯ, ಸಾಹಸ, ಆಡಳಿತದ ಪಟುತ್ವ, ಅವರ ನಿರ್ಭಯವೃತ್ತಿಯನ್ನೂ ನೋಡಿ ಅವರಿಗೆ ಸರದಾರ ಎಂಬ ಬಿರುದು ಕೊಟ್ಟಿದಾರೆ. ನಮ್ಮ ನಾಯಕಮಣಿಗಳಲ್ಲಿ ಯಾರಿಗೂ ಇಷ್ಟು ಅನ್ವರ್ಥಕ ನಾಮಕರಣವಾಗಿಲ್ಲ. 'ದೀನಬಂಧು' ಎಂದು ಆಂಡ್ರೂಸರನ್ನು ಕರೆದಿದಾರೆ. ದೇಶಬಂಧು ಎಂದು ದಾಸರನ್ನೂ ಹೊಗಳಿದಾರೆ. ಆದರೆ ವಲ್ಲಭಭಾಯಿಯನ್ನು ಸರದಾರ ಎಂದು ಜನ ಕರೆದಾಗ ಅವರನ್ನೂ ಹೊಗಳಲೂ ಇಲ್ಲ, ಅವರಿಗೆ ಮೆಚ್ಚುಗೆಯ ಕುರುಹೂ ಕೊಡಲಿಲ್ಲ; ಇದ್ದ ಮಾತನ್ನೂ ಇದ್ದ ಹಾಗೆ ಹೇಳಿದರು. ಅಷ್ಟೆ. ಮನಸಿನಿಂದಲೂ ಸ್ವಭಾವದಲ್ಲಿಯೂ ಕೆಲಸದಲ್ಲೂ ಸರದಾರರು ಸರದಾರರೇ ಸರಿ. ಆ ಕ್ಷಾತ್ರ ಅವರ ಮನೆತನಕ್ಕೇ ಬಂದಿದೆ. ಅವರ ತಂದೆ

ಸಿಪಾಯಿ ದಂಗೆಯ ಕಾಲಕ್ಕೆ ಇಂಗ್ಲಿಷರೊಡನೆ ಯುದ್ಧಮಾಡಲು ತನ್ನ ದೊಂದು ದಳವನ್ನು ಕೂಡಿಸಿಕೊಂಡು ಗುಜರಾತಿನಿಂದ ಮಧ್ಯಭಾರತಕ್ಕೆ ಬಂದಿದ್ದರಂತೆ. ಇನ್ನೊಂದು ಸಲ ಗುಜರಾತಿನ ಒಬ್ಬ ಪಾಳೆಯಗಾರ ನೊಡನೆ ಕಾದಿದರಂತೆ. ಇವರ ಅಣ್ಣ ವಿಠ್ಠಲಭಾಯಿ ಪಟೇಲರ ಸಂಗತಿ ಯಾರಿಗೆ ಗೊತ್ತಿಲ್ಲ? ಅವರ ತೃತೀಯ! ಪಂಥದ ಮನೋವೃತ್ತಿ, ಕಿಂಚಿ ತ್ತಾದರೂ ಸಮನಿಸಿಕೊಂಡು ಹೋಗಲಾರದ ಸ್ವತಂತ್ರ ಬುದ್ಧಿ, ಹಿಂದು ಸ್ತಾನಕ್ಕೇ ಗೊತ್ತಿದೆ. ಕೇಂದ್ರ ಶಾಸನ ಸಭೆಯ ಅಧ್ಯಕ್ಷರಾಗಿದ್ದಾಗ ಮಾತುಮಾತಿಗೆ ಹೇಗೆ ಸರಕಾರದ ಮೂಗು ಹಿಡಿಸಿದರೆಂಬುದು ಇತಿಹಾಸ ಪ್ರಸಿದ್ಧ. ಹಿಂದುಸ್ತಾನದ ಸರ್ವ ಸೇನಾಧಿಕಾರಿಯಂಥವನನ್ನೇ ಒಂದು ಸಣ್ಣ ಮಾತಿಗಾಗಿ ಕ್ಷಮೆ ಬೇಡಲು ಹಚ್ಚಿದರು. ಆ ರಕ್ತ ವಲ್ಲಭಭಾಯಿ ಯಲ್ಲೂ ಹರಿಯುತ್ತಿದೆ. ಗಾಂಧೀಜಿಯ ಸಹವಾಸ ಅದರ ಬಿಸಿಯನ್ನು ಕಡಮೆ ಮಾಡಿರಬಹುದು. ವಕೀಲಿಯ ಕಸಬು ಕೊಂಚ ನಿಧಾನವನ್ನು ಕೊಟ್ಟಿರಬಹುದು. ಸತ್ಯಾಗ್ರಹದ ಅನುಭವ ಅದರಲ್ಲಿ ಸ್ವಲ್ಪ ಶಾಂತಿ ಯನ್ನು ಬೆರಸಿರಬಹುದು. ಆದರೆ ಆ ಸ್ವಭಾವ ಮಾತ್ರ ಹೋಗಿಲ್ಲ. ನಿಗ್ರ ಹಕ್ಕೆ ಅದು ವಿಧೇಯವಾಗಿದೆ.

ವಲ್ಲಭಭಾಯಿ ತಮ್ಮನ್ನು ತಾವು ಹಳ್ಳಿಯ ರೈತ ಎಂದಿದಾರೆ. ಪಶ್ಚಿಮ ಹಿಂದುಸ್ತಾನದ ರೈತರ ಉರುಟುತನವೆಲ್ಲ ಅಲ್ಲಿದೆ. ಅವರ ಮಾತಿ ನಲ್ಲಿ ಆ ಹರಿತ ಕಾಣುತ್ತದೆ. ವಲ್ಲಭಭಾಯಿ ಮಾತೇ ಆಡುವುದಿಲ್ಲ. ಮೊದಲು ಸಾಧಾರಣವಾಗಿ ಮಿತಭಾಷಿಯಾಗಿದ್ದರೂ ಈಚೆಗೆ ಪೂರಾ ಮೌನವನ್ನೇ ಕಲಿಯುತ್ತಿದಾರೆ. ಆ ಮೌನ ಸಹಜವಾದುದಲ್ಲ. ಅದೂ ಒಂದು ಆಯುಧ. ಅವರ ಬಾಳಿನಲ್ಲಿ ಯಾವುದೂ ಅಲಂಕಾರಕ್ಕಾಗಿ ಬಂದುದಿಲ್ಲ. ಆ ಕಾರ್ಯವಾದಿ ಜೀವನದಲ್ಲಿ ಆಡಂಬರಕ್ಕೆ ಅವಕಾಶವಿಲ್ಲ. ಅಂತೆಯೇ ಆ ಮೌನ ಒಂದು ಆಯುಧ; ಚೆನ್ನಾಗಿ ಮಸೆದ ಆಯುಧ. ಅವರ ಮಾತಿನಲ್ಲಿ ಸಾವಿರ ಚೇಳಿನ ವಿಷವಿದೆ. ಮಾತು ಬಾರುಕೋಲಿನ ಏಟೇ. ಆದರೆ ಆ ಮೌನಮುದ್ರೆಯಲ್ಲಿ ನಾಗರಹಾವಿನ ರಭಸವಿದೆ. ಮಾತಿಗಿಂತ ಆ ಮೌನಕ್ಕೆ ಬಿರುಸಾದ ನಾಲಗೆ. ಹತ್ತು ಜನರ ನಡುವೆ ಅವರು ಅವಲಂಬಿಸುವ ಆ ಮೌನಮುದ್ರೆಯಲ್ಲಿ ಅವರ ಶಕ್ತಿಮಂತ್ರವಿದೆ.

ಪುರಾಣ ಹೇಳುವವರು ನಾಲ್ಕು ಉಪಕತೆ ಅಡ್ಡಕತೆ ಹೇಳಿದರೆ ಜನ ನಕ್ಕು ಮುಂದೆ ಸಾಗುತ್ತಾರೆ. ಸಭೆಯಲ್ಲಿ ನಿಂತು ಭಾಷಣ ಮಾಡುವವನು ನಾಲ್ಕು ಗಳಿಗೆ ಅಲಂಕಾರದ ಹೊಳೆಯನ್ನು ಹರಿಸಿದರೆ, ದೊಡ್ಡ ದೊಡ್ಡ ಮಾತು ಆಡಿದರೆ ಜನ ಕೇಳಲು ಬೇಸರಗೊಳ್ಳರು. ಆದರೆ ಧೈರ್ಯ ಶೌರ್ಯದ ಅಂಗಳದಲ್ಲಿ ಮಾತು ಬಹಳವಾದರೆ ಅವರಿಗೆ ಸಹನೆಯಿಲ್ಲ. ಅಲ್ಲಿ ಮಿಂಚಿನಂತೆ ಕೆಲಸ ನಡೆಯಬೇಕು. ಅಂತೆಯೆ ಮೌನಕ್ಕೆ ಅಲ್ಲಿ ಮರ್ಯಾದೆ. ಅದೇ ಬಲ. ವಲ್ಲಭಭಾಯಿಗೆ ಈ ಸೂತ್ರ ಚೆನ್ನಾಗಿ ಗೊತ್ತಿದೆ. ಚರ್ಚೆಯಲ್ಲಿ ಅವರು ವಾದಮಾಡಿ ವಿರೋಧಿಸುವುದಿಲ್ಲ. ಮೌನದಿಂದಲೇ ಮುರಿಯುತ್ತಾರೆ.

ಒಂದು ವೇಳೆ ಮಾತಾಡಿದರೆ ಅದರಲ್ಲಿ ಚರ್ಚೆ-ವಾದ ಯಾವುದೂ ಇಲ್ಲ. ಅದೆಲ್ಲ ಬಣ ಕಷ್ಟ. ಮೇಲಿನ ಅಧಿಕಾರಿಯಂತೆ ಕಡತಕ್ಕೆ ಸಹಿ ಹಾಕಿದರೂ ಸರಿ; ಕೆಂಪು ಗುರುತು ಮಾಡಿ ಹಿಂದಕ್ಕೆ ಕಳಿಸಿದರೂ ಸರಿ. ಇದಿರಿಗೆ ಇರುವವರನ್ನು ವಾದದಿಂದ ಒಪ್ಪಿಸಬೇಕೆಂಬುದಿಲ್ಲ. ನಮ್ಮ ಕವಿಗಳು ನರಸ್ತುತಿ ಮಾಡೆವೆಂಬ ಪಂಥ ತೊಟ್ಟಿದ್ದರು. ಜನರ ಅಭಿಪ್ರಾಯಕ್ಕೆ ಬೆಲೆ ಕೊಡುವುದಿಲ್ಲವೆಂದು ವಲ್ಲಭಭಾಯಿ ಪಂಥ ತೊಟ್ಟಿದಾರೆ. ನಿಮಗೆ ಒಪ್ಪಿಗೆಯಾದರೆ ಸರಿ, ಇಲ್ಲವಾದರೆ ನಿಮ್ಮ ದಾರಿ ನಿಮ್ಮದು. ನಿಮ್ಮನ್ನು ಒಪ್ಪಿಸಿ ತಮ್ಮ ಕಡೆ ಎಳೆಯುವ ಚಪಲ ಅವರಿಗೆ ಇಲ್ಲ. ಅಂತಲೆ ಒಂದು ಬಗೆಯ ತಿರಸ್ಕಾರದ ಮನೋವೃತ್ತಿ ಅವರಲ್ಲಿ ಕಾಣಬರುತ್ತದೆ. ತಿರಸ್ಕಾರ ಶಾಸ್ತ್ರಕ್ಕೆ ಅವರೇ ಕರ್ತೃ. ದೇವರೇ ಇದುರಿಗೆ ಬಂದರೂ ಅವರು ಸಡ್ಡೆ ಮಾಡಲಿಕ್ಕಿಲ್ಲ. ಇದಕ್ಕೆ ಕಾರಣ ಅವರ ಧೀರ ಸ್ವಭಾವ, ನಿಂದಾಸ್ತುತಿಗಳ ಕಡೆ ಅಲಕ್ಷ್ಯ ದೃಢಸಂಕಲ್ಪ, ಎಲ್ಲಕ್ಕಿಂತ ಹೆಚ್ಚಾಗಿ ನೀರಸವಾದ ಹೃದಯ.

ವಲ್ಲಭಭಾಯಿಗೂ ರಸಕ್ಕೂ ಬೆಂಕಿ ನೀರಿದ್ದ ಹಾಗೆ. ಸಾಹಿತ್ಯ ಕಲೆಗಳು ವಲ್ಲಭಭಾಯಿ ಇದ್ದ ಕಡೆ ಸುಳಿಯುವುದೇ ಇಲ್ಲ. ತತ್ವಶಾಸ್ತ್ರವಂತೂ ಅವರ ಇದುರಿನಲ್ಲಿ ನಿಲ್ಲಲಾರದೆ ತಲೆ ಮರೆಸಿಕೊಳ್ಳುತ್ತದೆ. ಧ್ಯೇಯಗೀಯ ಎಲ್ಲಾ ನಡುಗಿ ಹೋಗುತ್ತವೆ. ಬೆಕ್ಕಿನ ಮುಂದೆ ಇಲಿ ನಿಂತಂತೆ ಕವಿ ಕಲಾಕಾರರು ಅವರ ಮುಂದೆ ನಿಂತರೆ; ಮೂಕರಾಗಿ ಹೋಗುತ್ತಾರೆ. ಅವರ ಮೋರೆಯಲ್ಲಿ ನಗೆ ಮಿನುಗಿದುದನ್ನು ಯಾರೂ ನೋಡಿಲ್ಲ. ಎಲ್ಲಾ

ದರೂ ಒಂದು ನಗೆಮಾತು ಬಂದರೆ ಅದು ಹಾಸ್ಯವಲ್ಲ–ಅಪಹಾಸ್ಯ. ಆ ಬಾಳು ಹಿಮದಂತೆ ಶೀತಲ. ಅಲ್ಲಿ ಯಾವುದೂ ಅರಳುವುದಿಲ್ಲ. ನಾಲ್ಕು ಜನರ ನಡುವೆ ಅವರು ಬಂದು ಕೂತರೆ ಹಿಮಾಚಲದ ಶಿಖರವೊಂದನ್ನು ತಂದಿಟ್ಟಂತೆ. ಮಾಸ್ತರರು ಬಂದರೆ ಹುಡುಗರ ಸದ್ದು ಮಳೆ ಬಂದು ನಿಂತಂತೆ ಅಡಗುವ ಹಾಗೆ ವಲ್ಲಭಭಾಯಿ ಬಂದರು ಎಂದರೆ ಕೋಣೆಯ ಸದ್ದು ಅಡಗುತ್ತದೆ. ಆ ನಿಲುವಿನಲ್ಲಿಯೇ ಪರ್ವತಗಾಂಭೀರ್ಯವಿದೆ, ಸಮುದ್ರದ ಅಸಾಧ್ಯತೆ ಇದೆ. ಆದರೆ ಆ ಬೆಟ್ಟದಲ್ಲಿ ತೊರೆಗಳೂ ಇಲ್ಲ ಆ ಸಮುದ್ರದಲ್ಲಿ ಅಲೆಗಳೂ ಇಲ್ಲ.

ಒಮ್ಮೆ ವಲ್ಲಭಭಾಯಿ ಒಂದು ಕೇಸು ನಡೆಸುತ್ತಿದ್ದರಂತೆ ವಕೀಲರಾಗಿದ್ದಾಗ. ವಾದ ಅರ್ಧ ಆಗಿದ್ದಾಗ ಏನೋ ಒಂದು ತಾರು ಬಂತು. ಅದನ್ನು ಓದಿ ನೋಡಿಕೊಂಡು ಕಿಸೆಯೊಳಗೆ ಇಟ್ಟು ಕೇಸು ಮುಂದೆ ನಡೆಸಿದರು. ಸಂಜೆಗೆ ಕಚೇರಿ ಮುಗಿದು ಹೊರಗೆ ಬಂದ ಮೇಲೆ ಆ ತಾರು ತೆಗೆದು ಮೇಜಿನ ಮೇಲೆ ಒಗೆದರು. ಎಲ್ಲರೂ ಕುತೂಹಲದಿಂದ ನೋಡುತ್ತಾರೆ ಅವರ ಹೆಂಡತಿ ತೀರಿಕೊಂಡಳೆಂದು ತಾರು. ಈ ಮನುಷ್ಯ ಅದನ್ನು ಓದಿಯೂ ನಿಶ್ಚಿಂತೆಯಿಂದ ಕೇಸು ಮುಂದುವರಿಸಿದ! ಜನ ಇವರ ಸ್ಥೈರ್ಯಕ್ಕೆ ಬೆರಗಾಗಿರಬೇಕು.

ಗಾಂಧೀಜಿಯೇ ಹೇಳಿದಾರೆ: ವಲ್ಲಭಭಾಯಿಗೆ ರಸಭಾವನೆ ಮೊದಲು ಎಂದಾದರೂ ಇತ್ತೋ ಏನೋ! ಇದ್ದಿದ್ದರೆ ಅದನ್ನೆಲ್ಲ ಪೂರಾ ಸುಟ್ಟುಬಿಟ್ಟಿದಾರೆ. ನಿಜ. ಹರೆಯದಲ್ಲಿ ಅವರಿಗೂ ರಸ–ಭಾವನೆ, ವಿನೋದ-ಶೃಂಗಾರ ಇತ್ತೋ ಏನೋ. ಬಾಳ ಕುಲಿಮೆಯಲ್ಲಿ ಆ ಜೀವ ಕೆಂಪಗೆ ಕಾದು ಗಟ್ಟಿ ಕಬ್ಬಿಣವಾಗಿದೆ. ಆ ಮೋರೆಯಲ್ಲಿ ಯಾವ ಭಾವನೆಯೂ ಕಾಣದು. ನಿರ್ಲಕ್ಷ್ಯದಿಂದ ಅರೆಮುಚ್ಚಿದ ಆ ಕಣ್ಣು, ದಪ್ಪ ತುಟಿ, ಹಣೆಯ ಮೇಲೆ ತೋರುವ ಸುಕ್ಕು, ಆ ಚೂಪಾದ ಗದ್ದ–ಇವೆಲ್ಲದರಲ್ಲೂ ಆ ನೀರಸತೆ ಒಡೆದು ಕಾಣುತ್ತದೆ. ಅದರಲ್ಲಿ ಬೆಂಕಿಯ ಚಿಲ್ಮೆ ಒಂದು ಉರಿಯುತ್ತಿರುವುದು ಕಾಣುತ್ತದೆ ಗೆದ್ದರೆ ನಿನ್ನ ತಲೆ ಸೋತರೆ ನನ್ನ ತಲೆ ಎಂಬ ಪಣದ ಖಂಡಿತ ಸ್ವಭಾವ. ವಲ್ಲಭಭಾಯಿಗೆ ಏನಾದರೂ ಭಾವನೆ ಉಳಿದಿದ್ದರೆ, ಯಾವುದಾದರೂ ಒಂದು ರಸ ಇದ್ದರೆ ಅದು

ಸ್ವರಾಜ್ಯಾಕಾಂಕ್ಷೆ, ದೇಶಪ್ರೇಮ. ಆ ಗುರಿಗಾಗಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿದಾರೆ. ಎರಡೂ ಕೈಗಳಿಂದ ಹಣಗಳಿಸುತ್ತಿದ್ದ ಬ್ಯಾರಿಸ್ಟರರು. ತಮ್ಮ ಕಸಬು, ಹಣ, ಮನೆ—ಎಲ್ಲಾ ಧಾರೆಯಾದವು. ಈಗ ಅವರಿಗಿರುವುದು ಒಂದೇ ಗುರಿ. ಉಳಿದುದು ಯಾವುದೂ ಕಾಣದು. ಗೆಳೆತನ, ದಯೆ, ದೊಡ್ಡಿಸ್ತಿಕೆ ಯಾವುದೂ ಅವರ ಹಾದಿಗೆ ಅಡ್ಡ ಬಾರವು. ಈ ಓಟದಲ್ಲಿ ಅನೇಕ ಸಣ್ಣಪುಟ್ಟ ಕಲ್ಲು ಪುಡಿಪುಡಿ. ಆ ಕರ್ಮಯಂತ್ರವು ದೊಡ್ಡ ರೋಲರ್ ಇದ್ದ ಹಾಗೆ. ಹಾದಿಯನ್ನು ಸಮವಾಗಿ ಮಾಡುವುದು ಅದರ ಗುರಿ. ಅದರಲ್ಲಿ ವಜ್ರಗಳೇ ಹೂತು ಹೋಗಲಿ, ಮುತ್ತೇ ಚೂರಾಗಲಿ.

ಗೆಲವಿನ ಹಂಬಲವೇ ಅಂಥದು. 'ವಿಜಯಾತುರಾಣಾಂ ನ ಭಯಂ ನ ಕರುಣಾ' ಎನ್ನಬೇಕು. ಅನಾಸಕ್ತಿಗೆ ಆ ಆತುರವಿಲ್ಲ, ಆ ಹಟವಿಲ್ಲ. ಆದರೆ ಒಂದು ಗುರಿ ಕಣ್ಣಿಗೆ ಕಟ್ಟಿದಾಗ, ಆ ಗುರಿಗಾಗಿ ಹೋರಾಟ ನಡೆದಾಗ ದಯೆ ದೈನ್ಯಗಳಿಗೆ ಅವಕಾಶವಿಲ್ಲ. ಸರದಾರರ ಬಾಳಿನಲ್ಲಿ ಅವರ ನಿಷ್ಕರುಣೆಯ ಪ್ರಸಂಗ ಅನೇಕ ಆಗಿವೆ. ಅವರ ದೃಢಸಂಕಲ್ಪದ ಬಲ ಭೀಮನ ಗದೆಯಂಥದು. ಅದರ ಹೊಡೆತಕ್ಕೆ ಹತ್ತೂ ತಲೆ ಒಡೆದಿವೆ. ನಾರಿಮನ್, ಖರೆ, ಸುಭಾಷಚಂದ್ರರ ಪ್ರಕರಣಗಳಿಂದ ವಲ್ಲಭಭಾಯಿಯ ಬಗ್ಗೆ ಜನರಲ್ಲಿ ತೀರಾ ಅಸಮಾಧಾನವಾಗಿದೆ. ಅವರು ಕಷ್ಟಪಟ್ಟು ಕಟ್ಟಿದ ಕಾಂಗ್ರೆಸ್ಸಿನ ಕೋಟೆಯನ್ನು ಅವರೇ ತಮ್ಮ ನಿಷ್ಠುರತೆಯಿಂದ ಕೆಡವಿಬಿಡುತ್ತಾರೆಯೇನೋ ಅನಿಸುವ ಹಾಗಿದೆ. ಅವರ ನಡಿಗೆಯ ಗುಡುಗಿಗೆ ಅದು ಸಿಡಿದೀತೋ ಅನಿಸುತ್ತದೆ. ಕಾಂಗ್ರೆಸಿನ ನಾಯಕರಲ್ಲಿ ವಲ್ಲಭಭಾಯಿ ಚವತಿಯ ಚಂದ್ರನನ್ನು ಹುಟ್ಟಿದಾಗಲೇ ನೋಡಿರಬೇಕು. ಇಲ್ಲದಿದ್ದರೆ ಇಷ್ಟು ಅಪ್ರೀತಿ-ಅನಾದರಗಳಿಗೆ ಗುರಿಯಾಗುತ್ತಿರಲಿಲ್ಲ.

ಇದರಲ್ಲೆಲ್ಲ ಒಂದು ಮಾತು ಬುದ್ಧಿಗೆ ನಿಲುಕದೆ ನಿಲ್ಲುತ್ತದೆ. ಯಾರ ಬಗ್ಗೆಯೇ ಆಗಲಿ ಅವರಿಗೆ ವೈಯಕ್ತಿಕ ದ್ವೇಷವಿಲ್ಲ. ಅವರ ಜಗಳ ರಾಜಕಾರಣದ್ದು, ನೇಸೆಯ ನೀತಿ ನಿಯಮಗಳದು; ವೈಯಕ್ತಿಕ ಪ್ರಸಂಗಗಳಲ್ಲಿ ಅದು ಬಯಲಿಗೆ ಬಂತು. ವಿಠ್ಠಲಭಾಯಿಯ ಹಣ ಸರದಾರರಿಗೆ ಬೇಕಿರಲಿಲ್ಲ. ಸುಭಾಷ ಬೋಸರಿಗೆ ಸಿಗಬಾರದು. ಸಿಕ್ಕರೆ ರಾಜಕಾರಣದ ಗುಂಪೊಂದು ಬೆಳೆದೀತು. ಖರೆ ಮಂತ್ರಿಯಾಗದೆ ಶುಕ್ಲ ಆದರೆ ಸರದಾರರಿಗೆ

ಬಂದ ಲಾಭವೇನೂ ಇಲ್ಲ. ಮೇಲಿನ ಸಮಿತಿಯ ಮಾತನ್ನು ಮೀರಿ ಸ್ವತಂತ್ರವಾಗಿ ಪ್ರವರ್ತಿಸುವ ಆ ವೃತ್ತಿಯನ್ನು ಸಹಿಸಲು ಸಾಧ್ಯವಿಲ್ಲ. ಇದೆಲ್ಲದರಲ್ಲಿ ಒಂದು ಗಡುಸುತನ ಇದೆ. ನಿಜ. ಆದರೆ ಅಡಿಗೆ ಮಾಡು ವಾಗ ಪಲ್ಲೆ ಹೆಚ್ಚದೆ ಹೇಗೆ? ಕದನಕೇಳಿಯಲ್ಲಿ ಗಾಯವಾಯಿತು ಎಂದರೆ ಹೇಗೆ? ವಲ್ಲಭಭಾಯಿಗೆ ಕ್ರೌರ್ಯವಿಲ್ಲ. ಅದು ಬರಿಯ ನಿರ್ದಯೆ. ಅವರಿಗೆ ಸತ್ಯಾಗ್ರಹ ಸಂಗ್ರಾಮವು ಒಂದು ಕುಲಧರ್ಮ. ಮನೆಯಿಲ್ಲ ಮಡದಿ ಯಿಲ್ಲ; ರಸವಿಲ್ಲ ರಂಗಿಲ್ಲ. ವಲ್ಲಭಭಾಯಿ ದೇಶಕ್ಕಾಗಿ ತಮ್ಮ ರಸಜೀವ ವನ್ನು ಸುಟ್ಟುಕೊಂಡು ವೀರವೃತ್ತಿಯ ವ್ರತ ತೊಟ್ಟಿದಾರೆ. ಎಲ್ಲರೂ ವೀರವೃತ್ತಿಯ ವ್ರತ ತೊಟ್ಟಿದಾರೆ. ಎಲ್ಲರೂ ಹಾಗೆಯೇ ಇರಬೇಕೆಂದು ಅವರ ಹಟ. ಅವರ ನೇತೃತ್ವದಲ್ಲಿ ಕೆಲವು ತಪ್ಪುಗಳಂಥವು ಆಗಿದ್ದರೆ ಅವು ಆ ಕರ್ತವ್ಯದಕ್ಷತೆಯ ಫಲ, ಆ ಕಾರ್ಯನಿರ್ವಹಣದ ವಿಧಿ.

ಸರದಾರರು ಗಾಂಧೀ ಪಂಥಕ್ಕೆ ಬೇಗನೆ ಬರಲಿಲ್ಲ. ಈ ವೈರಾಗಿಯ ಸಿದ್ಧಾಂತ ಅವರಿಗೆ ಸರಿಕಾಣಲಿಲ್ಲ ಮೊದಲು. ಅಹಮದಾಬಾದಿನಲ್ಲಿ ಅವರು ವಕೀಲಿ ನಡೆಸಿದ್ದಾಗ ಗಾಂಧೀಜಿ ಎಂದರೆ ತುಂಬಾ ಅಸಡ್ಡೆ. ಒಂದು ದಿನ ಗಾಂಧೀಜಿ ಅಹಮದಾಬಾದ ವಕೀಲರ ಸಂಘದಲ್ಲಿ ತಮ್ಮ ಸತ್ಯಾಗ್ರಹ ಸಿದ್ಧಾಂತವನ್ನು ತಿಳಿಸಿ ಹೇಳಲು ಬಂದಿದ್ದರು. ವಲ್ಲಭಭಾಯಿ ಆಗ ಎಲ್ಲಿಯೋ ಬೇರೆ ಕೋಣೆಯಲ್ಲಿ ಇಸ್ಪೇಟು ಆಡುತ್ತಿದ್ದರಂತೆ. ಇಂಥ ವರು ಗಾಂಧೀಜಿಯ ಅನುಯಾಯಿಯಾಗಿ ಸತ್ಯಾಗ್ರಹ ವ್ರತ ತೊಟ್ಟುದು ಗುಜರಾತಿಗೆ ಆಶ್ಚರ್ಯವಾಯಿತು. ವಲ್ಲಭಭಾಯಿ ಸಾಮಾನ್ಯವಾಗಿ ಇನ್ನೊ ಬ್ಬರಿಗೆ ಬಾಗುವ ಪ್ರಾಣಿಯಲ್ಲ. ಶಾಲೆಯಲ್ಲೇ ಇವರ ತುಂಟತನ ಪ್ರಸಿದ್ಧಿ ಯಾಗಿತ್ತು. ಆಗ ಗುಜರಾತಿನಲ್ಲಿ ಸಂಸ್ಕೃತದ ಪ್ರಾಬಲ್ಯ. ಹುಡುಗರೆಲ್ಲ ಸಂಸ್ಕೃತವನ್ನೆ ತೆಗೆದುಕೊಳ್ಳುತ್ತಿದ್ದರು. ಸರದಾರರು ಗುಜರಾತಿ ತೆಗೆದು ಕೊಂಡರು. ಇವರ ಗುಜರಾತಿ ಪಂಡಿತ ಕೇಳಿದ ಸಂಸ್ಕೃತವೇಕೆ ತೆಗೆದು ಕೊಳ್ಳಲಿಲ್ಲ. ಅವನಿಗೆ ಅದರ ಬಗ್ಗೆ ಪಕ್ಷಪಾತ. ಸರದಾರರು ಅಂದದು: 'ಎಲ್ಲರೂ ಸಂಸ್ಕೃತ ತೆಗೆದುಕೊಂಡರೆ ಗುಜರಾತಿ ಯಾರು ಕಲಿಯಬೇಕು? ಯಾರೂ ಗುಜರಾತಿ ಕಲಿಯದೆ ನಿಮ್ಮದು ಹೇಗೆ ನಡೆಯಬೇಕು?' ಸರ ದಾರರ ತುಂಟತನಕ್ಕೆ ಯಾವ ಶಾಲೆಯಲ್ಲೂ ಕಡೆತನಕ ಇವರಿಗೆ ಎಡೆ

ಸಿಗಲಿಲ್ಲ. ಎಷ್ಟೋ ಶಾಲೆ ತಿರುಗಬೇಕಾಯಿತು. ವಕೀಲಿ ಮಾಡಿದಾಗಲೂ ಅಷ್ಟೆ. ವಲ್ಲಭಭಾಯಿ ಕೇಸು ಹಿಡಿದರೆಂದು ಕೇಳಿ ನ್ಯಾಯಾಧಿಕಾರಿಗಳು ನಡುಗುವಂತೆ ಆಯಿತು. ಇವರ ಹಿಡಿತವನ್ನು ತಪ್ಪಿಸಲಿಕ್ಕೆ ಎಂದು ಬೋರ್ಸಾದಿನಲ್ಲಿದ್ದ ಕಚೇರಿಯನ್ನು ಆನಂದ್‌ಗೆ ಬದಲು ಮಾಡಿದರು. ಆನಂದ್‌ಗೆ ವಲ್ಲಭಭಾಯಿಯೂ ಬಂದರು. ಕೂಡಲೆ ಕಚೇರಿ ಮತ್ತೆ ಬೋರ್ಸಾದಿಗೆ ಹೋಯಿತು. ಇಂಥ ವಿಚಿತ್ರ ವ್ಯಕ್ತಿ ಗಾಂಧೀಜಿಗೆ ಶರಣಾಗತನಾದುದು ಜನರಿಗೆ ಆಶ್ಚರ್ಯ ಉಂಟುಮಾಡಿತು.

ಗಾಂಧೀಜಿಯ ಸಿದ್ಧಾಂತಕ್ಕಿಂತ ಅವರ ಕಾರ್ಯಶಕ್ತಿಯೇ ಸರದಾರರಿಗೆ ಆ ಬುದ್ಧಿ ಕೊಟ್ಟಿತು. ಸುಖವಾಗಿ ಶಾಸನ ಸಭೆಗಳಲ್ಲಿ ಕುಳಿತು ನಡೆಸುತ್ತಿದ್ದ ಮುಖಂಡರ ರಾಜಕಾರಣದಲ್ಲಿ ವಲ್ಲಭಭಾಯಿಗೆ ಅಷ್ಟಾಗಿ ಒಲವಿರಲಿಲ್ಲ. ಆದರೆ ಈ ತ್ಯಾಗಶಕ್ತಿ-ಕ್ರಾಂತಿಯ ಮುಂದೆ ವಲ್ಲಭಭಾಯಿ ಕರಗಿ ಹೋದರು. ತಮ್ಮ ಸುಖಸಂಪತ್ತನ್ನು ಬಿಟ್ಟು ಸತ್ಯಾಗ್ರಹದಲ್ಲಿ ಧುಮುಕಿದರು. ಗುಜರಾತಿನ ಹಳ್ಳಿಹಳ್ಳಿಗಳನ್ನೂ ಸುತ್ತಿದರು. ಪ್ರಾಂತದಲ್ಲಿ ಮಿಂಚು ಹರಿದಾಡಿದಂತಾಯಿತು. ಹೊಸಕಳೆ ಹೊಸಜೀವ ಬಂದವು. ಅದರ ಫಲ ಬಾರ್ಡೋಲಿಯ ಸತ್ಯಾಗ್ರಹ.

ವಲ್ಲಭಭಾಯಿ ಗಾಂಧೀ ಸಿದ್ಧಾಂತದ ತಂತ್ರಮಾರ್ಗ. ಗಾಂಧೀ ದರ್ಶನದಲ್ಲಿಯೂ ಹೀನಯಾನ ಮಹಾಯಾನಗಳಾದರೆ ಇವರದು ವಾಮ ಮಾರ್ಗ. ಗಾಂಧೀಜಿಗೆ ವಲ್ಲಭಭಾಯಿ ಬಲಗೈ, ಮೈ-ಎಂದೆ. ಒಂದು ರೀತಿಯಿಂದ ಅದು ನಿಜ. ಅವರು ಪ್ರಾಣ. ಇವರು ಬರೀ ಮಣ್ಣು. ಅವರು ಶಕ್ತಿ, ಇವರು ಯಂತ್ರ. ಇವರ ಕಣ್ಣು ನೆಲದ ಮೇಲೇ ಹರಿದಾಡುತ್ತಿದೆ; ಮುಗಿಲ ಕಡೆ ಹಾರುವುದಿಲ್ಲ. ಆ ಕೈಗೆ ಜಪಸರವಲ್ಲ, ರಾಟಿಯಲ್ಲ; ರಾಜದಂಡ ಒಪ್ಪುತ್ತದೆ. ಆ ಮೋರೆಯಲ್ಲಿ ಗಾಂಭೀರ್ಯವಿದೆ; ಪ್ರಸನ್ನತೆಯಿಲ್ಲ. ತುಟಿಯ ಮೇಲೆ ಸಂಕಲ್ಪದ ಸುಳಿಯಿದೆ; ನಗೆಯ ಅರಳು ಇಲ್ಲ. ಮಾತಿನಲ್ಲಿ ಸಿಡಿಲು ಗುಡುಗು ಇದೆ; ಹೂ ಮಳೆಯಿಲ್ಲ. ಆ ಎದೆ ವಜ್ರದಂತೆ ಗಡುಸು; ಬೆಣ್ಣೆಯ ಮೆದುವು ಅಲ್ಲಿಲ್ಲ. ಗಾಂಧೀಜಿ ಬೆಣ್ಣೆಗಿಂತ ಮಿದುವಾದರೂ ವಜ್ರಕ್ಕಿಂತ ಗಡುಸು. ಸರದಾರರಿಗೆ ಆ ಇಂದ್ರಜಾಲವಿಲ್ಲ. ಗಾಂಧೀಜಿಗೆ ದಾಸರಭಕ್ತರ ಹಾಡುಗಳೆಂದರೆ ತುಂಬಾ

ರುಚಿ. ಒಳ್ಳೆಯ ಸಂಗೀತವನ್ನೂ ಬಯಸುತ್ತಾರೆ. ಸರದಾರರಿಗೆ ವಂದೇ ಮಾತರಂ ಬಿಟ್ಟರೆ ಬೇರೆ ಯಾವುದೂ ಬೇಕಾಗಿಲ್ಲ. ಅದೂ ರಾಷ್ಟ್ರಗೀತೆ ಎಂತಬೇಕು. ಗಾಂಧೀಜಿಗೆ ರಾಜಕಾರಣವು ಒಂದು ಆಧ್ಯಾತ್ಮ ಪ್ರಯೋಗ. ಸರದಾರರಿಗೆ ಅದು ಬುದ್ಧಿಯುಕ್ತಿಗಳ ಚದುರಂಗದಾಟ. ಗಾಂಧೀಜಿಗೆ ಒಂದೇ ಉಪಾಯ ಸತ್ಯ, ಸರದಾರರು ಚತುರೋಪಾಯ ಸಮರ್ಥರು. ಗಾಂಧೀಜಿಗೆ ವೈಯಕ್ತಿಕ ಜೀವನ-ಆತ್ಮಮೋಕ್ಷವು ಗುರಿ. ಸರದಾರರಿಗೆ ಮೋಕ್ಷದ ಗೊಡವೆ ಇಲ್ಲ; ರಾಷ್ಟ್ರಜೀವನದ ಮೇಲೆ ಕಣ್ಣು. ಧರ್ಮವಿಲ್ಲದ ಬಾಳು ಬಾಳಲ್ಲ ಗಾಂಧೀಜಿಗೆ; ಅಂದು ಸಾವು. ಸರದಾರರಿಗೆ ಬಾಳಿನಲ್ಲಿ ಧರ್ಮದ ತೊಡಕು ಸಲ್ಲದು. ಗಾಂಧೀಜಿಗೆ ಗೀತೆ ಮುಖ್ಯಗ್ರಂಥ; ಅದಕ್ಕೆ ಒಂದು ವ್ಯಾಖ್ಯಾನವನ್ನೇ ಒರೆದರು. ವಲ್ಲಭಾಯಿ ಮೊನ್ನೆ ಮೊನ್ನೆಯ ವರೆಗೆ ಯಾವ ಧರ್ಮಗ್ರಂಥವನ್ನೂ ಓದಿರಲಿಲ್ಲ; ಗೀತೆಯನ್ನೂ ಕೂಡ ಈಚೆಗೆ ಓದಿದುದು. ಅಹಿಂಸೆ ಗಾಂಧೀಜಿಗೆ ಪರಮ ಧರ್ಮ. ಸರದಾರರಿಗೆ ಅದು ಪಂಚಮೋಪಾಯ. ಗಾಂಧೀಜಿಗೆ ಬೇಕಾದುದು ಧರ್ಮಸಾಮ್ರಾಜ್ಯ. ಸರದಾರರಿಗೆ ಬೇಕಾದುದು ಸ್ವರಾಜ್ಯ.

ಹಿಂದುಸ್ತಾನದ ಭವಿಷ್ಯ ಈ ಇಪ್ಪತ್ತು ವರ್ಷಗಳಿಂದ ಈ ಜೋಡಿಯ ಕೈಯಲ್ಲಿ.

# ಆಚಾರ್ಯ ಕೃಪಾಲಾನಿ

•

ಕೃಪಾಲಾನಿ ಏನೋದಿಗಳೆಂದು ಸುಲಭವಾಗಿ ತಿಳಿಯುವುದಿಲ್ಲ. ವಲ್ಲಭಭಾಯಿಗಿದ್ದಂತೆ ಇವರಿಗೂ ನಾಲಗೆ ಕೊಂಚ ಹರಿತ. ಹಿಂದು ಮುಂದು ನೋಡದೆ ಮಾತಾಡುತ್ತಾರೆಯೇನೋ ಅನಿಸುತ್ತದೆ. ಟೀಕೆ ಮಾಡಿದರೆ, ಯಾವುದನ್ನಾದರೂ ವಿಮರ್ಶೆ ಮಾಡಿದರೆ ಅದು ಪಟ್ಟಾನರಸೆ. ದಯೆಯಿಲ್ಲ, ದಾಕ್ಷಿಣ್ಯವಿಲ್ಲ. ಎಷ್ಟೋ ಸಲ ಗಾಂಧೀಜಿಯನ್ನು ತೀವ್ರ ವಾಗಿ ಟೀಕಿಸಿದ್ದಾರೆ.

ಕೃಪಾಲಾನಿ ಸ್ವಭಾವತಃ ಧೀರರು, ನೇರಾದ ಹಾದಿಯವರು. ಕೊಂಕು ಕಪಟಗಳಾಗಲಿ, ಆಳ್ವಿದೆಯಾಗಲಿ ಅವರಿಗೆ ಸೇರದು. ಅಂತೇ ಅವರ ಮಾತು ಕೆಲವು ಸಲ ಸಿಡಿಲಾಗುತ್ತದೆ.

ನೋಡಲು ಹುಚ್ಚರಂತೆ ಇದ್ದರೂ ಕೃಪಾಲಾನಿ ದೊಡ್ಡ ವಿದ್ವಾಂಸರು. ಉಚ್ಚ ಶಿಕ್ಷಣ ಪಡೆದು, ಪ್ರೊಫೆಸರರಾಗಿ ಕಾಲ ಕಳೆದವರು. ಜೀವನದಲ್ಲಿ ಇಳಿದು ಬಾರದ ಜ್ಞಾನ ಜ್ಞಾನವಲ್ಲವೆಂದು ನಂಬಿದ ವ್ಯವಹಾರವಾದಿ. ಕರ್ಮಜೀವನದಲ್ಲಿ ತೊಡಗಿದರೂ ಕೀರ್ತಿಯ ಗೋಪುರವನ್ನೇರುವ ಆಸೆಯಿಲ್ಲದ ವೇದಾಂತಿ. ಹೆಚ್ಚು ರಭಸಕ್ಕೆ ಹೋಗದೆ ತಮ್ಮ ಪಾಲಿಗೆ ಆರಿಸಿಕೊಂಡ ಕೆಲಸವನ್ನು ಪೂರ್ಣವಾಗಿ ಸಾಧಿಸುವುದರಲ್ಲಿ ತೊಡಗುತ್ತಾರೆ.

ಇವರು ಹುಟ್ಟಿದುದು ಸಿಂಧ ಪ್ರಾಂತದಲ್ಲಿ. ಕರ್ಮಪ್ರವಾಹದಲ್ಲಿ

ತೇಲಿಕೊಂಡು ನಾಲ್ಕಾರು ಪ್ರಾಂತಗಳಲ್ಲಿ ತಮ್ಮ ಆಯುಷ್ಯ ಕಳೆದಿದಾರೆ. ಬಿಹಾರ ಪ್ರಾಂತದಲ್ಲಿ–ಮುಜಫರ್‌ಪುರದಲ್ಲಿ–ಕಾಲೇಜಿನ ಪ್ರೊಫೆಸರರಾಗಿದ್ದಾಗ, ಇವರಿಗೆ ಗಾಂಧೀಜಿಯ ಪ್ರಥಮ ದರ್ಶನವಾಯಿತು. ಅದನ್ನು ಅವರೇ ಈಚೆಗೆ ವರ್ಣಿಸಿದಾರೆ. ಹಿಂದುಸ್ತಾನಕ್ಕೆ ಗಾಂಧೀಜಿ ಬಂದಾಗ ಶಾಂತಿನಿಕೇತನದ ವರೆಗೆ ಹೋಗಿ ಅವರನ್ನು ನೋಡಿ ಬಂದರು. ಅಂದಿನಿಂದ ಅವರಲ್ಲಿ ದೃಢವಾದ ಗೌರವ, ಶ್ರದ್ಧೆ ಉಂಟಾದವು. ಹರೆಯದಲ್ಲಿ ಕೃಪಾಲಾನಿ ಕ್ರಾಂತಿವಾದಿ, ಹಿಂಸಾವಾದಿ. ಗಾಂಧೀದರ್ಶನ ಅದನ್ನು ಅಹಿಂಸೆಗೆ ಪೂರಾ ತಿರುಗಿಸಿಬಿಟ್ಟಿತು. ಮುಂದೆ ಗಾಂಧೀವಾದವನ್ನು ಇವರಷ್ಟು ವಿಶದವಾಗಿ, ಸ್ಪಷ್ಟವಾಗಿ ವಿವರಿಸುವವರೇ ಇಲ್ಲದಾಯಿತು. ಅಹಿಂಸೆಯ ತಳಹದಿಯ ಮೇಲೆ ನಿಂತ ಗಾಂಧೀವಾದವು ಹೇಗೆ ದೇಶದ ರೈತರ, ಕೂಲಿಕಾರರ ಸಮಸ್ಯೆಯನ್ನು ಬಿಡಿಸುತ್ತದೆಂಬುದನ್ನೂ, ಸಾಮ್ಯವಾದ, ಮಾರ್ಕ್ಸ್‌ವಾದ, ಕಮ್ಯುನಿಝಂ ಮುಂತಾದ ಪಂಥಗಳಿಗಿಂತ ಹೇಗೆ ಉತ್ತಮವೆಂಬುದನ್ನೂ, ಮುಖ್ಯವಾಗಿ ಜಗತ್ಕಲ್ಯಾಣಕ್ಕೆ ಹೇಗೆ ದೋಹದಕಾರಿಯೆಂಬುದನ್ನೂ ಆಗಾಗ ಲೇಖನಗಳ ಮೂಲಕ ತೋರಿಸುತ್ತಿದಾರೆ.

ಚಂಪಾರಣ್ಯದಲ್ಲಿ ಗಾಂಧೀಜಿ ಸತ್ಯಾಗ್ರಹ ಮೊದಲು ಮಾಡಿದಾಗ ಕೃಪಾಲಾನಿಗೆ, ಚಾತಕಪಕ್ಷಿಗೆ ಮಳೆಹನಿ ಉದುರಿದಂತಾಯಿತು. ಗಾಂಧೀಜಿಗೆ ನೆರವಾಗಿ ನಿಂತು ಆ ಸತ್ಯಾಗ್ರಹವನ್ನು ನಡೆಸಿದರು. ಅಲ್ಲೇ ಇವರಿಗೆ ಸತ್ಯಾಗ್ರಹದ ಕಲೆಯಹಿಡಿತ, ಅನುಭವವಾಯಿತು.

ಮುಂದೆ ಕೆಲವು ಕಾಲ ಕಾಶಿಯಲ್ಲಿ ಮದನಮೋಹನ ಮಾಲವೀಯರ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದರು. ೧೯೧೯ರ ದಿನಗಳು ಅವು. ಹಿಂದುಸ್ತಾನದಲ್ಲಿ ರಾಜಕೀಯ ಬಿಕ್ಕಟ್ಟು ಬೆಳೆದಿತ್ತು. ಮಾಂಟೆಗ್ಯೂ ಚೆಮ್ಸ್‌ಫೋರ್ಡರ ವರದಿ ಬಂದಿತ್ತು. ಆ ಸಂದರ್ಭದಲ್ಲಿ ಪಂಡಿತ ಮಾಲವೀಯರೇ ಕಾಂಗ್ರೆಸ್ಸಿಗೆ ಅಧ್ಯಕ್ಷರಾದರು. ಕೃಪಾಲಾನಿಗೆ ಕಾಂಗ್ರೆಸ್ಸಿನ ಪರಿಚಯವಾದುದು, ಭಾರತದ ಬೇರೆ ಬೇರೆ ನಾಯಕರ ಗುರುತಾದುದು ಆಗಲೇ.

ಆಮೇಲೆ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ರಾಜಕಾರಣದ ಅಧ್ಯಾಪಕರಾಗಿದ್ದರು. ಗುಜರಾತಿನಲ್ಲಿ ಗಾಂಧೀಜಿ ಗುಜರಾತ ವಿದ್ಯಾಪೀಠವನ್ನು

ಪ್ರಾರಂಭಿಸಿದಾಗ ಅಲ್ಲಿಗೆ ಹೋದರು. ಐದು ವರ್ಷಕಾಲ ರಾಷ್ಟ್ರೀಯ ಕಾರ್ಯಕರ್ತರನ್ನು ಅಲ್ಲಿ ತಯಾರುಮಾಡಿ, ಮುಂದೆ ಮೀರತದಲ್ಲಿ ಗಾಂಧೀ ಆಶ್ರಮವನ್ನು ಪ್ರಾರಂಭಿಸಿ ಖಾದೀ ಕಾರ್ಯದಲ್ಲಿ ತೊಡಗಿದರು.

ಮುಂದೆ ಕಾಂಗ್ರೆಸ್ಸಿನ ಕಾರ್ಯದರ್ಶಿಯಾದರು. ೧೯೩೪ರಿಂದ ಇಂದಿಗೂ ಆ ಸ್ಥಾನದಲ್ಲೇ ಇದ್ದಾರೆ.

ಕೃಪಾಲಾನಿಗೆ ಒಡತನವು ದೊಡ್ಡದೊಂದು ವ್ರತ. ಕಾರ್ಯದರ್ಶಿಯಾಗಿ ೭೫ ರೂಪಾಯಿ ಸಂಬಳ ಸಿಕ್ಕರೂ ಬರೀ ೮ ರೂಪಾಯಿ ಮಾತ್ರವೇ ತೆಗೆದು ಕೊಳ್ಳುತ್ತಿದ್ದರಂತೆ ಮದುವೆಯಾಗುವವರೆಗೂ. ೪೦–೪೫ ವರ್ಷ ಬ್ರಹ್ಮ ಚಾರಿಗಳಾಗಿದ್ದು ಈಗ ಮದುವೆ ಮಾಡಿಕೊಂಡಿದ್ದಾರೆ. ಈ ಬೈರಾಗಿಗೆ ಮದುವೆಯಾದರೂ ಏಕೆ ಬೇಕಾಯಿತೆಂದು ಆಶ್ಚರ್ಯಪಡದವರು ಇಲ್ಲ. ಆ ಗುಟ್ಟು ಶ್ರೀಮತಿ ಸುಚಿತಾದೇವಿಗೆ ಮಾತ್ರ ಗೊತ್ತು.

ಇವರನ್ನು ಆಚಾರ್ಯ ಕೃಪಾಲಾನಿಯೆಂದು ಕರೆಯುತ್ತಾರೆ. ಆಚಾರ್ಯ ಶಬ್ದಕ್ಕೆ ಇವರು ನಿಜವಾಗಿಯೂ ತಕ್ಕವರು. ಆ ಹಿಂದಿನ ಕಾಲದ ತಪಸ್ವಿ ಗಳ ಎಲ್ಲ ತೇಜಸ್ಸೂ ಇವರಿಗಿದೆ.



# ಅಮಾತ್ಯ ರಾಜಗೋಪಾಲಾಚಾರ್ಯ

•

ರಾಜಗೋಪಾಲಾಚಾರ್ಯರು ಮದರಾಸಿನ ಪ್ರಧಾನ ಮಂತ್ರಿಯಾಗಿದ್ದಾಗ ಅಲ್ಲಿನ ಕಾಲೇಜು ಹುಡುಗರು ಗಾಂಧೀಜಿಗೆ ಒಂದು ಕಾಗದ ಬರೆದರು. 'ರಾಜಗೋಪಾಲಾಚಾರ್ಯರು ದಿನಾಲೂ ಬೆಳಿಗ್ಗೆ ಅರ್ಧಗಂಟೆ ಹೊತ್ತು ತಮ್ಮ ಬಟ್ಟೆ ಬರೆ ಒಗೆದುಕೊಳ್ಳುತ್ತ ಕಾಲಕಳೆಯುತ್ತಾರೆ. ಅದೇ ಹೊತ್ತನ್ನು ರಾಜಕಾರಣದಲ್ಲಿ ಕಳೆದರೆ ನಾಡಿಗೆ ಲಾಭವಲ್ಲವೆ? ಈ ಸರಲ ಜೀವನದ ಹುಚ್ಚಿನಿಂದ ಯಾರಿಗೇನು ಉಪಯೋಗ ಈ ಕಾಲದಲ್ಲಿ?' ಎಂದು ದೂರಿಕೊಂಡಿದ್ದರು. ಗಾಂಧೀಜೀ ಹುಡುಗರಿಗೆ ಇದಿರು ಮೋಡಿಹಾಕಿದರು. ನೀವೂ ದಿನವೂ ಅರ್ಧಗಂಟೆ ನಿಮ್ಮ ಬಟ್ಟೆಬರೆ ಒಗೆಯಿರಿ. ನಿಮ್ಮ ಓದು ಹೆಚ್ಚು ಸಾರ್ಥಕವಾದೀತು ಎಂದು ಬರೆದರು.

ಇನ್ನೇನೂ ಅಲ್ಲದಿದ್ದರೂ ಈ ಪ್ರಸಂಗ ಆಚಾರ್ಯರ ಅತ್ಯಂತ ಸರಲ ಜೀವನದ ಗುರುತು. ಗಾಂಧೀ ಯುಗದಲ್ಲಿ ಸರಲಜೀವನಕ್ಕೆ ಮತ್ತೆ ಮಣಿಹಾಕಿದೇವೆ. ಅಗ್ಗವಾಗಿ ದೊರೆವ ಗಿರಣಿಬಟ್ಟೆಗಳ ನಾನಾವೇಷಗಳ ನಾಗರಿಕತೆಯ ಸಂತೆಯಲ್ಲಿ ಹಳ್ಳಿಗಾಡಿನ ಕೈನೂಲಿನ ಒರಟು ಖಾದಿಗೂ ಒಂದು ಅಂಗಡಿಯ ತಾವು ಸಿಕ್ಕಿದೆ. ಅದರಿಂದ ಕಾಯಕದ ಗಂಭೀರ ವರ್ಚಸ್ಸು ಜನರ ಜೀವನದ ಮೇಲೆ ಬೀಳಹತ್ತಿದೆ. ಆಚಾರ್ಯರೂ ಆ ಹಾದಿಯಲ್ಲಿ ತಮ್ಮ ಶಕ್ತಿಮೀರಿ ಪ್ರಯತ್ನ ಮಾಡುತ್ತಿದಾರೆ.

ಮದರಾಸು ಕಾಲೇಜು ಹುಡುಗರು ಹೇಳಿದ ದೂರು ಈಗಿನ

ಕಾಲದ ನಾಗರಿಕತೆಯು ಬಳ್ಳಿ, ಬಿಟ್ಟ ಹೂ.।ಈ ತರದ ಮನೋಜಾಡ್ಯ ಜನರಲ್ಲಿ ತುಂಬಾ ಹರಡಿಬಿಟ್ಟಿದೆ. ನಮ್ಮ ಮೈಯಲ್ಲೇ ನಮಗೆ ಶ್ರದ್ಧೆ ಯಿಲ್ಲವಾಗಿದೆ. ನಮ್ಮ ಸುತ್ತಲೂ ಬಾಳನ್ನು ಕಟ್ಟಿಕೊಳ್ಳದೆ ಅದರ ಹಿಂದೆ ಓಡುತ್ತಿದ್ದೇವೆ. ರಾಜಕಾರಣಿಗೆ ಬೇರೆ ಬದುಕಿಲ್ಲ. ಸಾಹಿತಿಗೆ ಉಳಿ ದುದು ಬೇಡ. ಇದು-ಈ ಪ್ರಥಕ್ಕರಣ. ಹೀಗೆ ಬಾಳನ್ನು ಹೆಚ್ಚಿ ಹೋಳು ಮಾಡುವುದು-ನಮ್ಮ ನಾಗರಿಕತಾ ದೇವಿ ಕೊಟ್ಟಶಾಪ. ಬದುಕಿದ ಗರ್ಭಗುಡಿಯಿಂದ ದೂರ ಹರದೋಡಿ ಪ್ರಾಕಾರಗಳನ್ನು ದಾಟಿ ಹೊರ ಗಿನ ಬೀದಿಗಳಲ್ಲಿ ಅಲಿಯುತ್ತಿದ್ದೇವೆ. ನಮ್ಮ ಆಸೆ ಬೆಳೆಯುತ್ತಿದೆ. ನಮ್ಮ ಅಳವಿಗೆ ಮೀರಿದ ರಾವಣಯಂತ್ರವನ್ನು ನಿರ್ಮಿಸತೊಡಗಿ, ಅದರ ಕಳ್ಳ ತಿರುಪಿನಲ್ಲಿ ಸುಳ್ಳು ಬಾಗಿಲಲ್ಲಿ ಸಿಕ್ಕಿಕೊಂಡು ನಮ್ಮ ವ್ಯಕ್ತಿತ್ವ-ಸ್ವಾತಂತ್ರ್ಯಗಳನ್ನೇ ಕಳೆದುಕೊಂಡಿದ್ದೇವೆ. ಯಂತ್ರ ತಿರಿಗಿಸುವ ಜಾಣ ರಾದ ಸಾವಿರ ಸಾವಿರ ಯಾಂತ್ರಿಕರು, ಬೇಡದವರನ್ನು ಕೂಡ ಕಾಡಿ ಒಲ್ಲದ ಕೈಗೂ ತಮ್ಮ ದೀನಸನ್ನು ಮಾರುವ ವ್ಯಾಪಾರಿಗಳು, ಗಾಳಿ ಬೆಳಕನ್ನು ಕಾಣದೆ ದುಡಿವ ಕೂಲಿಗಾರರು, ಉಳಿದವರು,-ಯಂತ್ರವ್ಯೂ ಹದಲ್ಲಿ ದುಡಿವ ಕೋಟ್ಯಾನು ಕೋಟಿ ಜನರಿಗಿಂತ, ಹಳೆಯಕಾಲದಲ್ಲಿ ಹತ್ತಿ ಬಿತ್ತಿ, ದಾರ ನೂತು, ನೂಲನ್ನು ನೇದು, ಹಚ್ಚಡ ಹೊದೆದು ಸರಳವಾಗಿ ಬಾಳುತ್ತಿದ್ದ ಹಳ್ಳಿಯುಜನ ಸೃಷ್ಟಿಯು ಸತ್ವಕ್ಕೆ ಹೆಚ್ಚು ಹತ್ತಿರ ಬಾಳುತ್ತಿದ್ದರು. ತನ್ನ ಪ್ರಯೋಗ ಶಾಲೆಯಲ್ಲಿ ವಿಪರೀತ ಪ್ರಯೋ ಗಗಳನ್ನು ಮಾಡುತ್ತ ಕೂತ ಫ್ರಾಂಕೆನ್‌ಸ್ಟೀನನಂತೆ ಇದಾನೆ ಇಂದಿನ ಮನುಷ್ಯ ಎಂದು ಗಾರ್ಡಿನರ್ ಹೇಳಿದಾನೆ. ನಿಜ. ಪರಕಾಯ ಪ್ರವೇಶ ಮಾಡಿ ತನ್ನ ಮೊದಲಿನ ದೇಹಕ್ಕೆ ಬರಲು ಶಕ್ತಿ ಸಾಲದೆ ಅದರಲ್ಲೇ ಸೆರೆ ಸಿಕ್ಕ ಅರೆಬರೆ ಯೋಗಿಯಂತೆ ಆಗಿದ್ದೇವೆ. ನಮ್ಮ ಕೈಗಳಿಂದಲೇ ನಮ್ಮ ಜಾಣತನದಿಂದಲೇ ನಮ್ಮ ಬದುಕಿನ ಮಣ್ಣಿನಲ್ಲಿ ದೊಡ್ಡ ಪೆಡಂಭೂತ ವನ್ನು ಸೃಷ್ಟಿಸಿ ಅದರಲ್ಲಿ ಪ್ರಾಣಪ್ರತಿಷ್ಠೆ ಮಾಡಿದ್ದೇವೆ. ಈಗ ಅದು ನಮ್ಮ ಅಧಿಕಾರಕ್ಕೆ ಮೀರಿ ನಮ್ಮ ಬುದ್ಧಿಗೆ ಎಟುಕದಂತೆ ಬೆಳೆದು ನಮ್ಮನ್ನೇ ನುಂಗಬಯಸುತ್ತದೆ. ಶಿವನಿಂದ ವರವನ್ನು ಪಡೆದು ಶಿವ ನನ್ನೇ ಸುಡಲು ಬಂದ ಭಸ್ಮಾಸುರನಂತೆ. ನಾವೂ ಹಾಗೆಯೇ ನಮ್ಮ

ತಮಸ್ಸಿನಲ್ಲಿ ಈ ಭಸ್ಮಾಸುರನನ್ನು ರಚಿಸಿದೇವೆ. ಈಗ ಅದೇ ನಮ್ಮ ಮೃತ್ಯುವಾಗಿದೆ.

ಇದಕ್ಕೆ ಒಂದೇ ಉಪಾಯ. ಸರಲಜೀವನ-ಧರ್ಮವಿಚಾರದ ಮೋಹಿನಿಯು ಅವತಾರವಾಗಬೇಕು. ಯಂತ್ರವನ್ನು ಅಟ್ಟಕ್ಕೇರಿಸಿ ಮನುಷ್ಯನನ್ನೂ ಗುಂಡಿಗೆ ತಳ್ಳಿದ ಈ ನಾಗರಿಕತೆಯು ಕೊನೆ ಆಗಲೇ. ಕಲೆಯ ಆನಂದವಿರದ ಬರೀ ರಚನೆ-ಉತ್ಪತ್ತಿ. ಧರ್ಮವಿಲ್ಲದ ಅರ್ಥಕಾಮ, ನೀತಿ ಇಲ್ಲದ ರಾಜಕಾರಣ ಮುಂತಾದ ಅಸಮಗ್ರವಿದ್ಯೆಯ ರೀತಿ ಹೋಗ ಬೇಕು. ಕಾರಖಾನೆಗಳ ಹಳಸಿದ ಗಾಳಿಯಲ್ಲಿ ಸುಳ್ಳು ಬೆಳಕಿನಲ್ಲಿ ಬದು ಕುವುದು ಸಾಕು. ನಿಸರ್ಗದ ಗಾಳಿಬೆಳಕಿನಲ್ಲಿ ಬೆಳೆಯೋಣ. ಕಣಜ ಕಟ್ಟುವುದು ಕಾಳು ಕೂಡಿಹಾಕಲಿಕ್ಕೆ, ನಾವೇ ಅದರಲ್ಲಿ ಬೀಳುವುದಕ್ಕಲ್ಲ.

ಈ ಸತ್ಯವನ್ನು ಜನರಿಗೆ ತಿಳಿಸಲು ಆಚಾರ್ಯರು ಬಹಳ ಹೆಣಗಿ ದಾರೆ. ಅವರ ಸರಲಜೀವನವು ಆ ಸಂದೇಶದ ವ್ಯವಹಾರ ಪದ್ಧತಿ. ಅವರ ತಿರುಚಂಗೋಡು ಆಶ್ರಮ ಆದರ ಕ್ರಿಯಾರೂಪ. ಅವರ ಮದ್ಯ ಪಾನ ನಿರೋಧದ ಚಳುವಳಿ ಆ ಕನಸಿನ ಬೆಳಕು.

ಆಚಾರ್ಯರನ್ನು ಗಾಂಧೀಜೀ ತಮ್ಮ keeper of concience-ಮನ ಸ್ಸಾಕ್ಷಿ ಎಂದರು. ಬಲು ದೊಡ್ಡ ಮಾತು. ಗಾಂಧೀಜಿಯ ನಡೆನುಡಿಗೆ ಇವರೆ ತೂಕದ ಯಂತ್ರ? ಅನೇಕ ಸಲ ಗಾಂಧೀಜಿಯ ವಚನಕ್ಕೆ ಆಚಾ ರ್ಯರ ವ್ಯಾಖ್ಯಾನವೇ ಕಡೆಯದು, ನಿರ್ಧಾರವಾದುದು ಆಗಿದೆ. ಗಾಂಧೀ ಸಿದ್ಧಾಂತವನ್ನು ಯುಕ್ತಾಯುಕ್ತವಾಗಿ ಹೇಳಬೇಕಾದರೆ ಆಚಾರ್ಯರು ಬರಬೇಕು.

ಗಾಂಧೀಜಿಗೇಕೆ-ಇಡೀ ಹಿಂದುಸ್ತಾನಕ್ಕೆ, ಹಿಂದುಸ್ತಾನದ ಸಹಜ ಸಂಸ್ಕೃತಿಗೇ ಆಚಾರ್ಯರು ಮನಸ್ಸಾಕ್ಷಿ. ನಮ್ಮ ನಡೆನುಡಿಗಳಿಗೆ ಅದೊಂದು ಅಳತೆಯ ಯಂತ್ರ. ನಮ್ಮ ಅಳತೆ ಕೊಂಚ ಹೆಚ್ಚಾಗಿಯೇ ಬರಲಿ ಎಂದು ನಾವು ಆ ಮಂತ್ರಕ್ಕೆ ಕೈಮುಗಿದರೂ ತೆಂಗಿನಕಾಯಿ ಒಡೆ ದರೂ ಲಾಭವಿಲ್ಲ. ಏನೇ ಮಾಡಲಿ ಅದು ನಿಜವನ್ನೇ ಹೇಳೀತಲ್ಲದೆ ಬೇರೆ ಇಲ್ಲ.

ಈ ತಾತ್ವಿಕ ಬುದ್ಧಿ ಈ ವಿಮರ್ಶೆಯು ನೋಟ ಆಚಾರ್ಯರಿಗೆ ತುಂಬಾ ಸಹಜ. ಅವರ ಬಾಳಿನಲ್ಲಿ ಅವರ ಬಣ್ಣ–ಅಥವಾ ನಿರ್ವರ್ಣ–ಎಲ್ಲೆಲ್ಲಿಯೂ ಕಾಣುತ್ತದೆ. ಅವರ ಅದ್ಭುತತ್ಯಾಗ ಅವರ ಅಖಂಡಸೇವೆ, ಅದಕ್ಕಿಂತ ಹೆಚ್ಚಾಗಿ ಅವರ ಎಲೆಯ ಮರೆಯ ಕಾಯಬಾಳು ಅದರ ಗುರುತು. ಆಚಾರ್ಯರಿಗೆ ಒಲಿವು ನಲಿವು ಗೊತ್ತೇ ಎಂದು ಕೇಳುವವರಿದಾರೆ. ಸಾಧಾರಣ ಜನರ ಮನಸಿನ ನೋವು ಕಾವು ತಿಳಿಯುತ್ತದೆಯೆ ಎಂದು ಕೇಳದವರು ಇಲ್ಲದೆ ಇಲ್ಲ. ಅವರ ಕಪ್ಪು ಕನ್ನಡಕದ ಹಿಂದೆ ಏನೋ ಯುಕ್ತಿಣಿ ಇದೆಯೆಂದು ಅಂಜುವವರೂ ಇದಾರೆ. ಅವರ ಹಟದಲ್ಲಿ ಒಂದು ಬಗೆಯ ನಕ್ಷತ್ರಕತನವಿದೆಯೆಂದು ತೆಗಳಿದಾರೆ. ಆದರೆ ಆಚಾರ್ಯರ ಸ್ವಭಾವದಲ್ಲಿ ಹುದುಗಿಕೊಂಡಿರುವ ತಾತ್ವಿಕ ಬುದ್ಧಿಯ ಬಗ್ಗೆ ಮಾತ್ರ ಭಿನ್ನಾಭಿಪ್ರಾಯಗಳೇ ಇಲ್ಲ. ಆ ಆಳವಾದ ವಿಚಾರದ ಫಲ ಅವರ ಅನಾಸಕ್ತಿ. ಕಾಂಗ್ರೆಸ್ ಮಂತ್ರಿಮಂಡಲಗಳು ರಾಜೀನಾಮೆ ಕೊಡುವ ಮೊದಲು ಮಹದೇವಭಾಯಿ ಆಚಾರ್ಯರನ್ನು ಕೇಳಿದರು. ರಾಜೀನಾಮೆ ಕೊಟ್ಟ ಮೇಲೆ ಏನು ಮಾಡುತ್ತೀರಿ ಎಂತ. ಆಚಾರ್ಯರು ತಟ್ಟನೆ ಉತ್ತರ ಕೊಟ್ಟರು, 'ವರ್ಧಾಯೋಜನೆಯ ಶಿಕ್ಷಕನಾಗಿ ಕೆಲಸ ಮಾಡುತ್ತೇನೆ.'

ಈ ಅನಾಸಕ್ತಿಯೇ ಅವರನ್ನು ಗಾಂಧೀಜಿಗೆ ಬಹಳ ಅಂತರಂಗದ ಗೆಳೆಯರನ್ನಾಗಿ ಮಾಡಿತು. ಕೆಲವು ಕಾಲ ಗಾಂಧೀಸೇನೆಗೆ ಆಚಾರ್ಯರೇ ನಾಯಕರು. ವಲ್ಲಭಭಾಯಿ ಇನ್ನೂ ರಂಗದಲ್ಲಿ ಕಾಲಿಟ್ಟಿರಲಿಲ್ಲ. ಜವಾಹರಲಾಲರಿಗೆ ಇನ್ನೂ ತಾರುಣ್ಯ-ಆಗ. ರಾಜಗೋಪಾಲಾಚಾರ್ಯರೇ ಗಾಂಧೀಜಿಯ ಸರ್ವಸ್ವ,೧೯೨೨ ರಲ್ಲಿ ಗಾಂಧೀಜೀ ಸೆರೆಮನೆಗೆ ಹೋದರು, ನಾಡಿನಲ್ಲಿ ಗೊಂದಲವಾಗಿ ಕಾಂಗ್ರೆಸ್ಸಿನಲ್ಲಿ ಒಡಕುಂಟಾಯಿತು, ಚಿತ್ತರಂಜನ ದಾಸರು ಸ್ವರಾಜ್ಯಪಕ್ಷವನ್ನು ಮೊದಲಿಟ್ಟರು, ಕಾಂಗ್ರೆಸ್ಸಿನಲ್ಲಿ ಗಾಂಧೀವಾದವು ಉಳಿದಿತೋ ಇಲ್ಲವೋ ಎಂಬ ಹಾಗೆ ಆಯಿತು. ಗಾಂಧೀ ಪಂಥಿಗಳೆಲ್ಲ ದಾಸರನ್ನು ಬಲವಾಗಿ ವಿರೋಧಿಸಿದರು. ಕಾಂಗ್ರೆಸ್ಸಿನ ಬಹಿಷ್ಕಾರ ನೀತಿಯನ್ನು ಬದಲಿಸಲಾಗದೆಂದು ಹೋರಾಡಿದರು. ಆಚಾರ್ಯರೇ ಗಾಂಧೀ ಸೇನೆಯ ಮುಂದಾಳು. ಆಚಾರ್ಯರ ಅದ್ಭುತ

ತರ್ಕಶಕ್ತಿ, ಶಾಂತಸ್ವಭಾವಗಳು ಪ್ರಕಟವಾದುದು ಆಗ. ಅಂತೂ ಆಚಾರ್ಯರೇ ಗೆದ್ದರು. ಗಾಂಧೀಜೀ ಹೊರಗೆ ಬಂದು ಕಾಂಗ್ರೆಸ್ ಸೂತ್ರಗಳನ್ನು ವಹಿಸಿಕೊಳ್ಳುವವರೆಗೆ ಕಾಂಗ್ರೆಸ್ಸಿನ ಸಾರಥ್ಯ ಆಚಾರ್ಯರದೇ ಆಗಿತ್ತು. ರಾಷ್ಟ್ರಸಭೆಗೆ ಕಾರ್ಯದರ್ಶಿಯಾಗಿ ದುಡಿದರು. ಗಾಂಧೀಜಿಯ 'ಯಂಗ್ ಇಂಡಿಯಾ' ಪತ್ರಿಕೆಯ ಸಂಪಾದಕತ್ವವೂ ಇವರ ಪಾಲಿಗೆ ಬಂತು. ಆಗ ಖಾದೀ ಪ್ರಚಾರಕ್ಕಾಗಿ ಅವರು ಪಟ್ಟಪಾಡು ಹೇಳಿ ತೀರದು.

ಗಾಂಧೀ ಪಂಥಕ್ಕೆ ವಿಷಮ ಪರೀಕ್ಷೆ ಒದಗಿದಾಗ ರಾಜಗೋಪಾಲಾಚಾರ್ಯರೇ ಅದನ್ನು ಎದುರಿಸಿದವರು. ಇದು ಕಾಂಗ್ರೆಸ್ಸಿನಲ್ಲಿ ಎರಡು ಸಲ ಆಗಿದೆ. ಎರಡು ಸಲವೂ ಗಾಂಧೀಜಿ ಕಾಂಗ್ರೆಸ್ಸಿಗೆ ಬರುವುದಾಗಲಿಲ್ಲ. ೧೯೨೨ರಲ್ಲಿ ಗಯಾ ಕಾಂಗ್ರೆಸ್ಸಿಗೆ ದಾಸರು ಅಧ್ಯಕ್ಷರು. ಅಧ್ಯಕ್ಷರೇ ಸಭೆಯ ನೀತಿಗೆ ವಿರುದ್ಧವಾಗಿ ನಿಂತರೆ ಮುಂದೆ ಶಿಸ್ತು-ಸಂಘಟನೆ ನಿಲ್ಲಬೇಕು ಹೇಗೆ? ೧೯೩೯ರಲ್ಲಿ ತ್ರಿಪುರಿಯಲ್ಲಿ ಸುಭಾಷಚಂದ್ರರಿಗೂ ಹಾಗೆಯೇ ಆಯಿತು. ಇವರು ಕಾಂಗ್ರೆಸ್ಸಿಗೆ ಅಧ್ಯಕ್ಷರು. ಇವರೂ ಸಭೆಯ ನೀತಿ ರೀತಿಗಳಿಗೆ ಎದುರು. ಆಗಲೂ ಈಗಲೂ-ಎರಡೂ ಸಂದರ್ಭಗಳಲ್ಲಿಯೂ ಗಾಂಧೀ ಪಂಥಿಗಳಿಗೆ ಇಕ್ಕಟ್ಟಿನ ಪ್ರಸಂಗ; ಎರಡೂ ಸಮಯಗಳಲ್ಲಿ ರಾಜಗೋಪಾಲಾಚಾರ್ಯರೇ ಮುಂದೆ ನಿಂತರು. ತೀರ್ಮಾನಗಳನ್ನೂ ಅಣಿಮಾಡಿದರು. ಮಾತಾಡಿದರು; ಗೆದ್ದರು. ಆಗ ದಾಸರು ಅಧ್ಯಕ್ಷ ಪದವಿಗೆ ರಾಜಿನಾಮೆ ಕೊಟ್ಟ ಹಾಗೆ ಈಗ ಸುಭಾಷರು.

ಇಂಥ ಹದಿನಾರಾಣೆ ಗಾಂಧೀ ಪಂಥಿ ಇಂದು ತಾವೇ ಸಿಡಿದಿದಾರೆ. 'ಗಾಂಧೀಜಿ ಹೇಳಿದುದು ಕೂಡಲೆ ಅರ್ಥವಾಗದು. ಆ ದೂರದ ದೃಶ್ಯ ನಮಗೆ ಕಾಣದು. ಆದರೆ ಗಾಂಧೀಜಿಗೆ ಸಹಜವಾಗಿಯೇ ಸತ್ಯ ಕಾಣುತ್ತದೆ. ಆ ಕಣ್ಣಿನ ನೋಟ ನಿಚ್ಚಳ' ಎಂದು ಹದಿನೈದು ವರುಷದ ಕೆಳಗೆ ಹೇಳಿದ ಆಚಾರ್ಯರು ತಾವೇ ಇಂದು ಗಾಂಧೀಜಿಯ ಕಣ್ಣು ಮಸುಕಾಗಿದೆ ಎಂದರು. ವಯಸ್ಸಿನಿಂದ ಗಾಂಧೀಜಿಯ ಕಣ್ಣಿಗೆ ಪರೆ ಬಂತೋ? ಮಂತ್ರಿತ್ವದ ವ್ಯವಹಾರದಿಂದ ಆಚಾರ್ಯರಿಗೇ ದೃಷ್ಟಿ ಚುರುಕಾಯಿತೋ? ಏನೇ ಆಗಲಿ, ಇಂದಿಗೂ ಆಚಾರ್ಯರು ಗಾಂಧೀಜಿಯ 'ಮನಸ್ಸಾಕ್ಷಿ'ಯೇ

ಸರಿ. ಆ ಯಂತ್ರದಲ್ಲಿ ಗಾಂಧೀಜಿಯ ಅಹಿಂಸೆಯ ಪರೀಕ್ಷೆಯೂ ಆಯಿತು. ಕಾಲದ ಕುಶಲತೆ ಕನಸಿಗೂ ಮೀರಿದುದು.

ಆಚಾರ್ಯರ ಮೋರೆಯಲ್ಲಿ ಶಾಂತಿ-ಧೈರ್ಯಗಳು ಒಡೆದು ಕಾಣುತ್ತವೆ. ಸಮಾಧಾನದ ನಗೆ ಸೂಸುತ್ತದೆ. ಆ ನಗೆಯಲ್ಲಿ ಗೆಳೆತನದ ಆರ್ದ್ರತೆ-ಮಮತೆಯ ವೈಶಾಲ್ಯ ತೋರುತ್ತದೆ. ಆದರೆ ಆಚಾರ್ಯರದು ಕಷ್ಟಜೀವ. ಒಳಗಿನ ಕುದಿಯನ್ನು ಹೆಣಗಾಡಿ ಹದಕ್ಕೆ ತಂದ, ಬೆಂಕಿಯನ್ನು ಬೆಳಕಾಗಿ ಮಾಡಿಕೊಂಡ, ಗುರುತು ತಿಳಿಯುತ್ತದೆ. ಬಾಳಿನ ಚಿಲ್ಲರೆ ಮಾತುಗಳಲ್ಲಿ ಅವರಿಗೆ ಶ್ರದ್ಧೆ ಇಲ್ಲದಿಲ್ಲ. ಬದುಕಿನ ನಾಟಕವನ್ನು ಆಚಾರ್ಯರು ನೋಡುತ್ತಾರೆ; ನಗುತ್ತಾರೆ, ನಲಿಯುತ್ತಾರೆ. ಆದರೆ ಇದೆಲ್ಲದರ ನಡುವೆ ನಿಲ್ಲದೆ ಮನಸ್ಸು ದೂರ ಹೋಗುತ್ತದೆ. ಈ ನಾಟಕದ ಹಿನ್ನೆಲೆಯ ರಹಸ್ಯದ ಕಡೆ ಸರಿಯುತ್ತದೆ. ಮಾನವ ಸಂಕಲ್ಪ—ಪುರುಷ ಪ್ರಯತ್ನಗಳ ನಿಸ್ಸಾರತೆ ಅಸಮರ್ಥತೆಯ ಅರಿವಿನ ಹೊರೆ ಆಗಾಗ ಮೂಡುತ್ತದೆ.

ಅವರ ಇರವೂ ಹಾಗೆಯೆ. ಹಳ್ಳಿಯವರ ನಡುವೆ ಇರಲಿ ಅಧಿಕಾರಿಗಳ ಮಧ್ಯೆ ಆಗಲಿ, ಕಾಂಗ್ರೆಸ್ಸು ವರ್ಕಿಂಗ್ ಕಮಿಟಿಯಲ್ಲಿರಲಿ ಗವರ್ನರನ ಮನೆಯಲ್ಲಿಯೆ ಆಗಲಿ ಒಂದು ಪೈರಣ ಒಂದು ಕೊಂಡು ಉತ್ತರೀಯ, ಉಡಲು ಧೋತರ, ಬೇರೆ ವೇಷದಲ್ಲಿ ಯಾವಾಗಲೂ ಯಾರೂ ನೋಡಿಲ್ಲ. ಖಾದಿ ಎಂದರೆ ಜೀವ. ಭಾರತದ ಮುಖ್ಯ ನಾಯಕರಲ್ಲಿ ಆಚಾರ್ಯರೇ ಮೊದಲು ಖಾದೀ ವ್ರತ ಹಿಡಿದವರು. ಉಳಿದವರೂ ಖಾದೀ ತೊಟ್ಟಿದಾರೆ. ಆದರೆ ಇವರ ಹಾಗೆ ವ್ರತ ಹಿಡಿದವರು ಯಾರೂ ಇಲ್ಲ. ಇಂದಿಗೂ ತಿರುಪೂರು ಖಾದಿ ಅವರ ಆ ನಿಷ್ಠೆಯ ಗುರುತಾಗಿ ನಿಂತಿದೆ. ತಮಿಳು ನಾಡಿನಲ್ಲಿ ಖಾದಿ ಹರಡಿದಷ್ಟು ಬೇಗ ಹೆಚ್ಚಾಗಿ ಬೇರೆ ಯಾವ ಪ್ರಾಂತದಲ್ಲಿಯೂ ಹರಡಿಲ್ಲ. ಕಾಂಗ್ರೆಸ್ಸ ಮಂತ್ರಿಮಂಡಲಗಳು ಹುಟ್ಟಿದ ಮೇಲೆ ಖಾದಿಗೆ ಮದರಾಸಿನಲ್ಲಿ ದೊರೆತ ಪ್ರೋತ್ಸಾಹ ಎಲ್ಲಿಯೂ ಇಲ್ಲ. ಆಚಾರ್ಯರು ಯೂರೋಪಿಯನ್ ಅಧಿಕಾರಿಗಳಿಗೇ ಖಾದೀ ತೊಡಿಸುವ ಯುಕ್ತಿ ಮಾಡಿದರು. ಖಾದೀ ಪ್ರಧಾನಿ—Khadi premier—ಎಂದು ಹೆಸರೇ ಆಯಿತು. ಅಖಿಲ ಭಾರತ ಚರಖಾಸಂಘಕ್ಕೆ ಮೊದಲಿನಿಂದಲೂ ಆಚಾರ್ಯರು ಸದಸ್ಯರು. ಈಗಲೂ ಆ ನಂಟು ತಪ್ಪಿಲ್ಲ.

ಊಟದಲ್ಲೂ ಮಾತಿನಲ್ಲೂ ಬಹಳ ಮಿತ. ಸ್ವಭಾವದಲ್ಲಿ ತ್ಯಾಗ-ನಿಷ್ಠೆ-ಗಾಂಭೀರ್ಯಗಳು ತುಂಬಿವೆ. ರಾಜಕಾರಣದಲ್ಲಿ ಅವರ ಹಟವು ತುಂಬ ನಿಷ್ಠುರವಾಗಿ ಕಂಡರೂ ಆಚಾರ್ಯರ ಎದೆ ತುಂಬಾ ಮೆದುವಾದುದು. ರಾಜಕೀಯ ರಂಗದಲ್ಲಿ, ವ್ಯವಹಾರದಲ್ಲಿ ಕೊಂಚ ಕಾಠಿಣ್ಯ ಬೇಕು ಎಂದು ಅವರು ನಂಬಿದಂತೆ ಕಾಣುತ್ತದೆ. ಅವರ ಭಾವನಾಪೂರ್ಣವಾದ ಮನಸ್ಸಿಗೆ ಈ ಹದ ಬಂದುದು ದೊಡ್ಡ ಕಸರತ್ತೇ ಆಗಿರಬೇಕು. ತಮಿಳರಲ್ಲಿ ರಾಜಗೋಪಾಲಾಚಾರ್ಯರು-ಶ್ರೀನಿವಾಸಶಾಸ್ತ್ರಿ ಇಬ್ಬರೂ ತಪ್ಪಿ ಹುಟ್ಟಿದವರು ಎಂದು ಯಾರೋ ಹೇಳಿದ್ದರು. ನಿಜ; ಇವರ ಹಾಗೆ ತ್ಯಾಗ ಬಲ್ಲವರೂ ಅವರ ಹಾಗೆ ಕಲೆ ಅರಿತವರೂ ತಮಿಳರಲ್ಲಿ ಇಲ್ಲ. ಆಚಾರ್ಯರ ಪೂರಾ ಹೆಸರು ಚಕ್ರವರ್ತಿ ರಾಜಗೋಪಾಲಾಚಾರ್ಯ ಎಂದು. ಅವರ ಮಂತ್ರಿತ್ವವೂ ಒಂದು ಚಕ್ರವರ್ತಿತ್ವ ಎಂದುಕೊಂಡವರಿರಬಹುದು. ಅದಲ್ಲ ಅವರ ರಾಜ್ಯ. ಆಚಾರ್ಯರು ನಿಸ್ಸಂದೇಹವಾಗಿ ವೈರಾಗ್ಯಚಕ್ರವರ್ತಿ. ಅವರ ಹಿರಿಯರು ಮೈಸೂರು ಅರಮನೆಯಲ್ಲಿ ಧರ್ಮಾಧಿಕಾರಿಗಳಾಗಿದ್ದರಂತೆ.

ಅವರ ಮಾತೂ ಅಷ್ಟೆ. ತುಂಬಾ ನಿಧಾನ. ತಮಿಳರಲ್ಲಿ ಅಷ್ಟು ನಿಧಾನವಾಗಿ ಮಾತಾಡುವವರು ಕಡಮೆ. ಬರಿಯ ನಿಧಾನವಷ್ಟೆ ಅಲ್ಲ; ಬಹಳ ಹಿಡಿತ, ತೂಕ. ಲಿನೊ ಟೈಪು ಯಂತ್ರದಲ್ಲಿ ಒಂದೊಂದು ಗಟ್ಟಿ ಮುದ್ದೆಯಾಗಿ ಬರುವಂತೆ ಆಚಾರ್ಯರ ಮಾತಿನಲ್ಲಿ ಒಂದೊಂದು ವಾಕ್ಯವೇ ಇಡಿ ಇಡಿಯಾಗಿ ಬರುತ್ತವೆ. ಆ ಧೋರಣೆಯಲ್ಲಿ ಜಲಪಾತದ ವೇಗವಿಲ್ಲ, ಮುತ್ತಿನ ಹಾರದ ಹೆಣಿತವಿದೆ. ಹಿಡಿತವಿದ್ದರೂ ಸೊಗಸು, ಸುಲಭವಿದ್ದರೂ ಸೂಕ್ಷ್ಮ, ಹಾಸ್ಯವಿದ್ದರೂ ಹರಿತ ಆ ನುಡಿಯ ರೀತಿ. ಆಚಾರ್ಯರ ಮಾತು ಗಾಳಿಯಲ್ಲಿ ಮೋಡವಾಗಿ ಅಲೆಯುವುದಿಲ್ಲ. ಪ್ರತಿಯೊಂದು ಭಾವವೂ ರೂಪುಗೊಂಡು ನಿಲ್ಲುತ್ತದೆ. ಒಂದೊಂದು ಮಾತೂ ಸೊಗಸಾದ ಒಂದು ಕತೆಯ ರೂಪವನ್ನು ಕಟ್ಟಿಕೊಂಡು ನಿಲ್ಲುತ್ತದೆ. ಅವರ ಮನಸಿನ ರೀತಿ ಸರ್ವಜ್ಞನ ಜಾತಿಯದು. ಎಲ್ಲ ತಿಳಿಪನ್ನೂ ವ್ಯಾವಹಾರಿಕ ಜಗತ್ತಿನ ಚಿತ್ರಗಳಲ್ಲಿ ಅಡಗಿಸುತ್ತದೆ ಅದು. ಜನಸಾಮಾನ್ಯದ ಬದುಕಿನ ವಿಷಯವನ್ನೇ ತನ್ನ ಉದಾಹರಣೆಗೆ ಬಳಸುತ್ತದೆ. ದೃಷ್ಟಾಂತವಿಲ್ಲದೆ ಮಾತೇ ಇಲ್ಲ.

ಸರ್ವಜ್ಞನಂತೆಯೆ ಆಚಾರ್ಯರೂ ವಿನೋದಪ್ರಿಯರು. ಅವನ

ಹಾಗೆಯೆ ಆ ವಿನೋದದಲ್ಲಿ ಇರಿತವೂ ಇದೆ, ಸಮಾಧಾನವೂ ಇದೆ. ಅವನ ಕಿರಿನುಡಿಯ ಪದ್ಧತಿಯೇ ಇವರದೂ. ಹೋಲಿಕೆ ಕೊಡುವುದರಲ್ಲೂ ಅದೇ ಹಾದಿ. ಅವನದು ಕವಿತೆ, ಇವರದು ಗದ್ಯ–ಅದರಲ್ಲೂ ಭಾಷಣ; ಹೀಗಾಗಿ ಆ ಹೋಲಿಕೆಗಳು ಹಿಗ್ಗಿ ಕತೆಗಳಾಗುತ್ತವೆ. ಅದೇ ನಿರ್ಭಯ, ಅದೇ ಕಂಡದ್ದು ನುಡಿವ ಕೆಂಡದ ಮಾತು, ಅದೇ ವಿಮರ್ಶೆಯ ನೋಟ. ಆಚಾರ್ಯರು ಮೊನ್ನೆ ಮೊನ್ನೆ ಗಾಂಧೀಜಿಗೇ ತಿರುಗಿಬಿದ್ದರಲ್ಲ ಅಹಿಂಸೆಯ ಮಾತಿನಲ್ಲಿ. ಸರಿ, ಪತ್ರಿಕೆಗಳಿಗೆ ಬೇಕಾದಷ್ಟು ಅನ್ನವಾಯಿತು. ಇಬ್ಬರ ನಡುವೆ ಸ್ವರ್ಗ–ನರಕದಷ್ಟು ಭೇದ ಬಂತೆಂದು ಸಾರಿದರು. ಎಲ್ಲೆಲ್ಲಿಯೂ ಗುಲ್ಲು. ಆಚಾರ್ಯರು ಒಂದೇ ಮಾತಿನಲ್ಲಿ ಆ ಗಾಳಿಗೋಪುರವನ್ನು ಹಾರಿಸಿದರು. 'ನಮ್ಮ ಭಿನ್ನಾಭಿಪ್ರಾಯ ಹಾಸಿಗೆಯ ಹತ್ತಿರ ತಗಣೆ–ಸೊಳ್ಳೆ ಬಾರದ ಹಾಗೆ ಮಾಡಲು ಉತ್ತಮೋಪಾಯ ಯಾವುದು ಎಂದು ಇಬ್ಬರು ಚರ್ಚಿಸಿಕೊಂಡ ಹಾಗೆ. ಮಲಗುವಾಗ ಈ ಭೇದ—ಚರ್ಚೆ ಸಾಧ್ಯ, ಚೆನ್ನ. ಊಟಕ್ಕೆ ಕೂತಾಗ ಈ ಚರ್ಚೆ ನಾವು ಮಾಡಬಹುದೇ ?' ಎಂದರು. ಆಚಾರ್ಯರು ಕಾಂಗ್ರೆಸು ಮಂತ್ರಿಮಂಡಲಗಳ ರಾಜೀನಾಮೆಯ ಬಗ್ಗೆ ಬಹಳ ಉತ್ಸಾಹ ತೋರಿಸಲಿಲ್ಲ. ಜನ ಕೂಡಲೇ ಅಂದರು ಆಚಾರ್ಯರಿಗೆ ಅಧಿಕಾರದ ಆಸೆ ಎಂತ. ಅದಕ್ಕೆ ನಗುನಗುತ್ತ ಅವರು ಬದಲು ಹೇಳಿದರು; ಕಾಂಗ್ರೆಸ್ ಸರಕಾರ ಎಣ್ಣೆ ನೀರಿನ ಬೆರಕೆ, ಅಧಿಕಾರವೂ ಕಾಂಗ್ರೆಸ್ಸೂ ಎಣ್ಣೆ ನೀರಿದ್ದ ಹಾಗೆ. ಆ ಹೋಲಿಕೆಯಲ್ಲಿ ಅವರ ವ್ಯಾಖ್ಯಾನವೇ ಅಡಗಿತ್ತು. ಎರಡಕ್ಕೂ ಪ್ರತ್ಯಕ್ಷವಾಗಿ ಹಗೆಯಿಲ್ಲದಿದ್ದರೂ ಒಂದಾಗುವುದೂ ಸಾಧ್ಯವಿಲ್ಲ. ಒಂದೊಂದು ಬಾರಿ ಇಂಥ ಬಣ್ಣದ ಮಾತಿನಲ್ಲಿಯೆ ದೊಡ್ಡ ಸತ್ಯವನ್ನು ದಿಟ್ಟತನದಿಂದ ತಿಳಿಸುತ್ತಾರೆ. ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ಕೊಡುವರೋ ಇಲ್ಲವೋ ಎಂಬ ಮಾತು ಹೊರಟಾಗ 'ಸ್ವಾತಂತ್ರ್ಯವೆಂಬುದು ಹಿಂದೂ ಹುಡಿಗಿಯ ಮದುವೆ ಇದ್ದ ಹಾಗೆ. ಆಗಿಂದೀ ತೀರಬೇಕು' ಎಂದು ಆ ಸುಳ್ಳು ಸಮಸ್ಯೆಯ ಜಾಲವನ್ನು ಕತ್ತರಿಸಿದರು. ಹಿಂದುಸ್ಥಾನವನ್ನು ಆಳುವ ಯೋಗ್ಯತೆ ನಮಗಿಲ್ಲ, ನಾವು ಆ ಸಾಮರ್ಥ್ಯ ಪಡೆಯಬೇಕು ಎಂದರು. ಆಚಾರ್ಯರೆಂದರು, 'ಆಕಳು ನಮ್ಮದು. ನಮಗೆ ಅದನ್ನು ಕಾಪಾಡುವುದು ಸರಿಯಾಗಿ ತಿಳಿದಿರಲಿಕ್ಕಿಲ್ಲ. ಆದರೆ ಅದು

ನಮ್ಮ ಹಣೆಯ ಬರಹ. ನಾವು ನೋಡಿಕೊಳ್ಳುತ್ತೇವೆ.' ನಮ್ಮ ಹಸು ವನ್ನು ಪಳಗಿಸುವುದು ನಮ್ಮ ಕೆಲಸ. ಅವರಿಗೇಕೆ ?

ಪ್ರತಿಪಕ್ಷವನ್ನು ಗೆಲ್ಲಲು ಆಚಾರ್ಯರು ದೃಷ್ಟಾಂತಗಳ ರಾಮಬಾಣ ವನ್ನೇ ಎಸೆಯುತ್ತಾರೆ. ಜಿನ್ನಾಸಾಹೇಬರು ಪಾಕಿಸ್ತಾನದ ಪ್ರಸಂಗ ಮಾಡಿದಾಗ ಇದು ಒಂದು ಆಕಳ ಎರಡೆರಡು ಕೆಚ್ಚಲು ಒಬ್ಬೊಬ್ಬರು ಕುಯ್ದು ಹಂಚಿಕೊಂಡಂತೆ ' ಎಂದರು. ಸಾಹೇಬರಿಗೆ ಇದರಿಂದ ಸಿಟ್ಟು ಬಂತು. ಆದರಲ್ಲಿ ಗೋವಧೆಯ ಮಾತು ಬಂತಲ್ಲ ! ಈ ಹೋಲಿಕೆ ಬೇಡ, ಇನ್ನೊಂದಾಯಿತು. ' ಒಂದು ಮನೆ ಮಾಳಿಗೆ ಒಬ್ಬನಿಗೆ, ನೆಲ ಒಬ್ಬನಿಗೆ ಹಂಚಿಕೊಟ್ಟಂತಿದೆ ಈ ವ್ಯವಹಾರ ' ಎಂದರು.

ಆದರೆ ಎಲ್ಲಕ್ಕಿಂತ ಹೆಚ್ಚು ಪರಿಣಾಮಕಾರಿಯಾದ ಕೆಲವು ಹೋಲಿಕೆ ಇತಿಹಾಸಕ್ಕೇ ಸೇರುವಂತಿವೆ. ಪಾಕಿಸ್ತಾನದ ಗದ್ದಲದಲ್ಲಿ ಗಾಂಧೀಜಿ ಈ ಹರಿದಾಟವೇಕೆ, ಎಲ್ಲವನ್ನೂ ಮುಸ್ಲಿಮರೇ ತೆಗೆದುಕೊಳ್ಳಲಿ ಎಂದರು· ಹಾಗೆ ಹೇಳಿದುದೇ ತಡ ಹಿಂದೂ ಮಹಾಸಭೆಯ ಆರ್ಭಟಕ್ಕೆ ಪ್ರಾರಂಭ ವಾಯಿತು. ಆಚಾರ್ಯರು ಅದಕ್ಕೆ ಉತ್ತರವಾಗಿ ಒಂದು ಮಗುವಿಗಾಗಿ ಜಗಳವಾಡಿದ ಇಬ್ಬರು ತಾಯಂದಿರ ಕತೆ ಹೇಳಿದರು. ಇಬ್ಬರೂ ನನ್ನ ಮಗು, ತನ್ನ ಮಗು ಎಂದರೆ ನ್ಯಾಯಾಧಿಪತಿ ತಲಾ ಅರ್ಧ ಸೀಳು ಹಂಚುವ ಹಾಗೆ ಅಪ್ಪಣೆ ಮಾಡಿದ. ಮಗು ಇಲ್ಲದಿದ್ದರೆ ಬೇಡ; ಇದೇನು ಈ ಜೀವ ತೆಗೆವ ವ್ಯವಹಾರ ! ಹೆತ್ತ ತಾಯಿಗೆ ಅದು ಸಹಿಸಲಿಲ್ಲ. ಮಗು ಬದುಕಿದ್ದರೆ ಸಾಕು ಎಂದು ತನ್ನ ಪ್ರತಿವಾದಿಗೇ ತನ್ನ ಮಗುವನ್ನು ಕೊಡುವಂತೆ ನ್ಯಾಯಾಧೀಶನನ್ನು ಬೇಡಿಕೊಂಡಳು. ಹಾಗೆಯೇ ಗಾಂಧೀಜಿಯ ರಾಷ್ಟ್ರೀಯ ಭಾವನೆ, ವಿಶಾಲ ಹಿಂದುಸ್ತಾನದ ಕಲ್ಪನೆ. ಹೆತ್ತ ತಾಯಿಗಲ್ಲವೆ ನೋವು ? ಹಾಗೆಯೇ ಮತ್ತೊಂದು ಸಂದರ್ಭ ಕಾಂಗ್ರೆಸ್ಸಿನಲ್ಲಿಯೇ ಬಂತು. ತ್ರಿಪುರಿಯಲ್ಲಿ ಅವರು ಹೇಳಿದ ಸರ್ವಾಲಂ ಕಾರ ಭೂಷಿತವಾದ ಒಡಕು ದೋಣಿ, ನಿರಾಭರಣರಂಜಿತವಾದ ಗಟ್ಟಿ ದೋಣಿಗಳ ಹೋಲಿಕೆ ಸುಭಾಷ ಭೋಸರ ಹಣೆಯ ಬರೆಹವನ್ನೇ ಒದಲು ಮಾಡಿತು. ಸುಭಾಷರು ರಾಜೀನಾಮೆ ಕೊಟ್ಟಾಗ ರಾಜೇಂದ್ರ ಬಾಬು ಅಧ್ಯಕ್ಷರಾಗಬಾರದಿತ್ತು ಎಂದು ಕೆಲವರು ಆಡಿಕೊಂಡರು. ' ಬಾವಿ

ಯೊಳಗೆ ಹಗ್ಗ ಬಿಟ್ಟಿದೇವೆ. ಕೊಡದಲ್ಲಿ ನೀರು ತುಂಬಿ ಸೇದುತ್ತಿರುವಾಗ ನಡುವೆ ಒಬ್ಬರು ಕೈಬಿಟ್ಟರೆ ಇನ್ನೊಬ್ಬರು ಹಗ್ಗ ಹಿಡಿದು ನೀರು ಸೇದಬೇಡವೇ? ಇಲ್ಲದಿದ್ದರೆ ಕೊಡ ಹಗ್ಗ ಎರಡೂ ಹೋದಾವಲ್ಲ ಬಾವಿಯೊಳಕ್ಕೆ' ಎಂದರು.

ಕೆಲವು ಸಲ ಈ ವಿನೋದ ಬಹಳ ಮೆದುವಾಗಿ ಇರುವುದೂ ಉಂಟು. 'ಪ್ರಜಾಸತ್ತೆಯಲ್ಲಿ ಮಂತ್ರಿಗಳು ಎಂದರೆ ಮನೆಯ ಹೆಂಡತಿ ಇದ್ದ ಹಾಗೆ. ಪ್ರಜೆ ಕಂದಾಯ ಕೊಟ್ಟರೆ ಸರಕಾರಿ. ಗಂಡ ಪಲ್ಯತಂದು ಕೊಟ್ಟರೆ ಅಡಿಗೆ. ನೀವು ಹುಳುಕು ಬದನೆಕಾಯಿ ತಂದು ರುಚಿಯಾದ ಪಲ್ಯ ಮಾಡೆಂದರೆ, ಎರಡೇ ಕಾಯಿ ತಂದುಕೊಟ್ಟು ಸಮಾರಾಧನೆ ಮಾಡೆಂದರೆ ಹೇಗೆ ಆದೀತು. ನಿಮಗೆ ಬೇಕಾದುದು ನೀವು ತಂದು ಕೊಡಬೇಕು. ನೀವು ತೆರಿಗೆ ಕೊಟ್ಟು ಭಾಂಡಾರ ತುಂಬಿದರೆ ನಿಮಗೆ ಬೇಕಾದ ಅನುಕೂಲತೆಗಳೆಲ್ಲ ಮಾಡಬಹುದು.' ಹೀಗೆ ಪ್ರಜಾಸತ್ತೆಯ ಲಕ್ಷಣವನ್ನು ಬಿಡಿಸಿ ತಿಳಿಸಿ 'ನೀವು ಹುಳುಕು ಬದನೆಕಾಯಿ ತರುವ ಕೆಟ್ಟ ಗಂಡ ಆಗಬಾರದು. ಒಳ್ಳೆಯ ಗಂಡನಾಗಬೇಕು' ಎಂದು ಸಭೆಯನ್ನು ನಗೆಯಲ್ಲಿ ಅದ್ದಿದರು.

ಆಚಾರ್ಯರಲ್ಲಿ ಧರ್ಮೋಪದೇಶದ ಕಲೆ ಪರಿಪೂರ್ಣವಾಗಿದೆ. ಅವರ ಸ್ವಭಾವಕ್ಕೆ ರಾಜಕಾರಣಕ್ಕಿಂತ ಮಠಾಧಿಪತ್ಯ ಹೆಚ್ಚು ರುಚಿ. ಕಾಲ ಕೆಳಗಿನ ನೆಲ ನೋಡುವ ಜಾತಿಯಲ್ಲ, ಮುಗಿಲ ಚಿಕ್ಕೆಗಳನ್ನು ದಿಟ್ಟಿಸುವ ಗುಂಪು. ಅವರ ಮನಸ್ಸಿನ ಮನೆಗೆ ಒಂದೇ ಕಿಟಿಕಿ; ಅದು ಮಾಳಿಗೆಯಲ್ಲಿನ ಗವಾಕ್ಷ. ಸುತ್ತಲಿನ ಗಾಳಿ ಬಾರದ ಹಾಗೆ ಗೋಡೆ ಕಟ್ಟಿದಾರೆ. ಅವರ ಬಾಳಿನ ಬೆಳಕು ಮೇಲಿಂದಲೇ ಬರಬೇಕು. ಹೀಗಾಗಿ ಒಂದೊಂದು ಸಲ ಅವರ ನಡತೆಯಲ್ಲಿ ತಾವು ಮಾಡಿದುದೇ ಸರಿ ಎಂಬ ಹಟ ಕಂಡುಬರುತ್ತದೆ. ಧರ್ಮಾಧಿಕಾರಿಗಳಿಗೆ ಸಹಜವಾದ ಅಭಿಮಾನ ಪೂರಾ ಇದೆ. ಜನಜಂಗುಳಿ ಎಂದರೆ ಬುದ್ಧಿಯಿಲ್ಲದ ಕುರಿಗಳ ಗುಂಪು, ಕೆಲಸಕಿಲ್ಲದ ಹುಡುಗಪಾಳೆಯ. ಅವರಿಗೆ ಹಾದಿ ತೋರುವುದು ಧರ್ಮದ ಕೆಲಸ. ಆ ಪವಿತ್ರ ಕರ್ತವ್ಯ ತಮಗೆ ಸೇರಿದುದು. ಯೇಸುವಿನ ಬೆಳಕು ಕಾಣದೆ, ಪೈಗಂಬರನ ಮಹಿಮೆ

ಅರಿಯದೆ ಉಳಿದ ಜನ ಅಜ್ಞಾನದಲ್ಲಿ ಮುಳುಗಿ ಹೋಗುತ್ತಿರುವುದು ಆಯಾ ಪಂಥದವರಿಗೆ ಸಹಿಸೀತೇ? ಹಾಗೆಯೇ ಇವರ ಉತ್ಸಾಹ.

'ದಂಡಂ ದಶಗುಣಂಭವೇತ್' ಎಂಬ ಉಗ್ರ ನಿಯಮವನ್ನು ಆಚಾರ್ಯರು ಮನ್ನಿಸದಿದ್ದರೂ 'ಜನರನ್ನು ಆಳಬೇಕಾದರೆ ಅವರಿಗಿಂತ ಎತ್ತರ ಬೆಳೆಯಬೇಕು, ಇಲ್ಲವೆ ಅವರನ್ನೂ ಕಸಕ್ಕಿಂತ ಕಡೆಯಾಗಿ ಕಾಣ ಬೇಕು' ಎಂಬ ಸಿದ್ಧಾಂತವನ್ನು ಒಪ್ಪಿದ ಹಾಗೆ ಕಾಣುತ್ತದೆ. ತಮ್ಮದು ಸರಿ ಎಂಬ ದಾರ್ಢ್ಯವೇ ಅವರ ಊರೆಗೋಲು. ಆ ತಳಹದಿಯ ಮೇಲೆ ನಿಂತು ಅವರು ಗಾಂಧೀಜಿಯನ್ನೂ ಎದುರಿಸುವ ಸಾಹಸ ಮಾಡಿದಾರೆ. ಉಳಿದವರು ತಮ್ಮ ಅಭಿಪ್ರಾಯವನ್ನು ವಿರೋಧಿಸಿದರೆ ಅದು ದೊಡ್ಡ ಮಾತಲ್ಲ. ಜಗತ್ತಿನಲ್ಲಿ ಹೂವಿನ ಜೊತೆಯಲ್ಲಿಯೆ ಮುಳ್ಳು ಬೆಳೆಯುತ್ತದೆ. ದೇವರ ಆಟ. ಅವು ನಮ್ಮನ್ನು ನೋಯಿಸದ ಹಾಗೆ ಎಚ್ಚರವಿದ್ದರಾಯಿತು.

ಈ ಸ್ವಪಂಥಾಭಿಮಾನದ ಉಗ್ರತೆ ಇದ್ದರೂ ಆಚಾರ್ಯರಿಗೆ ಗರ್ವ ಲೇಶವೂ ಇಲ್ಲ. ಬಹುಶಃ ಅದು ಬಾರದಿರಲಿ ಎಂದೇ ಗೋಡೆಗೆ ಕಿಟಿಕಿ ಗಳನ್ನು ಇಟ್ಟಿಲ್ಲವೇನೋ! ನಿಷ್ಕಾಮ ಕರ್ಮ ಅವರ ಧರ್ಮ. ಅದರಲ್ಲಿ ಅಂಥ ಭಾವನೆಗೆ ಇಂಬು ಇಲ್ಲವೇ ಇಲ್ಲ. ಈ ವಿನಯ, ಈ ನಿರಹಂಕಾರ ಆಚಾರ್ಯರಿಗೆ ತುಂಬಾ ಬಲವನ್ನು ಕೊಟ್ಟಿದೆ. ಅದರಿಂದ ಒಂದು ಬಗೆಯ ಧೈರ್ಯ, ಒಂದು ತರದ ಕಾರ್ಯಕುಶಲತೆ ಬಂದಿವೆ. ಇದಕ್ಕೆ ಅವರ ಸ್ವಾಭಾ ವಿಕ ಶಾಂತತೆ ಜೊತೆಯಾಗಿ ವಿರೋಧಿಗಳನ್ನೂ ಇದುರಿಸುವುದರಲ್ಲಿ ಅದ್ವಿ ತೀಯ ಚಾಣಾಕ್ಷತೆ ಕೌಶಲ್ಯ ಆಗಿ ಪರಿಣಮಿಸಿದೆ. ಜಪಾನೀ ಜುಜುಟ್ಸು ಇದ್ದ ಹಾಗೆ. ಒಳ್ಳೆಯ ಕಾಲುಚೆಂಡಿನ ಆಟಗಾರನ ಕಾಲ್ಚಳಕದ ಹಾಗೆ. ತಿರುತಿರುಗಿ, ತಪ್ಪಿಸಾಡಿ, ಹಾಯ್ದು ನುಗ್ಗಿ ಗುರಿಯ ಕಡೆ ಸಾಗುತ್ತದೆ. ಆ ವೇಗ ಆ ಚಳಕ ಮಿಂಚಿನಂತೆ. ನೋಡುವವರಿಗೆ ಏನು ಮಾಡಬೇಕು ಎಂಬುದು ಹೊಳೆಯುದ ಮೊದಲೇ ಈ ಚಳಕ ತನ್ನ ಗುರಿ ಮುಟ್ಟಿರುತ್ತದೆ.

ಈ ವಿಚಿತ್ರ ಶಕ್ತಿಯೇ ಆಚಾರ್ಯರ ಮಂತ್ರಿತ್ವವನ್ನು ಅದ್ವಿತೀಯ ವೆಂದು ಹೊಗಳಿಸಿತು. ಮದರಾಸಿನ ಗವರ್ನರನೂ ಮೊನ್ನೆ ಮೊನ್ನೆ ಆಚಾರ್ಯರ ಅಮಾತ್ಯತನವನ್ನು ಬಾಯಿತುಂಬ ಹೊಗಳಿದ.

ಆಚಾರ್ಯರು ಮೊದಲು ಸೇಲಂ ಜಿಲ್ಲೆಯಲ್ಲಿ ವಕೀಲರಾಗಿದ್ದರು. ಅಲ್ಲಿನ ಪುರಪಾಲಕ ಸಭೆಯಲ್ಲಿ ಸ್ವಲ್ಪ ಕೈಹಾಕಿದ್ದರೂ ರಾಜಕೀಯದಲ್ಲಿ

ಹೆಚ್ಚಾಗಿ ಸೇರಿರಲಿಲ್ಲ. ಮೊದಲಿಂದಲೂ ಸಮಾಜ ಸುಧಾರಣೆಯ ಬಗ್ಗೆ ಬಹಳ ಒಲವು. ಗಾಂಧೀಜಿ ರಾಜಕಾರಣದಲ್ಲಿ ಪ್ರವೇಶಿಸಿದಾಗ ಬರಿಯ ಗೊಡ್ಡು ರಾಜಕಾರಣ ಮೂಲೆಗೆ ಬಿದ್ದು ಸಮಾಜದ ಸರ್ವಾಂಗೀಣ ಪುನರುಜ್ಜೀವನದ ಭಾವನೆ ಕಾಂಗ್ರೆಸ್ಸಿನಲ್ಲಿ ಬೇರೂರಿತು. ಅದೇ ಹೊತ್ತಿಗೆ ರಾಜಗೋಪಾಲಾಚಾರ್ಯರೂ ಸೇಲಂ ಬಿಟ್ಟು ಮದರಾಸಿಗೆ ಬಂದಿದ್ದರು. ಗಾಂಧೀಜಿ ೧೯೧೯ರಲ್ಲಿ ಮದರಾಸಿಗೆ ಬಂದಾಗ ಇವರ ಮನೆಯಲ್ಲೇ ಅವರ ಬಿಡಾರ. ಅಲ್ಲಿಯೆ ಮೊದಲನೆಯ ಹರತಾಳದ ಜನ್ಮ. ಗಾಂಧೀ-ಆಚಾರ್ಯರ ಗೆಳೆತನ ಆಗಲೇ ಮೊಳೆತುದು.

ಅಲ್ಲಿಂದ ಮುಂದೆ ಗಾಂಧೀ ಪಕ್ಷದಲ್ಲಿ ಆಚಾರ್ಯರೇ ಮೊದಲಿಗರು. ಖಾದೀ, ಹರಿಜನೋದ್ಧಾರ, ಮದ್ಯಪಾನನಿಷೇಧಗಳಿಗಾಗಿ ತಮ್ಮ ಮೈಯನ್ನು ಸವೆಸಿದಾರೆ. ಇವು ಮೂರರಲ್ಲಿ ಆಚಾರ್ಯರಿಗೆ ಯಾವುದರ ಮೇಲೆ ಹೆಚ್ಚು ಪ್ರೀತಿ ಎಂದು ನಿರ್ಣಯಿಸುವುದು ಕಷ್ಟ. ಖಾದಿಗಾಗಿ ಅವರು ಸಲ್ಲಿಸಿದ ಸೇವೆ ಅಮರವಾದುದು. ಹರಿಜನೋದ್ಧಾರಕ್ಕಾಗಿ ಅವರು ಪಟ್ಟ ಕಷ್ಟ ಯಾರು ಅರಿಯರು? ಯರವಾಡಾ ಸೆರೆಮನೆಯಲ್ಲಿ ಗಾಂಧೀಜಿ ಉಪವಾಸ ಮಾಡಿದಾಗ ಪರದೆಯ ಹಿಂದೆ ನಿಂತು ಪೂನಾ ಒಪ್ಪಂದವನ್ನು ಅಣಿಮಾಡಿ, ಸರಕಾರಕ್ಕೂ ಕಾಂಗ್ರೆಸ್ಸಿಗೂ ಸಂಧಾನವು ಸುಲಭವಾಗುವಂತೆ ಮಾಡಿದುದು ಇವರ ದುಡಿಮೆ. ಗಾಂಧೀ ಪಂಥವು ಶಾಸನ ಸಭೆಯನ್ನು ಬಹಿಷ್ಕರಿಸಿದ್ದರೂ ಇವರ ಹರಿಜನೋದ್ಧಾರದ ಪ್ರೀತಿ ಇವರನ್ನು ಶಾಸನ ಸಭೆಯ ಸುತ್ತಮುತ್ತ ಒಂದು ಶಾಸನವನ್ನು ಮಾಡಿಸುವ ಉದ್ದೇಶ್ಯದಿಂದ ಅಲೆಯುವ ಹಾಗೆ ಮಾಡಿತು. ತಮಗೇ ಮಂತ್ರಿತ್ವ ಬಂದ ಮೇಲೆ ದೇವಾಲಯ ಪ್ರವೇಶದ ಬಗ್ಗೆ ಅವರು ಮಾಡಿದ ಮಹಾ ಸಾಹಸ ಚಿರಸ್ಮರಣೀಯವಾಗಿದೆ.

ಮದ್ಯಪಾನ ನಿಷೇಧದ ಬಗ್ಗೆಯಂತೂ ಅವರಿಗೆ ಬಹಳ ಹುಚ್ಚು. ಹಳ್ಳಿಯಲ್ಲಿ ಹುಟ್ಟಿ ಬೆಳೆದು ಮದ್ಯಪಾನದ ಕೆಟ್ಟ ಪರಿಣಾಮ ಅವರಿಗೆ ಪೂರಾ ಗೊತ್ತಿದೆ. ಕಾಂಗ್ರೆಸ್ಸಿನ ಈ ಚಳುವಳಿಗೆ ಇವರೇ ಜೀವಾಳ ಎಂದರೂ ಸರಿ. ಹಿಂದುಸ್ಥಾನದ ಮದ್ಯಪಾನ ನಿಷೇಧ ಸಮಿತಿಗೆ ಕೆಲವು ದಿನ ಕಾರ್ಯದರ್ಶಿಯಾಗಿದ್ದರು. ಅಧಿಕಾರ ಬಂದದ್ದೇ ತಡ ಮೊದಲು ತಮ್ಮ

ಆ ಕನಸಿಗೆ ಒಂದು ರೂಪ ಕೊಟ್ಟೇ ಬಿಟ್ಟರು. ಈ ಪವಿತ್ರ ಕಾರ್ಯಕ್ಕೂ ವಿರೋಧ ಇಲ್ಲದೆ ಹೋಗಲಿಲ್ಲ. ಆದರೆ ಆಚಾರ್ಯರ ದೃಢಪ್ರತಿಜ್ಞೆಗೆ ಯಾವುದೂ ಲೆಕ್ಕವಲ್ಲ.

ಆಚಾರ್ಯರು ಕರ್ನಾಟಕಕ್ಕೆ ಚೆನ್ನಾಗಿ ಪರಿಚಿತರು. ಅವರಿಗೂ ಕರ್ನಾಟಕದ ಗುರುತು ಚೆನ್ನಾಗಿದೆ. ಅವರ ವಿದ್ಯಾಭ್ಯಾಸದ ಒಂದು ಭಾಗ ಬೆಂಗಳೂರಿನಲ್ಲಿ ಆಯಿತು. ಅವರು ಹುಟ್ಟಿದುದು ಸೇಲಂ ಜಿಲ್ಲೆಯ ಹೊಸೂರು. ಕರ್ನಾಟಕವು ಒಂದು ಪ್ರಾಂತವಾಗಿದ್ದರೆ ಹೊಸೂರು ಕನ್ನಡವಾಗಿರುತ್ತಿತ್ತು. ಈಗ ತಮಿಳು ನಾಡು. ಆಚಾರ್ಯರ ಮನಸಿಗೆ ತಾವು ಕನ್ನಡಕ್ಕೆ ಸಲ್ಲಿಸಬೇಕಾದ ಕಾಣಿಕೆಯೂ ಒಂದು ಇದೆ ಎಂದು ಹೊಳೆದೀತೇನು ?

ಕಾಂಗ್ರೆಸು ಮಂತ್ರಿಮಂಡಲಗಳು ಏಳು ಪ್ರಾಂತಗಳಲ್ಲಿ ಕೆಲಸ ಮಾಡಿದವು. ಅವುಗಳಲ್ಲಿ ಮದರಾಸಿಗೇ ಪ್ರಥಮಸ್ಥಾನವನ್ನು ಜನ ಕೊಟ್ಟಿದಾರೆ. ಆದರೆ ಇದು ಆಚಾರ್ಯರ ರಾಜಕಾರಣ ಕುಶಲತೆಗೆ ಕೊಟ್ಟ ಮರ್ಯಾದೆಯಲ್ಲ. ಅವರ ಉಕ್ಕಿನಂಥ ಒದುಕಿಗೆ, ಆ ನಿರಂತರ ಪರಿಶ್ರಮಕ್ಕೆ, ಆ ಸರಲ ಜೀವನದ ಸಲಿಗೆಯ ಸ್ವಭಾವಕ್ಕೆ ಜನ ಸಲ್ಲಿಸಿದ ಕಾಣಿಕೆ.

ಆಚಾರ್ಯರೇ ಮುಂದೆ ಬಾರದಿದ್ದರೆ ಮದರಾಸು ಪ್ರಾಂತ ಬ್ರಾಹ್ಮಣ ಅಬ್ರಾಹ್ಮಣ ವಿದ್ವೇಷದ ಬೆಂಕಿಯಲ್ಲಿ ಸುಟ್ಟುಹೋಗುತ್ತಿತ್ತು. ಮದರಾಸಿನಲ್ಲಿ ಕಾಂಗ್ರೆಸ್ಸಿಗೆ ಆದ ಗೆಲವು ಆಚಾರ್ಯರ ಸತ್ಯಾಗ್ರಹ ಜೀವನದ ಗೆಲವು.

ಇಷ್ಟೆಲ್ಲ ರಾಜಕಾರಣದ ಸುಳಿಯಲ್ಲಿ ಸಿಕ್ಕಿದ್ದರೂ ಆಚಾರ್ಯ ಕಲಾಪ್ರೇಮ ಇಂಗಿ ಹೋಗಿಲ್ಲ. ಆಚಾರ್ಯರ ಸಾಹಿತ್ಯದ ರೀತಿ ಮನೋಹರವಾದುದು. ಅವರು ಬರೆದ ಕತೆ, ಲೇಖನಗಳಲ್ಲಿ ಆ ಕೈವಾಡ ಕಾಣುತ್ತದೆ. ಅವರು ಬರೆದ ಗೀತಾವ್ಯಾಖ್ಯಾನ, ಉಪನಿಷತ್ ಕಥೆಗಳಲ್ಲಿ ಆ ಕನಸಿನ ಬೆಳಕು ಇದೆ. ಅವರು ರಾಜಕೀಯ ರಂಗಕ್ಕೆ ಇಳಿದುದು ತಮಿಳು ಸಾಹಿತ್ಯಕ್ಕೆ ಅಷ್ಟು ನಷ್ಟವೇ ಆಯಿತೆನ್ನಬೇಕು. ಈಗಿನ ಕಾಲವೇ ಹಾಗೆ, ರಾಜಕಾರಣವು ಮೊಹರಮ್ಮ ಹಬ್ಬದ ಹುಲಿಯ ಹಾಗೆ ಬೀದಿಯ ತುಂಬ ಕುಣಿದಾಡುತ್ತ ಜನರ ಓಡಾಟಕ್ಕೆ ತೆರವೇ ಇಲ್ಲದ ಹಾಗೆ ಮಾಡಿದೆ. ನಾಡಿನ ಎಲ್ಲ ಪ್ರತಿಭೆಯೂ ಅದರಲ್ಲಿಯೆ ಹರಿಯಬೇಕು. ಆಚಾರ್ಯರೂ ಆ ಸುಳಿಗೆ ತಲೆಬಾಗಿದಾರೆ.

# ದಿ. ಯುನಾಯಿಟೆಡ್ ಕರ್ನಾಟಕ

# ಇನ್ಸೂರೆನ್ಸ ಕಂಪನಿ. ಲಿಮಿಟೆಡ್.

ಪ್ರಧಾನ ಕಾರ್ಯಾಲಯ

## ಧಾರವಾಡ.

ಕಂಪನಿಯು ಸುಮಾರು ೨೦೦ ಜನ ಯುವಕರಿಗೆ
ಉದ್ಯೋಗವನ್ನು ಕಲ್ಪಿಸಿದೆ.

**ಈಗಾಗಲೇ ಸರಕಾರದ ಆಧಾರಪತ್ರ ಮುಂತಾದವುಗಳಲ್ಲಿ ತೊಡಗಿಸಿದ ಹಣ ೯೩,೬೦೦ ರೂಪಾಯಿಗಳಿಗೆ ಮಿಕ್ಕಿದೆ**

೧೯೩೮ರ ಕೊನೆಗೆ ೧೪,೦೦,೦೦೦ ರೂಪಾಯಿಗಳಿಗೆ
ವಿಮಾ ಕಾರ್ಯವಾಗಿದೆ.

**ಕನ್ನಡಿಗರ ಅಭಿಮಾನದ ಸಂಸ್ಥೆ ! ಭರದಿಂದ ಬೆಳೆಯುತ್ತಿರುವ ವಿಮಾ ಕಂಪನಿ !**

**ಲಾಭದಾಯಕ ಕಮಿಶನ್ ಕರಾರುಗಳು. ವ್ಯವಹಾರ ಕುಶಲರು, ಉದ್ಯಮಿಗಳೂ ಆದ ಏಜಂಟರು ಬೇಕು.**

ವಿಶೇಷ ವಿವರಕ್ಕೆ ಬರೆಯುವದು

**ಎಂ. ಗೋವರ್ಧನರಾವ,**

ಮ್ಯಾನೇಜರ

**ಯುನಾಯಿಟೆಡ್ ಕರ್ನಾಟಕ ಇನ್ಸೂರನ್ಸ ಕಂಪನಿ, ಲಿ.**